₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಶನಿವಾರ 04.01.2025** **ಸಂಪುಟ:** 10 **ಸಂಚಿಕೆ:**08 **ಪುಟಗಳು:** 12 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬೆಳಗಾವಿಯಲ್ಲಿ ಕ್ಯಾನ್ಸರ್ ಆಸ್ಪತ್ರೆಯನ್ನು ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕೆಎಲ್‌ಇ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಸ್ಮರಣಿಕೆ ನೀಡಿ ಗೌರವಿಸಿದರು.

ಪುಟ ತೆರೆದಂತೆ...

1991ರಲ್ಲಿ ಭಾರತ ದಿವಾಳಿಯಾದದ್ದು ಯಾಕೆ?
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ನಿಧಾನವೇ ಆಯುರ್ವೇದದ ವಿಧಾನ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ಚೀನಾದಲ್ಲಿ ಹೊಸ ವೈರಾಣು ಪತ್ತೆ; ವಿಶ್ವಾದ್ಯಂತ ಭೀತಿ

ಬೀಜಿಂಗ್: ಚೀನಾದಲ್ಲಿ ಕೋವಿಡ್ ಸೋಂಕನ್ನೇ ಹೋಲುವ ಹೊಸ ಮಾದರಿಯ ವೈರಾಣು ಹ್ಯೂಮನ್ ಮೆಟಾನ್ಯೂಮೊವೈರಸ್ (HMPV) ವ್ಯಾಪಕವಾಗಿ ಹರಡುತ್ತಿದ್ದು, ರೋಗಿಗಳಿಂದ ಆಸ್ಪತ್ರೆಗಳು ತುಂಬಿ ತುಳುಕುತ್ತಿವೆ. ಜತೆಗೆ ಸಾವಿನ ಸಂಖ್ಯೆ ಏರಿಕೆಯಾಗಿರುವುದರಿಂದ ಸ್ಮಶಾನಗಳೂ ಭರ್ತಿಯಾಗಿವೆ ಎಂದು ವರದಿಯಾಗಿದೆ. ಇದು ವಿಶ್ವಾದ್ಯಂತ ಭೀತಿ ಹುಟ್ಟಿಸಿದೆ.

ಜ್ವರ ಹಾಗೂ ಕೋವಿಡ್-19 ಸೋಂಕಿನ ಗುಣಲಕ್ಷಣದಂತೆಯೇ ಇರುವ ಈ ಹೊಸ ಮಾದರಿಯ ವೈರಾಣು ಎಲ್ಲ ವಯೋಮಾನದವರನ್ನೂ ಬಾಧಿಸುವ ಲಕ್ಷಣ ಹೊಂದಿದೆ. ಆದಾಗ್ಯೂ, ಇದು ಮಕ್ಕಳಲ್ಲಿ ಹೆಚ್ಚಾಗಿ ಕಂಡುಬಂದಿದೆ. ಸದ್ಯಕ್ಕೆ HMPVಗೆ ಯಾವುದೇ ಲಸಿಕೆ ಇಲ್ಲ.

ಚೀನಾದಲ್ಲಿನ ಈ ಕಳವಳಕಾರಿ ಬೆಳವಣಿಗೆಯನ್ನು ಅಧಿಕಾರಿಗಳು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದಾರೆ. ಮುಂಜಾಗ್ರತೆ ವಹಿಸುವಂತೆ ವೈದ್ಯರು ಎಚ್ಚರಿಕೆ ನೀಡುತ್ತಿದ್ದಾರೆ. ನ್ಯುಮೋನಿಯಾ ನಿರ್ವಹಣೆಗೆ ಪೈಲಟ್ ನಿರ್ವಹಣಾ ವ್ಯವಸ್ಥೆಯನ್ನು ಚೀನಾ ಜಾರಿಗೆ ತಂದಿದೆ.

ಚಳಿಗಾಲದಲ್ಲಿ ಉಸಿರಾಟ ಸಂಬಂಧಿತ ಕಾಯಿಲೆಗಳು ಹೆಚ್ಚಾಗಿ ಕಂಡುಬರುವುದರಿಂದ ಹಾಗೂ ಇದೇ ಸಂದರ್ಭದಲ್ಲಿ ಸೋಂಕು ಹರಡುವ ವೈರಾಣು ಪತ್ತೆಯಾಗಿರುವುದು ಇನ್ನಷ್ಟು ಆತಂಕ ಮೂಡಿಸಿದೆ. ಆದರೆ ಈವರೆಗೂ ಚೀನಾದ ಅಧಿಕಾರಿಗಳಾಗಲೀ ಅಥವಾ ವಿಶ್ವ ಆರೋಗ್ಯ ಸಂಸ್ಥೆಯಾಗಲೀ ತುರ್ತು ಪರಿಸ್ಥಿತಿ ಘೋಷಿಸಿಲ್ಲ. ಆದರೆ ಚೀನಾದ ರೋಗ ನಿಯಂತ್ರಣ ಕೇಂದ್ರವು ಸೋಂಕು ಇರುವುದನ್ನು ಖಚಿತಪಡಿಸಿದ್ದು, ಇದು ಉತ್ತರ ಚೀನಾದಲ್ಲಿ ವ್ಯಾಪಿಸಿದೆ. ಪರಿಸ್ಥಿತಿ ಹದಗೆಟ್ಟಿದೆ. 14 ವರ್ಷದೊಳಗಿನ ಮಕ್ಕಳಲ್ಲಿ ಇದು ಹೆಚ್ಚಾಗಿ ಬಾಧಿಸಿದೆ ಎನ್ನಲಾಗಿದೆ. ಪ್ರಾಥಮಿಕವಾಗಿ ಮಕ್ಕಳು, ವಯಸ್ಸಾದವರು ಹಾಗೂ ರೋಗನಿರೋಧಕ ಶಕ್ತಿ ಕಡಿಮೆ ಇರುವವರನ್ನು ಈ ವೈರಾಣು ಭಾದಿಸಲಿದೆ. ಶೀತ, ಕೆಮ್ಮು ಹಾಗೂ ಜ್ವರದ ಲಕ್ಷಣ, ಮೂಗು ಕಟ್ಟುವುದು, ಉಸಿರಾಟದ ಸಮಸ್ಯೆ ಎದುರಾಗುವುದು ಪ್ರಮುಖ ಗುಣಲಕ್ಷಣಗಳು.

ಈ ವೈರಾಣು 2001ರಲ್ಲಿ ಮೊದಲ ಬಾರಿಗೆ ಪತ್ತೆಯಾಗಿತ್ತು. ಆದರೂ, ಇದು ಇದ್ದು ಸುಮಾರು 60 ವರ್ಷಗಳಾಗಿವೆ ಎಂದು ವೈರಾಣು ತಜ್ಞರು ತಿಳಿಸಿದ್ದಾರೆ ಎಂದು ವರದಿಯಾಗಿದೆ.

ಕೋವಿಡ್ ಸೋಂಕನ್ನೇ ಹೋಲುವ ಹ್ಯೂಮನ್ ಮೆಟಾನ್ಯೂಮೊವೈರಸ್ ವೈರಾಣು ಉಲ್ಬಣ

- ರೋಗಿಗಳಿಂದ ತುಂಬಿ ತುಳುಕುತ್ತಿರುವ ಚೀನಾದ ಆಸ್ಪತ್ರೆಗಳು
- ಸಾವಿನ ಸಂಖ್ಯೆ ಏರಿಕೆಯಾಗಿರುವುದರಿಂದ ಸ್ಮಶಾನಗಳೂ ಭರ್ತಿ
- ಮಕ್ಕಳಲ್ಲಿ ಹೆಚ್ಚಾಗಿ ಕಂಡುಬಂದಿರುವ HMP ಸೋಂಕು
- ಮುಂಜಾಗ್ರತೆ ವಹಿಸುವಂತೆ ಎಚ್ಚರಿಕೆ ನೀಡಿದ ವೈದ್ಯರು
- ನ್ಯುಮೋನಿಯಾ ನಿರ್ವಹಣೆಗೆ ಪೈಲಟ್ ನಿರ್ವಹಣಾ ವ್ಯವಸ್ಥೆ ಜಾರಿ

ಚೀನಾದಲ್ಲಿ ಪಿಪಿಇ ಕಿಟ್ ಧರಿಸಿರುವ ಆರೋಗ್ಯ ಸಿಬ್ಬಂದಿ.

ಭಾರತದಲ್ಲೂ ಅಲರ್ಟ್ ಘೋಷಣೆ

ಚೀನಾದಲ್ಲಿ ವೇಗವಾಗಿ ಹರಡುತ್ತಿರುವ HMPV ಆತಂಕ ಮೂಡಿಸಿರುವ ಹಿನ್ನೆಲೆಯಲ್ಲಿ ಭಾರತ ಸರಕಾರ ದೇಶಾದ್ಯಂತ ಅಲರ್ಟ್ ಘೋಷಿಸಿದೆ. ಕೇಂದ್ರ ಆರೋಗ್ಯ ಸಚಿವಾಲಯದ ಅಡಿಯಲ್ಲಿ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ (NCDC) ದೇಶದಲ್ಲಿ ಉಸಿರಾಟ ಮತ್ತು ಋತುಮಾನದ ಇನ್ಫ್ಲುಯೆನ್ಸ ಪ್ರಕರಣಗಳನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತಿದೆ ಮತ್ತು ಅಧಿಕೃತ ಮೂಲಗಳ ಪ್ರಕಾರ ಅಂತಾರಾಷ್ಟ್ರೀಯ ಏಜೆನ್ಸಿಗಳೊಂದಿಗೆ ಸಂಪರ್ಕದಲ್ಲಿದೆ.

ವೈರಾಣು ಸೋಂಕು ವರದಿ ಅಲ್ಲಗಳೆದ ಚೀನಾ

ಚೀನಾದಲ್ಲಿ ಕೋವಿಡ್-19 ಹೋಲುವ HMP ವೈರಾಣು ಹರಡುತ್ತಿದ್ದು, ಆಸ್ಪತ್ರೆಗಳಲ್ಲಿ ಜನರು ತುಂಬಿ ತುಳುಕುತ್ತಿದ್ದಾರೆ ಎನ್ನುವ ವರದಿಗಳನ್ನು ಚೀನಾ ಸರಕಾರ ಅಲ್ಲಗಳೆದಿದ್ದು, ಚಳಿಗಾಲದಲ್ಲಿ ಉಸಿರಾಟ ಸಂಬಂಧಿ ಕಾಯಿಲೆ ಕಾಣಿಸಿಕೊಳ್ಳುವುದು ಸಹಜ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಚಳಿಗಾಲದಲ್ಲಿ ಉಸಿರಾಟ ಸಂಬಂಧಿ ಕಾಯಿಲೆಯ ಪ್ರಕರಣಗಳ ಸಂಖ್ಯೆ ಕಡಿಮೆಯಿದೆ. ಹೀಗಾಗಿ ವಿದೇಶಿಗರು ಚೀನಾಕ್ಕೆ ಬರಲು ಸುರಕ್ಷಿತವಾಗಿದೆ ವಿದೇಶಾಂಗ ಸಚಿವಾಲಯ ಹೇಳಿದೆ.

ಮಾತಂದ್ರೆ ಮಾತು



ವಕ್ಫ್ ಬಗ್ಗೆ ಅಧಿವೇಶನದಲ್ಲಿ ಉತ್ತರ ನೀಡುವಾಗ ಬಸನಗೌಡ ಪಾಟೀಲ ಯತ್ನಾಳ ಅವರು ತಪ್ಪಿಸಿಕೊಂಡು ಹೋದರು. ಅಂದು ನಾಪತ್ತೆ ಆಗಿದ್ದವರು ಈಗ ಮತ್ತೆ ಕಂಪ್ಲಿಯಿಂದ ಹೋರಾಟ ಮಾಡಲು ಹೊರಟಿದ್ದಾರೆ. ರಾಜ್ಯದ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಬಿಜೆಪಿ ಮುಖಂಡರು ಎಷ್ಟೆ ಬಟ್ಟೆ ಹರಿದುಕೊಂಡರೂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನೇತೃತ್ವದ ಸರಕಾರವನ್ನು ಅಲ್ಲಾಡಿಸಲು ಸಾಧ್ಯವಿಲ್ಲ.

ಜಮೀರ್ ಅಹಮದ್ ಖಾನ್
ವಸತಿ ಸಚಿವ

ದಾರಿದೀಪೋಕ್ತಿ

ಎಲ್ಲ ಮುಚ್ಚಿದ ಬಾಗಿಲುಗಳಿಗೆ ಒಳಗಿನಿಂದ ಬೀಗ ಹಾಕಿರುವುದಿಲ್ಲ. ಸ್ವಲ್ಪ ತಳ್ಳಿದರೆ ಅದು ತನ್ನಷ್ಟಕ್ಕೆ ತೆರೆದುಕೊಳ್ಳುತ್ತದೆ. ಯಾವುದನ್ನೇ ಆಗಲಿ ನಮ್ಮಷ್ಟಕ್ಕೆ ಗ್ರಹಿಸಿ ಸುಮ್ಮನಿರಬಾರದು. ಖುದ್ದಾಗಿ ಪರೀಕ್ಷಿಸಬೇಕು.

ವಕ್ರತುಂಡೋಕ್ತಿ

ಯಾವುದೇ ಆಗಲಿ ವಿಪರೀತವಾದರೆ ಅದು ಒಳ್ಳೆಯದಲ್ಲ. ಈ ಮಾತು ಕೆಲವರ ಕುಡಿತಕ್ಕೆ ಅನ್ವಯಿಸುವುದಿಲ್ಲ.

ಅಲ್ಲುಗೆ ಜಾಮೀನು

ಹೈದರಾಬಾದ್: ಇಲ್ಲಿನ ಸಂಧ್ಯಾ ಚಿತ್ರ ಮಂದಿರದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಅಲ್ಲು ಅರ್ಜುನ್ ಅವರಿಗೆ ರೆಗ್ಯುಲರ್ ಜಾಮೀನು ಮಂಜೂರಾಗಿದೆ. ಹೈದರಾಬಾದ್‌ನ ನಾಂಪಲ್ಲಿಯ 2ನೇ ಹೆಚ್ಚುವರಿ ಮೆಟ್ರೊಪಾಲಿಟಿನ್ ಸೆಷನ್ ನ್ಯಾಯಾಲಯದ ನ್ಯಾಯಾಧೀಶರು, ವಾದ-ಪ್ರತಿ ವಾದಗಳನ್ನು ಆಲಿಸಿ, 50,000 ರು. ಬಾಂಡ್‌ನ ತಲಾ ಇಬ್ಬರ ಶ್ಯೂರಿಟಿಗಳನ್ನು ಒದಗಿಸಲು ಆದೇಶಿಸಿ, ಜಾಮೀನು ಮಂಜೂರು ಮಾಡಿದ್ದಾರೆ. ಸದ್ಯ ಅಲ್ಲು ಅರ್ಜುನ್ ಬಂಧನ ಭೀತಿಯಿಂದ ಪಾರಾಗಿದ್ದಾರೆ.

ಡಿವೈಎಸ್‌ಪಿ ಬಂಧನ

ತುಮಕೂರು: ತಮ್ಮ ಕಚೇರಿಯಲ್ಲೇ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಮಧುಗಿರಿ ಡಿವೈಎಸ್‌ಪಿ ಎ.ರಾಮಚಂದ್ರಪ್ಪ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಮಧುಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶುಕ್ರವಾರ ರಾತ್ರಿ ಬಂಧಿಸಲಾಗಿದೆ. ಆರಂಭಿಕ ಪ್ರಕ್ರಿಯೆ ಮುಗಿದ ನಂತರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುವುದು ಎಂದು ಎಸ್‌ಪಿ ಕೆ.ವಿ.ಅಶೋಕ್ ತಿಳಿಸಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಬಸ್ ದರ ಹೆಚ್ಚಳ, ಸರ್ಕಾರದ ಪರವಾಗಿ ಕ್ಷಮೆ ಕೇಳಿದ ಪ್ರತಿಪಕ್ಷ.
ಪ್ರಯಾಣಿಕರಿಗೆ ಗುಲಾಬಿ ಹೂ ನೀಡಿ ಬಿಜೆಪಿ ಪ್ರತಿಭಟನೆ
ಸುದ್ದಿ



ಡಿಕೆಶಿ ವಿದೇಶ ಪ್ರವಾಸದಲ್ಲಿದ್ದಾಗಲೇ ಜಾರಕಿಹೊಳಿ ಮನೆಯಲ್ಲಿ ಔತಣಕೂಟ

ಕೃಷಿ ಸಚಿವ ಚಲುವರಾಯಸ್ವಾಮಿ ನಿವಾಸದಲ್ಲಿ ಒಕ್ಕಲಿಗ ಶಾಸಕ, ಸಚಿವರ ಸಭೆ

ಕೈನಲ್ಲೂ ಬಣದಾಟ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ 'ಡಿನ್ನರ್ ಪಾಲಿಟಿಕ್ಸ್' ಮುಂದುವರಿದಿದೆ. ಸಚಿವ ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ಅಹಿಂದ ಸಚಿವರು, ಶಾಸಕರು ಸಭೆ ಸೇರಿದ್ದು ಒಂದೆಡೆಯಾದರೆ, ಇನ್ನೊಂದೆಡೆ ಒಕ್ಕಲಿಗರ ಬಲಪ್ರದರ್ಶನಕ್ಕೆ ಒಕ್ಕಲಿಗ ನಾಯಕರು ಸಭೆ ನಡೆಸಿದ್ದಾರೆ. ಹೀಗಾಗಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಅನುಭವಿಸುತ್ತಿರುವ ಕಾಂಗ್ರೆಸ್‌ನಲ್ಲೂ ಬಣ ಗದ್ದಲ ಸದ್ದು ಮಾಡುತ್ತಿದೆ.

ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಸಚಿವ ಸತೀಶ್ ಜಾರಕಿಹೊಳಿ ಅವರ ಮನೆಯಲ್ಲಿ ಔಪಚಾರಿಕ ಭೋಜನಕೂಟ ಆಯೋಜಿಸಲಾಗಿತ್ತು. ಆದರೆ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ವಿದೇಶದಲ್ಲಿರುವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒಳಗೊಂಡ ಈ ಭೋಜನಕೂಟದಲ್ಲಿ ಮಹತ್ವದ ವಿಚಾರಗಳು ಚರ್ಚೆಯಾಗಿವೆ ಎನ್ನುವ ಮಾತುಗಳು ಕೇಳಿಬಂದಿವೆ.

ಇದರ ಬೆನ್ನಲ್ಲೇ, ಕೃಷಿ ಸಚಿವ ಚಲುವರಾಯಸ್ವಾಮಿ ನಿವಾಸದಲ್ಲಿ ಒಕ್ಕಲಿಗ ಶಾಸಕರು, ಸಚಿವರು ಸಭೆ ನಡೆಸುವ ಮೂಲಕ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ನಡೆದ ಸಭೆಗೆ ಠಕ್ಕರ್ ಕೊಟ್ಟಿದ್ದಾರೆ ಎನ್ನಲಾಗುತ್ತಿದೆ. ಈ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವರ ಬೆಂಬಲಕ್ಕೆ ಪ್ರತಿ ಶಾಸಕರು ನಿಲ್ಲಬೇಕು. ಮುಖ್ಯಮಂತ್ರಿ ಅಥವಾ ಅಧ್ಯಕ್ಷ ಸ್ಥಾನದ ವಿಷಯದಲ್ಲಿಯೂ ಡಿಕೆಶಿ ಪರವಾಗಿ ಬ್ಯಾಟ್ ಬೀಸಬೇಕು. ಅಹಿಂದ ಸಮುದಾಯದ ನಾಯಕರು ಒಂದಾಗಿರುವ ಈ ಸಮಯದಲ್ಲಿ ಡಿಕೆ ಬೆಂಬಲಕ್ಕೆ ಒಕ್ಕಲಿಗರು ನಿಲ್ಲದಿದ್ದರೆ ಭವಿಷ್ಯದಲ್ಲಿ ಸಮಸ್ಯೆಯಾಗುತ್ತದೆ ಎನ್ನುವ ಚರ್ಚೆಗಳು ನಡೆದಿವೆ ಎನ್ನಲಾಗಿದೆ.

ಶಕ್ತಿ ಪ್ರದರ್ಶನದ ಸಭೆ

ಗುರುವಾರ ರಾತ್ರಿ ನಡೆದ ಡಿನ್ನರ್ ಮೀಟಿಂಗ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸತೀಶ್ ಜಾರಕಿಹೊಳಿ, ಡಾ.ಜಿ. ಪರಮೇಶ್ವರ, ಕೆ.ಎನ್.ರಾಜಣ್ಣ, ಎಚ್.ಸಿ.ಮಹದೇವಪ್ಪ ಇದ್ದರು. ಇವರೊಂದಿಗೆ ಸುಮಾರು 30 ಶಾಸಕರೂ ಈ ಪಾರ್ಟಿಯಲ್ಲಿ ಭಾಗವಹಿಸಿದ್ದರು. ಸತೀಶ್ ಜಾರಕಿಹೊಳಿ ಅವರ ಮನೆಯಲ್ಲಿ ನಡೆದ ಸಭೆಯಲ್ಲಿ ಸಿದ್ದರಾಮಯ್ಯ ಬೆಂಬಲಿಗರು ಮಾತ್ರ ಭಾಗವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.ಅಹಿಂದ ಸಮುದಾಯದ ಒಗ್ಗಟ್ಟು ಪ್ರದರ್ಶನ ಮಾಡಿದ ಶಾಸಕರಿಗೆ ತಿರುಗೇಟು ನೀಡಲು ಶುಕ್ರವಾರ ಕೃಷಿ ಸಚಿವ ಚಲುವರಾಯಸ್ವಾಮಿ ಅವರ ನಿವಾಸದಲ್ಲಿ ಒಕ್ಕಲಿಗ ಶಾಸಕರು ಸಭೆ ನಡೆಸಿದ್ದಾರೆ. ಮೇಲ್ನೋಟಕ್ಕೆ ಎಸ್.ಎಂ.ಕೃಷ್ಣ ಸ್ಮರಣಾರ್ಥ ಕಾರ್ಯಕ್ರಮ ರೂಪಿಸಲು ಸಭೆ ನಡೆಸಲಾಗಿದೆ ಎನ್ನಲಾಗುತ್ತಿದ್ದರೂ, ಅಹಿಂದ ಸಮುದಾಯದ ಡಿನ್ನರ್ ಮೀಟಿಂಗ್‌ನ ವಿಷಯಗಳೇ ಪ್ರಸ್ತಾಪವಾಗಿದೆ.

ಮುಖ್ಯಮಂತ್ರಿಗಳ ಬದಲಾವಣೆಗಾಗಿ ಕಾಂಗ್ರೆಸ್ಸಿನ ಒಕ್ಕಲಿಗ ಶಾಸಕರು ಸಭೆ ಸೇರಿದ್ದಾರೆ ಎನ್ನುವುದು ಸುಳ್ಳು. ಒಕ್ಕಲಿಗ ಸಮುದಾಯದ ಶಾಸಕರು, ಸಚಿವರ ನಿವಾಸದಲ್ಲಿ ಊಟಕ್ಕೆ ಸೇರಿದ್ದಾರೆ. ಆದರೆ ಮಾಧ್ಯಮದವರು ಅದನ್ನು ಸಭೆ ಎಂದು ಭಾವಿಸಿದ್ದಾರೆ.
- **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಸಿಎಂ ಸೇರಿ ಹಲವು ಸಚಿವರು ನಮ್ಮ ಮನೆಯಲ್ಲಿ ಊಟಕ್ಕೆ ಸೇರಿದ್ದು ಹೊಸದಲ್ಲ. ಕಳೆದ 20 ತಿಂಗಳಲ್ಲಿ ಹತ್ತಾರು ಬಾರಿ ಸೇರಿದ್ದೇವೆ. 2028ಕ್ಕೆ ಅಧಿಕಾರಕ್ಕೆ ಬರುವ ಕುರಿತು ಚರ್ಚಿಸಿದ್ದೇವೆ. ಸಿಎಂ ಬದಲಾವಣೆ ಬಗ್ಗೆ ನನಗೆ ಮಾಹಿತಿ ಇಲ್ಲ. ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಆಗಿರಬಹುದು.
- **ಸತೀಶ್ ಜಾರಕಿಹೊಳಿ**, ಸಚಿವ

ಸಚಿವ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಊಟಕ್ಕೆ ಸೇರಿದ್ದು ಪೂರ್ವ ನಿಯೋಜಿತವಲ್ಲ. ಗುಪ್ತ ಕಾರ್ಯಸೂಚಿಯನ್ನು ಹೊಂದಿದ್ದ ರಹಸ್ಯ ಚರ್ಚೆಯೂ ಅಲ್ಲ. ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಬಗ್ಗೆ ಸಾಮಾನ್ಯವಾಗಿ ಚರ್ಚೆ ಮಾಡಿದ್ದೇವೆ.
- **ಎಚ್.ಸಿ.ಮಹದೇವಪ್ಪ**, ಸಚಿವ

ರೆಬಲ್ ತಂಡದಿಂದ 2ನೇ ಹಂತದ ವಕ್ಫ್ ಹೋರಾಟ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬದಲಾವಣೆ ಸೂಚನೆ

ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ಇಂದು ಪ್ರತಿಭಟನೆ



ಬೆಂಗಳೂರು: ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಶನಿವಾರ ಕಲಬುರಗಿಯಲ್ಲಿ ಪ್ರತಿಭಟನೆ ನಡೆಸಲು ಬಿಜೆಪಿ ಸಜ್ಜಾಗಿರುವ ಮಧ್ಯೆಯೇ, ಬಣ ಬಡಿದಾಟದ ರೆಬಲ್ ತಂಡ ವಕ್ಫ್ ಸಂಬಂಧಿತ ಎರಡನೇ ಹಂತದ ಹೋರಾಟ ಆರಂಭಿ ಸುತ್ತಿದೆ. ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆಯ ಸೂಚನೆ ಸಿಕ್ಕಿರುವುದು ಚರ್ಚೆ ಹುಟ್ಟುಹಾಕಿದೆ.

ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ಕಲಬುರಗಿಯಲ್ಲಿ ಇಂದು ಬಿಜೆಪಿ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಂಡಿದೆ. ಕಲಬುರಗಿ ಜಗತ್ ಸರ್ಕಲ್ ಬಳಿ ಬೆಳಗ್ಗೆ 11.30 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್.ಅಶೋಕ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗಳಾದ ಪಿ.ರಾಜೀವ್, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಸೇರಿದಂತೆ ಪ್ರಮುಖರು ಸ್ಥಳೀಯ ಶಾಸಕರು, ಪರಿಷತ್ ಸದಸ್ಯರು ಭಾಗವಹಿಸಲಿದ್ದಾರೆ. → 4

ರಾಜ್ಯಾಧ್ಯಕ್ಷರ ಹುದ್ದೆ ತಾತ್ಕಾಲಿಕ?

ಪಕ್ಷದ ರಾಜ್ಯಾಧ್ಯಕ್ಷರ ಬದಲಾವಣೆ ಮಾಡಬೇಕೆಂಬ ಯತ್ನಾಳ್ ಟೀಂನ ಕೂಗಿನ ನಡುವೆಯೇ, ಚುನಾವಣೆಯ ಮೂಲಕ ರಾಜ್ಯಾಧ್ಯಕ್ಷ ಆಯ್ಕೆ ನಡೆಯಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿರುವುದು ಈಗ ಚರ್ಚೆಯ ವಿಷಯವಾಗಿದೆ.

ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಒಂದು ವರ್ಷವಾಗಿದೆ. ಇದೇ ವೇಳೆ ಬಣ ಬಡಿದಾಟ ಆರಂಭವಾಗಿ ಬದಲಾವಣೆಯ ಕೂಗು ಕೇಳಿಬಂದಿತ್ತು. ಪ್ರಸ್ತುತ ಹಲವು ನಾಯಕರು ರಾಜ್ಯಾಧ್ಯಕ್ಷರ ಹುದ್ದೆ ಮೇಲೆ ಕಣ್ಣಿಟ್ಟಿದ್ದಾರೆ. ಹೀಗಿರುವಾಗಲೇ ರಾಜ್ಯದಲ್ಲಿ ಚುನಾವಣೆಯ ಮೂಲಕವೇ ರಾಜ್ಯಾಧ್ಯಕ್ಷರ ಆಯ್ಕೆ ನಡೆಯಲಿದೆ. ಶಿವರಾಜ್ ಸಿಂಗ್ ಚೌಹಾಣ್ ಮೇಲ್ವಿಚಾರಕರಾಗಿದ್ದಾರೆ. ಈಗಿನ ರಾಜ್ಯಾಧ್ಯಕ್ಷರು ಚುನಾವಣೆ ಮೂಲಕ ಆಯ್ಕೆ ಆದವರಲ್ಲ. ಪಕ್ಷದ ವರಿಷ್ಠರು ಎಲ್ಲರ ಸಮ್ಮತಿ ಮೇರೆಗೆ ಅವರನ್ನು ನೇಮಕ ಮಾಡಲಾಗಿದೆ. ಪಕ್ಷದ ಎಲ್ಲ ಹಂತಗಳಲ್ಲೂ ನಡೆಯುವಂತೆ ರಾಜ್ಯಾಧ್ಯಕ್ಷರ ಸ್ಥಾನಕ್ಕೂ ಚುನಾವಣೆ ನಡೆಯಲಿದೆ ಎಂದು ಹೇಳಿದ್ದು ವಿಜಯೇಂದ್ರ ಅವರ ಈಗಿನ ಹುದ್ದೆ ತಾತ್ಕಾಲಿಕ ಎನ್ನುವಂತಾಗಿದೆ.

ಆಸ್ತಿಯ ಹಕ್ಕು ಸಾಂವಿಧಾನಿಕ: ಸುಪ್ರೀಂಕೋರ್ಟ್

ದೆಹಲಿ: ಆಸ್ತಿಯ ಹಕ್ಕು ಮಾನವ ಹಕ್ಕು ಮತ್ತು ಸಾಂವಿಧಾನಿಕ ಹಕ್ಕು ಆಗಿದ್ದು, ಸಾಕಷ್ಟು ಪರಿಹಾರವನ್ನು ನೀಡದೆ ಯಾವುದೇ ವ್ಯಕ್ತಿಯ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವಂತಿಲ್ಲ ಎಂದು ಸುಪ್ರೀಂಕೋರ್ಟ್ ನೈಸ್ ಯೋಜನೆ ಕುರಿತ ತೀರ್ಪಿನಲ್ಲಿ ಹೇಳಿದೆ. ಪರಿಹಾರ ವಿತರಣೆಯಲ್ಲಿ ವಿಳಂಬವುಂಟಾದ ಸಂದರ್ಭಗಳಲ್ಲಿ ಆಸ್ತಿಯ ಮೌಲ್ಯಮಾಪನವನ್ನು ನಿಗದಿಗೊಳಿಸುವ ದಿನ ವನ್ನು ತೀರ ಇತ್ತೀಚಿನದಕ್ಕೆ ಬದಲಿಸಬಹುದು ಎಂದೂ ನ್ಯಾಯಾಲಯ ತಿಳಿಸಿದೆ.

ವಿವರಪುಟ → 8

ದೆಹಲಿ ಹಿಮಪಾತ 100ಕ್ಕೂ ಹೆಚ್ಚು ವಿಮಾನ ವ್ಯತ್ಯಯ

ದೆಹಲಿ: ಹವಾಮಾನ ವೈಪರೀತ್ಯದಿಂದಾಗಿ ಶುಕ್ರವಾರ ಬೆಳಗ್ಗೆ ದೆಹಲಿ ವಿಮಾನ ನಿಲ್ದಾಣದಲ್ಲಿ 100ಕ್ಕೂ ಹೆಚ್ಚು ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. ದೆಹಲಿ ವಿಮಾನ ನಿಲ್ದಾಣದಲ್ಲಿ CAT III ತರಬೇತಿ ಪಡೆದ ಪೈಲಟ್‌ಗಳ ವಿಮಾನಗಳ ಲ್ಯಾಂಡಿಂಗ್ ಮುಂದುವರಿಯಲಿದೆ. ಈ ಕುರಿತು ಪ್ರಯಾಣಿಕರು ಆಯಾ ವಿಮಾನಯಾನ ಸಂಸ್ಥೆಯನ್ನು ಸಂಪರ್ಕಿಸಲು ದೆಹಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ವಿನಂತಿಸಿದೆ.

13-19ರವರೆಗೆ ಖೊ ಖೊ ವಿಶ್ವಕಪ್ 24 ರಾಷ್ಟ್ರಗಳು ಭಾಗಿ

ದೆಹಲಿ: ನೊಯಿಡಾದಲ್ಲಿರುವ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಜ.13ರಿಂದ 19ರವರೆಗೆ ಖೊ ಖೊ ವಿಶ್ವಕಪ್ ಪಂದ್ಯಾವಳಿಗಳು ನಡೆಯಲಿವೆ. ಅಮೆರಿಕ, ಇಂಗ್ಲೆಂಡ್, ಜರ್ಮನಿ, ಆಸ್ಟ್ರೇಲಿಯಾ ಹಾಗೂ ಬ್ರೆಜಿಲ್ ಸೇರಿ 24 ರಾಷ್ಟ್ರಗಳ ತಂಡಗಳು ಪಾಲ್ಗೊಳ್ಳುತ್ತಿವೆ. ಜ.17ರಂದು ಕ್ವಾರ್ಟರ್ ಫೈನಲ್, 18ರಂದು ಸೆಮಿಫೈನಲ್ ಹಾಗೂ ಫೈನಲ್ ಪಂದ್ಯ ಜ.19ರಂದು ನಡೆಸಲು ದಿನಾಂಕ ನಿಗದಿಯಾಗಿದೆ. ಭಾರತದ ಪುರುಷ ಹಾಗೂ ಮಹಿಳಾ ಎ ಮತ್ತು ಬಿ ತಂಡಗಳು ಜ.8ರಂದು ಘೋಷಣೆಯಾಗಲಿದೆ.

ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ನಭಕ್ಕೆ ಹಾರಲಿರುವ ಬ್ಲೂ ಬರ್ಡ್ ಹೆಸರಿನ ಉಪಗ್ರಹ

ಅಮೆರಿಕ ಉಪಗ್ರಹ ಉಡ್ಡಯನಕ್ಕೆ ಇಸ್ರೋ ಸಜ್ಜು

ದೆಹಲಿ: ಇದೇ ಮೊದಲ ಬಾರಿಗೆ ಅಮೆರಿಕದ ಸಂವಹನ ಉಪಗ್ರಹ ಉಡ್ಡಯನಕ್ಕೆ ಭಾರತೀಯ ಬಾಹ್ಯಾಕಾಶ ಸಂಸ್ಥೆ ಮುಂದಾಗಿದ್ದು, ಎಲ್ಲವೂ ಅಂದುಕೊಂಡಂತೆ ನಡೆದರೆ ಮುಂದಿನ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಶ್ರೀಹರಿಕೋಟದಿಂದ ಈ ಉಪಗ್ರಹ ನಭಕ್ಕೆ ಹಾರಲಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲೇ ಮುಂಚೂಣಿ ದೇಶವಾದ ಅಮೆರಿಕದ ಖಾಸಗಿ ಕಂಪನಿಯೊಂದರ ಬೃಹತ್ ಸಂವಹನ ಉಪಗ್ರಹ ಉಡ್ಡಯನದ ಅವಕಾಶ ಇಸ್ರೋಕ್ಕೆ ಸಿಕ್ಕಿರುವುದು ಇದೇ ಮೊದಲು. ಈ ಉಪಗ್ರಹ 6000 ಕೆಜಿ ತೂಕ ಹೊಂದಿದ್ದು, 64 ಚದರ ಮೀಟರ್‌ನಷ್ಟು ವಿಸ್ತೀರ್ಣದ ಅಂದರೆ ಫುಟ್‌ಬಾಲ್ ಮೈದಾನದಷ್ಟು ಗಾತ್ರ ಹೊಂದಿರಲಿದೆ ಎನ್ನಲಾಗಿದೆ.

ಏನಿದರ ಉದ್ದೇಶ?: ಬ್ಲ್ಯೂ ಬರ್ಡ್ ಹೆಸರಿನ ಈ ಉಪಗ್ರಹವನ್ನು ಟೆಕ್ಸಾಸ್ ಮೂಲದ ಎಎಸ್‌ಟಿ ಸ್ಪೇಸ್ ಮೊಬೈಲ್ ಕಂಪನಿ ತಯಾರಿಸಿದೆ. ಈ ಉಪಗ್ರಹ ಬಾಹ್ಯಾಕಾಶಕ್ಕೆ ತಲುಪಿ ಕಾರ್ಯಾಚರಣೆ ಆರಂಭಿಸಿದ ಬಳಿಕ ಭೂಮಿಯ ಯಾವುದೇ ಭಾಗಕ್ಕೆ ಸುಲಭವಾಗಿ ಮೊಬೈಲ್ ಕರೆ ಸಾಧ್ಯವಾಗಲಿದೆ. ಯಾವುದೇ ವಿಶೇಷ ಉಪಕರಣ ಬಳಸದೇ ಮೊಬೈಲ್‌ನಿಂದಲೇ ಇಂಥ ಕರೆ ಸಾಧ್ಯವಾಗಲಿದೆ. ಜತೆಗೆ ಸ್ಮಾರ್ಟ್ ಫೋನ್ ಬಳಸಿ ಬಾಹ್ಯಾಕಾಶದಿಂದ ಭೂಮಿಗೆ ಕೂಡ ಕರೆ ಮಾಡಬಹುದು. ಜತೆಗೆ ಇಂಥ ಸಂಪರ್ಕವು ಅತ್ಯಂತ ದುರ್ಗಮ ಪ್ರದೇಶಗಳಿಗೂ ಗುಣಮಟ್ಟದ ಶಿಕ್ಷಣ, ವೈದ್ಯಕೀಯ ಸೇವೆ ನೀಡಲು ಅನುವು ಮಾಡಿಕೊಡಲಿದೆ. ಜತೆಗೆ ಪ್ರತಿ ನಾಗರಿಕರಿಗೂ ಡಿಜಿಟಲ್ ಸೇವೆಗಳನ್ನು ನೀಡಲು ಸಾಧ್ಯ ಮಾಡಿಕೊಡಲಿದೆ ಎಂದು ಕಂಪನಿ ಹೇಳಿದೆ.

- ಅಮೆರಿಕದ ಟೆಕ್ಸಾಸ್ ಮೂಲದ ಎಎಸ್‌ಟಿ ಕಂಪನಿ ಬ್ಲೂಬರ್ಡ್ ಹೆಸರಿನ ಉಪಗ್ರಹ ಅಭಿವೃದ್ಧಿಪಡಿಸಿದೆ
- ಉಪಗ್ರಹದಿಂದ ನೇರವಾಗಿ ಭೂಮಿಯ ಯಾವುದೇ ಮೂಲೆಗೆ ಕರೆ ಮಾಡಲು ಅವಕಾಶ
- ಕುಗ್ರಾಮಗಳಿಗೂ 5ಜಿ ಸೇವೆ ಒದಗಿಸುವ ಈ ಉಪಗ್ರಹ ಉಡಾವಣೆಗೆ ಕಂಪನಿಯಿಂದ ಇಸ್ರೋಗೆ ಮೊರೆ
- ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಶ್ರೀಹರಿಕೋಟದಿಂದ ನಭಕ್ಕೆ ಹಾರಲಿದೆ

ಮೊಬೈಲ್ ಮೂಲಕ ಬಾಹ್ಯಾಕಾಶದಲ್ಲಿ ಸಂವಹನವನ್ನು ಸಾಧ್ಯವಾಗಿಸುವ ಉಪಗ್ರಹವನ್ನು ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಉಡಾವಣೆ ಮಾಡಲಾಗುವುದು. ಇದು ಕುತೂಹಲಕಾರಿ ಮಿಷನ್ ಆಗಿರಲಿದೆ.
- ಜಿತೇಂದ್ರ ಸಿಂಗ್
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

ಸಮಾಚಾರ ಸಣ್ಣದಲ್ಲ

ಅಭಿಯಂತರ ತಂಡದ ರಂಗ ಪ್ರಯೋಗ 5ಕ್ಕೆ

ಮೈಸೂರು: ಮೈಸೂರಿನ ಅಭಿಯಂತರರು ರಂಗತಂಡದಿಂದ ಎಚ್.ಎಸ್.ಸುರೇಶ್ ಬಾಬು ನಿರ್ದೇಶನದಲ್ಲಿ ಕಳಸೂತ್ರ ರಂಗ ಪ್ರಯೋಗವನ್ನು ಜ.5ರ ಭಾನುವಾರ ಸಂಜೆ 7 ಗಂಟೆಗೆ ಮೈಸೂರಿನ ಕಿರುರಂಗಮಂದಿರದಲ್ಲಿ ಪ್ರಸ್ತುತಪಡಿಸುತ್ತಿದೆ. 1993ರಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸ್ಥಾಪಿತಗೊಂಡು ಈ ಸಂಘಟನೆ 26ಕ್ಕೂ ಹೆಚ್ಚು ನಾಟಕಗಳನ್ನು ರಂಗ ಪ್ರಯೋಗಿಸಿದೆ. ಅನಿಕೇತ ಬೋಲೆ ಅವರ ಈ ಮರಾಠಿ ನಾಟಕವನ್ನು ಪ್ರಕಾಶ ಪರ್ವತೀಕರ ಕನ್ನಡಕ್ಕೆ ಅನುವಾದಿಸಿದ್ದಾರೆ.ವೃತ್ತಿಯಲ್ಲಿ ಅಭಿಯಂತರರಾಗಿ ಪ್ರವೃತ್ತಿಯಲ್ಲಿ ರಂಗಕರ್ಮಿ ಸುರೇಶ್ ಬಾಬು ಅಭಿಯಂತರರು ರಂಗತಂಡದ ರೂವಾರಿ. ನಟನೆ, ನಿರ್ದೇಶನ ಮತ್ತು ಸಂಘಟನೆಗಳಲ್ಲಿ ತೊಡಗಿಕೊಂಡಿದ್ದಾರೆ.

ಬೀದಿ ಬದಿ ನಿರಾಶ್ರಿತರಿಗೆ ಹೊದಿಕೆಗಳ ವಿತರಣೆ

ಹುಣಸೂರು: ಜನಧ್ವನಿ ಫೌಂಡೇಶನ್ ವತಿಯಿಂದ ತಡ ರಾತ್ರಿಯಲ್ಲಿ ಬೀದಿ ಬದಿಗಳಲ್ಲಿ ಹುಣಸೂರಿನಿಂದ ಮೈಸೂರಿನ ವರೆಗೆ ಮಲಗುವ ನಿರಾಶ್ರಿತರನ್ನು ಹುಡುಕಿ ಅವರಿಗೆ ಹೊದಿಕೆ ನೀಡುವ ಮೂಲಕ ಮಾನವೀಯತೆ ಮೆರೆಯಲಾಗಿದೆ. ಇದೆ ವೇಳೆ ಮಾತನಾಡಿದ ಫೌಂಡೇಶನ್ ಅಧ್ಯಕ್ಷ ವಕೀಲ ಆಯರಹಳ್ಳಿ ಪ್ರವೀಣ್, ತುಂಬಾ ಚಳಿಯ ವಾತಾವರಣವಿದ್ದು ಮನೆಯಲ್ಲೆ ಇರುವ ನಮಗೆ ಆಗುತ್ತಿಲ್ಲ. ಇಂಥವರ ಗತಿ ಏನು? ಆದ್ದರಿಂದ ಪ್ರತಿ ವರ್ಷದಂತೆ ಈ ವರ್ಷವೂ ಹೊದಿಕೆ ಹಂಚಲಾಗಿದೆ. ನಾವು ಬದುಕುತ್ತಿರುವ ಬದುಕು ಬೇರೆಯವರ ಜೀವನದಲ್ಲಿ ಕನಸಾಗಿ ಉಳಿದಿದೆ. ಆದ್ದರಿಂದ ಇಂತಹ ಸೇವೆ ಮಾಡುವುದು ನಮಗೆ ತೃಪ್ತಿ ತಂದಿದೆ ಎಂದರು. ನಿರ್ಗತಿಕರು ಕಂಡು ಬಂದರೆ ನಮ್ಮ ಸಹಾಯವಾಣಿ ಮೊ.9964885050 ನಂಬರಿಗೆ ಕರೆ ಮಾಡುವಂತೆ ಮನವಿ ಮಾಡಿದರು. ಫೌಂಡೇಶನ್ ಸದಸ್ಯರು ಮತ್ತಿತರು ಹಾಜರಿದ್ದರು.

ಅಧ್ಯಕ್ಷರ ಆಯ್ಕೆ ಮುಂದೂಡಿಕೆ

ಚಾಮರಾಜನಗರ: ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಮಪಂಚಾಯಿತಿ ಅಧ್ಯಕ್ಷರ ಆಯ್ಕೆಗೆ ಜನವರಿ 2ರಂದು ನಿಗದಿಯಾಗಿದ್ದ ಚುನಾವಣೆ ಮುಂದೂಡಲಾಗಿದೆ. ಆದರೆ ಸದರಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆ ಬಗ್ಗೆ ಹೈಕೋರ್ಟ್‌ನಲ್ಲಿ ರಿಟ್ ಪಿಟಿಶನ್ ಪ್ರಕರಣ ದಾಖಲಾಗಿದ್ದರಿಂದ ಅಡ್ವಕೇಟ್ ಜನರಲ್‌ಗೆ ನಿರ್ದೇಶನ ಕೋರಿ ಪತ್ರ ಬರೆಯಲಾಗಿದೆ. ಅಡ್ವಕೇಟ್ ಜನರಲ್ ನಿರ್ದೇಶನದ ಅನುಸಾರ ಮುಂದಿನ ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

ವಾಹನ ಚಾಲಕರ ಕ್ಯಾಲೆಂಡರ್ ಬಿಡುಗಡೆ

ಚಾಮರಾಜನಗರ: ಜಿಲ್ಲಾ ಸರಕಾರಿ ವಾಹನ ಚಾಲಕರ ಸಂಘದ ಕ್ಯಾಲೆಂಡರ್ ಅನ್ನು ಜಿಪಂ ಸಿಇಒ ಮೋನಾ ರೋತ್ ಬಿಡುಗಡೆ ಮಾಡಿದರು. ನಗರದ ಜಿಪಂ ಕಚೇರಿ ಸಭಾಂಗಣದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಹೊಸವರ್ಷದ ಶುಭಾಶಯ ಕೋರಿದರು. ಜಿಲ್ಲಾ ವಾಹನ ಚಾಲಕರ ಜಿಲ್ಲಾಧ್ಯಕ್ಷರಾದ ಆರ್.ಶ್ರೀನಿವಾಸ್, ಗೌರವ ಅಧ್ಯಕ್ಷರಾದ ಬಿ.ಪಿ ಪ್ರಕಾಶ್, ಉಪಾಧ್ಯಕ್ಷರಾದ ಎಸ್.ಶಶಿಕುಮಾರ್, ಕಾರ್ಯದರ್ಶಿಗಳಾದ ಎಂ.ಎಸ್ ಪ್ರಭುಸ್ವಾಮಿ ಉಪಸ್ಥಿತರಿದ್ದರು.

ಬಂಜಾರ ಸಂಸ್ಕೃತಿ ಬಗ್ಗೆ ವಿಚಾರ ಗೋಷ್ಠಿ ಇಂದು

ಚಾಮರಾಜನಗರ : ಬೆಂಗಳೂರಿನ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಹಾಗೂ ಚಾಮರಾಜನಗರ ಜಿಲ್ಲಾ ಲಂಬಾಣಿ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಬಂಜಾರ ಮದುವೆ ಶಾಸ್ತ್ರಗಳ ವಿಚಾರಗೋಷ್ಠಿ ಮತ್ತು ಕವಿಗೋಷ್ಠಿಯನ್ನು ಜನವರಿ 4ರಂದು ಬೆಳಿಗ್ಗೆ 9.30 ಗಂಟೆಗೆ ಕೊಳ್ಳೇಗಾಲ ಪಟ್ಟಣದ ವಾಸವಿ ಮಹಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಬಂಜಾರ ಭಾಷಾ ಅಕಾಡೆಮಿ ಅಧ್ಯಕ್ಷ ಡಾ. ಎ.ಆರ್. ಗೋವಿಂದಸ್ವಾಮಿ ಉದ್ಘಾಟಿಸುವರು. ತಾಂಡ ನಿಗಮದ ಅಧ್ಯಕ್ಷ ಎನ್. ಜಯದೇವನಾಯ್ಕ ಉಪಸ್ಥಿತಿ ವಹಿಸುವರು. ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಾಲಾಲ್, ಉದ್ಭವ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷೆ ಚಂದ್ರಕಲಾ ಬಾಯಿ, ಭಾಷಾ ಅಕಾಡೆಮಿ ಸದಸ್ಯ ಸಂಚಾಲಕರಾದ ಜಿ. ಪಳನಿಸ್ವಾಮಿಜಾಗೇರಿ ಭಾಗವಹಿಸುವರು. ಮಧ್ಯಾಹ್ನ 2.30ಕ್ಕೆ ಸಮಾರೋಪ, ಜಿಲ್ಲಾ ಲಂಬಾಣಿ ನೌಕರರ ಸಂಘದಿಂದ ಗೌರವ ಸಮರ್ಪಣೆ ನಡೆಯಲಿದೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ ವಿ.ಸೋಮಣ್ಣ } ಕೇಂದ್ರ ರೈಲ್ವೇ ಸಚಿವ

ಅಭಿವೃದ್ಧಿ ವಿಚಾರವಾಗಿ ಯಾರ ಮನೆಗಾದರೂ ಹೋಗಲು ಸದಾ ಕಾಲ ಸಿದ್ಧವಿದ್ದೇನೆ. ಅಭಿವೃದ್ಧಿ ವಿಚಾರದಲ್ಲಿ ಪಕ್ಷ, ಜಾತಿ ಧರ್ಮ ಭೇದವಿಲ್ಲದೆ ಕೆಲಸ ಮಾಡಬೇಕು. ನನ್ನ ಕ್ಷೇತ್ರಕ್ಕೆ ಒಳ್ಳೆದಾಗುತ್ತೆ ಎಂದಾದರೆ ಎಲ್ಲಿಗಾದರೂ ಹೋಗೋಣ. ಆದರೆ ಸಲ್ಲದ ರಾಜಕಾರಣ ಮಾಡುವುದು ಬೇಡ.

ರಾಜ್ಯ ಸರಕಾರದ 'ಶಕ್ತಿ' ಯೋಜನೆಗೆ ಹಣ ಹೊಂದಿಸಲು ದರ ಏರಿಕೆ | ಕರ್ನಾಟಕ ಸೇನಾ ಪಡೆಯಿಂದ ಆಕ್ರೋಶ

ಸಾರಿಗೆ ಬಸ್ ದರ ಹೆಚ್ಚಳ ಖಂಡಿಸಿ ಪ್ರತಿಭಟನೆ

ಮೈಸೂರು: ಸಾರಿಗೆ ಸಂಸ್ಥೆ ಬಸ್ ದರ ಹೆಚ್ಚಳ ಮಾಡಿರುವ ರಾಜ್ಯ ಸರಕಾರದ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ಮಾಡಲಾಯಿತು.

ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ದಿನ ಬೆಳಗಾದರೆ ಒಂದಲ್ಲ ಒಂದು ಬೆಲೆ ಏರಿಕೆ ಮಾಡಿ, ಕನ್ನಡಿಗರ ರಕ್ತ ಹೀರುತ್ತಿದ್ದಾರೆ. ರಾಜ್ಯ ಸರಕಾರದ ಬಕಾಸುರ ಹೊಟ್ಟೆ ತುಂಬಿಸಲು ಕನ್ನಡಿಗರು ಇನ್ನೆಷ್ಟು ತೆರಿಗೆ ಶುಲ್ಕ ತೆತ್ತಬೇಕೋ ಗೊತ್ತಿಲ್ಲ ಎಂದು ಟೀಕಿಸಿದರು.

ಕಂದಾಯ ಇಲಾಖೆಯ 20 ರೂ ಇದ್ದ ಸ್ಟ್ಯಾಂಪ್ ಪೇಪರ್ ಬೆಲೆಯನ್ನು 100 ರೂಪಾಯಿಗೆ ಹೆಚ್ಚಿಸಿದ್ದಾರೆ. ರಿಜಿಸ್ಟ್ರೇಷನ್ ದರ, ಆಸ್ತಿ ತೆರಿಗೆ ದರ 30-40% ಏರಿಕೆಯಾಗಿದೆ. ವಿದ್ಯುತ್ ದರ, ಜನನ ಮರಣ ಪ್ರಮಾಣ ಪತ್ರ ಶುಲ್ಕ, ಹಾಲಿನ ದರ ಹಾಗೂ ಜೊತೆಗೆ ಈಗ ಕೆ ಎಸ್ ಆರ್ ಟಿ ಸಿ ಬಸ್ ದರವನ್ನು ಶೇ.15 ಏರಿಸಿರುವುದು ಅತ್ಯಂತ ಖಂಡನೀಯ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬರಲು ಹಲವಾರು ಬಿಟ್ಟಿ ಭಾಗ್ಯಗಳನ್ನು ಘೋಷಣೆ ಮಾಡಿ, ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ದೂಡುತ್ತಿದೆ. ಶ್ರೀಲಂಕಾ ಹಾಗೂ ದೆಹಲಿಯಲ್ಲಿ ಆದಂತೆ ನಮ್ಮ ರಾಜ್ಯ ಆರ್ಥಿಕವಾಗಿ ದಿವಾಳಿಯಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇಷ್ಟು ಬಾರಿ ಬಜೆಟ್ ಮಂಡನೆ ಮಾಡಿರುವ ಮುಖ್ಯಮಂತ್ರಿ ಹಣಕಾಸಿನ ವ್ಯವಸ್ಥೆ ನೋಡಿಕೊಳ್ಳದೆ, ಸಾರಿಗೆ ಸಿಬ್ಬಂದಿಗೆ ಸರಿಯಾಗಿ ಸಂಬಳವನ್ನು ನೀಡದೆ, ಅವರು ಈಗ ಸಾರಿಗೆ ಬಂದ್ ಮಾಡುತ್ತೇವೆ ಎಂದ ಮೇಲೆ ಶಕ್ತಿ ಯೋಜನೆಗೆ ಹಣ ಹೊಂದಿಸಲು ಈಗ ಏಕಾಏಕಿ ಬಸ್ ದರ ಹೆಚ್ಚಿಸಿ ಅದನ್ನು ಜನರ ಮೇಲೆ ಹೇರಿಕೆ ಮಾಡಿರುವುದು ಎಷ್ಟು ಸರಿ ಎಂದು ಕಿಡಿ ಕಾರಿದರು. ಈ ಕೂಡಲೇ ಮುಖ್ಯಮಂತ್ರಿಗಳು ಏರಿಕೆ ಮಾಡಿರುವ ಸಾರಿಗೆ ದರವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೃಷ್ಣಪ್ಪ, ಪ್ರಭುಶಂಕರ್, ಹನುಮಂತಯ್ಯ, ಪ್ರಭಾಕರ್, ನೇಹ, ಸಿಂಧುವಳಿ ಶಿವಕುಮಾರ್, ಭಾಗ್ಯಮ್ಮ, ಡಾ . ಶಾಂತರಾಜೇಅರಸ್, ನಾಗರಾಜು, ಶುಭಶ್ರೀ, ವರ್ಕುಡ್ ಕೃಷ್ಣೇಗೌಡ, ಸ್ವಾಮಿ ಗೌಡ, ರಘುಅರಸ್, ಪ್ರದೀಪ್, ದರ್ಶನ್ ಗೌಡ, ಚಂದ್ರಶೇಖರ್, ತ್ಯಾಗರಾಜ್, ಬಸವರಾಜು, ಗುರುಮಲ್ಲಪ್ಪ ಹಾಗೂ ರಾಮಕೃಷ್ಣೇಗೌಡ ಇದ್ದರು.

ಮೈಸೂರಿನಲ್ಲಿ ಸಾರಿಗೆ ಸಂಸ್ಥೆ ಬಸ್ ದರ ಹೆಚ್ಚಳ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ಮಾಡಲಾಯಿತು.

ಬಸ್ ದರ ಏರಿಕೆಗೆ ಎಸ್‌ಡಿಪಿಐ ಖಂಡನೆ

ಮೈಸೂರು: ರಾಜ್ಯದ ಸಾರಿಗೆಯ ನಿಗಮಗಳ ಬಸ್ ಪ್ರಯಾಣ ದರವನ್ನು ಶೇ.15ರಷ್ಟು ಏರಿಕೆ ಮಾಡಿ ತೆಗೆದುಕೊಂಡಿರುವ ನಿರ್ಧಾರವನ್ನು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಬಲವಾಗಿ ಖಂಡಿಸಿದೆ.

ಈ ದರ ಏರಿಕೆ ದೊಡ್ಡ ಅನ್ಯಾಯ ಎಂದಿರುವ ಎಸ್‌ಡಿಪಿಐ ಪಕ್ಷ, ಈ ಏರಿಕೆಯಿಂದ ಜನ ಸಾಮಾನ್ಯರು, ವಿಶೇಷವಾಗಿ ಕಾರ್ಮಿಕ ವರ್ಗ, ವಿದ್ಯಾರ್ಥಿಗಳು ಮತ್ತು ಕೈಗೆಟುಕುವ ಸಾರ್ವಜನಿಕ ಸಾರಿಗೆ ಅವಲಂಬಿಸಿರುವ ದೈನಂದಿನ ಪ್ರಯಾಣಿಕರಿಗೆ ದೊಡ್ಡ ಹೊರೆಯಾಗಲಿದೆ ಎಂದು ಹೇಳಿದೆ. ಪಕ್ಷದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಈ ಬಗ್ಗೆ ಹೇಳಿಕೆ ನೀಡಿ, ಇಂಧನ ಬೆಲೆಗಳು ಮತ್ತು ಸಿಬ್ಬಂದಿ ವೆಚ್ಚಗಳು, ನಿರ್ವಹಣಾ ವೆಚ್ಚಗಳ ಏರಿಕೆಯ ಕಾರಣ ನೀಡಿ ಸರಕಾರ ದರ ಹೆಚ್ಚಳ ಸಮರ್ಥಿಸಿಕೊಂಡಿದೆ. ಆದರೆ ಈ ನಿರ್ಧಾರದಿಂದ ಜನ ಸಾಮಾನ್ಯರಿಗೆ ದೊಡ್ಡ ಹೊರೆ ಬೀಳಲಿದೆ. ಕರ್ನಾಟಕದ ಜನರು ಈಗಾಗಲೇ ಜೀವನ ನಿರ್ವಹಣಾ ವೆಚ್ಚಗಳಿಂದ ಹೆಣಗಾಡುತ್ತಿದ್ದಾರೆ. ಅದರ ಜೊತೆಗೆ ಈ ಬೆಲೆ ಏರಿಕೆ ಅವರನ್ನು ಆರ್ಥಿಕವಾಗಿ ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ ಎಂದಿದ್ದಾರೆ.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ 'ಶಕ್ತಿ' ಯೋಜನೆ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಹೇಳಿದೆ. ಇದೊಂದು ಪೊಳ್ಳು ವಾದ. ಏಕೆಂದರೆ ಅತ್ಯಧಿಕ ಬಸ್ ಪ್ರಯಾಣಿಕರು ಪುರುಷರೇ ಆಗಿದ್ದು ಅವರು ಹೊರೆ ಹೊರಬೇಕಾಗಿದೆ. ದರ ಏರಿಕೆಯನ್ನು ತಕ್ಷಣವೇ ಹಿಂಪಡೆಯಬೇಕು. ಸಾರಿಗೆ ಕ್ಷೇತ್ರದ ಆರ್ಥಿಕ ಕೊರತೆಗೆ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಶ್ರೀ ಸಿದ್ಧೇಶ್ವರರಿಗೆ ನೆನಪುಗಳ ನುಡಿ ಮಲ್ಲಿಗೆ

ಮೈಸೂರು: ನುಡಿದಂತೆ ಸರಳವಾಗಿ ನಡೆದ ಸರಳ ಸಂತ ಶ್ರೀಸಿದ್ದೇಶ್ವರ ಸ್ವಾಮೀಜಿ ಸಾಕಷ್ಟು ಜನರ ಬದುಕಿನಲ್ಲಿ ಸ್ಫೂರ್ತಿ ತುಂಬಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಹೇಳಿದರು.

ಜೆ.ಎಸ್.ಜಗದೀಶ್ ಸ್ನೇಹ ಬಳಗದ ವತಿಯಿಂದ ನಿವೇದಿತಾನಗರದ ಎಸ್. ಆರ್.ಸುಬ್ಬರಾವ್ ಉದ್ಯಾನದಲ್ಲಿ ಆಯೋಜಿಸಿದ್ದ ಶ್ರೀ ಗುರು ಸಿದ್ಧೇಶ್ವರರಿಗೆ ನೆನಪುಗಳ 'ನುಡಿ ಮಲ್ಲಿಗೆ' ಕಾರ್ಯಕ್ರಮದಲ್ಲಿ ಮಾತನಾಡಿದರು.

ಸರಳ ಪ್ರವಚನಗಳ ಮೂಲಕ ಮನುಕುಲದ ಉದ್ಧಾರಕ್ಕಾಗಿ ಶ್ರಮಿಸಿದ ಮಹಾನ್ ಸಂತ ಅವರು. ಕಾವಿಯನ್ನು ಧರಿಸದೆ ತಮ್ಮ ಜೀವನವಿಡೀ ಆಧ್ಯಾತ್ಮದ ಕೃಷಿ ಮಾಡಿದ ಋಷಿ ಅವರು ಎಂದು ಬಣ್ಣಿಸಿದರು.

ನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಜಗದೀಶ್ ಮಾತನಾಡಿ, ಶ್ರೀಗಳು ಒಬ್ಬ ಆಧ್ಯಾತ್ಮಿಕದ ಹಿಮಾಲಯ. ಅವರ ಚಿಂತನೆ, ಮಾತುಗಳನ್ನು ಮೆಲುಕು ಹಾಕಿ ಧನ್ಯತೆಯಲ್ಲಿ ತೇಲಬೇಕು. ಅವರ ವಿಚಾರ ಮೈಗೂಡಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು. ನಾನು ಅನೇಕ ಬಾರಿ ಅವರ ಪ್ರವಚನ ಕೇಳಿದ್ದೇನೆ. ಜ್ಞಾನಯೋಗಿಯಾಗಿದ್ದರು. ಅವರ ಸಂದೇಶ ಅನೇಕರಲ್ಲಿ ಸಾಕಷ್ಟು ಪರಿಣಾಮ ಬೀರಿದೆ. ಅವರ ಪ್ರವಚನದಿಂದ ಸಾಕಷ್ಟು ಜೀವನ ಮೌಲ್ಯ ಅರಿತುಕೊಂಡಿದ್ದೇನೆ ಎಂದರು.

ಉದ್ಯಮಿ ಆಯರಹಳ್ಳಿ ಪಿ.ವಿರೂಪಾಕ್ಷ ಮಾತನಾಡಿ, ಜ್ಞಾನದ ಗಣಿಯಾಗಿದ್ದ ಸಿದ್ಧೇಶ್ವರರು ತತ್ವಜ್ಞಾನದ ಸಂಗಮದಂತೆ ಇದ್ದರು. ಹೀಗಾಗಿ, ಪರಿಣಾಮಕಾರಿಯಾಗಿ ಪ್ರವಚನ ನೀಡುತ್ತಿದ್ದರು. ಜ್ಞಾನದ ವಿಸ್ತಾರಕ್ಕೆ ಮನುಷ್ಯ ಯಾವಾಗಲೂ ತನ್ನನ್ನು ತೆರೆದುಕೊಳ್ಳಬೇಕು ಎಂದು ಅವರು ಹೇಳುತ್ತಿದ್ದರು ಎಂದು ಸ್ಮರಿಸಿದರು.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಮುಖಂಡರಾದ ರೇವಣ್ಣ, ಸತ್ಯಾನಂದ ವಿಟ್ಟು, ಲೋಹಿತ್ ಶರ್ಮ ಇತರರಿದ್ದರು.

ಕಸ ವಿಂಗಡಿಸಿ ಮಾರಾಟದಿಂದ ಲಾಭ

ಮೈಸೂರು: ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ತ್ಯಾಜ್ಯ ಲೆಕ್ಕಪರಿಶೋಧನೆಯ ಮೂಲಕ ತ್ಯಾಜ್ಯ ಪ್ರಮಾಣೀಕರಣ ನಡೆಸುವ ಕುರಿತು ಆಯ್ದ 12 ಗ್ರಾಮ ಪಂಚಾಯಿತಿಗಳಿಗೆ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ಜಿಲ್ಲಾ ಪಂಚಾಯಿತಿಯ ಅರಸು ಸಭಾಂಗಣದಲ್ಲಿ ನಡೆದ ಕಾರ್ಯಾಗಾರವನ್ನು ಜಿಪಂ ಸಿಇಒ ಕೆ.ಎಂ.ಗಾಯಿತ್ರಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ತ್ಯಾಜ್ಯ ನಿರ್ವಹಣೆ ಕುರಿತು ಹೆಚ್ಚು ಒತ್ತು ನೀಡಬೇಕು. ಗ್ರಾಮ ಪಂಚಾಯಿತಿಗಳು ಕಸ ಸಂಗ್ರಹದ ಜತೆ ವೈಜ್ಞಾನಿಕವಾಗಿ ವಿಂಗಡಿಸುವ ಕೆಲಸವನ್ನು ಮಾಡಬೇಕು. ಆಗ ವ್ಯವಸ್ಥಿತ ತ್ಯಾಜ್ಯ ನಿರ್ವಹಣೆ ಸಾಧ್ಯ ಎಂದರು.

ನಾವು ಕಸವನ್ನು ವೈಜ್ಞಾನಿಕವಾಗಿ ವಿಂಗಡಿಸಿ ಮಾರಾಟ ಮಾಡುವುದರಿಂದ ಆರ್ಥಿಕವಾಗಿ ಕೂಡ ಲಾಭ ಹೊಂದಬಹುದು ಎಂದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮನೆಗಳಿಂದ, ವಾಣಿಜ್ಯ ಮಳಿಗೆಗಳಿಂದ ಎಷ್ಟು ಕಸ ಸಂಗ್ರಹಣೆಯಾಗುತ್ತಿದೆ ಎಂಬ ಚಿತ್ರಣ ಸಿಗಲಿದೆ. ಗ್ರಾಪಂಗೆ ಘನ ತ್ಯಾಜ್ಯ ನಿರ್ವಹಣೆ ವ್ಯಾಪಾರವಾಗಿ ಮುಂದು ವರಿಸಲು ರೂಪುರೇಷೆ ನೀಡಲಿದೆ ಎಂದು ಉಪಕಾರ್ಯದರ್ಶಿ ಡಾ.ಎಂ. ಕೃಷ್ಣರಾಜು ತಿಳಿಸಿದರು. ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಸಾಹಸ್ ಸಂಸ್ಥೆಯ ಹಿರಿಯ ಮೇಲ್ವಿಚಾರಕ ಆನಂದ್ ತರಬೇತಿ ನೀಡಿದರು. 12 ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ವ್ಯವಸ್ಥಾಪಕರು, ತ್ಯಾಜ್ಯ ಘಟಕ ಮೇಲ್ವಿಚಾರಕರು ಉಪಸ್ಥಿತರಿದ್ದರು.

ಜಿಪಂ ಸಭಾಂಗಣದಲ್ಲಿ ನಡೆದ ಕಾರ್ಯಾಗಾರ ಜಿಪಂ ಸಿಇಒ ಗಾಯಿತ್ರಿ ಉದ್ಘಾಟಿಸಿದರು.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಜ.14 ಕ್ಕೆ

ಮೈಸೂರು: ಜನವರಿ 14 ರಿಂದ 19ರವರೆಗೆ ಮೈಸೂರಿನ ಕಲಾಮಂದಿ ರದಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆಯೋಜಿಸಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬಹುರೂಪಿ ನಾಟಕೋತ್ಸವ -2025ರ ಪೂರ್ವ ಸಿದ್ಧತಾ ಸಭೆ ನಡೆಯಿತು.

ಈ ವೇಳೆ ಮಾತನಾಡಿದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಕೈಜೋಡಿಸುವ ಮೂಲಕ ನಾಟಕೋತ್ಸವ ಯಶಸ್ವಿಗೊಳಿಸಲು ಸಹಕರಿಸಿ ಎಂದು ತಿಳಿಸಿದರು. ಮೈಸೂರು ಜಿಲ್ಲೆಗೆ ರಂಗಾಯಣ ಒಂದು ಹೆಮ್ಮೆ, ಮುಖ್ಯಮಂತ್ರಿಗಳ ತವರು ಜಿಲ್ಲೆ. ಜ.14ರಿಂದ 19ರವರೆಗೆ ಕಲಾಮಂದಿರದಲ್ಲಿ ಬಹುರೂಪಿ ಹಮ್ಮಿಕೊಳ್ಳಲಾಗಿದೆ.

ನಾಗರೀಕ ಸಮಾ ಜದ ಸ್ವಾಸ್ಥ್ಯ ಕಾಪಾಡುವ ಆಯೋಜಿಸಲಾಗುತ್ತದೆ ಎಂದು ತಿಳಿಸಿದರು. ಮಹಾನಗರ ಪಾಲಿಕೆ ವತಿಯಿಂದ ಕಲಾಮಂದಿರ ಹಾಗೂ ರಂಗಾಯಣದ ಸ್ವಚ್ಛತೆ ಮಾಡಬೇಕು. ಶುದ್ಧ ಕುಡಿವ ನೀರಿನ ವ್ಯವಸ್ಥೆ ಮಾಡಬೇಕು. ಮೊಬೈಲ್ ಟಾಯ್ಲೆಟ್ ವ್ಯವಸ್ಥೆ ಮಾಡಬೇಕು. ನಗರದ ಪ್ರಮುಖ ಸ್ಥಳಗಳಲ್ಲಿ ಸರ್ಕಾರದ ಯೋಜನೆಗಳನ್ನು ಡಿಜಿಟಲ್ ಸ್ಕ್ರೀನ್ ಮೂಲಕ ಪ್ರಚಾರ ಮಾಡಬೇಕು. ವಿದ್ಯುತ್ ವ್ಯತ್ಯಯ ಆಗದಂತೆ ಚೆಸ್ಕಾ ಅಧಿಕಾರಿಗಳು ಜಾಗ್ರತೆ ವಹಿಸಬೇಕು. ಉತ್ಸವದ ದಿನಗಳಲ್ಲಿ ಸಂಜೆ 6ರಿಂದ ರಾತ್ರಿ 10 ಗಂಟೆಯವರೆಗೆ ನಗರದ ವಿವಿಧ ಬಡಾವಣೆಗಳಿಗೆ ನಗರ ಸಾರಿಗೆ ಬಸ್ ಸೌಲಭ್ಯ ಕೆ ಎಸ್ ಆರ್ ಟಿ ಸಿ ವತಿಯಿಂದ ಒದಗಿಸಬೇಕು. ಶಾಲಾ ಕಾಲೇಜು ಶಿಕ್ಷಕರು ಹಾಗೂ ಮಕ್ಕಳು ನಾಟಕೋತ್ಸವದಲ್ಲಿ ಭಾಗವಹಿಸಲು ಮಾಹಿತಿ ನೀಡಬೇಕು ಎಂದರು.

ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ರಂಗಾಯಣ ಪ್ರಾರಂಭವಾಗಿ 35 ವರ್ಷ ಸಂದಿವೆ. ಬಹುರೂಪಿ ನಾಟಕೋತ್ಸವದಲ್ಲಿ 6 ದಿನಗಳ ಕಾಲ 24 ನಾಟಕಗಳು ಪ್ರದರ್ಶನ ಆಗುತ್ತವೆ.

ಇವು ಬೇರೆ ಬೇರೆ ಭಾಷೆಯ ನಾಟಕಗಳಾಗಿವೆ. ಈ ಬಾರಿ ಮಕ್ಕಳಿಗಾಗಿ ಮಕ್ಕಳ ನಾಟಕೋತ್ಸವ ಒಂದು ವೇದಿಕೆಯಲ್ಲಿದೆ. ನಾಟಕೋತ್ಸವ ಯಶಸ್ವಿಗೆ ಕೈಜೋಡಿಸಿ ಎಂದು ಮನವಿ ಮಾಡಿದರು. ಬಹುರೂಪಿ ನಾಟಕೋತವಕ್ಕೆ ಆಗಮಿಸುವ ಅತಿಥಿಗಳು, ಕಲಾತಂಡಗಳು ವಿದ್ವಾಂಸರನ್ನು ಕರೆತರಲು 4 ಮಿನಿ ಬಸ್ ಒದಗಿಸಬೇಕು. ಗಣ್ಯರ ವಾಸ್ತವ್ಯಕ್ಕಾಗಿ ವಸತಿ ಗೃಹಗಳನ್ನು ಕಾಯ್ದಿರಿಸಬೇಕು. ಬಹುರೂಪಿ ವಸ್ತು ಪ್ರದರ್ಶನದಲ್ಲಿ ಕರಕುಶಲ ಮಳಿಗೆ ತೆರೆಯಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಡಿಡಿಪಿಐ ಜವರೇಗೌಡ ಉಪಸ್ಥಿತರಿದ್ದರು.

ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ಬಹುರೂಪಿ ನಾಟಕೋತ್ಸವದ ಪೂರ್ವ ಸಿದ್ಧತಾ ಸಭೆ ನಡೆಯಿತು.

ಶೋಭಾ ಯಾತ್ರೆ ಇಂದು

ಎಚ್.ಡಿ.ಕೋಟೆ: ರಾಮನ ದೃಢ ಭಕ್ತನಾಗಿದ್ದ ಹನುಮಂತನನ್ನು ದೇವರ ಪ್ರತಿ ರೂಪವೆಂದು ಪೂಜಿಸಲಾಗುತ್ತದೆ ಎಂದು ಬಿಡಗಲು ಗ್ರಾಮದ ಪಡವಲು ವಿರಕ್ತ ಮಠಾಧ್ಯಕ್ಷರಾದ ಮಹದೇವಸ್ವಾಮೀಜಿ ಆಶೀರ್ವಚನದಲ್ಲಿ ತಿಳಿಸಿದರು.

ಪಟ್ಟಣದ ಆಂಜನೇಯ ದೇವಸ್ಥಾನದಲ್ಲಿ ಶುಕ್ರವಾರ ನಡೆದ ಪವಮಾನ ಹೋಮ ಮತ್ತು ಧಾರ್ಮಿಕ ಸಭೆಯಲ್ಲಿ ಮಾತನಾಡಿದರು. ಜನವರಿ 4ರ ಶನಿವಾರ ಹನುಮಸೇವಾ ಸಮಿತಿ ವತಿಯಿಂದ 7ನೇ ವರ್ಷದ ಹನುಮ ಜಯಂತಿಗೆ ಶೋಭಾ ಯಾತ್ರೆ ನಡೆಯಲಿದೆ ಎಂದು ಹೇಳಿದರು.

ಸನಾತನ ಧರ್ಮಾಚರಣೆಯಲ್ಲಿ ಶ್ರೀರಾಮ ಭಕ್ತ ಹನುಮ ಶ್ರದ್ಧೆಯಿಂದ ರಾಮನ ಬೆನ್ನೆಲಬಾಗಿ ನಿಂತ ರಾಮ ಭಕ್ತ ಹನುಮಂತ ಎಂದರು. ನಿಸ್ವಾರ್ಥ ಸೇವೆ, ಭಕ್ತಿ, ಹನುಮನಿಂದ ಕಲಿಯಬೇಕಿದೆ, ಇಂದಿನ ಯುವ ಪೀಳಿಗೆ ಹನುಮಂತನ ತತ್ವ ಆದರ್ಶ ಪಾಲನೆಯ ಜೊತೆಗೆ, ಆರಾಧಿಸಿ, ಸ್ಮರಣೆಯ ಮೂಲಕ ಸನ್ಮಾರ್ಗಗಳ ಪಾಲನೆ ಮಾಡಬೇಕಿದೆ ಎಂದರು. ಹನುಮನನ್ನು ಸ್ಮರಿಸುವುದರಿಂದ ನಾವೆಲ್ಲ ಪುನೀತರಾಗುತ್ತೇವೆ, ಹಿಂದೂ ಧರ್ಮದ ಆಚರಣೆಗಳು, ಧಾರ್ಮಿಕ ನಂಬಿಕೆಗಳನ್ನು ಕೆಲವರು ಪಿತೂರಿ ರೀತಿ ತೋರಿಸುವುದು ಸಹ ನಡೆಯುತ್ತಿದೆ. ಈಗಿನ ತಂತ್ರಜ್ಞಾನಗಳಿಗೂ ಸವಾಲಾಗಿರುವ ವಿಚಾರಗಳು ಹಿಂದೂ ಧರ್ಮದಲ್ಲಿ ಸಾವಿರಾರು ವರ್ಷಗಳ ಹಿಂದೆಯೆ ನಡೆದಿವೆ ಎಂದರು.

ಮೈ ಮೇಲಿನ ಕೊಳೆ ತೆಗೆಯಲು ಸೋಪು ಬಳಸುತ್ತೇವೆ, ಅಂತರಂಗದ ಕಲ್ಮಶ ತೊಡೆದು ಹಾಕಲು, ಸಾಧು, ಸಂತರ, ದಾರ್ಶನಿಕರ ಮಾತು ಕೇಳಬೇಕು. ವಿಶ್ವದ ವಿವಿಧೆಡೆ ಶ್ರೀರಾಮ ಮತ್ತು ಹನುಮನ ಆರಾಧಿಸುತ್ತಾರೆ ಎಂದರು. ದೇವರ ಸನ್ನಿಧಿಯಲ್ಲಿ ಭಕ್ತಿ ಭಾವದಿಂದ ಸಮಯ ಮೀಸಲಿಟ್ಟರೆ ಮಾನಸಿಕ ಒತ್ತಡ ಕಡಿಮೆಯಾಗಿ ಆರೋಗ್ಯಕರ ನೆಮ್ಮದಿಯ ಜೀವನ ನಿಮ್ಮದಾಗುತ್ತದೆ ಎಂದರು. ಕರ್ನಾಟಕ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಬಿ.ಕೆ. ಜಗದೀಶ್, ಚಂದ್ರ ಮೌಳಿ ಇದ್ದರು.

ವಿದ್ಯಾರ್ಥಿ ಸಾವು:ಇಬ್ಬರು ಸಸ್ಪೆಂಡ್

ಗುಂಡ್ಲುಪೇಟೆ: ತಾಲ್ಲೂಕಿನ ಯಡವನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡದಿಂದ ಬಿದ್ದು ಗಾಯಗೊಂಡಿದ್ದ ವಿದ್ಯಾರ್ಥಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದು, ಈ ಸಂಬಂಧ ವಸತಿ ಶಾಲೆಯ ಪ್ರಾಂಶುಪಾಲೆ ರಾಜೇಶ್ವರಿ ಮತ್ತು ವಾರ್ಡನ್ ಚಿಂತನ್ ಅವರನ್ನು ಜಿಲ್ಲಾಧಿಕಾರಿ ಅಮಾನತು ಮಾಡಿ ಆದೇಶಿಸಿದ್ದಾರೆ.

ಕೊಳ್ಳೇಗಾಲದ ಮುಡಿಗುಂಡ ಬಡಾವಣೆಯ ಹಾಗೂ ವಸತಿ ಶಾಲೆಯ ಪಿಯು ವಿದ್ಯಾರ್ಥಿ ಮನಿತ್ ಚಿಕಿತ್ಸೆ ಫಲಕಾರಿಯಾಗದೆ ಮೈಸೂರಿನ ಅಪೊಲೋ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಪ್ರಾಂಶುಪಾಲರು ಮತ್ತು ವಾರ್ಡನ್ ಮೇಲ್ನೋಟಕ್ಕೆ ನಿರ್ಲಕ್ಷ್ಯ ತೋರಿದ್ದಾರೆ ಎಂಬ ಆರೋಪದ ಮೇಲೆ ಸಸ್ಪೆಂಡ್ ಮಾಡಿದ್ದಾರೆ. ವಸತಿ ಶಾಲೆಯ ಕಟ್ಟಡದ ಮೇಲಂತಸ್ತಿನಿಂದ ಡಿ.30 ರಂದು ರಾತ್ರಿ ಮನಿತ್ ಬಿದ್ದು ತಲೆಗೆ ತೀವ್ರ ಪೆಟ್ಟಾಗಿತ್ತು. ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಲೆಗೆ ತೀವ್ರ ಪೆಟ್ಟು ತಿಂದು ಕೋಮಾವಸ್ಥೆಯಲ್ಲಿದ್ದ ಮನೀತ್‌ನನ್ನು ಆತನ ಪೋಷಕರ ಮನವಿಯಂತೆ ಅಪೊಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಗುರುವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ಈ ಕುರಿತು ಡಿಸಿ ಶಿಲ್ಪಾ ನಾಗ್ ಮಾತನಾಡಿ, ವಿದ್ಯಾರ್ಥಿ ಮೃತಪಟ್ಟಿರುವುದು ನೋವಿನ ಸಂಗತಿ. ಘಟನೆ ಬಗ್ಗೆ ನಿಖರ ಮಾಹಿತಿ ತಿಳಿಯಲು ಉಪ ವಿಭಾಗಧಿಕಾರಿ ನೇತೃತ್ವದ ಸಮಿತಿ ನೇಮಿಸಿದ್ದು ನಾಳೆ ವರದಿ ಕೊಡಲಿದ್ದಾರೆ. ಬಳಿಕ ಕ್ರಮ ಜರುಗಿಸಲಾಗುವುದು. ಸಿಸಿಟಿವಿ ವೈರ್ ಕೂಡ ಘಟನೆ ನಡೆದ ರಾತ್ರಿ ತುಂಡಾಗಿದ್ದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ ಎಂದು ತಿಳಿಸಿದ್ದಾರೆ.

ಗ್ರಾಮಾಧಿಕಾರಿಗಳ ಸಂಘದ ನೂತನ ಕ್ಯಾಲೆಂಡರ್

ತಿ.ನರಸೀಪುರ: ತಾಲೂಕು ಕಚೇರಿಯಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ನೂತನ ವರ್ಷದ ದಿನದರ್ಶಿಕೆಯನ್ನು ತಾಲೂಕು ದಂಡಾಧಿಕಾರಿ ಗಳಾದ ಟಿ.ಎಸ್. ಸುರೇಶಾಚಾರ್ ಬಿಡುಗಡೆ ಮಾಡಿದರು. ನಂತರ ಮಾತನಾಡಿ, ಗ್ರಾಮಾಧಿಕಾ ರಿಗಳ ಸಂಘ ಮುಂದಿನ ದಿನಗಳಲ್ಲಿ ಒಳ್ಳೆಯ ಕಾರ್ಯಕ್ರಮ ರೂಪಿಸಲಿ. ಮಾದರಿ ಸಂಘವಾಗಿ ರೂಪುಗೊಳ್ಳಲಿ ಎಂದರು. ಈ ವೇಳೆ ಸಂಘದ ಅಧ್ಯಕ್ಷ ಎಂ.ಎಸ್. ಆನಂದ್, ತಾ.ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ತಾ.ಸಂಘದ ಉಪಾ ಧ್ಯಕ್ಷ ಶ್ರೀನಿವಾಸ ಮೂರ್ತಿ, ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್. ಶಿವರಾಮು, ಖಜಾಂಚಿ ಜಿ. ಲಕ್ಷ್ಮಿ, ಭೂ ಮಾಪನ ಇಲಾಖೆ ಎಡಿ ಪಂಚಲಿಂಗಪ್ಪ, ಸಮಾಜ ಕಲ್ಯಾಣ ಎಡಿ ರಾಮೇಗೌಡ, ಉಪನೋಂದಾಣಧಿಕಾರಿ ಸಹನಾ, ಉಪ ತಹಸೀಲ್ದಾರ್ ಗಳಾದ ರಾಜ್ ಕಾಂತ್, ಮಂಜುಳಾ, ಲಕ್ಷ್ಮಿ, ರೂಪ, ಈ.ಕುಮಾರ, ರೇಣುಕಾಮ್ಮ, ಶೋಭಾ,ರಾಜಸ್ವ ನಿರೀಕ್ಷಕರು ಗಳಾದ, ಮಹೇಂದ್ರ, ಬಸವರಾಜು, ಸಿದ್ದರಾಜು, ಶ್ಯಾಮ್, ನಾಗೇಂದ್ರ, ಗೌರವಾಧ್ಯಕ್ಷ ಶಿವಣ್ಣ ನಿರ್ದೇಶಕರುಗಳಾದ ಎಂ. ಎನ್ ಸತೀಶ್, ಜಬೀನಾಬೇಗಂ,ಕೆ.ಬಿ.ಅನಿತಾ ಹಾಜರಿದ್ದರು.

ತಾಪಂ ಕಚೇರಿಯಲ್ಲಿ ನೂತನ ದಿನದರ್ಶಿಕೆ ತಹಸೀಲ್ದಾರ್ ಸುರೇಶಾಚಾರ್ ಬಿಡುಗಡೆ ಮಾಡಿದರು.

ಒಲಂಪಿಯಾಡ್ ಪರೀಕ್ಷೆ ವರದಾನ

ಕೆ.ಆರ್.ಪೇಟೆ: ಚನ್ನರಾಯಪಟ್ಟಣ ಟೈಮ್ಸ್ ಪಿಯು ಕಾಲೇಜು ವತಿಯಿಂದ ಟೈಮ್ಸ್ ಒಲಂಪಿಯಾಡ್ ಪರೀಕ್ಷೆ ಜನವರಿ 5 ರಂದು ಕಾಲೇಜು ಆವರಣದಲ್ಲಿ ಜರುಗಲಿದೆ. ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳು ಈ ಸುವರ್ಣ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಟೈಮ್ ಪಿಯು ಕಾಲೇಜುಗಳ ಮುಖ್ಯ ಕಾರ್ಯದರ್ಶಿ ಟೈಮ್ಸ್ ಗಂಗಾಧರ್ ತಿಳಿಸಿದರು. ಪ್ರವಾಸಿ ಮಂದಿರದಲ್ಲಿ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿ, ತಾಲೂಕಿನ ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಪಾಲ್ಗೊಂಡು ಅತ್ಯುತ್ತಮ ಅಂಕಗಳು ಪಡೆದು ಉತ್ತೀರ್ಣರಾದ 20 ಮಂದಿ ವಿದ್ಯಾರ್ಥಿಗಳಿಗೆ ಶೇಕಡ 50ರಷ್ಟು ವಿದ್ಯಾರ್ಥಿ ವೇತನವನ್ನು ನೀಡಲಾಗುವುದು, ವಿದ್ಯಾರ್ಥಿಗಳು ಭಾನುವಾರ ಈ ಪರೀಕ್ಷೆಯಲ್ಲಿ ಪಾಲ್ಗೊಂಡು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದರು. ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕೋರ್ಸ್ ಗಳಲ್ಲಿ ಅವಕಾಶ ಸಿಗಲು ಪ್ರಾಮಾಣಿಕವಾಗಿ ಶ್ರಮಿಸುತ್ತಾ ಬಂದಿದೆ ಎಂದರು. ಟೈಮ್ಸ್ ಕಾಲೇಜು ಪ್ರಾಂಶುಪಾಲ ಶ್ರೀಕಂಠ, ಸುನಿಲ್ ಕುಮಾರ್,ನಾಟನಹಳ್ಳಿ ಮನು ಇದ್ದರು.

ಪ್ರತಿಭೆ ಶೋಧಕ್ಕೆ ಶಾಲಾ ವಾರ್ಷಿಕೋತ್ಸವ ವೇದಿಕೆ

ಸರಗೂರು: ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಸಲಾಯಿತು. ಜೆಎಸ್ ಎಸ್ ಶಾಲೆಯ ಮುಖ್ಯ ಶಿಕ್ಷಕ ಮಹಮದ್ ಅಂಜುಮ್ ಪಾಷ ಮಾತನಾಡಿ, ಮಕ್ಕಳ ಪ್ರತಿಭೆ ಅನಾವರಣಕ್ಕೆ ಇಂತಹ ಶಾಲಾ ವಾರ್ಷಿಕೋತ್ಸವ ಒಂದು ಉತ್ತಮ ವೇದಿಕೆ. ಮಕ್ಕಳ ಪ್ರತಿಭೆ ಹೇಗಿರಬೇಕೆಂದರೆ ಮಕ್ಕಳಿಂದ ಅವರ ಪೋಷಕರು ಗುರುತಿಸಿಕೊಳ್ಳುವಂತಿರಬೇಕು. ಹಾಗಾಗಿ ಎಲ್ಲಾ ಮಕ್ಕಳು ಇದನ್ನು ಪಾಲಿಸಬೇಕೆಂದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಂತೋಷ್ ಎಸ್.ಕೆ. ಮಾತನಾಡಿ, ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಮೌಲ್ಯಗಳನ್ನು ಬಿತ್ತಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪಿಸಬೇಕು. ನಾನು ಇದೇ ಶಾಲೆಯಲ್ಲಿ ನರ್ಸರಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡಿ ಈಗ ಸರಗೂರಿನ ಪಟ್ಟಣ ಪಂಚಾಯಿತಿಯಲ್ಲಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪಠ್ಯ ಚಟುವಟಿಕೆಗಳು ಎಷ್ಟು ಮುಖ್ಯವೋ ಪಠ್ಯೇತರ ಅಷ್ಟೇ ಮುಖ್ಯ. ಆದ್ದರಿಂದ ಇವೆರಡನ್ನು ಸಮಾನವಾಗಿ ಅನುಸರಿಸಿದರೆ ಮಕ್ಕಳ ಭವಿಷ್ಯ ಉಜ್ವಲಗೊಳ್ಳಲಿದೆ ಎಂದರು. ಪ್ರಾಂಶುಪಾಲರಾದ ಮಹದೇವಸ್ವಾಮಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಮಾತನಾಡಿ, ಜ್ಞಾನವರ್ಧನೆಗೆ ಪಾಠಗಳು ಮುಖ್ಯವಾದರೆ ದೇಹ ವರ್ಧನೆಗೆ ಆಟಗಳು ಅಷ್ಟೇ ಮುಖ್ಯ ಎಂದರು. ಮುಖ್ಯ ಶಿಕ್ಷಕರಾದ ಶ್ರೀನಿವಾಸಮೂರ್ತಿ ಮಾತನಾಡಿದರು. ಹಿರಿಯ ಶಿಕ್ಷಕಿ ನಾಗರತ್ನ, ನಂದಿನಿ, ನಟೇಶ್, ಉಮಾ, ರಂಜಿನಿ ಅರಸ್, ಅಶೋಕ್,ಕೃಷ್ಣಮೂರ್ತಿ ಇದ್ದರು.

ಶಾ ವಿರುದ್ಧ ಜ.7ರಂದು 'ಮಂಡ್ಯ ಬಂದ್'ಗೆ ಕರೆ

ಮಂಡ್ಯ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಂಸತ್ತಿನಲ್ಲಿ ಅಪಮಾನ ಮಾಡಿದ ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿಕೆ ಖಂಡಿಸಿ ಜನವರಿ 7ರಂದು ಸ್ವಯಂ ಪ್ರೇರಿತ ಮಂಡ್ಯ ಬಂದ್‌ಗೆ ಕರೆ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರೈತ ನಾಯಕಿ ಸುನಂದ ಜಯರಾಂ ತಿಳಿಸಿದರು. ದಲಿತ, ರೈತ, ಅಲ್ಪಸಂಖ್ಯಾತ, ಕಾರ್ಮಿಕ, ಹಿಂದುಳಿದ ವರ್ಗಗಳ ಮಹಾಒಕ್ಕೂಟದ ವತಿಯಿಂದ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮಿತ್ ಷಾ ಸಂಸತ್ತಿನಲ್ಲಿ ಅಂಬೇಡ್ಕರ್ ಹೆಸರಿಗೆ ಕಳಂಕ ತರುವ ಹೇಳಿಕೆ ನೀಡಿದ್ದು, ಸಂವಿಧಾನ ಕಾಪಾಡಿಕೊಳ್ಳುವಲ್ಲಿ ಹೋರಾಟ ಮಾಡಬೇಕಿದೆ ಎಂದರು. ಅಮಿತ್ ಷಾ ಹೇಳಿಕೆ ಅವರ ಹೀನ ಮನಸ್ಥಿತಿ ತೋರುವ ಜತೆಗೆ ಅಪಾಯದ ಸುಳಿವು ತೋರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ವಿಭಾಗೀಯ ಸಂಚಾಲಕ ಎಂ.ಬಿ.ನಾಗಣ್ಣಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷವೂ ರಸ್ತೆಗಿಳಿದು ಹೋರಾಟ ಮಾಡುವ ನಿರೀಕ್ಷೆ ಇತ್ತು. ಕೇವಲ ತೋರಿಕೆಯ ಮಟ್ಟಕ್ಕೆ ಟೀಕಿಸುವ ಕಾಂಗ್ರೆಸ್ ಗೂ ಬಿಜೆಪಿಗೂ ವ್ಯತ್ಯಾಸವಿಲ್ಲ ಎಂದು ಕಿಡಿ ಕಾರಿದರು. ಬಿಜೆಪಿ ಬಹಿರಂಗವಾಗಿ ಸಂವಿಧಾನ ವಿರೋಧಿಸಿದರೆ, ಕಾಂಗ್ರೆಸ್ ಸಂವಿಧಾನ ವಿರೋಧಿಸುತ್ತಿದೆ. ಸಂವಿಧಾನ ರಕ್ಷಿಸುವ ಜವಾಬ್ದಾರಿ ದೇಶ ಪ್ರತಿಯೊಬ್ಬರ ಮೇಲೆ ಇದ್ದು, ಜಿಲ್ಲೆಯ ಸಾರ್ವಜನಿಕರು ಬಂದ್‌ಗೆ ಬೆಂಬಲ ಸೂಚಿಸಿ, ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಲಕ್ಷ್ಮಣ್ ಚೀರನಹಳ್ಳಿ, ಅಂದಾನಿ ಸೋಮನಹಳ್ಳಿ, ಸಿ.ಕುಮಾರಿ, ಜಯರಾಂ, ಎಂ.ವಿ.ಕೃಷ್ಣ ಇದ್ದರು.

ಮಾಜಿ ಶಾಸಕಿ ಜಯವಾಣಿ ನಿಧನ

ಮದ್ದೂರು: ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕಿ ಜಯವಾಣಿ ಮಂಚೇಗೌಡ (91) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ಮಧ್ಯಾಹ್ನ ಮದ್ದೂರು ಪಟ್ಟಣದ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು. 1983ರಲ್ಲಿ ಮದ್ದೂರು ಕ್ಷೇತ್ರದಿಂದ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿದ್ದ ಎಂ. ಮಂಚೇಗೌಡರ ಅಕಾಲಿಕ ಮರಣದಿಂದ ತೆರವಾದ ಸ್ಥಾನಕ್ಕೆ ನಡೆದ ಉಪ ಚುನಾವಣೆ ವೇಳೆ 1984ರಲ್ಲಿ ಮದ್ದೂರು ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಪ್ರತಿಷ್ಠಿತ ಎಂ.ಎಚ್. ಚನ್ನೇಗೌಡ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಅಂತ್ಯಕ್ರಿಯೆ ಇಂದು: ಮಾಜಿ ಶಾಸಕ ದಿ.ಎಂ.ಮಂಚೇಗೌಡ ಅವರ ಪತ್ನಿಯಾದ ಜಯವಾಣಿಮಂಚೇಗೌಡ ಅವರ ಅಂತ್ಯಕ್ರಿಯೆ ಮದ್ದೂರು ಪಟ್ಟಣದಲ್ಲಿ ಜನವರಿ 4 ಶನಿವಾರ ಮಧ್ಯಾಹ್ನ 11 ಗಂಟೆಗೆ ನೆರವೇರಲಿರುವುದಾಗಿ ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಮೃತರಿಗೆ ಮಕ್ಕಳಾದ ಮಾಜಿ ಶಾಸಕ ಡಾ.ಎಂ.ಮಹೇಶ್‌ಚಂದ್, ಮಂಡ್ಯ ಜಿ.ಪಂ. ಶಿಕ್ಷಣ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ.ಸ್ವರೂಪ್‌ಚಂದ್ ಹಾಗೂ ಪ್ರಫುಲ್‌ಚಂದ್, ಮೂವರು ಪುತ್ರಿಯರು ಮತ್ತು ಸಹೋದರ ಸ್ವಾತಂತ್ರ್ಯ ಹೋರಾಟಗಾರ ಎಂ.ಎಚ್.ಚನ್ನೇಗೌಡ ವಿದ್ಯಾಸಂಸ್ಥೆ ಕಾರ್ಯದರ್ಶಿ ಕೆ.ಟಿ.ಚಂದು ಸೇರಿದಂತೆ ಅಪಾರ ಬಳಗ ಬಿಟ್ಟು ಅಗಲಿದ್ದಾರೆ.

ಸಮಾಚಾರ ಸಣ್ಣದಲ್ಲ

ಜ.9ರಂದು ಬೃಹತ್ ಉದ್ಯೋಗ ಮೇಳ

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಕೌಶಲ್ಯ ಮಿಷನ್ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಜಿಲ್ಲೆಯ ಉದ್ಯೋಗಾಕಾಂಕ್ಷಿಗಳಿಗಾಗಿ ಜನವರಿ 9ರಂದು ತುಮಕೂರು ವಿಶ್ವವಿದ್ಯಾನಿಲಯದ ಸದಾನಂದಮಯ್ಯ ಬ್ಲಾಕ್‌ನಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ತುಮಕೂರಿನ ವಸಂತ ನರಸಾಪುರ ಕೈಗಾರಿಕಾ ಪ್ರದೇಶ, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ದಾಬಸ್ ಪೇಟೆ ಕೈಗಾರಿಕಾ ಪ್ರದೇಶ ಮತ್ತು ಬೆಂಗಳೂರಿನ ಸುಮಾರು 60ಕ್ಕೂ ಹೆಚ್ಚಿನ ಪ್ರತಿಷ್ಠಿತ ಖಾಸಗಿ ಕಂಪನಿಗಳು ಭಾಗವಹಿಸಲಿದ್ದು, ಸುಮಾರು 2000ಕ್ಕೂ ಅಧಿಕ ಉದ್ಯೋಗವಕಾಶಗಳು ಲಭ್ಯವಿರುತ್ತವೆ. ಆಸಕ್ತ ಅಭ್ಯರ್ಥಿಗಳು ನೋಂದಾಯಿಸಿಕೊಂಡು ಉದ್ಯೋಗಮೇಳದ ಪ್ರಯೋಜನವನ್ನು ಪಡೆಯಬೇಕೆಂದು ಅವರು ತಿಳಿಸಿದ್ದಾರೆ.

ಅಂಗನವಾಡಿ ಹುದ್ದೆಗೆ ಮರು ಆಹ್ವಾನ

ತುಮಕೂರು: ಮಧುಗಿರಿ ತಾಲೂಕಿನ 19 ಅಂಗನವಾಡಿ ಸಹಾಯಕಿಯರ ಹುದ್ದೆಗೆ ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದ್ದ ಅರ್ಜಿಗಳಲ್ಲಿ ಅಪೂರ್ಣಗೊಂಡಿದ್ದು ಮತ್ತೊಮ್ಮೆ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಮಧುಗಿರಿ ಸಿಡಿಪಿಒ ತಿಳಿಸಿದ್ದಾರೆ. ಸಹಾಯಕಿಯರ ಹುದ್ದೆಗೆ ಸಲ್ಲಿಸಿದ ಅರ್ಜಿಗಳ ಪೈಕಿ 148 ಅರ್ಜಿಗಳು ಅಪೂರ್ಣಗೊಂಡಿರುತ್ತವೆ. ಈ ಅಭ್ಯರ್ಥಿಗಳು ಮರು ಅರ್ಜಿ ಸಲ್ಲಿಸಲು ಜನವರಿ 5ರವರೆಗೂ ಅವಕಾಶ ಕಲ್ಪಿಸಲಾಗಿದೆ. ಮಾಹಿತಿಗೆ 08137-200002 ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಇಂದು ಹೆಬ್ಬಾರ್ ರಸ್ತೆ ಉದ್ಘಾಟನೆ, ರಕ್ತದಾನ

ಹಾಸನ: ಹೆಸರಾಂತ ವೈದ್ಯ ಡಾ.ಗುರುರಾಜ್ ಹೆಬ್ಬಾರ ಅವರ 74 ನೇ ಹುಟ್ಟುಹಬ್ಬ ನಿಮಿತ್ತ ನಗರದ ಸರಕಾರಿ ಮಹಿಳಾ ಕಾಲೇಜು ಮುಂಭಾಗದ ರಸ್ತೆಗೆ ಡಾ. ಹೆಬ್ಬಾರ್ ಹೆಸರು ನಾಮಕರಣ, ನಾಮಫಲಕ ಅನಾವರಣ, ರಕ್ತದಾನ ಶಿಬಿರ, ದೇಹದಾನ ಹಾಗೂ ನೇತ್ರದಾನ ನೋಂದಣಿಗೆ ಚಾಲನೆ ಕಾರ್ಯಕ್ರಮ ಜ.4 ರಂದು ನಡೆಯಲಿದೆ ಎಂದು ಜನಕಲ್ಯಾಣ ರೀಸರ್ಚ್ ಅಂಡ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ವಿ.ಕರೀಗೌಡ ತಿಳಿಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ಗಂಟೆಗೆ ಮಹಿಳಾ ಕಾಲೇಜು ಮುಂಭಾಗ ಡಾ.ಗುರುರಾಜ ಹೆಬ್ಬಾರ್ ರಸ್ತೆ ನಾಮಫಲಕ ಅನಾವರಣ ನಡೆಯಲಿದೆ. ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಈ ಕಾರ್ಯ ನೆರವೇರಿಸುವರು ಎಂದರು. ವಿಟಿಯು ವಿವಿ ವಿಶ್ರಾಂತ ಕುಲಪತಿ ಡಾ. ಕರಿಸಿದ್ದಪ್ಪ ಕಲಾತಂಡಗಳ ಮೆರವಣಿಗೆ ಉದ್ಘಾಟನೆ ಮಾಡುವರು. ಸಂಸದ ಶ್ರೇಯಸ್ ಪಟೇಲ್, ಹಾಸನ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಸಿ.ಸತ್ಯಭಾಮ, ಜಿಪಂ ಸಿಇಒ ಪೂರ್ಣಿಮಾ ಬಿ.ಆರ್., ಎಸ್ಪಿ ಮೊಹಮದ್ ಸುಜೀತಾ, ನಗರಸಭೆ ಆಯುಕ್ತ ಟಿ.ಎನ್.ನರಸಿಂಹಮೂರ್ತಿ ಉಪಸ್ಥಿತರಿದರು.

ಇಂದಿನಿಂದ ಪ್ರಾದೇಶಿಕ ಭಾಷಾ ಸಮ್ಮೇಳನ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿವಿ ಸಭಾಂಗಣದಲ್ಲಿ ಅಧಿಕೃತ ಭಾಷಾ ಇಲಾಖೆಯಿಂದ ದಕ್ಷಿಣ ಮತ್ತು ನೈಋತ್ಯ ಪ್ರದೇಶದ ಪ್ರಾದೇಶಿಕ ಅಧಿಕೃತ ಭಾಷಾ ಸಮ್ಮೇಳನ ಜ.4ರಂದು ಆಯೋಜಿಸಲಾಗಿದೆ ಎಂದು ಗೃಹ ವ್ಯವಹಾರಗಳ ಸಚಿವಾಲಯದ ಜಂಟಿ ನಿರ್ದೇಶಕರಾದ ರಾಜೇಶ್ ಕುಮಾರ್ ಶ್ರೀವಾಸ್ತವ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದ ಅಧಿಕೃತ ಭಾಷೆ ಹಿಂದಿ ಮತ್ತು ಲಿಪಿಯು ದೇವನಾಗರಿ. ಜೂನ್ 1975 ರಲ್ಲಿ, ಗೃಹ ವ್ಯವಹಾರಗಳ ಸಚಿವಾಲಯದ ಅಧಿಕೃತ ಭಾಷಾ ಇಲಾಖೆಯನ್ನು ಸ್ವತಂತ್ರ ಇಲಾಖೆಯಾಗಿ ಸ್ಥಾಪಿಸಲಾಯಿತು. ಪ್ರತಿ ವರ್ಷ ನಾಲ್ಕು ಪ್ರಾದೇಶಿಕ ಅಧಿಕೃತ ಭಾಷಾ ಸಮ್ಮೇಳನಗಳನ್ನು ಆಯೋಜಿಸಲಾಗುತ್ತದೆ. ಇದು ಮೊದಲ ಕಾರ್ಯಕ್ರಮವಾಗಿದೆ ಎಂದರು. ಹಿಂದಿಯ ಬಳಕೆಯ ಆಧಾರದ ಮೇಲೆ, ದೇಶವನ್ನು ಮೂರು ಪ್ರದೇಶಗಳಾಗಿ ಎ, ಬಿ ಮತ್ತು ಸಿ ವರ್ಗೀಕರಿಸಲಾಗಿದೆ. ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಸಂಸದ ಯದುವೀರ್ ಉಪಸ್ಥಿತರಿರುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಾಧ್ಯಾಪಕ ಶೈಲೇಂದ್ರ ಮೋಹನ್, ಅನಿಲ್, ಕುಮಾರ್, ಅನಿರ್ಬನ್ ಕುಮಾರ್ ವಿಶ್ವಾಸ್ ಇದ್ದರು.

ಗ್ರಾಪಂ ಅಧ್ಯಕ್ಷೆ ಅವಿರೋಧ ಆಯ್ಕೆ

ಬಾಗೇಪಲ್ಲಿ: ತಾಲೂಕಿನ ತೋಳ್ಳಪಲ್ಲಿ ಗ್ರಾಪಂ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಸುಜ್ಞಾನಂಪಲ್ಲಿ ಲಲಿತಮ್ಮ ತೋಳ್ಳಪಲ್ಲಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಗೆ ಸುಜ್ಞಾನಂಪಲ್ಲಿ ಕ್ಷೇತ್ರದಿಂದ ಲಲಿತಮ್ಮ ಒಬ್ಬರೇ ನಾಮ ಪತ್ರ ಸಲ್ಲಿಸಿದ್ದರು. ತಾಲೂಕು ಚುನಾವಣಾಧಿಕಾರಿ ತಹಶೀಲ್ದಾರ್ ಮನೀಶಾ ಮಹೇಶ್ ಎನ್ ಪತ್ರಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಿ ಅವಿರೋಧ ಆಯ್ಕೆ ಪ್ರಕಟಿಸಿದರು.

{ಡಾ.ಎಂ.ಸಿ. ಸುಧಾಕರ್} ಉನ್ನತ ಶಿಕ್ಷಣ ಸಚಿವ

ಗಾಂಧೀಜಿ 1927ರಲ್ಲಿ 45 ದಿನ ಮತ್ತು 1936 ರಲ್ಲಿ 20 ದಿನ ಒಟ್ಟು 65 ದಿನ ನಂದಿ ಬೆಟ್ಟದಲ್ಲಿ ವಾಸ್ತವ್ಯ ಹೂಡಿದ್ದರು. ಗಾಂಧೀಜಿ ಹೆಜ್ಜೆ ಗುರುತುಗಳಿರುವ ಇಂತಹ ವಿಶ್ವವಿಖ್ಯಾತ ನಂದಿಗಿರಿಧಾಮದಲ್ಲಿ ಸಚಿವ ಸಂಪುಟ ಸಭೆ ನಡೆಸಬೇಕೆಂಬ ಚಿಂತನೆ ಇದೆ. ಸದ್ಯದಲ್ಲೇ ಮಲೆ ಮಹದೇಶ್ವರ ಬೆಟ್ಟದಲ್ಲಿ ಕ್ಯಾಬಿನೆಟ್ ನಡೆಯಲಿದೆ. ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಕೂಡ ಸಭೆ ನಡೆಯಬೇಕು.

ಅಮಿತ್ ಶಾ ವಜಾಕ್ಕೆ ಆಗ್ರಹ

ವಿವಿಧ ಸಂಘಟನೆಗಳ ಕರೆಗೆ 'ಕೋಲಾರ ಬಂದ್' ಯಶಸ್ವಿ

ಕೋಲಾರ: ಸಚಿವ ಅಮಿತ್ ಷಾ ವಜಾಕ್ಕೆ ಆಗ್ರಹಿಸಿ ಶುಕ್ರವಾರ ನಡೆದ ಕೋಲಾರ ಬಂದ್ ಯಶಸ್ವಿಯಾಯಿತು.

ದಲಿತ ಹಾಗೂ ಪ್ರಗತಿ ಪರ ಸಂಘಟನೆಗಳು ಬೆಳ್ಳಂಬೆಳಗ್ಗೆ ನಗರದ ಸಾರಿಗೆ ಬಸ್ ನಿಲ್ದಾಣದ ಬಳಿ ರಸ್ತೆ ತಡೆ ನಡೆಸಿ ಟೈರುಗಳಿಗೆ ಬೆಂಕಿ ಹಚ್ಚಿ ಕೇಂದ್ರ ಗೃಹ ಸಚಿವ ಅಮಿತ್ ಷಾ ವಿರುದ್ಧ ಘೋಷಣೆಗಳು ಕೂಗುವ ಮೂಲಕ ಬಂದ್‌ಗೆ ಚಾಲನೆ ನೀಡಿದರು.

ವಿದ್ಯಾರ್ಥಿಗಳು ಶಾಲಾ, ಕಾಲೇಜಿಗೆ ಗೈರು

ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಗ್ರಾಮೀಣ ವಿದ್ಯಾರ್ಥಿಗಳು ಶಾಲಾ, ಕಾಲೇಜಿಗೆ ಗೈರು ಹಾಜರಾಗಿದ್ದರು. ಸಾರ್ವಜನಿಕರು ದ್ವಿಚಕ್ರ ವಾಹನಗಳಲ್ಲಿ ಸಂಚರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಕೆಲ ಬಸ್‌ಗಳು ನಗರದ ಹೊರ ವಲಯದಲ್ಲಿ ಪ್ರಯಾಣಿಕರನ್ನು ಇಳಿಸಿ ವಾಪಸ್ ಹೋದವು. ಪ್ರತಿಭಟನಾಕಾರರು ದ್ವಿಚಕ್ರವಾಹನಗಳಲ್ಲಿ ಸಂಚರಿಸಿ ಅಲ್ಲಲ್ಲಿ ತೆರೆದಿದ್ದ ಸಣ್ಣಪುಟ್ಟ ಅಂಗಡಿಗಳನ್ನು ಬಂದ್ ಮಾಡಿಸಿದರು. ಸರಕಾರಿ ಕಚೇರಿಗಳು ತೆರೆದಿದ್ದರೂ ಸಾರ್ವಜನಿಕರು ಇಲ್ಲದೆ ಬಣಗುಡುತ್ತಿದ್ದವು.

ಕೇಂದ್ರ ಸಚಿವ ಅಮಿತ್ ಷಾ ವಜಾಕ್ಕೆ ಆಗ್ರಹಿಸಿ ಕೋಲಾರ ಬಂದ್‌ನಲ್ಲಿ ರಸ್ತೆ ತಡೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಡಿಪಿಎಸ್ ಡಾ.ಮುನಿರಾಜು, ಅಂಬೇಡ್ಕರ್ ಕುರಿತು ಅವಹೇಳನಕಾರಿಯಾಗಿ ವ್ಯಂಗವಾಡಿ ಅಪಮಾನ ಮಾಡಿರುವ ಸಚಿವ ಅಮಿತ್ ಷಾ ಅವರನ್ನು ಸಂಪುಟದಿಂದ ವಜಾ ಗೊಳಿಸುವ ಜತೆಗೆ ಕಾನೂನು ಕ್ರಮ ಕೈಗೊಳ್ಳ ಬೇಕೆಂದು ಒತ್ತಾಯಿಸಿದರು.

ರೈತ ಸಂಘ, ವಿದ್ಯಾರ್ಥಿ ಸಂಘಟನೆ, ಕಾರ್ಮಿಕ ಸಂಘಟನೆ ಹಾಗೂ ಕನ್ನಡ ಪರ ಸಂಘಟನೆಗಳ ಮುಖಂಡರು ಬಸ್ ಡಿಪೋ ಬಳಿ ಒಗ್ಗೂಡಿ ಬಸ್‌ಗಳು ಹೊರ ಬಾರದಂತೆ ತಡೆ ಹಿಡಿದರು. ಆಟೋ,ಟಿಪ್ಪರ್ ,ಟೆಂಪೊ, ಖಾಸಗಿ ಬಸ್‌ಗಳು ರಸ್ತೆಗೆ ಇಳಿಯದೆ ಬಂದ್‌ಗೆ ಸಹಕಾರ ನೀಡಿದವು. ಅಂಗಡಿ ಮುಂಗಟ್ಟು, ಹೋಟೆಲ್, ಚಿತ್ರಮಂದಿರಗಳು ಬಂದ್ ಆಗಿದ್ದವು. ಕೆಲ ಖಾಸಗಿ ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿದ್ದು ಉಳಿದ ಕಡೆ ವಿದ್ಯಾರ್ಥಿಗಳು ಗೈರು ಆಗಿದ್ದರು.

ದಲಿತ ಮುಖಂಡರಾದ ಚಂದ್ರಮೌಳಿ, ಟಿ. ವಿಜಯಕುಮಾರ್,ಪಂಡಿತ್ ಮುನಿವೆಂಕಟಪ್ಪ,ಡಾ. ಮುನಿಆಂಜಿನಪ್ಪ, ವರದೇನಹಳ್ಳಿ ವೆಂಕಟೇಶ್, ಜಯದೇವ್, ಮಾರ್ಜೇನಹಳ್ಳಿ ಬಾಬು, ನರಸಾಪುರ ನಾರಾಯಣಸ್ವಾಮಿ, ದಲಿತ ನಾರಾಯಣಸ್ವಾಮಿ, ರಾಮಯ್ಯ, ಸೂಲೂರು ಆಂಜಿನಪ್ಪ, ಪಿವಿಸಿ ಕೃಷ್ಣಪ್ಪ, ರೈತ ಸಂಘದ ಅಬ್ಬಣಿ ಶಿವಪ್ಪ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪೊಲೀಸರು ಬಂದೋ ಬಸ್ತ್ ವಹಿಸಿದ್ದರು.

ಸಂಸದ ಕಾಮಗಾರಿ ಪರಿಶೀಲನೆ

ಗೌರಿಬಿದನೂರು: ಕೇಂದ್ರೀಯ ವಿದ್ಯಾಲಯದ ಕಾಮಗಾರಿ ಹದಿನೆಂಟು ತಿಂಗಳ ಅವಧಿಯಲ್ಲಿ ಪೂರ್ಣಗೊಳ್ಳಲಿದೆ ಎಂಬ ವಿಶ್ವಾಸವನ್ನು ಸಂಸದ ಡಾ ಕೆ.ಸುಧಾಕರ್ ವ್ಯಕ್ತಪಡಿಸಿದರು.

ನಗರದ ಇಡಗೂರು ರಸ್ತೆ ಸಮೀಪ ನಿರ್ಮಾಣವಾಗುತ್ತಿರುವ ಕೇಂದ್ರೀಯ ವಿದ್ಯಾಲಯದ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿದ ನಂತರ ಮಾತನಾಡುತ್ತಿದ್ದರು.

ಸುಮಾರು 25 ಕೋಟಿ ವೆಚ್ಚದಲ್ಲಿ ನಾಲ್ಕು ಎಕರೆ ವಿಸ್ತೀರ್ಣದ ಜಾಗದಲ್ಲಿ ನಿರ್ಮಿಸುತ್ತಿರುವ ಕಾಮಗಾರಿ ಇತ್ತೀಚಿಗೆ ಪ್ರಾರಂಭವಾಗಿದೆ. ಕಾಮಗಾರಿ ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಸೂಚಿಸಿದರು.

ನಗರಸಭೆ ಅಧ್ಯಕ್ಷ ಲಕ್ಷ್ಮೀ ನಾ ರಾಯಣಪ್ಪ, ತಹಸೀಲ್ದಾರ್ ಮಹೇಶ್ ಎಸ್ ಪತ್ರಿ, ರವಿನಾರಾ ಯಣರೆಡ್ಡಿ,ಡಾ.ಶಶಿಧರ್,ಬಿಜಿ. ವೇಣು ಗೋಪಾಲರೆಡ್ಡಿ, ನಗರ ಬಿಜೆಪಿ ಅಧ್ಯಕ್ಷ ಮಾರ್ಕೆಟ್ ಮೋಹನ್,ಜಯಣ್ಣ.ವೇಣು, ಪಾರ್ವತಮ್ಮ, ಪ್ರೇಮ ಅರುಳ್ ಇದ್ದರು.

ಶ್ರೀಗಳಿಗೆ ಡಾಲಿ ಆಮಂತ್ರಣ

ತುಮಕೂರು: ಚಲನಚಿತ್ರ ನಟ ಡಾಲಿ ಧನಂಜಯ್ ಶುಕ್ರವಾರ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ, ತಮ್ಮ ಮದುವೆ ಆಹ್ವಾನ ಪತ್ರಿಕೆಯನ್ನು ಸಿದ್ಧಲಿಂಗ ಸ್ವಾಮೀಜಿಗಳಿಗೆ ನೀಡಿ, ಆಶೀರ್ವಾದ ಪಡೆದರು.

ಈ ವೇಳೆ ಪಿ.ಆರ್.ಒ ನಾಗರಾಜು, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಶಶಿ ಹುಲಿಕುಂಟೇಮಠ್, ಮುಖಂಡರಾದ ಸೂರ್ಯ ಮುಕುಂದರಾಜ್, ಗಂಡಸಿ ಸದಾನಂದ್, ವೀರೇಶ್ ಹಾಲನೂರು, ತಿಪ್ಪೇಸ್ವಾಮಿ, ದಯಾನಂದ ಸಾಗರ್, ಗಂಗಸಂದ್ರ ಶ್ರೇಯಸ್ ಉಪಸ್ಥಿತರಿದ್ದರು.

ಚಲನಚಿತ್ರ ನಟ ಡಾಲಿ ಧನಂಜಯ್ ಸಿದ್ಧಗಂಗಾ ಶ್ರೀಗಳಿಗೆ ಮದುವೆ ಆಹ್ವಾನ ಪತ್ರಿಕೆ ನೀಡಿದರು.

ಗ್ರಾಪಂಗಳ 600 ಸಿಬ್ಬಂದಿ ಉದ್ಯೋಗ ಕಾಯಂ

ಬೆಂಗಳೂರು ಉತ್ತರ: ನಗರ ಜಿಲ್ಲೆಯ 86 ಗ್ರಾಮ ಪಂಚಾಯಿತಿಗಳಲ್ಲಿ 1993 ರಿಂದಲೂ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಪಂ ಬಿಲ್ ಕಲೆಕ್ಟರ್, ವಾಟರ್ ಮೆನ್, ಡೇಟಾ ಎಂಟ್ರಿ ಆಪರೇಟರ್ ಹಾಗೂ ಸ್ವಚ್ಛತಾಗಾರರ ಪೈಕಿ ಬಹುತೇಕ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯಿತಿ ಅನುಮೋದನೆ ನೀಡಿದೆ.

2017 ರಿಂದ ಕೆಲಸ ಮಾಡುತ್ತಿರುವ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಒಂದು ಬಾರಿಗೆ ಅನುಮೋದನೆ ನೀಡುವುದಕ್ಕೆ ಸರಕಾರದ ಆದೇಶವಾಗಿದೆ. ಗ್ರಾಮ ಪಂಚಾಯಿತಿ ನೌಕರರ ಸಂಘ ಸಿಐಟಿಯು ಸುಮಾರು ದಶಕಗಳ ಕಾಲ ಹೋರಾಟ ಮಾಡುತ್ತಲೇ ಬಂದಿದೆ.

ಕನಿಷ್ಠ ವೇತನ ಪಾವತಿ ಸೇರಿದಂತೆ ಹಲವು ಬೇಡಿಕೆಗಳು ಸಂಘಟನೆಗಳ ಹೋರಾಟದಿಂದ ಈಡೇರಿದ್ದರೂ ಬಹುತೇಕ ಸಿಬ್ಬಂದಿಗೆ ಸೇವಾ ಭದ್ರತೆ ಇರಲಿಲ್ಲ. ನಗರ ಜಿಲ್ಲಾ ಪಂಚಾಯಿತಿಗೆ ಹೊಸದಾಗಿ ಸಿಇಒ ಆಗಿ ಬಂದ ಕೆ.ಎಸ್.ಲತಾ ಕುಮಾರಿ ಅವರು ಆರಂಭದಲ್ಲೇ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪಿಡಿಒ, ಕಾರ್ಯದರ್ಶಿ, ಸೇರಿದಂತೆ ಗ್ರಾಪಂ ಸಿಬ್ಬಂದಿಗಳ ವೃಂದ ಸಂಘಗಳು ಹಾಗೂ ಗ್ರಾಪಂ ಸದಸ್ಯರ ಧರಣಿ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದ್ದರು. ಈ ಬಗ್ಗೆ ಅಧ್ಯಯನ ಮಾಡಿ ಅಧಿಕಾರಿಗಳ ಸಭೆ ನಡೆಸಿ ಸಮಾಲೋಚಿಸಿ ನೆನೆಗುದಿಗೆ ಬಿದ್ದಿದ್ದ ಗ್ರಾಪಂ ನೌಕರರ ಕಾಯಂ ನೇಮಕಾತಿ ಬಗ್ಗೆ ದಿಟ್ಟ ನಿರ್ಧಾರ ಕೈಗೊಂಡಿದ್ದಾರೆ. ಅವರೇ ಖುದ್ದಾಗಿ ಎಲ್ಲಾ ಅರ್ಹ ಸಿಬ್ಬಂದಿ ಕರೆಸಿ ಕಾಯಂ ನೇಮಕಾತಿ ಆದೇಶ ಪತ್ರ ವಿತರಣೆ ಮಾಡಿರುತ್ತಾರೆ.

ಈ ಮಹತ್ಕಾರ್ಯಕ್ಕೆ ಬೆಂಬಲ ನೀಡಿದ ಜಿಪಂ ಉಪ ಕಾರ್ಯದರ್ಶಿ ಅನಿತಾ, ಸಹ ಕಾರ್ಯದರ್ಶಿ ಚಂದ್ರಕಾಂತ್, ಸಹಾಯಕ ನಿರ್ದೇಶಕ ಬೋರೇಗೌಡ, ಆನೇಕಲ್, ಬೆಂಗಳೂರು ದಕ್ಷಿಣ, ಉತ್ತರ, ಪೂರ್ವ, ಯಲಹಂಕ ಸೇರಿದಂತೆ ಐದೂ ತಾಲೂಕುಗಳ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಗ್ರಾಮ ಪಂಚಾಯಿತಿ ನೌಕರರು ತಿಳಿಸಿದ್ದಾರೆ.

ಜಿಪಂ ಸಿಇಒ ಲತಾ ಕುಮಾರಿ ಅವರಿಗೆ ಸನ್ಮಾನಿಸಲಾಯಿತು.

ಅಮಿತ್ ಶಾ ಕೈಬಿಡಿ : ಸಿಪಿಎಂಎಲ್ ಪ್ರತಿಭಟನೆ

ಬಾಗೇಪಲ್ಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾರನ್ನು ಕೇಂದ್ರ ಸಚಿವ ಸಂಪುಟದಿಂದ ಕೂಡಲೇ ವಜಾ ಮಾಡಿ,ಅಂಬೇಡ್ಕರ್ ನ್ನು ಅಪಹಾಸ್ಯ ಮಾಡಿ ಅವಮಾನಿಸಿರುವುದರಿಂದ ಕಾನೂನಿನ ರೀತಿ ಕ್ರಮ ಕೈಗೊಳ್ಳಬೇಕೆಂದು ಭಾರತ ಮಾರ್ಕ್ಸ್ ವಾದಿ-ಲೆನಿನ್ ವಾದಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ರಾಮಚಂದ್ರ ಆಗ್ರಹಿಸಿದರು.

ಎಂಎಲ್‌ಪಿಐ ಪಕ್ಷದ ತಾಲೂಕು ಸಮಿತಿ ನೇತೃತ್ವದಲ್ಲಿ ಗುರುವಾರ ಪಟ್ಟಣದ ತಾಲೂಕು ಕಚೇರಿ ಮುಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ರವರನ್ನು ವಜಾ ಮಾಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಅವರು, ಡಾ.ಬಿ.ಆರ್ ಅಂಬೇಡ್ಕರ್ ದೇಶವನ್ನು ಮುನ್ನಡೆಸುತ್ತಿರುವ ಸಂವಿಧಾನವನ್ನು ರಚನೆ ಮಾಡಿ, ಪ್ರಜಾಪ್ರಭುತ್ವದ ಮೂಲಕ ಪ್ರತಿ ಪ್ರಜೆಯ ಆತ್ಮಗೌರವ ಹೆಚ್ಚಿಸಿದ ವ್ಯಕ್ತಿ. ಇಂತಹ ವ್ಯಕ್ತಿಯನ್ನು ಸಂಸತ್ತಿನಲ್ಲೆ ಅಪಹಾಸ್ಯ ಮಾಡಿ, ಅವಮಾನಿಸಿರುವ ಗೃಹ ಸಚಿವರನ್ನು ಕೂಡಲೇ ವಜಾ ಮಾಡಬೇಕು. ಪ್ರಜಾಪ್ರಭುತ್ವವನ್ನೆ ಅವಮಾನಿಸಿದ್ದಾರೆ. ಹಾಗೇ ಜಾತಿ ಪದ್ಧತಿಗೆ ಕುಮ್ಮಕ್ಕು ಕೊಟ್ಟಂತಾಗಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಇದೇ ವೇಳೆ ಎಂಎಲ್ ಪಿಐ ನ ತಾ. ಕಾರ್ಯದರ್ಶಿ ಟಿಬಿ ಕ್ರಾಸ್ ಚಲಪತಿ ಮಾತನಾಡಿ, ಅಮಿತ್ ಶಾ ದೇಶದ ಅಭಿವೃದ್ಧಿ ಬಗ್ಗೆ ಮಾತನಾಡುವುದಿಲ್ಲ, ಬದಲಾಗಿ ಚುನಾವಣೆಗಳಲ್ಲಿ ಮಾತ್ರ ರಾಜ್ಯಗಳನ್ನು ಸುತ್ತಾಡಿ ಜನರನ್ನು ದಿಕ್ಕು ತಪ್ಪಿಸುವ ಮಾತುಗಳಾಡುವುದನ್ನೆ ಕೆಲಸವನ್ನಾಗಿಸಿಕೊಂಡಿದ್ದಾರೆ ಎಂದರು. ಈ ವೇಳೆ ಎಂಎಲ್ ಪಿಐ ಪಕ್ಷದ ತಾಲೂಕು ಸಮಿತಿಯ ಪದಾಧಿಕಾರಿಗಳಾದ ಯಲ್ಲಂಪಲ್ಲಿ ಸಿ.ವೆಂಕಟರಾ ಮಪ್ಪ,ರಾಮರೆಡ್ಡಿ, ಪ್ರಮೀಳಮ್ಮ, ರಮೇಶ,ಮುಜಾಮಿಲ್, ಶಂಕರಪ್ಪ, ರಾಜು,ಕಟ್ಟಡ ಕಾರ್ಮಿಕ ಸಂಘಟನೆಯ ಪದಾಧಿಕಾರಿ ವೆಂಕಟರಾಮಪ್ಪ, ಟಿಯುಸಿಐನ ಮುಭಾರಕ್ ಭಾನು, ತಾಜ್ಮೀನ್ ತಾಜ್ ಮತ್ತಿತರರು ಇದ್ದರು.

ಬಾಗೇಪಲ್ಲಿಯಲ್ಲಿ ಕೇಂದ್ರ ಗೃಹ ಸಚಿವರ ವಿರುದ್ಧ ಎಂಎಲ್ ಪಿಐ ಪ್ರತಿಭಟನೆ ನಡೆಸಲಾಯಿತು.

ನಂದಿಬೆಟ್ಟದಲ್ಲಿ ಸಂಪುಟ ಸಭೆ: ಸಚಿವ

ಚಿಕ್ಕಬಳ್ಳಾಪುರ: ನಂದಿ ಗಿರಿಧಾಮದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ನಡೆಸುವಂತೆ ಮುಖ್ಯಮಂತ್ರಿಗಳಾದ ಸಿದ್ದಾರಾಮಯ್ಯ ಅವರಿಗೆ ಮನವಿ ಮಾಡುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಸಿ ಸುಧಾಕರ್ ಅವರು ತಿಳಿಸಿದರು.

ನಗರದ ಎಂ.ಜಿ.ರಸ್ತೆಯ ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಜಿ.ಪಂ ಹಾಗೂ ಕಾಲೇಜು ಮತ್ತು ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರದಲ್ಲಿನಡೆದ ನೂತನ ಕಟ್ಟಡದ ಶಂಕು ಸ್ಥಾಪನೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಗಾಂಧೀಜಿಯವರು 1927ರಲ್ಲಿ 45 ದಿನ ಮತ್ತು 1936 ರಲ್ಲಿ 20 ದಿನ ಒಟ್ಟು 65 ದಿನ ನಂದಿ ಬೆಟ್ಟದಲ್ಲಿ ವಾಸ್ತವ್ಯ ಮಾಡಿ ಆರೋಗ್ಯ ಸುಧಾರಿಸಿಕೊಂಡಿದ್ದರು. ಇಂತಹ ವಿಶ್ವವಿಖ್ಯಾತ ನಂದಿಗಿರಿಧಾಮದಲ್ಲಿ ಗಾಂಧೀಜಿಯ ಹೆಜ್ಜೆ ಗುರುತುಗಳಿರುವ ಜಾಗದಲ್ಲಿ ರಾಜ್ಯ ಸಚಿವ ಸಂಪುಟ ಸಭೆಯನ್ನು ನಡೆಸಬೇಕೆಂದು ಚಿಂತನೆ ಇದೆ. ಸದ್ಯದಲ್ಲೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದೆ. ಅದೇ ರೀತಿ ನಮ್ಮ ಜಿಲ್ಲೆಯಲ್ಲಿಯೂ ಕೂಡ ಸಭೆ ನಡೆಯಬೇಕು. ನಂದಿ ಗಿರಿಧಾಮದ ರಾಜ್ಯದ ಏಕೈಕ ರೋಪ್ ವೇ ಕಾಮಗಾರಿಗೆ ವೇಗ ನೀಡಬೇಕು ಹಾಗೂ ಈ ಭಾಗದ ಸಮಸ್ಯೆಗಳ ಬಗ್ಗೆ ಹೆಚ್ಚಿನ ಗಮನ ಸೆಳೆಯಲು ಸಂಪುಟ ಸಭೆ ಸಹಕಾರಿಯಾಗಲಿ ಎಂದರು.

ಸರಕಾರಿ ಪ್ರಥಮ ದರ್ಜೆ ಕಾಲೇಜಿನ ನೂತನ ಕಟ್ಟಡವನ್ನು 5.87 ಕೋಟಿಯಲ್ಲಿ ಹಾಗೂ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೆಚ್ಚುವರಿ ಕೊಠಡಿ 3.18 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಶಂಕುಸ್ಥಾಪನೆ ನೆರವೇರಿಸಲಾಗಿದೆ. ಈ ಭಾಗದ ಕಾಲೇಜುಗಳಲ್ಲಿ ಅಗತ್ಯವಿರುವ ಸೌಕರ್ಯಗಳನ್ನು ಒದಗಿಸಲು ಅನುದಾನ ನೀಡಲಾಗುವುದು. ಈ ಕುರಿತು ಪ್ರಸ್ತಾವನೆ ಸಲ್ಲಿಸಲು ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ ಎಂದು ತಿಳಿಸಿದರು.

ಕನ್ನಡ ಭವನದಲ್ಲಿ ಸಮ್ಮೇಳನ

ಜಿಲ್ಲೆಯಲ್ಲಿ ಆಧುನಿಕ ರೀತಿಯಲ್ಲಿ ಸುಸಜ್ಜಿತವಾಗಿ ನಿರ್ಮಾಣವಾಗಿರುವ ಜಿಲ್ಲಾ ಕನ್ನಡ ಭವನವನ್ನು ಈ ತಿಂಗಳ ಅಂತ್ಯದೊಳಗೆ ಉದ್ಘಾಟನೆ ಮಾಡಲು ತಯಾರಿ ಮಾಡಿಕೊಳ್ಳಲಾಗುತ್ತಿದೆ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಇದೇ ಭವನದಲ್ಲಿ ಆಯೋಜಿಸಲು ಯೋಜಿಸಲಾಗಿದೆ ಎಂದು ತಿಳಿಸಿದರು. ನಗರ ಸಭೆ ಅಧ್ಯಕ್ಷರಾದ ಎ. ಗಜೇಂದ್ರ, ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ, ಜಿಪಂ ಸಿಇಒ ಪ್ರಕಾಶ್ ಜಿ.ಟಿ ನಿಟ್ಟಾಲಿ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಮುನಿರಾಜು, ಮಹಿಳಾ ಕಾಲೇಜಿನ ಪ್ರಾಂಶುಪಾಲ ಚಂದ್ರಯ್ಯ ಹಾಗೂ ಬೋಧಕ ಸಿಬ್ಬಂದಿ ಇದ್ದರು.

ಶಾಲಾ ಟ್ರಿಪ್ ವಾಹನ ಅಪಘಾತ: 16 ಮಕ್ಕಳಿಗೆ ಗಾಯ

ಕೊರಟಗೆರೆ: ಶಾಲಾ ಮಕ್ಕಳನ್ನು ಸರಕು ಸಾಗಣೆ ವಾಹನದಲ್ಲಿ ವನಮಹೋತ್ಸವಕ್ಕೆ ಕರೆದುಕೊಂಡು ಹೋಗುವಾಗ ಅಪಘಾತವಾಗಿ ಸುಮಾರು 16 ಮಕ್ಕಳಿಗೆ ಗಾಯಗಳಾಗಿ 4 ಮಕ್ಕಳಿಗೆ ತೀವ್ರ ಗಾಯಗಳಾದ ಘಟನೆ ನಡೆದಿದೆ.

ತಾಲ್ಲೂಕಿನ ಹೊಳವನಹಳ್ಳಿ ಹೋಬಳಿಯ ಚಿಂಪುಗಾನಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 5, 6, 7 ನೇ ತರಗತಿಯ ಮಕ್ಕಳನ್ನು ವನಮಹೋತ್ಸವಕ್ಕೆ ದೊಡ್ಡಸಾಗ್ಗೆರೆ ಗ್ರಾಮದ ಹತ್ತಿರದ ಅರಣ್ಯಕ್ಕೆ ಕರೆದೊಯ್ಯಲಾಗುತ್ತಿತ್ತು. ಸುಮಾರು 99 ಮಕ್ಕಳನ್ನು ಒಂದೇ ಸರಕು ಸಾಗಣೆ ವಾಹನದಲ್ಲಿ ಟ್ರಿಪ್ ಪ್ರಕಾರ ಕೊಂಡೊಯ್ಯುತ್ತಿತ್ತು. 2 ಬಾರಿ ಮಕ್ಕಳನ್ನು ಸ್ಥಳಕ್ಕೆ ಬಿಟ್ಟು 3ನೇ ಬಾರಿ ಮಕ್ಕಳನ್ನು ಕರೆದುಕೊಂಡು ಹೋಗುವಾಗ ದೊಡ್ಡಸಾಗ್ಗೆರೆ ಗ್ರಾಮದ ಬಳಿ ಅಪಘಾತಕ್ಕೆ ಈಡಾಗಿದೆ.

ಸಬ್‌ಇನ್‌ಸ್ಪೆಕ್ಟರ್ ಯೋಗೀಶ್ ಸ್ಥಳಕ್ಕೆ ಧಾವಿಸಿ ಸುಮಾರು 15 ಮಕ್ಕಳನ್ನು ದೊಡ್ಡಸಾಗ್ಗೆರೆ ಸರಕಾರಿ ಆಸ್ಪತ್ರೆಯಲ್ಲಿ ದಾಖಲಿಸಿದ್ದಾರೆ. ತೀವ್ರವಾಗಿ ಗಾಯಗೊಂಡ ವಿದ್ಯಾರ್ಥಿಗಳಾದ ಹೇಮಂತ್, ಜಿತೇಂದ್ರ ಕುಮಾರ್, ಮಿಥುನ್, ಪ್ರಭಾಸ್ ಅವರನ್ನು ತುಮಕೂರು ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ.

ಶಿಕ್ಷಕನೇ ಚಾಲಕನಾಗಿದ್ದು ಈ ಘಟನೆಗೆ ಮುಖ್ಯ ಕಾರಣ. ಶಾಲೆಯ ಇಂಗ್ಲೀಷ್ ಶಿಕ್ಷಕ ಅನಂತ ರಾಮು ವಾಹನ ಚಾಲನೆ ಮಾಡಿರುವುದಾಗಿ ತಿಳಿದು ಬಂದಿದೆ.

ಕೊರಟಗೆರೆ ಕ್ಷೇತ್ರದ ಶಿಕ್ಷಣಾಧಿಕಾರಿ ನಟರಾಜು ಘಟನಾ ಸ್ಥಳಕ್ಕಾಗಲೀ ಮತ್ತು ಆಸ್ಪತ್ರೆಗೇ ಆಗಲಿ ಬಾರದ ಬಗ್ಗೆ ಪೋಷಕರು ಆಕ್ರೋಶ ವ್ಯಕ್ತಪಡಿಸಿದರು. ಘಟನಾ ಸ್ಥಳಕ್ಕೆ ತಹಸೀಲ್ದಾರ್ ಮಂಜುನಾಥ್, ಸಿಪಿಐ ಅನಿಲ್ ಭೇಟಿನೀಡಿದರು.

ತುಮಕೂರು ಮಾದರಿ ಲೋಕ ಕ್ಷೇತ್ರ ಆಗಲಿದೆ: ಸಚಿವ

ಚಿಕ್ಕನಾಯಕನಹಳ್ಳಿ: ದೇಶದಲ್ಲಿ ತುಮಕೂರು ಕ್ಷೇತ್ರವನ್ನ ಮಾದರಿ ಕ್ಷೇತ್ರವನ್ನಾಗಿಸುವ ಜತೆಗೆ ಡಾ.ಶಿವಕುಮಾರಸ್ವಾಮಿಯವರ ಹೆಸರನ್ನ ಜಿಲ್ಲಾ ಕೇಂದ್ರ ರೈಲ್ವೆ ನಿಲ್ದಾಣಕ್ಕೆ ನಾಮಕರಣ ಮಾಡಲಾಗುವುದು ಎಂದು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣಹೇಳಿದರು.

ತಾಲೂಕಿನ ಕಂದಿಕೆರೆ ಆಸ್ಪತ್ರೆಯ ವೈದ್ಯರ ವಸತಿಗೃಹ ಉದ್ಘಾಟಿಸಿ ನಂತರ ಗ್ರಾಮ ಪಂಚಾಯ್ತಿ ಆವರಣದಲ್ಲಿ ಹೋಬಳಿ ಮಟ್ಟದ ಜನಸಂಪರ್ಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಧಾಸಭಾ ಚುಣಾವಣೆಯಲ್ಲಿ ಎರಡು ಕ್ಷೇತ್ರದಲ್ಲಿ ಸೋಲನ್ನ ಕಂಡಿದ್ದೆ. ಪ್ರಧಾನಿ ನರೇಂದ್ರ ಮೋದಿಜೀ ಹಾಗು ಗೃಹ ಸಚಿವ ಅಮಿತ್ ಷಾ ನನ್ನಮೇಲೆ ವಿಶ್ವಾಸವಿಟ್ಟು ಕೇಂದ್ರ ಸಚಿವನನ್ನಾಗಿ ಅವಕಾಶ ಕಲ್ಪಿಸಿದರು. ಈ ಋಣ ತೀರಿಸಲು ಕಂಕಣ ಬದ್ಧನಾಗಿ ಕೆಲಸ ಮಾಡುವೆ ಎಂದರು.

ರೈಲ್ವೆ ಖಾತೆಯಿಂದ 100ಕೋಟಿ ಅನುದಾನದಲ್ಲಿ ತುಮಕೂರಿನ ರೈಲ್ವೆ ನಿಲ್ದಾಣ ಅಭಿವೃದ್ಧಿಗೊಳಿಸಲಾಗುವುದು. ನನ್ನ ಗೆಲುವಿಗೆ ಸುರೇಶ್ ಬಾಬು ಶ್ರಮಿಸಿದ್ದಾರೆ. ಮುಂದಿನ ವಿಧಾನಸಭೆ ಚುಣಾವಣೆಯಲ್ಲಿ ಎನ್.ಡಿ.ಎ ಅಭ್ಯರ್ಥಿಯಾಗಲಿದ್ದಾರೆ. ಆ ಸಂದರ್ಭದಲ್ಲಿ ನಾನು ಇನ್ನೂ ಅಧಿಕಾರದಲ್ಲಿರುತ್ತೇನೆ. ಅವರ ಗೆಲುವಿಗೆ ನಾನು ಶಕ್ತಿನೀಡುತ್ತೇನೆ. ಮುಂದಿನ ಸರಕಾರದಲ್ಲಿ ಬಾಬಣ್ಣ ಮಂತ್ರಿಗಳಾಗುತ್ತಾರೆ ಎಂದು ಭವಿಷ್ಯ ನುಡಿದರು. ಶಾಸಕ ಸಿ.ಬಿ.ಸುರೇಶ್ ಬಾಬು ಮಾತನಾಡಿ, ಕ್ಷೇತ್ರದ ಜನತೆ ಕೆಲಸವಿಲ್ಲದೆ ಗುಳೇಹೋಗುವ ಪರಿಸ್ಥಿತಿ ಇದೆ. ಕ್ಷೇತ್ರದಲ್ಲಿ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಸಂಸದರು ಕೆಲಸ ಮಾಡಬೇಕು ಎಂದು ಮನವಿ ಮಾಡಿದರು. ತಹಸೀಲ್ದಾರ್ ಪುರಂದರ್, ಇಒ ದೊಡ್ಡಸಿದ್ದಯ್ಯ, ಕಂದಿಕೆರೆ ಗ್ರಾಪಂ ಛೇರ್ಮನ್ ತೋಳಸಮ್ಮ ಉಪಾಧ್ಯಕ್ಷ ಪ್ರದೀಪ್, ಜೆಡಿಎಸ್ ಮುಂಖಂಡರಾದ ತಿಮ್ಮನಹಳ್ಳಿ ಶ್ರೀಹರ್ಷ, ಜಿಪಂ ಮಾಜಿ ಸದಸ್ಯ ರಾಮಮಚಂದ್ರಯ್ಯ, ಶಿವಕುಮಾರ್ ಇದ್ದರು.

ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಕಂದಿಕೆರೆ ಆಸ್ಪತ್ರೆಯ ವೈದ್ಯರ ವಸತಿಗೃಹ ಉದ್ಘಾಟಿಸಿದರು.

ವ್ಯಾಪಾರಿಗಳಿಗೆ ಗುರುತಿನ ಕಾರ್ಡ್

ಬೀದಿಬದಿ ವ್ಯಾಪಾರಿಗಳಿಗೆ ಶಾಸಕ ಕೆ.ಹೆಚ್.ಪುಟ್ಟಸ್ವಾಮಿಗೌಡ ಗುರುತಿನ ಕಾರ್ಡ್ ವಿತರಿಸಿದರು.

ಗೌರಿಬಿದನೂರು: ಬೀದಿಬದಿ ವ್ಯಾಪಾರಿಗಳು ಸಾರ್ವಜನಿಕರಿಗೆ ಕಿರಿಕಿರಿ ಮಾಡದೆ ತಮ್ಮ ವ್ಯಾಪಾರ ಮಾಡಿಕೊಂಡು ಬದುಕು ಕಟ್ಟಿಕೊಳ್ಳುವುದಕ್ಕೆ ತಾಲೂಕು ಆಡಳಿತ ಸಹಕಾರ ನೀಡಲಿದೆ ಎಂದು ಶಾಸಕ ಕೆ.ಹೆಚ್.ಪುಟ್ಟಸ್ವಾಮಿಗೌಡ ತಿಳಿಸಿದರು.

ನಗರದ ಬೀದಿ ಬದಿಯ ಸಣ್ಣ ವ್ಯಾಪರಸ್ಥರುಗಳಿಗೆ ನಗರಸಭೆ ವತಿಯಿಂದ ನೀಡುವ ಗುರುತಿನ ಕಾರ್ಡ್ ವಿತರಿಸಿ ಮಾತನಾಡಿದರು. ನಗರದ ಹೊರ ವಲಯದ ಸಮಾನತಾ ಸೌಧದ ಆವರಣದಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊಳವೆಬಾವಿ ಫಲಾನುಭವಿಗಳಿಗೆ ನೀಡುವ ಪಂಪು,ಮೋಟಾರ್ ,ಮತ್ತು ಸಲಕರಣೆಗಳನ್ನು ಕೂಡ ವಿತರಣೆ ಮಾಡಿದರು. ತೊಂಡೇಭಾವಿ ಗ್ರಾಪಂನ ಅಲ್ಲಿಪುರ ರಸ್ತೆಯಿಂದ ಎ.ಸಿ.ಸಿ.ಕಾರ್ಖಾನೆವರೆಗೆ ಸಿ.ಸಿ.ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೇರವೇರಿಸಿ, ಮೇಳ್ಯಾ ಗ್ರಾಪಂ ವ್ಯಾಪ್ತಿಯ ದಿನ್ನೆ ಹುಣಸೇನಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಲಾಯಿತು. ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು,ಸದಸ್ಯರುಗಳು,ಅಧಿಕಾರಿ ವರ್ಗದವರು,ತೊಂಡೇಭಾವಿ,ಮೇಳ್ಯಾ ಗ್ರಾಪಂ ಮುಖಂಡರು, ಗ್ರಾಮ ಪಂಚಾಯತಿ ಅಧ್ಯಕ್ಷರು,ಸದಸ್ಯರು ಉಪಸ್ಥಿತರಿದ್ದರು.

ಅಭಿವೃದ್ಧಿಗೆ ಯಾರ ಮನೆಗಾದರೂ ಹೋಗುವೆ: ಸೋಮಣ್ಣ

ಗುಬ್ಬಿ: ನನ್ನ ಕ್ಷೇತ್ರದ ಯಾವುದೇ ತಾಲೂಕಿರಲಿ ಗುಬ್ಬಿ ತಾಲೂಕೇ ಇರಲಿ ಅಭಿವೃದ್ಧಿ ವಿಚಾರವಾಗಿ ಯಾರ ಮನೆಗಾದರೂ ಹೋಗಲು ಸದಾ ಕಾಲ ಸಿದ್ಧವಿದ್ದೇನೆ. ಅಭಿವೃದ್ಧಿ ವಿಚಾರದಲ್ಲಿ ಪಕ್ಷ, ಜಾತಿ ಧರ್ಮ ಬೇಧವಿಲ್ಲದೆ ಕೆಲಸ ಮಾಡಬೇಕು. ಕ್ಷೇತ್ರಕ್ಕೆ ಒಳ್ಳೇದಾಗುತ್ತೆ ಎಂದಾದರೆ ಸಲ್ಲದ ರಾಜಕಾರಣ ಮಾಡುವುದು ಬೇಡ ಎಂದು ಕೇಂದ್ರ ರೈಲ್ವೆ ರಾಜ್ಯಖಾತೆ ಸಚಿವ ವಿ.ಸೋಮಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಕಸಬಾ ಹೋಬಳಿ ಜಿ.ಹೊಸಹಳ್ಳಿ ಗ್ರಾಪಂ ಆವರಣದಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಅಧಿಕಾರಿ ವರ್ಗ ನನ್ನ ಜೊತೆ ಸಹಕರಿಸಿ ಸಾರ್ವಜನಿಕ ಕೆಲಸ ಮಾಡಬೇಕು. ಶ್ರೀ ಸಾಮಾನ್ಯರನ್ನು ತಾತ್ಸಾರ ಮಾಡದೆ ಸಮಸ್ಯೆ ಬಗೆಹರಿಸಬೇಕು. ಅಧಿಕಾರ ಶಾಶ್ವತ ಅಲ್ಲ. ಪಕ್ಷ ಬೇಧವಿಲ್ಲದೆ ಕೆಲಸ ಮಾಡಬೇಕು ಎಂದು ತಾಕೀತು ಮಾಡಿದರು. ಯಾರೊಬ್ಬರ ಅಣತಿ ಕೆಲಸ ಮಾಡುವುದು. ಇಂತಹ ವಿಚಾರ ನನ್ನ ಬಳಿಗೆ ಬಾರದಂತೆ ನಿಗಾ ವಹಿಸಬೇಕು. ಜನರನ್ನು ಸುಮ್ಮನೆ ಅಲೆದಾಡಿಸುವ ದೂರು ಬರಬಾರದು ಎಂದು ಎಚ್ಚರಿಸಿದ ಸಚಿವರು ಪ್ರಧಾನ ಮಂತ್ರಿ ಮೋದಿ ಅವರ ದೇಶದ ಅಭಿವೃದ್ಧಿ ಕನಸು ನನಸು ಮಾಡಲು ನಾವೆಲ್ಲಾ ಬದ್ಧರಾಗಿ ಕೆಲಸ ಮಾಡುತ್ತಿದ್ದೇವೆ ಎಂದರು.

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿ ವಿರೋಧ ವ್ಯಕ್ತಪಡಿಸಿ ಸ್ಥಗಿತ ಮಾಡಲು ಸರ್ಕಾರಕ್ಕೆ ಒತ್ತಡ ಹೇರುತ್ತೇನೆ. ಡಿ.ಕೆ.ಶಿವಕುಮಾರ್ ರಾಜ್ಯಕ್ಕೆ ಉಪ ಮುಖ್ಯಮಂತ್ರಿ, ರಾಮನಗರ ಜಿಲ್ಲೆ ಕನಕಪುರ ತಾಲೂಕಿಗೆ ಅಲ್ಲ ಎಂಬುದು ತಿಳಿದುಕೊಳ್ಳಬೇಕು. ಕೇಂದ್ರದ ಸಚಿವನಾಗಿ ಹೋರಾಟಕ್ಕೆ ಬರುವುದು ಕಷ್ಟ. ಈ ಹಿಂದೆ ಈ ಲಿಂಕ್ ಕೆನಾಲ್ ಕೆಲಸ ನಿಲ್ಲಿಸಿದ್ದೆವು. ಆದರೆ ಕಾಂಗ್ರೆಸ್ ಮರು ಚಾಲನೆ ಮಾಡಿದೆ ಎಂದರು.

ವೇದಿಕೆಯಲ್ಲಿ ಹೊಸಹಳ್ಳಿ ಗ್ರಾಪಂ ಅಧ್ಯಕ್ಷೆ ಭಾಗ್ಯಮ್ಮ, ಉಪಾಧ್ಯಕ್ಷೆ ಮಹಾಲಕ್ಷ್ಮಿ, ಸದಸ್ಯ ಎಚ್.ಬಿ.ನರೇಶ್, ಮೋಹನ್, ಸಿದ್ದಗಂಗಮ್ಮ, ಉಪ ವಿಭಾಗಾಧಿಕಾರಿ ಗೌರವ್ ಕುಮಾರ್ ಶೆಟ್ಟಿ, ತಹಶೀಲ್ದಾರ್ ಬಿ.ಆರತಿ, ತಾಪಂ ಇಒ ಶಿವಪ್ರಕಾಶ್, ಮುಖಂಡರಾದ ಬಿ.ಎಸ್.ನಾಗರಾಜ್, ಎಸ್.ಡಿ.ದಿಲೀಪ್ ಕುಮಾರ್, ಜಿ.ಎನ್.ಬೆಟ್ಟಸ್ವಾಮಿ, ಕಳ್ಳಿಪಾಳ್ಯ ಲೋಕೇಶ್, ಎನ್.ಸಿ.ಪ್ರಕಾಶ್, ಪಿ.ಬಿ.ಚಂದ್ರಶೇಖರಬಾಬು, ಪಂಚಾಕ್ಷರಿ, ಚಿಕ್ಕವೀರಯ್ಯ ಇದ್ದರು.

ಜಲ ಜೀವನ್ ಮಿಷನ್‌ಗೆ ಎಂಟು ಲಕ್ಷ ರು. ಕೋಟಿ

ದೇಶದಲ್ಲೇ ಕುಡಿಯುವ ನೀರಿಗೆ ಜಲ ಜೀವನ್ ಮಿಷನ್ ಯೋಜನೆ ಜಾರಿ ಮಾಡಿ 8 ಲಕ್ಷ ಕೋಟಿ ರೂ ನೀಡಿದ್ದಾರೆ. ನೀರಾವರಿ ಯೋಜನೆಗಳಿಗೆ 2.64 ಲಕ್ಷ ಕೋಟಿ ರೂ ನೀಡಿದ್ದಾರೆ. ಜೆಜೆಎಂ ಯೋಜನೆ ನನ್ನದೇ ಖಾತೆ. ಅಲ್ಲಿನ ಕಳಪೆ ಕಾಮಗಾರಿ ಬಗ್ಗೆ ದೂರು ಬಾರದಂತೆ ಅಧಿಕಾರಿಗಳು ಕೆಲಸ ಮಾಡಬೇಕು. ರಸ್ತೆ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಗೆ ಕೇಂದ್ರ 1 ಲಕ್ಷ ಕೋಟಿ ರೂ ಬರಲಿದೆ. ದುರಸ್ತಿ ಕಾರ್ಯಕ್ಕೆ ಬಳಸಬೇಕು ಎಂದು ಸೂಚನೆ ನೀಡಿದರು.



ಪ್ರಾಂಶುಪಾಲೆ, ವಾರ್ಡನ್ ಅಮಾನತು

ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹಾಸ್ಟೆಲ್ ಕಟ್ಟಡದಿಂದ ಬಿದ್ದು ಗಾಯಗೊಂಡಿದ್ದ ವಿದ್ಯಾರ್ಥಿ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದು, ಘಟನೆ ಸಂಬಂಧ ವಸತಿ ಶಾಲೆಯ ಪ್ರಾಂಶುಪಾಲೆ ರಾಜೇಶ್ವರಿ ಮತ್ತು ವಾರ್ಡನ್ ಚಿಂತನ್ ಅವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಡಿ.30ರಂದು ರಾತ್ರಿ ಮನಿತ್ ವಸತಿ ಶಾಲೆಯ ಕಟ್ಟಡದ ಮೇಲಂತಸ್ತಿನಿಂದ ಬಿದ್ದು ತಲೆಗೆ ತೀವ್ರ ಪೆಟ್ಟಾಗಿತ್ತು. ಗಾಯಗೊಂಡ ಬಾಲಕನಿಗೆ ಬೇಗೂರು ಸರಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಲೆಗೆ ತೀವ್ರ ಪೆಟ್ಟು ತಿಂದು ಕೋಮಾ ಸ್ಥಿತಿಯಲ್ಲಿದ್ದ ಮನೀತ್‌ನನ್ನು ಆತನ ಪೋಷಕರ ಮನವಿಯಂತೆ ಅಪೊಲೋ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಆದರೆ, ಗುರುವಾರ ಚಿಕಿತ್ಸೆ ಫಲಿಸದೇ ಮೃತಪಟ್ಟಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಲೈಂಗಿಕ ಕಿರುಕುಳ: ಎಫ್‌ಐಆರ್ ದಾಖಲು

ಬಳ್ಳಾರಿ: ಬಿಮ್ಸ್ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಮಹಿಳಾ ಕಂಪ್ಯೂಟರ್ ಆಪರೇಟರ್‌ಗೆ ಬಳ್ಳಾರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀಕ್ಷಕ ವಿ.ಕೆ.ವೆಂಕಟೇಶ್ ಲೈಂಗಿಕ ಕಿರುಕುಳ ನೀಡಿರುವ ಆರೋಪ ಕೇಳಿಬಂದಿದೆ. ಬೆದರಿಕೆ ಹಾಕಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಸಂತ್ರಸ್ತೆ ವೆಂಕಟೇಶ್ ವಿರುದ್ಧ ಬಳ್ಳಾರಿ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಅಧೀಕ್ಷಕ ವಿ.ಕೆ.ವೆಂಕಟೇಶ್ ಕಳೆದ ವರ್ಷ ನ.25 ರಂದು ಸಂತ್ರಸ್ತೆಯ ಮೇಲೆ ಹಲ್ಲೆಮಾಡಿ, ತನ್ನೊಂದಿಗೆ ಕಳೆದ ಖಾಸಗಿ ಕ್ಷಣಗಳ ಫೋಟೊ ಮತ್ತು ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡುವುದಾಗಿ ಬೆದರಿಕೆ ಹಾಕಿದ್ದಾರೆ. ಅಲ್ಲದೇ, ಸಂತ್ರಸ್ತೆಯ ಕುಟುಂಬದ ಮರ್ಯಾದೆ ಹರಾಜು ಹಾಕುವುದಾಗಿ ಹೆದರಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಪ್ರವಾಸಿ ಕೈಪಿಡಿ ಅನಾವರಣ

ಅಡಿಗಾಸ್ ಯಾತ್ರಾ: ಹುಬ್ಬಳ್ಳಿಯಲ್ಲಿ ಡಾ.ವೀರೇಂದ್ರ ಹೆಗ್ಗಡೆ ಬಿಡುಗಡೆ

ಹುಬ್ಬಳ್ಳಿ: ಕರ್ನಾಟಕದ ಪ್ರಸಿದ್ಧ ಪ್ರವಾಸಿ ಸಂಸ್ಥೆ-ಅಡಿಗಾಸ್ ಯಾತ್ರಾದ 2025ರ ಕೈಪಿಡಿಯನ್ನು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ಬಿಡುಗಡೆಗೊಳಿಸಿ ಆಶೀರ್ವದಿಸಿದರು.

2025ರ ಕೈಪಿಡಿ ಬಿಡುಗಡೆ

- 500ಕ್ಕೂ ಹೆಚ್ಚು ವೈವಿಧ್ಯಮಯ ಯೋಜನೆಗಳಿಂದ ಪ್ರವಾಸಿಗರಿಗೆ ಅನುಕೂಲ
- ಇಚ್ಛಿಸಿದ ದಿನ, ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಅವಕಾಶ
- ಇಡೀ ಪ್ರವಾಸದಲ್ಲಿ ಊಟ, ವಸತಿ, ಮಾರ್ಗದರ್ಶನ ಸೇರಿದಂತೆ ಪ್ರವಾಸಿಗರಿಗೆ ಸಕಲ ವ್ಯವಸ್ಥೆ

ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯ ಡಾ.ವೀರೇಂದ್ರ ಹೆಗ್ಗಡೆ ಅವರು ಅಡಿಗಾಸ್ ಯಾತ್ರಾದ 31 ನೇ ವರ್ಷದ ಪ್ರವಾಸಿ ಕೈಪಿಡಿಯನ್ನು ಹುಬ್ಬಳ್ಳಿಯಲ್ಲಿ ಬಿಡುಗಡೆ ಮಾಡಿದರು. ಸಂಸ್ಥಾಪಕ ನಾಗರಾಜ್ ಅಡಿಗ, ನಿರ್ದೇಶಕಿ ಆಶಾ ಅಡಿಗ , ಆದಿತ್ಯ ಅಡಿಗ ಹಾಗೂ ಇತರರು ಇದ್ದರು.

ಕೈಪಿಡಿಯ ಪ್ರತಿ ಪುಟವನ್ನೂ ವೀಕ್ಷಿಸಿದ ಹೆಗ್ಗಡೆಯವರು ವಿವರಗಳನ್ನು ಕೇಳಿ ತಿಳಿದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅಡಿಗಾಸ್ ಸಂಸ್ಥೆಯ ಸ್ಥಾಪಕ ನಾಗರಾಜ ಅಡಿಗ, ನಿರ್ದೇಶಕಿ ಆಶಾ ಅಡಿಗ, ಆದಿತ್ಯ ಅಡಿಗ, ಧರ್ಮಸ್ಥಳ ಪದವಿಪೂರ್ವ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ಪ್ರಸನ್ನಕುಮಾರ್ ಐತಾಳ್, ಅಡಿಗಾಸ್ ಸಂಸ್ಥೆಯ ಆಡಳಿತ ಮಂಡಳಿಯ ನಾಗೇಂದ್ರ ಕೆ. ಎಸ್, ಪ್ರಸನ್ನ.ಎಚ್. ಕೆ, ಮಹೇಶ್ ಎಚ್.ಜೆ. ಎಮ್ ರಮೇಶ್, ಶಶಾಂಕ್ ಕುಮಾರ್ ಕೆ.ಎಚ್.ಕೆ.ನರೇಶ್, ಆದಿತ್ಯ ಭಟ್ ಮುಂತಾದವರು ಇದ್ದರು.

500ಕ್ಕೂ ಹೆಚ್ಚು ಪ್ರವಾಸಿ ಯೋಜನೆಗಳು: ಅಡಿಗಾಸ್ ಸಂಸ್ಥೆಯು ನವ ನವೀನ ಪ್ರವಾಸಿ ಯೋಜನೆಗಳನ್ನು ಜಾರಿಗೊಳಿಸಿ ಅದನ್ನು ಆಯೋಜಿಸಿ, ಯಶಸ್ವಿಯಾಗಿ ನಡೆಸುತ್ತಲೇ ಬಂದಿದೆ. 500ಕ್ಕೂ ಅಧಿಕ ವೈವಿಧ್ಯಮಯ ಆಕರ್ಷಕ ಪ್ರವಾಸಗಳು ಪ್ರವಾಸಿಗರಿಗೆ ಅನಾವರಣ ಮಾಡಲಾಗಿದೆ.

Domestic Fixed Departures: ಈ ಯೋಜನೆಯಡಿಯಲ್ಲಿ ಭಾರತದಾದ್ಯಂತ ಯಾವುದೇ ತಾಣಗಳಿಗೆ, ಸಂಸ್ಥೆ ನಿಗದಿ ಪಡಿಸಿದ ದಿನಾಂಕದಂದು, ಸಹಪ್ರಯಾಣಿಕರ ಗುಂಪಿನೊಡನೆ ತಾರಾ ಹೋಟೆಲ್‌ಗಳ ವಾಸ್ತವ್ಯ, ಐಷಾರಾಮಿ ವಾಹನಗಳಲ್ಲಿ ಪ್ರಯಾಣ ಹಾಗೂ ಸ್ಥಳೀಯ ರೆಸ್ಟೋರೆಂಟ್‌ಗಳಲ್ಲಿ ಉಟೋಪಹಾರ, ಸ್ಥಳೀಯ ಗೈಡ್‌ಗಳನ್ನು ಒದಗಿಸಲಾಗುತ್ತದೆ.

Customised Tours: ಈ ಯೋಜನೆಯಲ್ಲಿ, ಪ್ರವಾಸಿಗರ ಬಜೆಟ್ ಅನುಗುಣವಾಗಿ ಅವರಿಚ್ಛಿಸಿದ ದಿನ, ಅವರಿಚ್ಛಿಸಿದ ಪ್ರವಾಸಿ ತಾಣಗಳಿಗೆ ಸಕಲ ವ್ಯವಸ್ಥೆಗಳೊಂದಿಗೆ ಪ್ರವಾಸದ ಆಯೋಜಿಸಲಾಗುತ್ತದೆ.

Standard Group Tours: ಭಾರತದಾದ್ಯಂತ ಇರುವ ಯಾವುದೇ ಪ್ರವಾಸಿತಾಣ ಅಥವಾ ಯಾತ್ರಾಸ್ಥಳಕ್ಕೆ ಸಂಸ್ಥೆ ನಿಗದಿಪಡಿಸಿದ ದಿನಾಂಕ ದಂದು ಕನಿಷ್ಠ 35 ಜನರ ತಂಡ ಪ್ರಯಾಣಿಸುತ್ತದೆ. ಇಲ್ಲಿ ಸುಸಜ್ಜಿತ ಹವಾನಿಯಂತ್ರಿತ ಹೋಟೆಲ್ ವಾಸ್ತವ್ಯ, ಸುಖಾಸೀನ ವಾಹನಗಳಲ್ಲಿ ಪ್ರಯಾಣ, ಸಂಸ್ಥೆಯ ನುರಿತ ಅಡಿಗೆಯವರಿಂದ ಸಸ್ಯಾಹಾರಿ ಉಟೋಪಹಾರ ಹಾಗೂ ಅನುಭವಿ ಟೂರ್ ಮ್ಯಾನೇಜರ್‌ನ ಮಾರ್ಗದರ್ಶನ ಎಲ್ಲವನ್ನೂ ಒಳಗೊಂಡಿದೆ.

ಜನಮೆಚ್ಚುಗೆ ಪಡೆದ ಅಡಿಗಾಸ್ ಪ್ರವಾಸ

International Tours: ಅಡಿಗಾಸ್ ಸಂಸ್ಥೆಯ ವಿದೇಶ ಪ್ರವಾಸಗಳು ಜನಮೆಚ್ಚುಗೆ ಪಡೆದಿವೆ. ಸಂಸ್ಥೆಯು ನೇಪಾಳ, ಭೂತಾನ್, ಯುರೋಪ್, ಯು.ಕೆ, ಆಸ್ಟ್ರೇಲಿಯ, ಜಪಾನ್, ಹಾಂಗ್‌ಕಾಂಗ್– ಮಕಾವು, ವಿಯೆಟ್ನಾಮ್, ಬಾಲಿ, ಸಿಂಗಾಪುರ, ಮಲೇಷ್ಯಾ, ಥೈಲ್ಯಾಂಡ್, ದುಬೈ, ಶ್ರೀಲಂಕಾ ಮೊದಲಾದ ದೇಶಗಳಿಗೆ ಯಶಸ್ವಿಯಾಗಿ ಪ್ರವಾಸಗಳನ್ನು ಆಯೋಜಿಸುತ್ತಿದೆ. ಸಾವಿರಾರು ಪ್ರವಾಸಿಗರು ಪ್ರತಿವರ್ಷ ಸಂಸ್ಥೆಯ ಪ್ರವಾಸಗಳಲ್ಲಿ ಭಾಗಿಯಾಗಿ ಸಂತೃಪ್ತರಾಗಿದ್ದಾರೆ. ನಮ್ಮ ಪ್ರವಾಸಿ ಕೈಪಿಡಿ ಹಾಗೂ ಸಂಸ್ಥೆಯ ಬಗ್ಗೆ ಮಾಹಿತಿಯನ್ನು 080–26616678/ 9449478944 ಈ ದೂರವಾಣಿಯನ್ನು ಸಂಪರ್ಕಿಸುವ ಮೂಲಕ ಅಥವಾ ನಮ್ಮ website: www.adigasyatra.comಅಲ್ಲಿ ಅಥವಾ care@adigasyatra.comಗೆ ಬರೆಯುವ ಮೂಲಕ ಪಡೆಯಬಹುದು ಎಂದು ಸಂಸ್ಥಾಪಕ ನಾಗರಾಜ್ ಅಡಿಗ ಅವರು ತಿಳಿಸಿದ್ದಾರೆ.

ಊಟಕ್ಕೆ ಸೇರಿದ್ದೇವೆ ಹೊರತು, ರಾಜಕೀಯಕ್ಕಲ್ಲ: ಎಚ್‌ಸಿಎಂ

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ನಮ್ಮ ಕೈಯಲ್ಲಿಲ್ಲ I ಸಿಎಂ ಬದಲಾವಣೆಯೂ ದೆಹಲಿ ನಾಯಕರಿಗೆ ಬಿಟ್ಟಿರುವ ವಿಷಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವರು ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಊಟ ಮಾಡುವುದಕ್ಕೆ ಸೇರಿದ್ದು. ಇದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲವೆಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸತೀಶ್ ಜಾರಕಿಹೊಳಿ ಎಲ್ಲರೂ ಊಟಕ್ಕೆ ಸೇರೋಣ ಎಂದು ಆಹ್ವಾನಿಸಿದರು. ಆ ಸಮಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಷಯವೇನು ಎಂದು ಕೇಳಿದರು. ಅದಕ್ಕೆ ವಿಷಯವೇನಿಲ್ಲ ಊಟಕ್ಕೆ ಸೇರೋಣ ಎಂದು ಆಹ್ವಾನಿಸಿದರು. ಅದಕ್ಕಾಗಿ ಎಲ್ಲರೂ ಸೇರಿಕೊಂಡೆವು. ಕಾರಣ ಇಷ್ಟೆ ಬೇರೇನೂ ಇಲ್ಲ ಎಂದು ಹೇಳಿದರು.

ಗೃಹ ಸಚಿವ ಪರಮೇಶ್ವರ ಮಲೇಷಿಯಾಗೆ ಹೋಗುವುದಾಗಿ ಹೇಳಿದರು. ಅವರು ಊಟ ಮಾಡಿ ಹೊರಟರು. ಈ ಸಭೆ ಪೂರ್ವನಿಯೋಜಿತವಲ್ಲ, ಗುಪ್ತ ಕಾರ್ಯಸೂಚಿಯನ್ನು ಹೊಂದಿದ್ದ ರಹಸ್ಯ ಚರ್ಚೆಯೂ ಅಲ್ಲ. ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಬಗ್ಗೆ ಸಾಮಾನ್ಯವಾಗಿ ಚರ್ಚೆ ಮಾಡಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಪ್ರತಿಪಕ್ಷ ನಾಯಕರು ಎಲ್ಲದಕ್ಕೂ ರಾಜೀನಾಮೆ ಕೊಡಿ ಎನ್ನುತ್ತಾರೆ. ಜನರ ಮನಸ್ಸಿನಲ್ಲಿ ಬೇರೆ ಭಾವನೆ ಮೂಡಿಸಲಾಗುತ್ತಿದೆ. ಆದಕ್ಕೆ ಹೇಗೆ ಪ್ರತಿಕ್ರಿಯೆ ನೀಡಬೇಕು ಎಂದು ಚರ್ಚೆ ನಡೆಸಿದ್ದೇವೆ. ಸಚಿವ ಸಂಪುಟ ಪುನರ್‌ರಚನೆಯ ಬಗ್ಗೆ ಚರ್ಚೆ ನಡೆಸಿಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ನಮ ಕೈನಲ್ಲಿ ಇಲ್ಲ. ಎಲ್ಲವೂ ಹೈಕಮಾಂಡ್ ನಿರ್ಧಾರ ಮಾಡಬೇಕು ಎಂದು ಹೇಳಿದರು.

ಜಾತಿ ಗಣತಿ ಚರ್ಚೆಯಾಗಿಲ್ಲ: ಸಚಿವ ಸಂಪುಟ ಸಭೆಯಲ್ಲಿ ಜಾತಿಗಣತಿ ಚರ್ಚೆ ವಿಚಾರ ಚರ್ಚೆಯಾಗಿಲ್ಲ. ಆದರೆ 150 ಕೋಟಿ ರುಪಾಯಿ ಖರ್ಚು ಮಾಡಿ ಹಿಂದುಳಿದ ವರ್ಗಗಳ ಆಯೋಗದಿಂದ ಸಮೀಕ್ಷೆ ನಡೆಸಲಾಗಿದೆ. ಅದನ್ನು ಜಾರಿಗೆ ತರದೆ ಬಿಡಲು ಸಾಧ್ಯವೇ ? ಅಹಿಂದ ಸಮುದಾಯಗಳೇ ನಮ್ಮ ಪಕ್ಷಕ್ಕೆ ಬೆನ್ನೆಲುಬು. ಅವರಿಗೆ ಅನ್ಯಾಯ ಮಾಡಲು ಸಾಧ್ಯವಿಲ್ಲ. ಸಮೀಕ್ಷೆಯ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳಿದರು.

ಪ್ರಿಯಾಂಕ್ ಖರ್ಗೆ ಪಾತ್ರವಿಲ್ಲ

ಬೀದರ್‌ನ ಸಚಿನ್ ಆತಹತ್ಯೆ ಪ್ರಕರಣದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಪಾತ್ರವಿಲ್ಲ. ಅವರ ವಿರುದ್ಧ ಯಾವುದೇ ಸಾಕ್ಷಿ ಪುರಾವೆಗಳು ಇಲ್ಲ. ಆದರೂ ಬಿಜೆಪಿಯವರು ಪ್ರತಿಭಟನೆ ಮಾಡುತ್ತಾರೆ. ಎಂಟಹತ್ತು ವರ್ಷಗಳಿಂದ ರಾಜ್ಯದಲ್ಲಿ ಬಸ್ ಪ್ರಯಾಣ ದರ ಪರಿಷ್ಕರಣೆಯಾಗಿರಲಿಲ್ಲ. ಅದಕ್ಕಾಗಿ ಈಗ ಮಾಡಿದ್ದೇವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ನಮ ರಾಜ್ಯದಲ್ಲಿ ಪ್ರಯಾಣ ದರ ಕಡಿಮೆ ಇದೆ. ಹಾಲಿನ ದರ ಹೆಚ್ಚಳದಿಂದ ರೈತರಿಗೆ ಒಳ್ಳೆಯದಾಗಲಿದೆ ಎಂದು ಸಮರ್ಥಿಸಿಕೊಂಡರು.

ಸಿಎಂ ಬದಲಾವಣೆ ಎಐಸಿಸಿಗೆ ಬಿಟ್ಟ ವಿಚಾರ. ಈಗ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ. ಇನ್ನೂ ಮೂರೂವರೆ ವರ್ಷ ಅವರೇ ಅಧಿಕಾರದಲ್ಲಿ ಮುಂದುವರಿಯುತ್ತಾರೆ. ಐದು ವರ್ಷದ ಬಳಿಕ ಮತ್ತೆ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಬಹುದು. ಈ ವಿಚಾರದಲ್ಲಿ ಪದೇ ಪದೇ ಏಕೆ ಪ್ರಶ್ನೆಗಳು ಉದ್ಭವಿಸುತ್ತವೆ?

– ಎಚ್.ಸಿ. ಮಹದೇವಪ್ಪ ಸಚಿವ

ಸಚಿನ್ ಆತ್ಮಹತ್ಯೆ ಪ್ರಕರಣ: ಸಿಐಡಿ ತನಿಖೆ ಆರಂಭ

ಬೀದರ್: ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಸಿಐಡಿ ಡಿವೈಎಸ್ಪಿ ಸುಲೇಮಾನ್ ತಹಸೀಲ್ದಾರ್ ನೇತೃತ್ವದ ತಂಡ ಬೀದರ್‌ಗೆ ಆಗಮಿಸಿದ್ದು, ತನಿಖೆ ಶುರು ಮಾಡಿದೆ.

ನಗರ ಹೊರವಲಯದ ಹಬ್ಸಿಕೋಟೆ ಅತಿಥಿಗೃಹದಿಂದ ಮಂಗಲಪೇಟೆ ಬಳಿಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೆ ತೆರಳಿ ಮಾಹಿತಿ ಕಲೆಹಾಕಿದ್ದಾರೆ. ಸಚಿನ್ ಆತ್ಮಹತ್ಯೆ ಮಾಡಿಕೊಂಡ ಬೀದರ್–ಹೈದರಾಬಾದ್ ಮಾರ್ಗದ ರೈಲುಹಳಿಗೆ ಭೇಟಿ ಕೊಟ್ಟು ಸ್ಥಳ ಮಹಜರು ಮಾಡಿದ್ದಾರೆ. ಬಳಿಕ ಸಚಿನ್ ಹುಟ್ಟೂರಾದ ಭಾಲ್ಕಿ ತಾಲೂಕಿನ ಕಟ್ಟಿತೂಗಾಂವ್ ಗ್ರಾಮಕ್ಕೆ ಭೇಟಿ ನೀಡಿದ್ದು, ನಂತರ ಬೀದರ್‌ನ ಗಾಂಧಿ ಗಂಜ್ ಪೊಲೀಸ್ ಠಾಣೆ, ಭಾಲ್ಕಿ ತಾಲೂಕಿನ ಧನ್ನೂರ ಪೊಲೀಸ್ ಠಾಣೆಗೆ ಭೇಟಿ ಕೊಟ್ಟು ಮಾಹಿತಿ ಸಂಗ್ರಹಿಸಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ ಡೆತ್‌ನೋಟ್ ಬರೆದಿಟ್ಟು ಡಿ.26ರಂದು ರೈಲಿನಡಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದರು. ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರು ಸೇರಿದಂತೆ ಒಂಬತ್ತು ಜನರ ವಿರುದ್ಧ ಬೀದರ್ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿನ್ ಆತ್ಮಹತ್ಯೆ ಮಾಡಿಕೊಂಡ ಬೀದರ್–ಹೈದರಾಬಾದ್ ಮಾರ್ಗದ ರೈಲುಹಳಿಗೆ ಭೇಟಿ ನೀಡಿ ಸಿಐಡಿ ಅಧಿಕಾರಿಗಳು ಸ್ಥಳ ಮಹಜರು ನಡೆಸಿದರು.

...2ನೇ ಹಂತದ ವಕ್ಫ್ ಹೋರಾಟ

← ಮೊದಲಪುಟದಿಂದ

ಇದೇ ಸಮಯದಲ್ಲಿ ವಕ್ಫ್ ವಿಚಾರವಾಗಿ ಒಂದು ಹಂತದ ಹೋರಾಟ ಮಾಡಿದ್ದ ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಲಿಂಬಾವಳಿ ಹಾಗೂ ಅವರ ತಂಡದಿಂದ 2ನೇ ಹಂತದ ವಕ್ಫ್ ಹೋರಾಟ ಮಧ್ಯಕರ್ನಾಟಕ ಹಾಗೂ ಮೈಸೂರು ಭಾಗಗಳಲ್ಲಿ ಆರಂಭಗೊಳ್ಳಲಿದ್ದು, ಇದು ಬಿಜೆಪಿಯ ರಾಜ್ಯಾಧ್ಯಕ್ಷರ ಬಣಕ್ಕೆ ತೀವ್ರ ಮುಜುಗರ ಉಂಟು ಮಾಡಿದೆ.

ಇತ್ತ ನಿಮಾನ್ಸ್‌ನಲ್ಲಿ ನಡೆದ ಕಾರ್ಯಕ್ರಮ ದಲ್ಲಿ ಭಾಗವಹಿಸಲು ಬಂದಿದ್ದ ಪಕ್ಷದ ರಾಷ್ಟ್ರಾಧ್ಯಕ್ಷರು ಕಾರ್ಯಕ್ರಮ ಮುಗಿದ ನಂತರ ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ ಶುಕ್ರವಾರ ರಾತ್ರಿಯವರೆಗೂ ಇದ್ದು, ಪಕ್ಷದ ಕೆಲವು ಮುಖಂಡರೊಂದಿಗೆ ಚರ್ಚಿಸಿದ್ದಾರೆ. ಈ ವೇಳೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಅನುಪಸ್ಥಿತಿ ಇತ್ತು ಎನ್ನಲಾಗಿದೆ.

ರಾಜ್ಯದಲ್ಲಿ ಪಕ್ಷದ ಸಂಘಟನೆಗೆ ಪ್ರತ್ಯೇಕ ಬಣ ಸೃಷ್ಟಿಸಿಕೊಂಡು ಪ್ರವಾಸ ಮಾಡುತ್ತಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಅವರ ತಂಡದ ಬಣ ರಾಜಕೀಯಕ್ಕೆ ಕಡಿವಾಣ ಹಾಕುವಂತೆ ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ರಾಷ್ಟ್ರೀಯ ಅಧ್ಯಕ್ಷರಿಗೆ ಈಗಾಗಲೇ ಮನವಿ ಮಾಡಿದ್ದಾರೆ ಎನ್ನಲಾಗಿದೆ. ಕೆಲ ದಿನಗಳ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಬೆನ್ನಲ್ಲೇ ವಿಜಯೇಂದ್ರ ನಡ್ಡಾ ಅವರ ಜತೆ ಕರ್ನಾಟಕದ ಪ್ರಸಕ್ತ ಬೆಳವಣಿಗೆಗಳ ಕುರಿತಂತೆ ಮಾತುಕತೆ ನಡೆಸಿದ್ದಾರೆ. ಮಾತುಕತೆ ಸಂದರ್ಭದಲ್ಲಿ ಕರ್ನಾಟಕದ ಪಕ್ಷ ಸಂಘಟನೆ ಕುರಿತು ಮಾಹಿತಿ ಪಡೆದ ನಡ್ಡಾ ಅವರು ನಿರೀಕ್ಷೆಗೆ ತಕ್ಕಂತೆ ಸಂಘಟನೆ ಮತ್ತು ಸದಸ್ಯತ್ವ ಅಭಿಯಾನ ಪರಿಣಾಮಕಾರಿಯಾಗಿ ನಡೆಸಿ ಸರ್ಕಾರದ ವಿರುದ್ಧ ಹೋರಾಟ ನಡೆಸಬೇಕೆಂದು ಸೂಚನೆ ಕೊಟ್ಟಿದ್ದಾರೆ.

ಈ ವೇಳೆ ಯತ್ನಾಳ್, ಅರವಿಂದ ಲಿಂಬಾವಳಿ, ಶಾಸಕರಾದ ರಮೇಶ್ ಜಾರಕಿಹೊಳಿ, ಬಿ.ಪಿ.ಹರೀಶ್, ಮಾಜಿ ಸಚಿವರಾದ ಕುಮಾರ್ ಬಂಗಾರಪ್ಪ, ಮಾಜಿ ಸಂಸದರಾದ ಜಿ.ಎಂ.ಸಿದ್ದೇಶ್ವರ, ಅಣ್ಣಾ ಸಾಹೇಬ್ ಜೊಲ್ಲೆ ಮತ್ತಿತರರ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದಾರೆ ಎಂದು ದೂರು ಸಲ್ಲಿಸಿದ್ದಾರೆ. ವಕ್ಫ್ ವಿರುದ್ಧ ನಾವೆಲ್ಲರೂ ಹೋರಾಟ ನಡೆಸಬೇಕೆಂದು ಕರೆ ಕೊಟ್ಟಾಗ ಯತ್ನಾಳ್ ಹಾಗೂ ಅವರ ತಂಡ ಪ್ರತ್ಯೇಕವಾಗಿ ಹೋರಾಟ ನಡೆಸಿ ಪಕ್ಷಕ್ಕೆ ಮುಜುಗರ ಸೃಷ್ಟಿ ಮಾಡಿದರು.

ಕೈನಲ್ಲೂ ಬಣದಾಟ

← ಮೊದಲಪುಟದಿಂದ

ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕರು ಇದೊಂದು ಔಪಚಾರಿಕ ಸಭೆಯಾಗಿದ್ದರೂ, ರಾಜ್ಯ ರಾಜಕೀಯದ ಬಗ್ಗೆ ಚರ್ಚೆ ನಡೆದಿದೆ ಎನ್ನುವ ಮೂಲಕ ಇನ್ನಷ್ಟು ಕುತೂಹಲಕ್ಕೆ ನಾಂದಿ ಹಾಡಿದ್ದಾರೆ. ಈ ಹಿಂದೆ ಡಿನ್ನರ್ ಸಭೆಗಳು ನಡೆದಾಗ ಯಾವುದೇ ಕಾರಣಕ್ಕೂ ಈ ರೀತಿಯ ಗೌಪ್ಯ ಸಭೆ ನಡೆಸುವಂತಿಲ್ಲ ಎಂದು ಹೈಕಮಾಂಡ್ ಸೂಚನೆ ನೀಡಿತ್ತು. ಆದರೀಗ ಈ ಆದೇಶ ಮೀರಿ ಎರಡೂ ಬಣದವರು ಸಭೆ ನಡೆಸಿರುವುದರಿಂದ ಸಚಿವರು, ಶಾಸಕರ ಈ ನಡೆಯನ್ನು ಮುಂದಿನ ದಿನಗಳಲ್ಲಿ ಪಕ್ಷದ ಹೈಕಮಾಂಡ್ ಯಾವ ರೀತಿ ನೋಡಲಿದೆ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ.

ಬೆಳಗಾವಿ ವಿಷಯದಲ್ಲಿ ಹಸ್ತಕ್ಷೇಪ; ಅಸಮಾಧಾನ

ಈ ಹಿಂದೆ ಬೆಳಗಾವಿ ರಾಜಕೀಯದಲ್ಲಿ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪ ಮಾಡುತ್ತಿದ್ದಾರೆ ಎನ್ನುವ ಕಾರಣಕ್ಕೆ ರಮೇಶ್ ಜಾರಕಿಹೊಳಿ ಅವರು ಕಾಂಗ್ರೆಸ್‌ನಿಂದ ಸಿಡಿದೆದ್ದು ಬಿಜೆಪಿಗೆ ಹಾರಿದ್ದರು. ಇದೀಗ ಪುನಃ ಇದೇ ಆರೋಪವನ್ನು ಸಚಿವ ಸತೀಶ್ ಜಾರಕಿಹೊಳಿ ಮಾಡುತ್ತಿದ್ದಾರೆ ಎನ್ನಲಾಗಿದೆ. ಬೆಳಗಾವಿ ಜಿಲ್ಲಾಧ್ಯಕ್ಷರ ನೇಮಕ ವಿಷಯದಲ್ಲಿ, ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಕಾರ್ಯಕ್ರಮದಲ್ಲಿ ಸತೀಶ್ ಜಾರಕಿಹೊಳಿ ಅವರನ್ನು ವಿಶ್ವಾಸಕ್ಕೆ ಪಡೆದಿಲ್ಲ. ಇದರೊಂದಿಗೆ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಸಿ.ಟಿ.ರವಿ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ನಡುವಿನ ವಿವಾದದ ಪ್ರಕರಣವನ್ನು ಅಲ್ಲಿಗೆ ಕೈಬಿಡುವಂತೆ ಪೊಲೀಸರಿಗೆ ಸತೀಶ್ ಸೂಚನೆ ನೀಡಿದ್ದರೂ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪ ಮಾಡಿದ್ದರು ಎನ್ನುವ ಮಾತಿದೆ. ಈ ರೀತಿ ಹಸ್ತಕ್ಷೇಪ ಮಾಡುತ್ತಿರುವುದಕ್ಕೆ ಸತೀಶ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಇದೇ ವಿಷಯ ಗುರುವಾರ ರಾತ್ರಿ ನಡೆದ ಡಿನ್ನರ್ ಮೀಟಿಂಗ್‌ನಲ್ಲಿಯೂ ಪ್ರಸ್ತಾಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾಡಾನೆ ದಾಳಿ: ಇಬ್ಬರಿಗೆ ಗಾಯ

ಮಡಿಕೇರಿ: ಬೈಕ್‌ನಲ್ಲಿ ತೆರಳುತ್ತಿದ್ದ ಸಹೋದರರಿಬ್ಬರ ಮೇಲೆ ಕಾಡಾನೆ ದಾಳಿ ಮಾಡಿದ ಪ್ರಕರಣ ದಕ್ಷಿಣ ಕೊಡಗಿನ ಪೊನ್ನಂಪೇಟೆ ಬಳಿಯ ಹಳ್ಳಿಗಟ್ಟು ಗ್ರಾಮದಲ್ಲಿ ನಡೆದಿದೆ. ಮೊಹಮ್ಮದ್ ಫೈಜನ್ ಹಾಗೂ ಅಬುರ್ ಉವೈಸ್ ಸಹೋದರರು ಕಾಡಾನೆ ದಾಳಿಯಿಂದ ಗಾಯಗೊಂಡಿದ್ದು, ಮಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಶುಕ್ರವಾರ ಬೆಳಗಿನ ಜಾವ ಬೈಕ್‌ನಲ್ಲಿ ತೆರಳುತ್ತಿದ್ದ ಇಬ್ಬರ ಮೇಲೆ ಕಾಡಾನೆ ದಾಳಿ ಮಾಡಿದೆ. ಈ ಸಂದರ್ಭ ಸಹೋದರರು ಬಿದ್ದು ಗಂಭೀರ ಗಾಯಗಳಾಗಿದೆ. ಇಬ್ಬರಿಗೆ ಪ್ರಥಮ ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ.
ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ–591116
ತಾಲೂಕು: ಸವದತ್ತಿ. ಜಿಲ್ಲಾ: ಬೆಳಗಾವಿ. ರಾಜ್ಯ: ಕರ್ನಾಟಕ
Dn. e-mail: eemlbcnth@gmail.com Ph: - 08330-224500

ಟೆಂಡರ ಪ್ರಕಟಣೆ ಸಂಖ್ಯೆ: MLBCC-2/DB/4701/BLH-7/E-tender/2024-25/2724, 2725 & 2726, ದಿನಾಂಕ: 01–01–2025

ಅಲ್ಪಾವಧಿ ಟೆಂಡರ ಪ್ರಕಟಣೆ

(ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ) (ದ್ವಿ ಲಕೋಟೆ ಪದ್ಧತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ **ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ** ಕಚೇರಿ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಕಾಮಗಾರಿಗಳಿಗೆ (as per KTPP act 2000) ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲೂ ಪಿ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ಇ–ಸಂಗ್ರಹಣಾ ಕೋಶದ ಮುಖಾಂತರ) ಶೇಕಡಾವಾರು ಟೆಂಡರನ್ನು ಆಹ್ವಾನಿಸಲಾಗಿದೆ

(Work Indent Numbers. 2141, 2142 & 2143)
ಕಾಮಗಾರಿಯ ಅಂದಾಜು ಮೊತ್ತ ರೂ. 70.00 ರಿಂದ 360.00 ಲಕ್ಷಗಳು.

For Work Indent Numbers. 2141, 2142
1. ಗುತ್ತಿಗೆದಾರರು ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09–01–2025 ರಂದು ಸಂಜೆ 4.00 ಘಂಟೆವರೆಗೆ. 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 10–01–2025 ರಂದು ಸಂಜೆ 4.30 ಘಂಟೆಯ ನಂತರ 3. ಆರ್ಥಿಕ ಬಿಡ್ ತೆರೆಯುವ ದಿನಾಂಕ : 13–01–2025 ರಂದು ಬೆಳಿಗ್ಗೆ 11.00 ಘಂಟೆಯ ನಂತರ

For Work Indent Number. 2143
1. ಪ್ರಿ ಬಿಡ್ ಮೀಟಿಂಗ್ ದಿನಾಂಕ: 08–01–2025 ರಂದು 11.00 ಘಂಟೆಗೆ 2. ಗುತ್ತಿಗೆದಾರರು ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16–01–2025 ರಂದು ಸಂಜೆ 4.00 ಘಂಟೆವರೆಗೆ. 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17–01–2025 ರಂದು ಸಂಜೆ 4.30 ಘಂಟೆಯ ನಂತರ 4. ಆರ್ಥಿಕ ಬಿಡ್ ತೆರೆಯುವ ದಿನಾಂಕ : 18–01–2025 ರಂದು ಬೆಳಿಗ್ಗೆ 11.00 ಘಂಟೆಯ ನಂತರ

ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330 224500 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.

ಸಹಿ/– (ಶ್ರೀ.ಪಿ.ವ್ಹಿ.ಮುಳ್ಳೂರ)
ಕಾರ್ಯನಿರ್ವಾಹಕ ಇಂಜಿನೀಯರ,
ಕನೀನಿನಿ. ಮ.ಎ.ಕಾ.ನಿ.ವಿಭಾಗ.ನಂ.2 ನವಿಲುತೀರ್ಥ
ವಾ.ಸಾ.ಇ./ಬೆಳಗಾವಿ/1405/ಮಣಿಪಾಲ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಮೂಸೌ–ವ್ಹೈಟ್ ಟಾಪಿಂಗ್ ವಿಭಾಗ, ಕೊಠಡಿ ಸಂ: 106, 1ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–560 002. ಇ–ಮೇಲ್: bbbmpeeriwhitetopping@gmail.com

ಸಂ: ಬೃಬೆಂಮಪಾ/ಕಾಪಾಅ/ರಮೂಸೌ/ಡಬ್ಲ್ಯೂಟಿ/ ಟೆಂಡರ್/03/2024–25 ದಿನಾಂಕ: 03.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ ಲಕೋಟೆ ಪದ್ಧತಿ) (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಮೂಸೌ–ವ್ಹೈಟ್ ಟಾಪಿಂಗ್ ವಿಭಾಗ, ಬೃಬೆಂಮಪಾ, ಬೆಂಗಳೂರು, ಇವರು ಕೆಳಕಂಡ ಕಾಮಗಾರಿಗೆ ಸಲಹಾ ಸೇವೆಗಳನ್ನು ಒದಗಿಸಲು ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಒಳ ವರ್ತುಲ ರಸ್ತೆಯಿಂದ ಸರ್ಜಾಪುರ ರಸ್ತೆವರೆಗೆ ಸರ್ವೀಸ್ ರಸ್ತೆ ಸೇರಿದಂತೆ ರಾಜಾಕಾಲುವೆ/ಬಫರ್ ವಲಯದ ರಕ್ಷಣೆ, ಸುಧಾರಣೆ ಕಾಮಗಾರಿಗಾಗಿ ಭೂಸ್ವಾಧೀನ ಮತ್ತು ಟಿಡಿಆರ್ ಸಂಬಂಧಿತ ಸೇವೆಗಳನ್ನು ಒಳಗೊಂಡಂತೆ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸುವುದು, ಕೋರಮಂಗಲ ಒಳವರ್ತುಲ ರಸ್ತೆಯಿಂದ ಸರ್ಜಾಪುರ ಕಾಯಿಲ್ ರಸ್ತೆವರೆಗೆ ಕನ್ಸೋರ್ಟಿಯಂ ಕಾಯಿಲ್ ಮುಳ್ಳುತಂತಿ ಬೇಲಿ ಸೇರಿದಂತೆ ರಕ್ಷಣಾ ಭೂಮಿಗೆ ಕಾಂಪೌಂಡ್ ಗೋಡೆ ನಿರ್ಮಾಣ ಹಾಗೂ ಲೋವರ್ ಅಗರಂ ರಸ್ತೆಯಿಂದ ಕೋರಮಂಗಲ ಒಳವರ್ತುಲ ರಸ್ತೆವರೆಗೆ ಕನ್ಸೋರ್ಟಿಯಂ ಮುಳ್ಳುತಂತಿ ಬೇಲಿ ಸೇರಿದಂತೆ ರಕ್ಷಣಾ ಭೂಮಿಗೆ ಕಾಂಪೌಂಡ್ ಗೋಡೆ ನಿರ್ಮಾಣದ ಕಾಮಗಾರಿಗಾಗಿ ಸಲಹಾ ಸೇವೆಗಳು. **ಇಎಂಡಿ:** ರೂ.50,000/– (ರೂಪಾಯಿ ಐವತ್ತು ಸಾವಿರ ಮಾತ್ರ). **ಟೆಂಡರ್ ವೆಚ್ಚ:** ಕೆಪಿಪಿ ಪೋರ್ಟಲ್ ಪ್ರಕಾರ. **ಪೂರ್ಣಗೊಳಿಸುವ ಕಾಲಾವಧಿ:** 2 ತಿಂಗಳು.

ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ: **07.01.2025ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆ ದಿನಾಂಕ: **16.01.2025ರ** ಮಧ್ಯಾಹ್ನ **3:00 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಚೇರಿ, ರಮೂಸೌ, ವ್ಹೈಟ್ ಟಾಪಿಂಗ್ ವಿಭಾಗ, ಕೊಠಡಿ ಸಂ: 106, 1ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–560 002. ಇಲ್ಲಿ ನಡೆಸಲಾಗುವುದು. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆ ದಿನಾಂಕ ಮತ್ತು ಸಮಯ: **22.01.2025 ರ ಸಂಜೆ 4:00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.01.2025ರ ಸಂಜೆ 4:00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಮೂಸೌ, ವ್ಹೈಟ್ ಟಾಪಿಂಗ್ ವಿಭಾಗ, ಬೃಬೆಂಮಪಾ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ
E-mail:dhovijayanagara21@gmail.com. Telephone: 08394-227040
ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ಡಿ.ಎಂ.ಎಫ್–2741/01/2024–25 ದಿನಾಂಕ:01.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಕಛೇರಿಯಿಂದ 2023–24ನೇ ಸಾಲಿನ ಡಿ.ಎಂ.ಎಫ್ ಅನುದಾನದಡಿಯಲ್ಲಿ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಆಯ್ದ 20 ಹಳ್ಳಿಗಳಿಗೆ 02 ಸಂಚಾರಿ ಆರೋಗ್ಯ ಘಟಕ ಸೇವೆಯನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ QCBS ಮಾದರಿಯಲ್ಲಿ ಒದಗಿಸಲು ಸರ್ಕಾರೇತರ ಸಂಸ್ಥೆಗಳಿಂದ ಪಡೆಯಲು e-procurement (https://kppp.karnataka.gov.in) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರ್ಜಿದಾರರು / ಸಂಸ್ಥೆದಾರರು **ದಿನಾಂಕ:04.01.2025 ರ ಸಮಯ ಸಾಯಂಕಾಲ 04.00 ರಿಂದ ದಿನಾಂಕ:15.01.2025** ರ ಸಮಯ ಸಾಯಂಕಾಲ 04:00 ವರೆಗೆ ಅರ್ಜಿಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಮರು ಟೆಂಡರಿನ ಅಂದಾಜು ಮೊತ್ತ **ರೂ.111.00** ಲಕ್ಷಗಳು).

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394–227040 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/445

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ
ಡಿ. ದೇವರಾಜ ಅರಸು ಭವನ, ಸ್ಟೇಡಿಯಂ ರಸ್ತೆ, ಚಿತ್ರದುರ್ಗ–577501
ಇ–ಮೇಲ್:dobcmchitradurga@gmail.com Ph:- 08194–235034
ಸಂ. ಹಿಂವಕಇ/ಸಿಬ್ಬಂದಿ/ಹೊ.ಸಂ/ಸಿಆರ್–36/2024–25 ದಿನಾಂಕ: 01.01.2025

ಇ–ಟೆಂಡರ್ ಪ್ರಕಟಣೆ

24–25ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಹಾಗೂ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್ ಹಾಗೂ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಮತ್ತು ಜವಾನರು ಹಾಗೂ ಇತರೆ ಹುದ್ದೆಗಳಿಗೆ ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಆಸಕ್ತ ಅರ್ಹ ಸಂಸ್ಥೆಗಳಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು ಜಿಲ್ಲೆಯ ಹೆಸರು:– ಚಿತ್ರದುರ್ಗ. ಇ–ಟೆಂಡರ್ ಇಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):– **649.76** ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ):– **9.74** ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:**31/01/2025** ಸಂಜೆ : 5.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬುದು ಹಾಗೂ https://kppp.karnataka gov.in ವೆಬ್‌ಸೈಟ್‌ನಲ್ಲಿ ಲಾಗಿನ್ ವಾಡಿ ಪಡೆಯಬಹುದು.

DIPR/CTA/KSMCA/ 474/2024-25
ಸಹಿ/– ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ.

ಕರ್ನಾಟಕ ಸರಕಾರ
ಶಾಲಾ ಶಿಕ್ಷಣ ಇಲಾಖೆ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿರಸಿ
ಶಿರಸಿ ಶೈಕ್ಷಣಿಕ ಜಿಲ್ಲೆ.(ಉ.ಕ)
ಮೋ. ಸಂಖ್ಯೆ: 9483998365 ಇ–ಮೇಲ್ ವಿಳಾಸ: dietsirsi@gmail.com
ಸಂಖ್ಯೆ: A1/DS/TALP/2024–25 ದಿನಾಂಕ: 02.01.2024

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಈ ಮೂಲಕ ಅಧಿಕೃತ ಪೂರೈಕೆದಾರರಿಗೆ ತಿಳಿಸುವುದೇನೆಂದರೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿರಸಿ, ಶಿರಸಿ ಶೈಕ್ಷಣಿಕ ಜಿಲ್ಲೆ (ಉ.ಕ) ವತಿಯಿಂದ ಜಿಲ್ಲೆಯ 06 ಪ್ರೌಢಶಾಲೆಗಳಿಗೆ 2024–25ನೇ ಸಾಲಿನ ಶಾಲಾ ಶಿಕ್ಷಣ ಇಲಾಖೆಗೆ ಸಮಬಂಧಿಸಿದ ಆಯವ್ಯಯ ಘೋಷಿತ ಕಂಡಿಕೆ: 96(ಡಿ) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರೌಢಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಕುರಿತು ಶಿರಸಿ ಶೈಕ್ಷಣಿಕ ಜಿಲ್ಲೆಗೆ ಆಯ್ಕೆಯಾದ ಶಾಲೆಗಳಲ್ಲಿ TALP (Technology Assisted Learning Program) ಮಾದರಿಯ ಕಂಪ್ಯೂಟರ್ ಲ್ಯಾಬ್ ಪೂರಕ ಸಾಮಗ್ರಿಗಳನ್ನು "Supply of All-In-One Computers, 2KVA Online UPS and Mini MFD Printer cum Scanner to selected 06 Government High Schools in the Sirsi Education district" ಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ.

ಈ ಬಗ್ಗೆ ನಿಗಧಿಪಡಿಸಿದ ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು https://dietsirsi.karnataka.gov.in/ ಮತ್ತು https://kppp.karnataka.gov.in/ ವೆಬ್‌ಸೈಟ್‌ಗಳಲ್ಲಿ ಪಡೆಯಬಹುದು.

ವಿವರ: (1) Tender Reference No. DPI/2024-25/IND0446 (2) ಟೆಂಡರ್ ಪ್ರಾರಂಭಿಸಿದ ದಿನಾಂಕ: 02/01/2025 (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16/01/2025 05:30 PM (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 18/01/2025 11:00 AM (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 22/01/2025 11:00 AM (6) EMD ಮೊತ್ತ: 94,500/–

ಸಹಿ/– ಪ್ರಾಂಶುಪಾಲರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ಶಿರಸಿ, ಶಿರಸಿ ಶೈಕ್ಷಣಿಕ ಜಿಲ್ಲೆ.
DIPR/KWR/KSMCA/699/24-25 dt.03.01.2025

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–229/2524/2024–25 ದಿನಾಂಕ:03.01.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರು ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎಂ.ಎನ್.ವಿಜೇಂದ್ರ ಮತ್ತು ಗಿರಿಜ ವಿಜೇಂದ್ರ	ದಕ್ಷಿಣ	ಬೇಗೂರು	ಹೊಮ್ಮದೇವನ ಹಳ್ಳಿ	79/13 80/4	0–05 0–39	ವ್ಯವಸಾಯ ವಲಯ	ವಸತಿ
					ಒಟ್ಟು	1–04		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಮೋದಿ ಅವರ ಅಚ್ಛೇದಿನದಲ್ಲಿ ಭಾರತದ ವಿದೇಶಿ ಸಾಲ 711.8 ಶತಕೋಟಿ ಡಾಲರ್‌ಗೆ ಏರಿಕೆಯಾಗಿದೆ. ಈ ಸಾಲದ ಮಟ್ಟವು ಭಾರತದ ಅರ್ಥ ವ್ಯವಸ್ಥೆಯ ಮೇಲೆ ಹಲವು ಪ್ರತಿಕೂಲ ಪರಿಣಾಮ ಬೀರಲಿದೆ. ಈಗಾಗಲೇ ರುಪಾಯಿ ಅಪಮೌಲ್ಯ. ಜಿಡಿಪಿ ಕುಸಿತದಿಂದ ತತ್ತರಿಸಿರುವ ದೇಶದ ಅರ್ಥ ವ್ಯವಸ್ಥೆಗೆ ಸಾಲದ ಹೊರೆ ಮತ್ತಷ್ಟು ಆಘಾತ ನೀಡಲಿದೆ. ಮುಂದಿನ ತಲೆಮಾರಿಗೆ ಸಾಲದ ಹೊರೆ ಹೊರಿಸಿ ಹೋಗುವುದೇ 'ವಿಕಾಸ'ವೇ..?

ಸೋಮೇಶ್ವರ್, ಬೆಂಗಳೂರು

ಯಾವ ದೇಶ ಸಾಲ ಮಾಡಿಲ್ಲ ಹೇಳಿ..? ಅಮೆರಿಕಕ್ಕೆ 35 ಟ್ರಿಲಿಯನ್ ಡಾಲರ್ ಸಾಲ ಇದೆ. ಜಪಾನಿಗೆ 1.15 ಟ್ರಿಲಿಯನ್ ಡಾಲರ್, ಜರ್ಮನಿಗೆ 6.9 ಟ್ರಿಲಿಯನ್ ಡಾಲರ್ ಸಾಲ ಇದೆ. ಕಾಂಗ್ರೆಸ್ ಜನರನ್ನು ದಾರಿತಪ್ಪಿಸುತ್ತಿದೆ.

ಕ್ಯಾನ್ಸರ್ ಚಿಕಿತ್ಸೆ, ಜಾಗೃತಿ: ಕೆಎಲ್‌ಇ ಪಾತ್ರ ಶ್ಲಾಘನೀಯ

ಬೆಳಗಾವಿಯಲ್ಲಿ ನೂತನ ಕ್ಯಾನ್ಸರ್ ಆಸ್ಪತ್ರೆ ಉದ್ಘಾಟನೆ | ಕೆಎಲ್‌ಇ ಸೇವೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಂಸೆ

ಕೆಎಲ್‌ಇ ಸಂಸ್ಥೆಯ ಡಾ. ಸಂಪತ್‌ಕುಮಾರ್ ಶಿವಣಗಿ ನೂತನ ಕ್ಯಾನ್ಸರ್ ಆಸ್ಪತ್ರೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶುಕ್ರವಾರ ಉದ್ಘಾಟಿಸಿದರು. ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಅಧ್ಯಕ್ಷ ಮಹಾಂತೇಶ್ ಕೌಜಲಗಿ, ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್, ಸತೀಶ್ ಜಾರಕಿಹೊಳಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ್ ಶೆಟ್ಟರ್ ಇದ್ದರು.

ಬೆಳಗಾವಿ: ಬದಲಾದ ಜೀವನ ಶೈಲಿ ಆರೋಗ್ಯದ ಮೇಲೆ ತೀವ್ರತರ ಪರಿಣಾಮ ಬೀರುತ್ತಿದೆ. ಜಗತ್ತಿನಲ್ಲಿ ಕ್ಯಾನ್ಸರ್ ರೋಗ ವೇಗವಾಗಿ ವ್ಯಾಪಿಸುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿಯಾಗಿದೆ. ಸಕಾಲಿಕ ಚಿಕಿತ್ಸೆ ಹಾಗೂ ಕ್ಯಾನ್ಸರ್ ಮಹಾಮಾರಿ ಕುರಿತು ಅರಿವು ಮೂಡಿಸುವಲ್ಲಿ ಕೆಎಲ್‌ಇ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಂಸಿಸಿದ್ದಾರೆ.

ಕೆಎಲ್‌ಇ ಸಂಸ್ಥೆಯ ಡಾ. ಸಂಪತ್ ಕುಮಾರ್ ಶಿವಣಗಿ ನೂತನ ಕ್ಯಾನ್ಸರ್ ಆಸ್ಪತ್ರೆಯನ್ನು ಶುಕ್ರವಾರ ಉದ್ಘಾಟಿಸಿದ ಮಾತನಾಡಿದ ಅವರು, ವೈದ್ಯಕೀಯ ವೃತ್ತಿಗೆ ಘನತೆ ಮತ್ತು ಜವಾಬ್ದಾರಿ ಇದೆ. ತಮ್ಮಲ್ಲಿಗೆ ಬರುವ ರೋಗಿಗಳಲ್ಲಿ ವಿಶ್ವಾಸ ಮೂಡಿಸುವ ಕೆಲಸವನ್ನು ವೈದ್ಯರು ಮಾಡಬೇಕು. ಯಾವುದೇ ರೋಗಕ್ಕೆ ಪ್ರಾಥಮಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ಪಡೆಯುವಂತೆ ಅರಿವು ಮೂಡಿಸಬೇಕು ಎಂದು ಸಲಹೆ ಮಾಡಿದರು.

ಗ್ರಾಮೀಣರಲ್ಲಿ ಅರಿವು ಮೂಡಿಸಿ: ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯದ ಬಗ್ಗೆ ತಿಳಿವಳಿಕೆ ಮೂಡಿಸುವುದು ವೈದ್ಯರ ಪ್ರಮುಖ ಜವಾಬ್ದಾರಿಯಾಗಿದೆ. ಎಲ್ಲ ವರ್ಗದ ಜನರಿಗೆ ಸಮರ್ಪಕ ಚಿಕಿತ್ಸೆ ದೊರೆಯಬೇಕೆಂಬ ಉದ್ದೇಶದಿಂದ ವೈದ್ಯರು ಆಯುಷ್ಮಾನ್ ಭಾರತ ಸೇರಿದಂತೆ ಹಲವಾರು ಯೋಜನೆಗಳನ್ನು ಕೇಂದ್ರ ಜಾರಿಗೆ ತಂದಿದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಪ್ರತಿಯೊಬ್ಬರಿಗೂ ಸರಕಾರದ ಸೌಲಭ್ಯ ಲಭಿಸುವಂತೆ ಶ್ರಮಿಸಬೇಕು ಎಂದು ದ್ರೌಪದಿ ಮುರ್ಮು ಅವರು ಕರೆ ನೀಡಿದರು.

ಕೆಎಲ್‌ಇಯಿಂದ ಬಡವರ ಸೇವೆ: 'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಗ್ರಾಮೀಣ ಭಾಗದ ಜನರಿಗೆ ವೈದ್ಯಕೀಯ ಸೇವೆ ಕೊಡುವ ಜವಾಬ್ದಾರಿ ಅತ್ಯಂತ ಮಹತ್ವದ್ದು. ಈ ಕಾರ್ಯವನ್ನು ಪ್ರಭಾಕರ ಕೋರೆ ಅವರ ತಂಡ ಕೆಎಲ್‌ಇ ಸಂಸ್ಥೆ ಮೂಲಕ ಮಾಡುತ್ತಿದೆ. ಗುಣಮಟ್ಟದ ಚಿಕಿತ್ಸೆ ಮೂಲಕ ಬಡವರಿಗೆ ಅನುಕೂಲ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ತಪ್ಪು ಆಹಾರ ಪದ್ಧತಿಯಿಂದ ಕ್ಯಾನ್ಸರ್: ತಪ್ಪು ಆಹಾರ ಪದ್ಧತಿ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಸಮತೋಲನ ಆಹಾರ ಸೇವನೆ ಮುಖ್ಯವಾಗಿದೆ. ಆದರೆ ವೇಗದ ಬದುಕಿನ ಶೈಲಿ ಹಾಗೂ ಬದಲಾದ ಆಹಾರ ಪದ್ಧತಿಯಿಂದ ಕ್ಯಾನ್ಸರ್ ನಂತಹ ಮಹಾಮಾರಿ ವೇಗವಾಗಿ ಹಬ್ಬುತ್ತಿದೆ. ಆರೋಗ್ಯವಂತ ಸಮಾಜ ಇದ್ದರೆ ಮಾತ್ರ ಬಲಿಷ್ಠ ದೇಶ ಕಟ್ಟಲು ಸಾಧ್ಯ. ಭಾರತ ಜಗತ್ತಿನ ಶಕ್ತಿಶಾಲಿ ರಾಷ್ಟ್ರ ಆಗಬೇಕಾದರೆ ಪ್ರಜೆಗಳು ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯವಾಗಿರುವುದು ತುಂಬಾ ಮುಖ್ಯ ಎಂದರು.

ಸಮಾರಂಭದಲ್ಲಿ ಸಚಿವರಾದ ಶರಣಪ್ರಕಾಶ್ ಪಾಟೀಲ್, ಸತೀಶ್ ಜಾರಕಿಹೊಳಿ, ಸಂಸದ ಜಗದೀಶ್ ಶೆಟ್ಟರ್, ಕೆಎಲ್‌ಇ ಸಂಸ್ಥೆ ಅಧ್ಯಕ್ಷ ಮಹಾಂತೇಶ್ ಕೌಜಲಗಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಮಹಾಂತೇಶ್ ಕವಟಗಿಮಠ ಮೊದಲಾದವರು ಪಾಲ್ಗೊಂಡಿದ್ದರು.

ನಾಲ್ಕು ರಾಜ್ಯಗಳ ಜನರಿಗೆ ಅನುಕೂಲ

ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಮಾತನಾಡಿ. ಅಮೆರಿಕದ ಖ್ಯಾತ ವೈದ್ಯ ಅಥಣಿ ಮೂಲದ ಡಾ. ಸಂಪತ್ ಕುಮಾರ್ ಶಿವಣಗಿ ಅವರು 8 ಕೋಟಿ ರು. ಗಳನ್ನು ಕೆಎಲ್‌ಇ ಕ್ಯಾನ್ಸರ್ ಆಸ್ಪತ್ರೆಗೆ ದೇಣಿಗೆ ನೀಡಿದ್ದು, ಆಸ್ಪತ್ರೆಗೆ ಸಂಪತ್ ಕುಮಾರ್ ಶಿವಣಗಿ ಕ್ಯಾನ್ಸರ್ ಆಸ್ಪತ್ರೆ ಎಂದು ನಾಮಕರಣ ಮಾಡಲಾಗಿದೆ. ಈ ಆಸ್ಪತ್ರೆಯಿಂದ ಕರ್ನಾಟಕ, ಮಹಾರಾಷ್ಟ್ರ, ಗೋವಾ ಹಾಗೂ ಆಂಧ್ರಪ್ರದೇಶದ ಕ್ಯಾನ್ಸರ್ ರೋಗಿಗಳಿಗೆ ಅನುಕೂಲ ಆಗಲಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಉದ್ಘಾಟನೆಗೊಂಡಿದ್ದು ಸಂತೋಷ ತಂದಿದೆ ಎಂದರು.

ಗ್ರಾಮೀಣ ಮತ್ತು ಅರೆ ಗ್ರಾಮೀಣ ಪ್ರದೇಶಗಳಲ್ಲಿ ಶೇ.50ಕ್ಕಿಂತ ಹೆಚ್ಚು ಸಂಸ್ಥೆಗಳನ್ನು ಸ್ಥಾಪಿಸಿರುವ ಕೆಎಲ್‌ಇ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದೆ. ರಾಷ್ಟ್ರಕ್ಕೆ ಸಂಸ್ಥೆ ದೊಡ್ಡ ಕೊಡುಗೆ ನೀಡಿದೆ. ಸಕಾಲಿಕ ಚಿಕಿತ್ಸೆ ಹಾಗೂ ಕ್ಯಾನ್ಸರ್ ಮಹಾಮಾರಿ ಕುರಿತು ಅರಿವು ಮೂಡಿಸುವಲ್ಲಿ ಕೆಎಲ್‌ಇ ಸಂಸ್ಥೆಯ ಕಾರ್ಯ ಸ್ತುತ್ಯರ್ಹ.

–ದ್ರೌಪದಿ ಮುರ್ಮು, ರಾಷ್ಟ್ರಪತಿ

ಕೆಎಲ್‌ಇ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಅವರ ದೂರದೃಷ್ಟಿಯ ಚಿಂತನೆಯಿಂದಾಗಿ ಗ್ರಾಮೀಣ ಭಾಗದಲ್ಲಿ ಅತ್ಯುತ್ತಮ ವೈದ್ಯಕೀಯ ಸೌಲಭ್ಯ ಸಿಗುವಂತಾಗಿದೆ. ಜಗತ್ತಿನಲ್ಲಿ ವೇಗವಾಗಿ ಹರಡುತ್ತಿರುವ ಕ್ಯಾನ್ಸರ್ ರೋಗಕ್ಕೆ ಕಡಿಮೆ ದರದಲ್ಲಿ ಅತ್ಯುತ್ತಮ ಸೇವೆಗೆ ಸಿದ್ಧವಾಗಿರುವ ಕೆಎಲ್‌ಇ ಆಸ್ಪತ್ರೆ, ವೈದ್ಯರ ತಂಡಕ್ಕೆ ಕೃತಜ್ಞತೆ.

–ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಸಮಾಚಾರ ಸಣ್ಣದಲ್ಲ

ಪರಿಣಿತ ಬಿ. ಅವರಿಗೆ ಪಿಎಚ್.ಡಿ

ಮಂಗಳೂರು: ಭಾರತ ಮಾತಾ ಕಾಲೇಜ್ ಆಫ್ ಕಾಮರ್ಸ್ ಆಂಡ್ ಆರ್ಟ್ಸ್, ಆಲುವಾ, ಎರ್ನಾಕುಳಂನಲ್ಲಿ ಇಂಗ್ಲೀಷ್ ವಿಭಾಗದ ಸಹ ಪ್ರಾಧ್ಯಾಪಕಿ ಪರಿಣಿತ. ಬಿ ಅವರು ಮಂಗಳೂರಿನ ಶ್ರೀನಿವಾಸ ವಿಶ್ವವಿದ್ಯಾನಿಲಯದ ಆಂಗ್ಲಭಾಷಾ ವಿಭಾಗದ ಡಾ. ಎ. ಲೂರ್ದ್ ಸಾಮಿ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ದ ಕ್ರಿಟಿಕಲ್ ಸ್ಟಡಿ ಆಫ್ ದ ಎಮರ್ಜೆನ್ಸ್ ಆಫ್ ಫೀಮೇಲ್ ಐಡೆಂಟಿಟಿ ಇನ್ ಸೆಲೆಕ್ಟ್ ಕಂಟೆಪರರಿ ರಿಟೆಲ್ಲಿಂಗ್ಸ್ ಆಫ್ ದ ಮಹಾಭಾರತ' ಎಂಬ ಪ್ರಬಂಧಕ್ಕೆ ಶ್ರೀನಿವಾಸ ವಿಶ್ವವಿದ್ಯಾನಿಲಯವು ಆಂಗ್ಲಸಾಹಿತ್ಯ ದಲ್ಲಿ ಪಿಎಚ್.ಡಿ ಪ್ರದಾನ ಮಾಡಿದೆ.

ದರ ಏರಿಕೆಯಿಂದ ಜನರ ಜೇಬಿಗೆ ಕತ್ತರಿ

ಹುಬ್ಬಳ್ಳಿ: ಕಾಂಗ್ರೆಸ್ ಅಧಿಕಾರಕ್ಕಾಗಿ ಯಾವ ಕೀಳುಮಟ್ಟಕ್ಕೆ ಇಳಿಯಲೂ ಹೇಸುವುದಿಲ್ಲ. ಕಾಂಗ್ರೆಸ್ಸಿಗರು ಬರೀ ಸುಳ್ಳು ಹೇಳುತ್ತಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರಿಗೆ ನೌಕರಿಗೆ ಸಂಬಳ ನೀಡಲು ಸರಕಾರಕ್ಕೆ ಆಗುತ್ತಿಲ್ಲ. ಸಾರಿಗೆ ಸಂಸ್ಥೆಗಳಿಗೆ ಸಾಲ ಮಾಡಲು ಅನುಮತಿ ನೀಡಿರುವುದನ್ನು ನೋಡಿದರೆ ರಾಜ್ಯ ಸರಕಾರ ದಿವಾಳಿಯಾಗಿದೆ ಎಂಬುವುದು ಸ್ಪಷ್ಟ ಎಂದು ವಾಗ್ದಾಳಿ ನಡೆಸಿದರು. ಗ್ಯಾರಂಟಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷ ಇದೀಗ ಸುಳ್ಳುಗಳ ಮೂಲಕ ಜನರನ್ನು ದಾರಿತಪ್ಪಿಸುತ್ತಿದೆ. ಎಲ್ಲ ದರ ಏರಿಕೆ ಮಾಡಿ ಜನಸಾಮಾನ್ಯರ ನಿತ್ಯದ ಜೀವನಕ್ಕೆ ಕುತ್ತು ತಂದಿದೆ. ವಿದ್ಯುತ್ ದರ, ಹಾಲಿನದರ, ಡೀಸೆಲ್, ಪೆಟ್ರೋಲ್ ದರ ರಾಜ್ಯದಲ್ಲಿ ಏರಿಕೆ ಮಾಡಿದ್ದಾರೆ. ಆಸ್ತಿ ನೋಂದಣಿ, ಮದ್ಯದ ದರ ಏರಿಕೆ ಮಾಡಿದ್ದು, ಈಗ ಬಸ್ ದರ ಏರಿಕೆ ಮಾಡಿದ್ದಾರೆ ಎಂದು ಅವರು ತರಾಟೆಗೆ ತೆಗೆದುಕೊಂಡರು.

ಜನ ಶಿಳ್ಳೆ ಹೊಡಿತಾರೆ ಅಂತ ಮಾತನಾಡಿದ್ದಾರೆ

ಹಾಸನ: ಮೈಕ್ ಸಿಕ್ಕಿದೆ, ಜನ ಶಿಳ್ಳೆ ಹೊಡಿತಾರೆ ಅಂತ ಮಾತನಾಡಿದ್ದಾರೆ. ಪೆನ್‌ಡ್ರೈವ್ ಒಳಗಿದ್ದ ವಿಡಿಯೊ ಮಾಡಿದ್ದು ಯಾರು? ಮೊದಲು ಆ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಎಂಎಲ್‌ಸಿ ಡಾ. ಸೂರಜ್ ರೇವಣ್ಣ ವಿರುದ್ಧ ಸಂಸದ ಶ್ರೇಯಸ್ ಪಟೇಲ್ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೆನ್‌ಡ್ರೈವ್ ವಿಚಾರ ನಾನು ಮಾತನಾಡಲ್ಲ. ಅದರಿಂದ ಎಷ್ಟೋ ಹೆಣ್ಣುಮಕ್ಕಳ ಜೀವನ ಹಾಳಾಗಿದೆ. ಅನೇಕರು ಬಲಿಪಶು ಆಗಿದ್ದಾರೆ. ಅದಕ್ಕೆ ಕಾರಣ ಯಾರು? ಎಂಎಲ್‌ಸಿಯಾಗಿ ಅವರ ಸಾಧನೆ ಏನು ಎಂಬ ಬಗ್ಗೆ ಪಟ್ಟಿ ಬಿಡುಗಡೆ ಮಾಡಲಿ. ದೇವೇಗೌಡರು, ರೇವಣ್ಣ ಅವರದ್ದು ಬಿಡಿ, ಇವರ ಸಾಧನೆ ಬಗ್ಗೆ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಹೆಬ್ಬಾಳ್ಕರ್‌ಗೆ ಪ್ರೆಸ್‌ಕ್ಲಬ್ ವಿಶೇಷ ಪ್ರಶಸ್ತಿ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬೆಂಗಳೂರು ಪ್ರೆಸ್‌ಕ್ಲಬ್ ನ ವಿಶೇಷ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ರಾಜ್ಯದ ಕಾಂಗ್ರೆಸ್ ಸರಕಾರದ ಪ್ರತಿಷ್ಠಿತ ಪಂಚ ಗ್ಯಾರಂಟಿ ಯೋಜನೆಗಳಲ್ಲೊಂದಾಗಿರುವ ಗೃಹಲಕ್ಷ್ಮಿ ಯೋಜನೆ ಯನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದಕ್ಕಾಗಿ ಪ್ರೆಸ್ ಕ್ಲಬ್ ನ ವಿಶೇಷ ಪ್ರಶಸ್ತಿಗೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಆಯ್ಕೆ ಮಾಡಲಾಗಿದೆ. ಗೃಹಲಕ್ಷ್ಮಿ ಯೋಜನೆಯನ್ನು ಲಕ್ಷ್ಮೀ ಹೆಬ್ಬಾಳ್ಕರ್ ಅವರು ರಾಜ್ಯದ 1.25 ಕೋಟಿ ಮಹಿಳೆಯರಿಗೆ ಪ್ರತಿ ತಿಂಗಳು ಯಶಸ್ವಿಯಾಗಿ ತಲುಪಿಸುತ್ತಿದ್ದಾರೆ. ತನ್ಮೂಲಕ ಮಹಿಳೆಯರ ಸ್ವಾವಲಂಬನೆಗೆ ಪ್ರಯತ್ನಿಸುತ್ತಿದ್ದಾರೆ. ಜ.12ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೇರಿದಂತೆ ಗಣ್ಯರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಚಾಮರಾಜನಗರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನಿರೀಕ್ಷೆ

ಫೆ.13ಕ್ಕೆ ಮಾದಪ್ಪನ ಬೆಟ್ಟದಲ್ಲಿ ಸಂಪುಟ ಸಭೆ

ಚಾಮರಾಜನಗರ: ಸಿಎಂ ಸಿದ್ದರಾಮಯ್ಯ ಒಲವಿನ ಜಿಲ್ಲೆಯಲ್ಲಿ ಒಂದಾಗಿರುವ ಗಡಿಜಿಲ್ಲೆ ಚಾಮರಾಜನಗರಕ್ಕೆ 2025 ರ ವರ್ಷ ಹಲವು ಅಭಿವೃದ್ಧಿಗಳ ನಿರೀಕ್ಷೆ ಹುಟ್ಟುಹಾಕಿದ್ದು ಮಾದಪ್ಪನ ಬೆಟ್ಟದಲ್ಲಿ ಸಂಪುಟ ಸಭೆ ನಡೆಸಲು ತೀರ್ಮಾನ ಮಾಡಲಾಗಿದೆ.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಫೆ.13 ರಂದು ಸಂಪುಟ ಸಭೆ ನಡೆಯಲಿದ್ದು ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಹರಿಯುವ ನಿರೀಕ್ಷೆ ದಟ್ಟವಾಗಿದೆ. ಬೆಟ್ಟದಲ್ಲಿನ 108 ಅಡಿ ಮಹದೇಶ್ವರ ಪ್ರತಿಮೆ ಇರುವ ಸುಂದರ ಪರಿಸರದಲ್ಲಿ ಸಂಪುಟ ಸಭೆ ನಡೆಯಲಿದೆ.

ಬೆಳಗಾವಿ, ಕಲಬುರಗಿ ನಂತರ ಇದೇ ಮೊದಲ ಬಾರಿಗೆ ಗಡಿ ಜಿಲ್ಲೆಯಲ್ಲಿ ಪರಿಪೂರ್ಣ ಸಚಿವ ಸಂಪುಟ ಸಭೆ ನಡೆಯಲಿದ್ದು , ಗಿರಿಜನರಿಗೆ ವಸತಿ ಸೇರಿದಂತೆ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಣೆ ಆಗುವ ನಿರೀಕ್ಷೆ ಇದೆ.

ಮಿನಿ ಸಂಪುಟ ಸಭೆ: ಎಸ್.ಎಂ.ಕೃಷ್ಣ ಸಿಎಂ ಆಗಿದ್ದ ಹೊತ್ತಲ್ಲಿ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಎಸ್‌ಎಂಕೆ ಮಿನಿ ಸಂಪುಟ ಸಭೆ ನಡೆಸಿದ್ದರು. ಅರಣ್ಯ, ಲೋಕೋಪಯೋಗಿ, ಸಮಾಜ ಕಲ್ಯಾಣ ಇಲಾಖೆ ಸಚಿವರ ಸಭೆ ನಡೆಸಿ ಮೂಲಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿದ್ದರು. ಒಟ್ಟಿನಲ್ಲಿ ಗಡಿಜಿಲ್ಲೆ ಚಾಮರಾಜನಗರಕ್ಕೆ ಅಂಟಿದ್ದ ಮೌಢ್ಯ ತೊಡೆದುಹಾಕಿದ್ದ ಸಿಎಂ ಸಿದ್ದರಾಮಯ್ಯ ಈಗ ಸಂಪುಟ ಸಭೆ ನಡೆಸಿ ವಿಶೇಷ ಪ್ಯಾಕೇಜ್, ವಿಶೇಷ ಯೋಜನೆ ಮೂಲಕ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿ ಕಳಚಲಿ ಎಂಬುದೇ ಎಲ್ಲರ ಒತ್ತಾಸೆಯಾಗಿದೆ.

ಪ್ರವಾಸೋದ್ಯಮ ಉತ್ತೇಜಿಸಲು ಯೋಜನೆ

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಜಿಲ್ಲೆಗೆ ಅಗತ್ಯವಿರುವ ಮೂಲಸೌಕರ್ಯ ನಿವಾರಣೆ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ, ಪ್ರವಾಸೋದ್ಯಮ ಉತ್ತೇಜಿಸಲು ಯೋಜನೆ ರೂಪಿಸಿ ಸರಕಾರದ ಗಮನಕ್ಕೆ ತರಲಾಗುತ್ತದೆ. ಮೂಲಸೌಕರ್ಯ ಸಿಗುವುದರ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಶಾಸಕರ ಆತ್ಮಸಾಕ್ಷಿ ಪ್ರಶ್ನಿಸಿದ ಕೇಂದ್ರ ಸಚಿವ

ಆಪರೇಷನ್ ಹಸ್ತ ನಡೆಯದು: ಎಚ್‌ಡಿಕೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಆಪರೇಷನ್ ಹಸ್ತದ ದುಷ್ಟ ಯತ್ನ ಮಾಡುತ್ತಿದ್ದು, ಅದು ವರ್ಕ್ ಆಗುವುದಿಲ್ಲ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಶಾಸಕರ ಬಗ್ಗೆ ನಮಗೆ ಆತಂಕ ಇಲ್ಲ. ಕಾಂಗ್ರೆಸ್ ಏನೆಲ್ಲಾ ಮಾಡುತ್ತಿದೆ ಎಂದು ನಮ್ಮ ಶಾಸಕರು ನನಗೆ ಹೇಳುತ್ತಿದ್ದಾರೆ. ನಮ್ಮ ಪಕ್ಷವನ್ನು ಭದ್ರ ಮಾಡಿಕೊಳ್ಳುವುದು ಹೇಗೆ ಎನ್ನುವುದು ಗೊತ್ತಿದೆ. ಜೆಡಿಎಸ್ ಪಕ್ಷವನ್ನು ಯಾವುದೇ ಶಾಕು.. ವೀಕು ಮಾಡಲು ಆಗುವುದಿಲ್ಲ ಎಂದರು.

ಜೆಡಿಎಸ್ ಮುಗಿಸಬೇಕು ಎಂದು 12 ಜನ ಶಾಸಕರನ್ನು ಕರೆದುಕೊಂಡು ಬನ್ನಿ, 13 ಜನರನ್ನು ಕರೆದುಕೊಂಡು ಬನ್ನಿ ಎನ್ನುವ ಷಡ್ಯಂತ್ರ ನಡೆಯುತ್ತಿದೆ. ಇದೆಲ್ಲವೂ ನನಗೆ ಗೊತ್ತಿದೆ. ನಮ್ಮ ಯಾವ ಶಾಸಕರು ಪಕ್ಷ ಬಿಟ್ಟು ಹೋಗುವ ಪರಿಸ್ಥಿತಿ ಇಲ್ಲ. ಕಾಂಗ್ರೆಸ್ ನವರು ಏನೇನು ಮಾಡುತ್ತಿದ್ದಾರೆ ಎನ್ನುವುದು ಗೊತ್ತಿದೆ. ಕಾಂಗ್ರೆಸಿನವರ ಪಾಪದ ಕೊಡ ತುಂಬಿದೆ. ದೇವರೇ ಅವರಿಗೆ ಶಿಕ್ಷೆ ಕೊಡುತ್ತಾನೆ ಎಂದರು.

ಸಂಕ್ರಾಂತಿ ನಂತರ ಕ್ರಾಂತಿ, ವಾಂತಿ ಬಗ್ಗೆ ನಾನು ಹೇಳೋದಿಲ್ಲ. ಎಲ್ಲವನ್ನು ಈಗಾಗಲೇ ನೋಡಿ ಆಗಿದೆ. ನಾನು ಇದಾವುದರ ಬಗ್ಗೆ ಮಾತನಾಡುವುದಿಲ್ಲ. ನಿಮ್ಮೆಲ್ಲರಿಗೂ ಆತ್ಮಸಾಕ್ಷಿ ಎನ್ನುವುದು ಇದ್ದರೆ ನಿಮ್ಮ ಪಕ್ಷದ ಸರಕಾರ ಹೋಗುತ್ತಿರುವ ಮಾರ್ಗ ಏನು ಎಂದು ಕಾಂಗ್ರೆಸ್ ಶಾಸಕರು ಆತ್ಮಸಾಕ್ಷಿಯಾಗಿ ಉತ್ತರಿಸಲಿ. ಜನರಿಗೆ ನೀವೆಲ್ಲಾ ಏನು ಮಾತು ಕೊಟ್ಟು ಬಂದಿದ್ದೀರಿ ? ಆ ಬಗ್ಗೆ ಯೋಚನೆ ಮಾಡಿ. ಅವರ ಗ್ಯಾರಂಟಿಗಳು ಹಳ್ಳ ಹಿಡಿದು ಹೋಗಿವೆ. ಗ್ಯಾರಂಟಿ ಕೊಡುವುದಕ್ಕೆ ಪೈಪೋಟಿ ನಡೆಯುತ್ತಿದೆ. ಇಂತಹ ಗ್ಯಾರಂಟಿ ಕೊಟ್ಟಿದ್ದ ಹಿಮಾಚಲ ಪ್ರದೇಶ ಇವತ್ತು ಏನಾಗಿದೆ? ಕಾಂಗ್ರೆಸ್ ಶಾಸಕರು, ಮಂತ್ರಿಗಳು ನಿಮ್ಮ ಆತ್ಮಕ್ಕೆ ಪ್ರಶ್ನೆ ಹಾಕಿಕೊಳ್ಳಿ, ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂದು ಗಮನಿಸಿ. ರಾಜ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು ನೋಡಿ ಎಂದರು.

ನನಗೆ ಐಶ್ವರ್ಯಾ ಗೌಡ ಗೊತ್ತಿಲ್ಲ

ಐಶ್ವರ್ಯ ಗೌಡ ಎನ್ನುವ ಮಹಿಳೆ ಯಾವಾಗ, ಎಲ್ಲಿ ನಿಖಿಲ್ ಕುಮಾರಸ್ವಾಮಿ ಮತ್ತು ಅನಿತಾ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ್ದಾರೆಂಬ ಮಾಹಿತಿ ಕೊಟ್ಟರೆ ಒಳಿತು ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಐಶ್ವರ್ಯಾ ಗೌಡ ಕೇಸ್‌ನಲ್ಲಿ ನಿಖಿಲ್, ಅನಿತಾ ಕುಮಾರಸ್ವಾಮಿ ಅವರ ಹೆಸರುಗಳು ಪ್ರಸ್ತಾಪವಾಗಿ ಸಂಬಂಧ ಪ್ರತಿಕ್ರಿಯಿಸಿ, ಇದರ ಹಿಂದೆ ಯಾರ ಕೈಗಳಿವೆ ಎನ್ನುವುದು ಗೊತ್ತಾಗುತ್ತದೆ. ಈಗ ರಾಜ್ಯದಲ್ಲಿ ಚಿನ್ನ, ಬೆಳ್ಳಿ ಕೇಸ್‌ನಲ್ಲಿ ಅವರ ಹೆಸರುಗಳನ್ನು ಎಳೆದು ತರಲಾಗುತ್ತಿದೆ. ಅಂದಹಾಗೆ ಐಶ್ವರ್ಯ ಗೌಡ ಎಂಬ ಮಹಿಳೆ ಇವರಿಬ್ಬರನ್ನು ಯಾವಾಗ ಭೇಟಿ ಮಾಡಿದ್ದರು? ಈ ಸರಕಾರದಲ್ಲಿ ಎಷ್ಟರ ಮಟ್ಟಿಗೆ ತನಿಖೆ ನಡೆಯುತ್ತಿದೆ ಎನ್ನುವುದು ಗೊತ್ತಿದೆ. ಮಾಧ್ಯಮಗಳಲ್ಲಿ ಈ ವಿಷಯ ಬಂದ ಮೇಲೆ ನಾನು ಮಾಹಿತಿ ಪಡೆದುಕೊಂಡಿದ್ದೇನೆ. ಕೇಸ್ ಹಿನ್ನೆಲೆ ತಿಳಿದಿಕೊಂಡಿದ್ದೇನೆ ಎಂದರು. ನಿಖಿಲ್ ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ ಅವರಿಬ್ಬರೂ ಇವರ ಮುಖಗಳನ್ನೇ ನೋಡಿಲ್ಲ. ಹೇಗೆ ಅವರ ಪರಿಚಯ ಅಂತ ಸುದ್ದಿ ಮಾಡಿಸ್ತಾ ಇದ್ದಾರ ಇವರು? ಇದರ ಹಿಂದೆ ಯಾರಿದ್ದಾರೆ? ನನ್ನ ಮಗ, ಪತ್ನಿಯನ್ನು ಯಾಕೆ ಈ ಪ್ರಕರಣದಲ್ಲಿ ಎಳೆದು ತಂದಿದ್ದೀರಿ ? ಇದನ್ನು ಸರಕಾರ ಎಂದು ಕರೆಯಲು ಸಾಧ್ಯವೇ? ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಡಿನ್ನರ್ ಮೀಟಿಂಗ್ ಬಗ್ಗೆ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟನೆ

ಊಟದ ಜತೆ ಕೆಲ ಚರ್ಚೆ ನಡೆದಿವೆ

ಬೆಳಗಾವಿ: ಮುಖ್ಯಮಂತ್ರಿ ಸೇರಿದಂತೆ ಕೆಲ ಸಚಿವರು ಊಟಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಕೆಲ ಚರ್ಚೆ ನಡೆದಿವೆ. ಸಿಎಂ ಬದಲಾವಣೆ ಹಾಗೂ ಅಧಿಕಾರ ಹಂಚಿಕೆ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಆಗಿರಬಹುದು. ಆದರೆ ನಾವು 2028ಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಕುರಿತು ಚರ್ಚೆ ನಡೆಸಿದ್ದೇವೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಶುಕ್ರವಾರ ಕುವೆಂಪು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು ನಮ್ಮ ಮನೆಯಲ್ಲಿ ಊಟಕ್ಕೆ ಸೇರಿದ್ದು ಹೊಸದಲ್ಲ. ಕಳೆದ ಇಪ್ಪತ್ತು ತಿಂಗಳಲ್ಲಿ ಹತ್ತಾರು ಬಾರಿ ಸೇರಿದ್ದೇವೆ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನನಗೆ ಮಾಹಿತಿ ಇಲ್ಲ, ಬದಲಾವಣೆ ಮಾಡುವ ವ್ಯಾಪ್ತಿಯೂ ನಮ್ಮ ಬಳಿ ಬರಲ್ಲ. ಈ ಕುರಿತು ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ಬೆಳಗಾವಿಯಲ್ಲಿ ನಡೆದ ಗಾಂಧಿ ಭಾರತ ಶತಮಾನೋತ್ಸವದಲ್ಲಿ ಸಮಿತಿಗಳನ್ನು ರಚಿಸಲಾಗಿತ್ತು. ಎಲ್ಲರೂ ತಮ್ಮ ತಮ್ಮ ಕೆಲಸ ಮಾಡಿದ್ದಾರೆ. ನಮಗೆ ಜನರನ್ನು ಸೇರಿಸುವ ಜವಾಬ್ದಾರಿ ಇತ್ತು. ಕೆಪಿಸಿಸಿ ಅಧ್ಯಕ್ಷರಾಗಿರುವುದರಿಂದ ಡಿ.ಕೆ. ಶಿವಕುಮಾರ ಅವರು ಶೋ ಆಗಿದ್ದಾರೆ ಅಷ್ಟೇ, ಹೀಗಾಗಿ ಅಧ್ಯಕ್ಷರು ಹೈಲೇಟ್ ಆಗುವುದು ಸ್ವಾಭಾವಿಕ. ಬೆಳಗಾವಿ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ ಯಾವುದೇ ಹಸ್ತಕ್ಷೇಪ ಮಾಡಿಲ್ಲವೆಂದು ಸ್ಪಷ್ಟಪಡಿಸಿದರು.

ಬೆಳಗಾವಿ ನಗರದ ಅನಗೋಳದಲ್ಲಿರುವ ಡಿವಿಎಸ್ ಚೌಕ್ ನಲ್ಲಿ ವೀರಸಂಭಾಜಿ ಮಹಾರಾಜರ ಮೂರ್ತಿ ಸ್ಥಾಪಿಸಲಾಗಿದ್ದು, ಕಾಮಗಾರಿ ಇನ್ನು ಪೂರ್ಣವಾಗಿಲ್ಲ. ಆದರೆ ಕಾಮಗಾರಿ ಮುಗಿಯದೆ ಮೂರ್ತಿ ಅನಾವರಣ ಹೇಗೆ ಮಾಡುತ್ತೀರಿ ಎಂದು ಕೆಲವರ ವಾದ ಇದೆ. ಹೈಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದ್ದು, ಮೂರ್ತಿ ಅನಾವರಣದಲ್ಲಿ ನಾವು ಪಾಲ್ಗೊಳ್ಳುವುದಕ್ಕೆ ಬರುವುದಿಲ್ಲ. ಈ ಕುರಿತು ಪಾಲಿಕೆ ಆಯುಕ್ತರು ನನ್ನ ಬಳಿಯೂ ಚರ್ಚಿಸಿದ್ದಾರೆ. ಪ್ರೋಟೊಕಾಲ್ ಪಾಲಿಸಬೇಕಾಗುತ್ತದೆ.

ಕೇಸ್ ನಡೆಯುತ್ತಿದ್ದರಿಂದ ಮೂರ್ತಿ ಅನಾವರಣ ಕಾರ್ಯಕ್ರಮ ಮುಂದಕ್ಕೆ ಹಾಕಲು ಪಾಲಿಕೆ ಆಯುಕ್ತರು ಮೇಯರ್ ಗೆ ಪತ್ರ ಬರೆದಿದ್ದು, ಈ ಕುರಿತು ಏನು ನಿರ್ಧರಿಸುತ್ತಾರೆ ನೋಡೋಣ ಎಂದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಚರ್ಚೆಯೇ ನಡೆದಿಲ್ಲ. ಈಗಾಗಲೇ ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ ಇದ್ದಾರೆ. ಹೀಗಿದ್ದಾಗ ನಾವು ಅಧ್ಯಕ್ಷರಾಗುತ್ತೇವೆ ಅನ್ನುವುದು ಸೂಕ್ತವಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸಮಯ ಬಂದಾಗ ನೋಡೋಣ.

–ಸತೀಶ್ ಜಾರಕಿಹೊಳಿ, ಸಚಿವ

ನನ್ನ, ಹೆಬ್ಬಾಳ್ಕರ್ ನಡುವೆ ಭಿನ್ನಾಭಿಪ್ರಾಯವಿಲ್ಲ

ನನ್ನ ಮತ್ತು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನಡುವೆ ಭಿನ್ನಾಭಿಪ್ರಾವಿಲ್ಲ. ಬೆಳಗಾವಿ, ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆಗಾಗಿ ಕಳೆದ ಆರು ತಿಂಗಳ ಹಿಂದೆಯೇ ಎಲ್ಲರೂ ಸಹಮತದಿಂದ ಒಂದೇ ಹೆಸರು ಕಳಿಸಿದ್ದೇವೆ. ಶೀಘ್ರವೇ ಬೆಳಗಾವಿ, ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ನೇಮಕವಾಗಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸಣ್ಣ ನೀರಾವರಿ ಸಚಿವ ಬೋಸರಾಜು ಸಮರ್ಥನೆ

ಪ್ರಯಾಣ ದರ ಏರಿಕೆ ಸಹಜ ಪ್ರಕ್ರಿಯೆ

ಕೊಪ್ಪಳ: ಯಾವುದೇ ಸರಕಾರ ಇದ್ದರೂ ಪ್ರತಿ 3 ವರ್ಷಕ್ಕೊಮ್ಮೆ ಬಸ್ ಪ್ರಯಾಣ ದರ ಏರಿಕೆ ಮಾಡಲಾಗುತ್ತದೆ. ಗ್ಯಾರಂಟಿ ಯೋಜನೆಗೂ ಬಸ್ ಪ್ರಯಾಣ ದರ ಪರಿಷ್ಕರಣೆಗೂ ಸಂಬಂಧ ಇಲ್ಲ ಎಂದು ಸಣ್ಣ ನೀರಾವರಿ ಸಚಿವ ಎನ್. ಎಸ್. ಬೋಸರಾಜು ಸಮರ್ಥಿಸಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನಿಯಮಾನುಸಾರ ಬಸ್‌ದರ ಏರಿಸಲಾಗಿದೆ. ಡೀಸೆಲ್ ಹಾಗೂ ವಾಹನಗಳ ಬಿಡಿಭಾಗಗಳ ಬೆಲೆ ಏರಿಕೆಯಾಗಿದೆ. ಸಾರಿಗೆ ನೌಕರರ ವೇತನ ಹೆಚ್ಚಿಸಬೇಕು. ಇದಕ್ಕೆಲ್ಲ ಹಣ ಎಲ್ಲಿಂದ ತರಬೇಕು? ಗ್ಯಾರಂಟಿ ಯೋಜನೆಗೆ ಸರಕಾರದಿಂದ ಪ್ರತ್ಯೇಕ ಹಣ ಮೀಸಲಿಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಸಂಕ್ರಾಂತಿ ನಂತರ ಸಾರಿಗೆ ನೌಕರರ ಜತೆ ಸಭೆ

ಸಾರಿಗೆ ನೌಕರರು ಮುಷ್ಕರಕ್ಕೆ ಕರೆನೀಡಿದ ಹಿನ್ನೆಲೆ ಸಿಎಂ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಸಂಕ್ರಾಂತಿ ನಂತರ ಸಾರಿಗೆ ನೌಕರರ ಬೇಡಿಕೆ ಈಡೇರಿಕೆ ಬಗ್ಗೆ ಮತ್ತೊಂದು ಸಭೆ ನಡೆಸಲಾಗುವುದು. ಸಿಎಂ ಸಿದ್ದರಾಮಯ್ಯ ಉತ್ತಮ ಯೋಜನೆಗಳನ್ನು ನೀಡಿದ್ದಾರೆ ಎಂದರು.

ಖರ್ಗೆ ರಾಜೀನಾಮೆ ನೀಡಲ್ಲ

ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಚಿನ್ ಡೆತ್‌ನೋಟ್ ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಇಲ್ಲ. ಬಿಜೆಪಿಗರು ರಾಜಕೀಯಕ್ಕಾಗಿ ಮಾತನಾಡುತ್ತಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರ ಸಹೋದರ ಬಂಧನಕ್ಕೊಳಗಾ ಗಿದ್ದರು. ಹಾಗೆಂದು ಜೋಶಿ ರಾಜೀನಾಮೆ ಕೊಟ್ಟರಾ? ಆರ್.ಅಶೋಕ, ಶೋಭಾ ಕರಂದ್ಲಾಜೆ, ಜಗದೀಶ್ ಶೆಟ್ಟರ್ ಮೇಲೆ ಆರೋಪಗಳಿದ್ದವು. ಆದರೂ ಅವರಾರೂ ರಾಜೀನಾಮೆ ಕೊಟ್ಟಿಲ್ಲ. ಸರಕಾರ ಪ್ರಕರಣವನ್ನು ಸಿಐಡಿಗೆ ವಹಿಸಿದೆ. ತನಿಖೆಯಾಗಿ ವರದಿ ಬರಲಿ ಎಂದರು ಸಚಿವ ಬೋಸರಾಜು ಖರ್ಗೆ ಪರ ಬ್ಯಾಟ್ ಬೀಸಿದರು.

ಹಳೆಯ ಸ್ನೇಹಿತರು ಒಂದೆಡೆ ಸೇರಿದ್ದಾರೆ: ಬೈರತಿ ಸುರೇಶ್

ತಪ್ಪಾಗಿ ಅರ್ಥೈಸುವ ಅಗತ್ಯ ಇಲ್ಲ

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಎಚ್.ಸಿ. ಮಹದೇವಪ್ಪ, ಕೆ.ಎನ್. ರಾಜಣ್ಣ, ಸತೀಶ್ ಜಾರಕಿಹೊಳಿ ಸೇರಿ ಇತರೆ ಸಂಪುಟದ ಸಚಿವರು ಸೌಹಾರ್ದಯುತವಾಗಿ ಒಂದು ಕಡೆ ಸೇರಿದ್ದಾರೆ. ಅದರಲ್ಲೇನೂ ವಿಶೇಷವಿಲ್ಲ ಎಂದು ಸಚಿವ ಬೈರತಿ ಸುರೇಶ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಳೇ ಸ್ನೇಹಿತರೆಲ್ಲಾ ಒಂದು ಕಡೆ ಸೇರಿ ಊಟ ಮಾಡಿದ್ದಾರೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವ ಅವಶ್ಯಕತೆ ಇಲ್ಲ. ಸಚಿವ ಸಂಪುಟ ಪುನಾರಚನೆ ಮಾಡುವುದು ಕಾಂಗ್ರೆಸ್ ಹೈಕಮಾಂಡ್‌ಗೆ ಬಿಟ್ಟಿರುವ ವಿಚಾರವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪರಮಾಧಿಕಾರವಿದೆ. ನಮ್ಮಿಂದ ಯಾರು ಯಾವ ವರದಿ ಕೇಳಿಲ್ಲ ಎಂದು ಸ್ಪಷ್ಟಪಡಿಸಿದರು.

ದರ ಏರಿಕೆಗೂ ಗ್ಯಾರಂಟಿಗೂ ಸಂಬಂಧವಿಲ್ಲ

ಬಸ್ ದರ ಏರಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿ, ಬಸ್ ಟಿಕೆಟ್ ದರ ಹಿಂದೆ ಯಾವತ್ತೂ ಏರಿಕೆಯಾಗಿಲ್ಲವೇ..? ಕಾಲಕಾಲಕ್ಕೆ ಪೆಟ್ರೋಲ್, ಡೀಸೆಲ್ ದರ ಏರಿಕೆ ಆಗುತ್ತಿದೆ. ಆ ಪ್ರಕಾರ ಬಸ್ ಟಿಕೆಟ್ ದರವೂ ಏರಿದೆ. ದರ ಹೆಚ್ಚಳಕ್ಕೂ ಗ್ಯಾರಂಟಿ ಯೋಜನೆಗೂ ಸಂಬಂಧವಿಲ್ಲ ಎಂದು ಸಚಿವ ಸುರೇಶ್ ಸ್ಪಷ್ಟಪಡಿಸಿದರು.

ಸಚಿವ ಪ್ರಿಯಾಂಕ್ ಖರ್ಗೆಯ ಮನೆಗೆ ಮುತ್ತಿಗೆ ಹಾಕಲು ಬಿಜೆಪಿಯವರಿಗೆ ನೈತಿಕತೆ ಇಲ್ಲ. ಯಾವ ಆಧಾರದ ಮೇಲೆ ಪ್ರಿಯಾಂಕ್ ರಾಜಿನಾಮೆ ಕೇಳುತ್ತಿದ್ದಾರೆ?. ಕೆ. ಎಸ್.ಈಶ್ವರಪ್ಪ ಕೇಸ್ ಪ್ರಕರಣ ಬೇರೆ. ಈ ಪ್ರಕರಣವೇ ಬೇರೆಯಾಗಿದೆ. ಅಲ್ಲಿ ಖುದ್ದು ಈಶ್ವರಪ್ಪನವರ ಹೆಸರೇ ಬರೆದಿಟ್ಟಿದ್ದರು. ಇಲ್ಲಿ ಎಲ್ಲೂ ಯಾವ ದಾಖಲೆಯೂ ಇಲ್ಲ.

–ಬೈರತಿ ಸುರೇಶ, ಸಚಿವ

ಸರಕಾರದ ವಿರುದ್ಧ ಶೆಟ್ಟರ್ ಕಿಡಿ

ಬಸ್ ದರ ಏರಿಕೆ ಸರಿಯಲ್ಲ

ಬೆಳಗಾವಿ: ರಾಜ್ಯ ಸರಕಾರ ಸಾರಿಗೆ ಬಸ್ ದರವನ್ನು ಶೇ.15ರಷ್ಟು ಹೆಚ್ಚಿಗೆ ಮಾಡಿದ್ದು ಸರಿಯಲ್ಲ ಎಂದು ಸಂಸದ ಜಗದೀಶ್ ಶೆಟ್ಟರ್ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರ ಗ್ಯಾರಂಟಿ ಯೋಜನೆಯಿಂದ ಆರ್ಥಿಕವಾಗಿ ದಿವಾಳಿಯಾಗಿದೆ. ಮೊದಲು ಶಕ್ತಿ ಯೋಜನೆಯನ್ನು ಬಂದ್ ಮಾಡಿ. ಸರಕಾರ ಸಾರಿಗೆ ದರ ಹೆಚ್ಚಳ ಮಾಡಿರುವುದನ್ನು ಹಿಂಪಡೆಯಬೇಕು. ಅಲ್ಲಿಯವರೆಗೂ ಬಿಜೆಪಿ ಹೋರಾಟ ಮಾಡಲಾಗುವುದು ಎಂದರು.

ರಾಜ್ಯ ಸರಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಹಾಲಿನ ದರ ಹಾಗೂ ಸಾರಿಗೆ ಬಸ್ ಟಿಕೆಟ್ ದರ ಹೆಚ್ಚಳ ಮಾಡಿದೆ. ಮೊದಲು ಸರಕಾರ ಭ್ರಷ್ಟಾಚಾರದ ಮುಳುಗಿದೆ. ಅದನ್ನು ಕಡಿಮೆ ಮಾಡಿ. ಸಾಕಷ್ಟು ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಳಗಾವಿಯಲ್ಲಿ ಎಸ್ ಡಿಎ ನೌಕರ ರುದ್ರೇಶ್ ಯರಗಣ್ಣವರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅವರಿಗೆ ನ್ಯಾಯ ಕೊಡಿಸಬೇಕಿದ್ದ ಸರಕಾರ ಆರೋಪಿ ಸ್ಥಾನದಲ್ಲಿರುವ ತಹಶಿಲ್ದಾರ ಕೆಲಸ ಮಾಡುತ್ತಿದ್ದಾನೆ ಅವರ ಮೇಲೆ ಕ್ರಮ ಏಕಿಲ್ಲ ಎಂದು ಪ್ರಶ್ನಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸ್ಪಷ್ಟನೆ

ಅತಿಥಿ ಉಪನ್ಯಾಸಕರ ನೇಮಕಕ್ಕೆ ಕ್ರಮ

ಚಿಕ್ಕಬಳ್ಳಾಪುರ: ಅತಿಥಿ ಉಪನ್ಯಾಸಕರ ನೇಮಕಾತಿ ಸಂಬಂಧದ ಅರ್ಜಿ ಜ.15ರಂದು ಕೋರ್ಟಿನಲ್ಲಿ ವಿಚಾರಣೆಗೆ ಬರಲಿದೆ.ಆದರೂ ಇಲಾಖೆ 2024-25ನೇ ಸಾಲಿನ ನೇಮಕಾತಿಗೆ ಗುರುವಾರ ಸುತ್ತೋಲೆ ಹೊರಡಿಸಲಾಗಿದ್ದು ಯುಜಿಸಿ ನಿಯಮಾವಳಿಯಂತೆ ನೇಮಕಾತಿ ಪ್ರಕ್ರಿಯೆ ನಡೆಯಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು

ನಗರದ ಎಂ.ಜಿ.ರಸ್ತೆ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ 6ಕೋಟಿ ವೆಚ್ಚದ ಹೆಚ್ಚುವರಿ ಕಟ್ಟಡ ಕಾಮಗಾರಿಯ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿ, ನನ್ನ ಅವಧಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯಲ್ಲಿ ಸಾಕಷ್ಟು ಗುಣಾತ್ಮಕ ಬದಲಾವಣೆಗಳನ್ನು ತರಲಾಗಿದ್ದು ಅಗತ್ಯಕ್ಕನುಗುಣವಾಗಿ ಕಾಲೇಜು ಸೌಲಭ್ಯಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಿದ್ದೇನೆ. ಚಿಕ್ಕಬಳ್ಳಾಪುರದ ಕಾಲೇಜಿಗೆ 6 ಕೋಟಿ, ಮಹಿಳಾ ಕಾಲೇಜಿಗೆ 4ಕೋಟಿ ಮಂಜೂರು ಮಾಡಲಾಗಿದೆ. 2000 ವಿದ್ಯಾರ್ಥಿಗಳಿರುವ ಚಿಂತಾಮಣಿಯ ಮಹಿಳಾ ಕಾಲೇಜಿಗೆ 26 ಕೋಟಿ, ಪಾಲಿಟೆಕ್ನಿಕ್‌ಗೆ 74ಕೋಟಿ ನೀಡಲಾಗಿದೆ ಎಂದರು.

ನಮ್ಮ ಮನೆಗೆ ಊಟಕ್ಕೆ ಕರೆದರೂ ಬರ್ತಾರೆ: ಸಚಿವ ಸತೀಶ್ ಜಾರಕಿಹೊಳಿ ಮನೆಯಲ್ಲಿ ಔತಣಕೂಟಕ್ಕೆ ಸಿಎಂ ಅವರಿಗೆ ಆಹ್ವಾನ ಇದ್ದಿದ್ದರಿಂದ ಸಿದ್ದರಾಮಯ್ಯ ಊಟಕ್ಕೆ ಹೋಗಿದ್ದಾರೆ. ನಾಳೆ ನಮ್ಮ ಮನೆಯಲ್ಲಿ ಊಟಕ್ಕೆ ಕರೆದರೂ ಬರ್ತಾರೆ.ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯ ಇಲ್ಲ. ನಾಡಿನ ಜನರ ಹಿತದೃಷ್ಟಿಯಿಂದ ಸರಕಾರ ಕೆಲಸ ಮಾಡ್ತಿದೆ ಎನ್ನುವ ಮೂಲಕ ಮಾಧ್ಯಮದವರ ಪ್ರಶ್ನೆಗೆ ಸುಧಾಕರ್ ತೆರೆ ಎಳೆದರು.

ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಂದ ಪ್ರತಿ ವರ್ಷ 5 ವಿದ್ಯಾರ್ಥಿಗಳನ್ನು ಇಂಗ್ಲೆಂಡ್‌ನಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಸರಕಾರದ ಖರ್ಚಿನಲ್ಲಿ ಕಳುಹಿಸುವ ಯೋಜನೆ ರೂಪಿಸಲಾಗಿದೆ. ಇದನ್ನು ಲಿಖಿತ ಪರೀಕ್ಷೆಯ ಆಧಾರದಲ್ಲಿ ಮಾಡಲಾಗುವುದು. ಮಹಿಳಾ ಸಬಲೀಕರಣ ಮತ್ತು ಉನ್ನತ ಶಿಕ್ಷಣದಲ್ಲಿ ಹೆಣ್ಣುಮಕ್ಕಳ ಪ್ರಾತಿನಿಧ್ಯ ಹೆಚ್ಚಿಸುವ ಭಾಗವಾಗಿ ಈ ಯೋಜನೆ ರೂಪಿಸಲಾಗಿದೆ.

–ಡಾ.ಎಂ.ಸಿ.ಸುಧಾಕರ್, ಸಚಿವ

ವಿಶ್ವವಾಣಿ

ಸಂಪಾದಕೀಯ

ಚೀನಾ ವೈರಸ್ ಬಗ್ಗೆ ಎಚ್ಚರಿಕೆ ಅಗತ್ಯ

ಕೋವಿಡ್ ಮಹಾಮಾರಿ ಆತಂಕದಿಂದ ಜಗತ್ತು ಹೊರ ಬಂದು ಚೇತರಿಕೆ ಹಾದಿಯಲ್ಲಿ ಸಾಗುತ್ತಿರುವಾಗಲೇ ಚೀನಾದಲ್ಲಿ ಮತ್ತೊಂದು ವೈರಸ್ ಸ್ಫೋಟದ ಸುದ್ದಿ ಜನರ ಆತಂಕವನ್ನು ಹೆಚ್ಚಿಸಿದೆ. ಈ ಹಿಂದೆ ಕರೋನಾ ದಾಳಿ ಇಟ್ಟ ಐದು ವರ್ಷಗಳ ಬಳಿಕ ಚೀನಾದಲ್ಲಿ ಹ್ಯೂಮನ್ ಮೆಟಾಪ್ನ್ಯೂಮೊ ವೈರಸ್ (ಎಚ್ಎಂಪಿ) ಸ್ಫೋಟಗೊಂಡಿದೆ. ರೋಗಲಕ್ಷಣಗಳುಳ್ಳ ಸಾವಿರಾರು ಮಂದಿ ಆಸ್ಪತ್ರೆಗೆ ದಾಖಲಾಗುತ್ತಿದ್ದು ವೈರಸ್ ಅತಿ ವೇಗವಾಗಿ ವೈರಸ್ ಹರಡುತ್ತಿದೆ ಎನ್ನಲಾಗಿದೆ. ಈ ಹಿಂದೆ ಕೋವಿಡ್ ಸಂದರ್ಭದಲ್ಲಿ ಕೊರೊನಾ ಕುರಿತ ಮಾಹಿತಿಯನ್ನು ಬಚ್ಚಿಟ್ಟಂತೆ ಈ ಬಾರಿಯೂ ಚೀನಾ ಈ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಿಲ್ಲ. ಆದರೆ ಎಚ್ಎಂಪಿ ವೈರಸ್‌ಗೆ ಯಾರೂ ಆತಂಕ ಪಡಬೇಕಿಲ್ಲ ಎಂದಿದೆ. 2001ರಲ್ಲಿ ಮೊದಲ ಬಾರಿಗೆ ಈ ವೈರಾಣುವನ್ನು ಪತ್ತೆ ಮಾಡಲಾಗಿತ್ತು.ಚಿಕ್ಕ ಮಕ್ಕಳು, ವಯಸ್ಕರು ಮತ್ತು ದುರ್ಬಲ ರೋಗನಿರೋಧಕ ಶಕ್ತಿ ಹೊಂದಿರುವ ಜನರು ವಿಶೇಷವಾಗಿ ಈ ರೋಗಕ್ಕೆ ಬೇಗ ಗುರಿಯಾಗುತ್ತಾರೆ. ಹೊಸ ವೈರಾಣುವಿನಿಂದ ಪಾರಾಗಲು ಸ್ಕ್ರೀನಿಂಗ್, ಪತ್ತೆ ಮತ್ತು ಪ್ರತ್ಯೇಕತೆಯ ಸಿದ್ಧ ಕ್ರಮಗಳನ್ನು ಪಾಲಿಸಲು ಚೀನಾ ತನ್ನ ನಾಗರಿಕರಿಗೆ ಕರೆ ನೀಡಿದೆ. ಭಾರತದಲ್ಲಿ ಇದುವರೆಗೂ ಈ ವೈರಸ್ ಪತ್ತೆಯಾಗಿಲ್ಲ. ಆದರೆ ಈ ಸೋಂಕು ಹರಡದಂತೆ ಈಗಲೇ ಎಚ್ಚರಿಕೆ ವಹಿಸಬೇಕಿದೆ. ಭಾರತದ ಆರೋಗ್ಯ ವಿಭಾಗ ಯಾವುದೇ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿದೆ. ಚೀನಾದಲ್ಲಿ ಕಾಣಿಸಿಕೊಂಡಿರುವ ವೈರಸ್ ಮೇಲೆ ಭಾರತ ತೀವ್ರ ನಿಗಾವಹಿಸಲಿದೆ. ಈ ಕುರಿತು ಅಂತಾರಾಷ್ಟ್ರೀಯ ಆರೋಗ್ಯ ಏಜೆನ್ಸಿಗಳ ಜೊತೆ ಸಂಪರ್ಕದಲ್ಲಿದೆ. ವೈರಸ್ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ. ಹೀಗಾಗಿ ಜನರು ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಕೇಂದ್ರ ಆರೋಗ್ಯ ಇಲಾಖೆ ಮಹಾ ನಿರ್ದೇಶಕ ಅತುಲ್ ಗೋಯಲ್ ತಿಳಿಸಿದ್ದಾರೆ. ಚೀನಾದಲ್ಲಿ ಚಳಿಗಾಲದಲ್ಲಿ ಈ ರೀತಿಯ ಕೆಲ ವೈರಸ್‌ಗಳು ಆತಂಕ ಸೃಷ್ಟಿಸುವುದು ಸಾಮಾನ್ಯವಾಗಿದೆ. ಕಳೆದ 5 ವರ್ಷಗಳಲ್ಲಿ ಪ್ರತಿ ಚಳಿಗಾಲದಲ್ಲೂ ಕೆಲ ವೈರಸ್‌ಗಳು ಆತಂಕ ಸೃಷ್ಟಿಸಿವೆ. ಎಚ್ಎಂಪಿ ವೈರಸ್‌ನಿಂದ ಹುಟ್ಟಿಕೊಂಡಿರುವ ಸೋಂಕು ಕೂಡ ಶೀಘ್ರವೇ ನಿಯಂತ್ರಣಕ್ಕೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಆದರೆ ಕೋವಿಡ್ ಕಾಲದ ಅನುಭವದ ಆಧಾರದಲ್ಲಿ ಭಾರತ ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕಾಗಿದೆ. ಅಗತ್ಯ ಔಷಧಿಗಳ ದಾಸ್ತಾನು, ಆಕ್ಸಿಜನ್ ಕೊರತೆ ಆಗದಂತೆ ಈಗಲೇ ನೋಡಿಕೊಳ್ಳಬೇಕಿದೆ.

ಸೊಂಪಾದಕೀಯ

ಬಸ್ ಕರೋ!?

ಇತ್ತೀಚೆಗೆ ಹೆಂಡತಿಯರ ಕಿರುಕುಳದಿಂದ ಬೇಸತ್ತು ಹೈರಾಣಾಗಿ ಆತ್ಮಹತ್ಯೆಗೆ ಶರಣಾದ ಪುರುಷರ ಸಂಖ್ಯೆ ಹೆಚ್ಚುತ್ತಿದೆ. ಒಂದು ಕಡೆ ಹೀಗೆ ಗಂಡಸರ ಹೋಮ್ ಮಿನಿಸ್ಟರ್ ಎಂದೇ ಖ್ಯಾತರಾದ ಹೆಂಡತಿಯರಿಂದ ಪುರುಷರು ಶೋಷಣೆಗೆ ಒಳಗಾಗುತ್ತಿದ್ದರೆ, ಇನ್ನೊಂದೆಡೆ ರಾಜ್ಯ ಸರಕಾರದ ಸಾರಿಗೆ ಮಿನಿಸ್ಟರ್ ಕೂಡಾ ಪುರುಷರ ಶೋಷಣೆ ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ಯಾಕಂದರೆ ಗ್ಯಾರಂಟಿ ಯೋಜನೆಗಳ ಹಿಂದೆ ಬಿದ್ದಿರುವ ಕಾಂಗ್ರೆಸ್ ಸರಕಾರ, ಅದರ ಕಾರಣಕ್ಕೆ ರಾಜ್ಯದ ಬೊಕ್ಕಸ ಆರ್ಥಿಕವಾಗಿ ಹಿಂದೆ ಬಿದ್ದಿರೋದರಿಂದ ಪುರುಷರ ಹಿಂದೆ ಬಿದ್ದು ಅದನ್ನು ವಸೂಲು ಮಾಡುತ್ತಿದೆ. ರಾಜ್ಯದಲ್ಲಿ ಯಾವಾಗ ಗ್ಯಾರಂಟಿಗಳ ಆಧಾರದ ಮೇಲೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂತೋ ಆಗಿನಿಂದ ಇಂದಿನವರೆಗೂ ಮಹಿಳೆಯರ ದರ್ಬಾರ್ ಮತ್ತು ಪುರುಷರ ಬರ್ಬಾದ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹೆಚ್ಚಾಗಿ ಗಂಡಸರೇ ಕುಡಿಯುವ ಮದ್ಯದಿಂದ ಹಿಡಿದು ಎಲ್ಲ ವಸ್ತುಗಳ ಮತ್ತು ಸೇವೆಗಳ ದರಗಳನ್ನು ಹೆಚ್ಚಿಸಿ ಸರಕಾರ ಗ್ಯಾರಂಟಿಗಳಿಗೆ ದಾರಿ ಮಾಡಿಕೊಳ್ಳುತ್ತಿದೆ. ಈಗ ಬಸ್ ಚಾರ್ಜಿನ ಸರದಿ. ಹೆಣ್ಣುಮಕ್ಕಳಿಗೆ ಉಚಿತವಾಗಿ ಬಸ್ ಪ್ರಯಾಣ ಅಂತ ಆಫರ್ ಕೊಟ್ಟು, ಅದರ ಹಣವನ್ನೆಲ್ಲ ಗಂಡಸರಿಂದ ವಸೂಲಿ ಮಾಡುವ ಕೆಲಸಕ್ಕೆ ಸರಕಾರ ಇಳಿದಿದೆ. ಈಗ ಜನವರಿ 5ರಿಂದ ಬಸ್ ಪ್ರಯಾಣ ದರಗಳಲ್ಲಿ ಶೇಕಡಾ 15ರಷ್ಟು ಹೆಚ್ಚಳ ಆಗಲಿದೆ. ಸಾಮಾನ್ಯ ಬಿಎಂಟಿಸಿ ಬಸ್ ದರದಿಂದ ಹಿಡಿದು ಐಷಾರಾಮಿ ಬಸ್‌ಗಳ ದರವನ್ನೂ ಹೆಚ್ಚಿಸಲಾಗುತ್ತಿದೆ. ಆದರೆ ಬಸ್ ಪ್ರಯಾಣ ದರ ಹೆಚ್ಚಿಸಲು ಶಕ್ತಿ ಯೋಜನೆ ಒಂದೇ ಕಾರಣ ಅಲ್ಲ, ಡೀಸೆಲ್ ಮತ್ತು ಸಿಬ್ಬಂದಿ ವೆಚ್ಚ ಕೂಡಾ ಇದಕ್ಕೆ ಕಾರಣ ಅಂತ ಸಾರಿಗೆ ಸಚಿವರು ತಿಪ್ಪೆ ಸಾರಿಸಿದ್ದಾರೆ. ಈ ದರ ಹೆಚ್ಚಳದಿಂದ ನಾಲ್ಕು ಸಾರಿಗೆ ನಿಗಮಗಳಿಗೆ ನಿತ್ಯ 7.68 ಕೋಟಿ ರುಪಾಯಿ ಹೆಚ್ಚುವರಿ ಆದಾಯ ಸಂಗ್ರಹ ಆಗಲಿದೆಯಂತೆ. ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಪುರುಷರಿಗೆ ಬೇಕೆನಿಸಿದಾಗಲೆಲ್ಲ ಪ್ರವಾಸ ಹೋಗಲು ಸಾಧ್ಯವಾಗದೆ ಬಸ್ ಪ್ರಯಾಣ ಇನ್ನೂ ಹೆಚ್ಚಿನ ಪ್ರಯಾಸ ಆಗಲಿರುವುದಂತೂ ಖಂಡಿತ. ಈ ಬೆಲೆ ಏರಿಕೆ ನೋಡಿ, ಬಸ್‌ಗಳ ಒಳಗೆ ಬರೆಸಲಾಗಿರುವ 'ನಿಮ್ಮ ಪ್ರಯಾಣ ಸುಖಕರವಾಗಿರಲಿ' ಅನ್ನೋ ವಾಕ್ಯವನ್ನು ಅಳಿಸಬೇಕೆಂದು ಪುರುಷ ಪ್ರಯಾಣಿಕರ ಸಂಘ ಆಗ್ರಹಿಸಿದ ಸುದ್ದಿ ಬಂದರೆ ಅಚ್ಚರಿ ಏನಿಲ್ಲ.

ಸಂಪಾದಕರ ಸದ್ಯಶೋಧನೆ

ವಿಸಿಟಿಂಗ್ ಕಾರ್ಡ್ ಶಿಷ್ಟಾಚಾರ

ಸಾಮಾನ್ಯವಾಗಿ ನಾನು ಯಾರಿಗೂ ನನ್ನ ವಿಸಿಟಿಂಗ್ ಕಾರ್ಡ್ ಕೊಡುವುದಿಲ್ಲ. ಯಾರಾದರೂ ನನ್ನ ಮೊಬೈಲ್ ನಂಬರ್ ಬಯಸಿದರೆ ಕೊಡುತ್ತೇನೆ. ನನ್ನ ಪತ್ರಿಕೆಯೇ ನನ್ನ ವಿಸಿಟಿಂಗ್ ಕಾರ್ಡ್. ಆದರೆ ಜಪಾನಿಗೆ ಹೋದಾಗ, ವಿಸಿಟಿಂಗ್ ಕಾರ್ಡ್ ತರಬೇಕಿತ್ತು ಎಂದು ಮೊದಲ ಬಾರಿಗೆ ನನಗೆ ಅನಿಸಿದ್ದು ಸುಳ್ಳಲ್ಲ. ಅಷ್ಟು ಸಾಲದೆಂಬಂತೆ, 'ಈ ದೇಶದಲ್ಲಿ ಮೊದಲ ಬಾರಿಗೆ ಭೇಟಿಯಾದವರು ವಿಸಿಟಿಂಗ್ ಕಾರ್ಡ್ ಕೊಟ್ಟು ಪರಿಚಯಿಸಿಕೊಳ್ಳುವುದು ಪದ್ಧತಿ' ಎಂದು ಜಪಾನಿನಲ್ಲಿ ಸುಮಾರು ಹದಿನೈದು ವರ್ಷಗಳಿಂದಿರುವ ಸ್ನೇಹಿತರೊಬ್ಬರು ಹೇಳಿದಾಗ ನನ್ನಲ್ಲಿ ಸಣ್ಣ ಕೊರತೆ ಕಾಡಲಾರಂಭಿಸಿತು. ಕೊನೆಗೆ ಗೊತ್ತಾಗಿದ್ದೇನೆಂದರೆ, ಜಪಾನಿನಲ್ಲಿ ವಿಸಿಟಿಂಗ್ ಕಾರ್ಡ್ (ಮೇಯಿಶಿ) ಕೊಡುವುದು ಅಥವಾ ಸ್ವೀಕರಿಸುವುದು ಅತ್ಯಂತ ಗಂಭೀರ ಮತ್ತು ಸಂಸ್ಕೃತಿಯೊಂದಿಗೆ ಸಂಬಂಧಿಸಿದ ಪ್ರಕ್ರಿಯೆ. ಇದು ಬಿಸಿನೆಸ್ ಸಂಸ್ಕೃತಿಯ ಮಹತ್ವದ ಭಾಗವಾಗಿದೆ. ವಿಸಿಟಿಂಗ್ ಕಾರ್ಡ್ ವಿನಿಮಯ ಪ್ರಕ್ರಿಯೆಯನ್ನು ಮೇಯಿಶಿ ಶೋಕಾಯ್ (Meishi Shokai) ಎಂದು ಕರೆಯತ್ತಾರೆ. ಇದನ್ನು ಗೌರವ ಮತ್ತು ಸರಿಯಾದ ಶಿಷ್ಟಾಚಾರದೊಂದಿಗೆ ಕೈಗೊಳ್ಳಬೇಕು. ಅವರು ವಿಸಿಟಿಂಗ್ ಕಾರ್ಡ್‌ಗಳ ಗುಣಮಟ್ಟದ ಬಗ್ಗೆ ಗಮನಕೊಡುತ್ತಾರೆ. ಅದರ ಕಾಗದದ ಗುಣಮಟ್ಟದ ಬಗ್ಗೆಯೂ ನಿಗಾ ವಹಿಸುತ್ತಾರೆ. ಅವರ ಪಾಲಿಗೆ ವಿಸಿಟಿಂಗ್ ಕಾರ್ಡ್‌ಗಳು ವ್ಯಕ್ತಿಯ ಉದ್ಯೋಗ ಮತ್ತು ಸಂಸ್ಥೆಯ ಪ್ರಾತಿನಿಧ್ಯವನ್ನು ತೋರಿಸುವ ಮಹತ್ವದ ಪ್ರಾತಿನಿಧಿಕ ವಸ್ತು. ವಿಸಿಟಿಂಗ್ ಕಾರ್ಡ್‌ಗಳು ಎಲ್ಲಿಯೂ ಕೊಂಚವೂ ಮಡಚಿರಬಾರದು, ಸುಕ್ಕಾಗಿರಬಾರದು. ಶುದ್ಧ, ಗರಿಗರಿ, ಉತ್ತಮ ಗುಣಮಟ್ಟದ ಕಾಗದ ಮತ್ತು ಸ್ಪಷ್ಟ ಮುದ್ರಣ ಹೊಂದಿರಬೇಕು. ಅದನ್ನು ಸೂಕ್ತವಾದ ಪಾಕೀಟು ಅಥವಾ ಪೌಚಿನಲ್ಲಿ ಇಟ್ಟುಕೊಂಡಿರಬೇಕು. ಪ್ಯಾಂಟಿನ ಹಿಂಭಾಗದ ಜೇಬಿನಿಂದ ಕಾರ್ಡ್ ತೆಗೆದುಕೊಡುವುದು ಒಳ್ಳೆಯ ಅಭ್ಯಾಸವಲ್ಲ. ಸಾಮಾನ್ಯವಾಗಿ ಮೇಯಿಶಿ ವಿನಿಮಯವನ್ನು ಮೊದಲ ಪರಿಚಯದಲ್ಲಿ ನೀಡುವುದು ವಾಡಿಕೆ. ಕಾರ್ಡ್ ಅನ್ನು ಎರಡೂ ಕೈಗಳಲ್ಲಿ ಸರಿಯಾಗಿ ಹಿಡಿದು ಸೌಜನ್ಯದಿಂದ, ಉಡುಗೊರೆಯಂತೆ ನೀಡಬೇಕು. ಹೆಸರು ಮತ್ತು ಸಂಸ್ಥೆಯ ಹೆಸರು ಕಾಣುವಂತೆ ಅದನ್ನು ಹಿಡಿದಿರಬೇಕು. ಈ ಸಂದರ್ಭದಲ್ಲಿ ಎದುರು ಇರುವ ವ್ಯಕ್ತಿಯೂ ಕಾರ್ಡ್ ನೀಡುವುದು ಸಂಪ್ರದಾಯ. ಆಗ ಎದುರಿನ ವ್ಯಕ್ತಿಯ ಕಾರ್ಡ್ ಅನ್ನು ಕೂಡಾ ಎರಡೂ ಕೈಗಳಿಂದ ಸ್ವೀಕರಿಸಬೇಕು. ಅದನ್ನು ಸ್ವೀಕರಿಸಿದ ಬಳಿಕ ಕಾರ್ಡ್‌ನಲ್ಲಿರುವ ಮಾಹಿತಿಯನ್ನು ತಕ್ಷಣ ಓದಬೇಕು. ಓದದೇ ಜೇಬಿನಲ್ಲಿಟ್ಟುಕೊಳ್ಳಬಾರದು. ಇದು ವ್ಯಕ್ತಿಯ ಬಗ್ಗೆ ನೀವು ಆಸಕ್ತರಾಗಿರುವಿರಿ ಮತ್ತು ಗೌರವ ನೀಡುತ್ತಿರುವಿರಿ ಎಂಬುದನ್ನು ಸೂಚಿಸುತ್ತದೆ. ನೀವು ಹೆಚ್ಚು ಹಿರಿಯ ವ್ಯಕ್ತಿಯೊಂದಿಗೆ ಮಾತನಾಡುತ್ತಿದ್ದರೆ, ಮೊದಲು ಹಿರಿಯ ವ್ಯಕ್ತಿಯ ಕಾರ್ಡ್ ಅನ್ನು ಸ್ವೀಕರಿಸಬೇಕು. ಶ್ರೇಯಾಂಕದ ಪ್ರಕಾರ ಕಾರ್ಡ್‌ಗಳನ್ನು ವಿನಿಮಯ ಮಾಡಿಕೊಳ್ಳುವುದು ಶಿಷ್ಟಾಚಾರ. ಕಾರ್ಡ್‌ನ್ನು ನೀಡುವಾಗ ಅಥವಾ ಸ್ವೀಕರಿಸುವಾಗ ತಲೆಯನ್ನು ಮತ್ತು ಸೊಂಟವನ್ನು ತುಸು ಬಗ್ಗಿಸಿ ಎದುರಿನವರಿಗೆ ಗೌರವ ಸೂಚಿಸಬೇಕು. ಆಗ ಮಂದಸ್ಮಿತವಾದನರಾಗಿ, ಆತ್ಮೀಯತೆಯನ್ನು ವ್ಯಕ್ತಪಡಿಸಬೇಕು. ಮೀಟಿಂಗ್ ಸಂದರ್ಭದಲ್ಲಿ ಕಾರ್ಡನ್ನು ಸ್ವೀಕರಿಸಿದ ನಂತರ ಅವುಗಳನ್ನು ಕಾನ್ಫರೆನ್ಸ್ ಟೇಬಲ್‌ನ ಮೇಲೆ ಇಟ್ಟಿರಬೇಕು ಇದರಿಂದ ಯಾವ ಕಾರ್ಡ್ ಯಾರದ್ದು ಎಂಬುದು ಸ್ಪಷ್ಟವಾಗುತ್ತದೆ. ಕಾರ್ಡ್ ನೀಡುವಾಗ ಅಥವಾ ಸ್ವೀಕರಿಸುವಾಗ ನಿರ್ಲಕ್ಷ್ಯದಿಂದ ವರ್ತಿಸಬಾರದು. ಕಾರ್ಡ್‌ನ್ನು ಒಂದೇ ಕೈಯಿಂದ ಕೊಡುವಂತಿಲ್ಲ ಅಥವಾ ಒದ್ದೆ ಕೈಯಿಂದ ಸ್ವೀಕರಿಸುವಂತಿಲ್ಲ. ಜಪಾನಿನ ವಿಸಿಟಿಂಗ್ ಕಾರ್ಡ್ ಸಂಸ್ಕೃತಿ ಕೇವಲ ವ್ಯಾವಹಾರಿಕ ನಡೆವಳಿಕೆಯಲ್ಲ, ಇದು ಜನರ ನಡುವಿನ ಸಂಬಂಧ ಮತ್ತು ಪರಸ್ಪರ ಗೌರವವನ್ನು ಬೆಳೆಸುವ ಮಾರ್ಗವಾಗಿದೆ. ಶ್ರದ್ಧೆ, ಶಿಷ್ಟತೆ ಮತ್ತು ಜವಾಬ್ದಾರಿ ಅಲ್ಲಿನ ಬಿಸಿನೆಸ್ ಸಂಸ್ಕೃತಿಯ ಆಧಾರಸ್ತಂಭಗಳು ಎಂಬುದು ಗಮನಾರ್ಹ. ವಿಸಿಟಿಂಗ್ ಕಾರ್ಡ್ ನೀಡಲು ಅಥವಾ ಸ್ವೀಕರಿಸಲು ಇಷ್ಟೆಲ್ಲ ಬಡಿವಾರವಾ ಎನಿಸಬಹುದು, ಆದರೆ ಅವರು ಈ ವಿಷಯದಲ್ಲಿ ಉಳಿದವರಿಗಿಂತ ತುಸು ಭಿನ್ನ ಮತ್ತು ಕಟ್ಟುನಿಟ್ಟು.

1991ರಲ್ಲಿ ಭಾರತ ದಿವಾಳಿಯಾದದ್ದು ಯಾಕೆ?

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

1991 ರಲ್ಲಿ ಭಾರತದಲ್ಲಿ ಉಂಟಾಗಿದ್ದಂತಹ ಆರ್ಥಿಕ ಬಿಕ್ಕಟ್ಟನ್ನು ಸಮರ್ಥವಾಗಲಿ ಎದುರಿಸಲು ನೂತನ ಆರ್ಥಿಕ ನೀತಿಗಳನ್ನು ಜಾರಿಗೆ ತಂದದ್ದು ಅಂದಿನ ವಿತ್ತ ಸಚಿವ ಮನಮೋಹನ್ ಸಿಂಗ್ ಎಂಬ ವಿಷಯ ಎಲ್ಲರಿಗೂ ತಿಳಿದಿದೆ. ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಆರ್ಥಿಕತೆಯನ್ನು ಜಗತ್ತಿನ ಮುಂದೆ ತೆರೆದುಕೊಳ್ಳುವಂತೆ ಮಾಡಿದ್ದರು. ಸರಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗೀಕರಣ ಮಾಡಲಾಯಿತು, ವಿದೇಶಿ ನೇರ ಬಂಡವಾಳ ಭಾರತಕ್ಕೆ ಹರಿದು ಬರಲು ಪ್ರಾರಂಭವಾಯಿತು. ನಂತರ ಭಾರತ ಬೆಳೆದದ್ದು ಇತಿಹಾಸ, ಆದರೆ 1991 ರಲ್ಲಿ ದೇಶದಲ್ಲಿ ಉಂಟಾದ ಆರ್ಥಿಕ ಬಿಕ್ಕಟ್ಟಿಗೆ ಕಾರಣ ಯಾರು ಎಂಬ ಚರ್ಚೆ ಆಗುವುದೇ ಇಲ್ಲ, ಸ್ವಾತಂತ್ರ್ಯ ನಂತರ 40 ವರ್ಷಗಳ ಕಾಲ ಕೇಂದ್ರ ಮತ್ತು ದೇಶದ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರ ಆಡಳಿತ ನಡೆಸಿತ್ತು. ಸುಮಾರು ನಾಲ್ಕು ದಶಕಗಳ ಕಾಲ ಆಡಳಿತ ನಡೆಸಿ 1991 ರಲ್ಲಿ ದೇಶವನ್ನು ದಿವಾಳಿಯಾಗುವ ಪರಿಸ್ಥಿತಿಗೆ ತಂದಿದ್ದರು. ಸ್ವಾತಂತ್ರ ನಂತರದ ಸುವರ್ಣ ಯುಗದಲ್ಲಿ ದೂರದೃಷ್ಟಿಯ ಚಿಂತನೆಗಳಿಲ್ಲದ ಆಡಳಿತವನ್ನು ಕಾಂಗ್ರೆಸ್ ನಡೆಸುತ್ತಿತ್ತು. ದೇಶದ ಜೊತೆಗೆ ಕಾಂಗ್ರೆಸ್ ಆಡಳಿತವಿದ್ದ ರಾಜ್ಯಗಳಿಗೂ ಸರಿಯಾದ ಸೂಚನೆಗಳಿಲ್ಲದೆ ಹಲವು ರಾಜ್ಯಗಳೂ ಸಹ ದೂರದೃಷ್ಟಿಯ ಅಭಿವೃದ್ಧಿ ಪೂರಕ ನೀತಿಗಳನ್ನು ರೂಪಿಸುವಲ್ಲಿ ವಿಫಲವಾಗಿದ್ದವು. ಕಾಂಗ್ರೆಸ್ ಪಕ್ಷಕ್ಕೆ ತನ್ನ ರಾಜಕೀಯ ಎದುರಾಳಿಯನ್ನು ಅಭಿವೃದ್ಧಿಯ ವಿಷಯಗಳನ್ನು ಮುಂದಿಟ್ಟುಕೊಂಡು ಸೋಲಿಸಲು ಸಾಧ್ಯವಿಲ್ಲ. ಸತತ ಸೋಲುಗಳಿಂದ ಕೆಂಗೆಟ್ಟಿದ್ದ ಪಕ್ಷಕ್ಕೆ ಮತ್ತದೇ ಇಂದಿರಾ ಗಾಂಧಿಯ 1971 ರ 'ಗರೀಬಿ ಹಟಾವೋ' ತಂತ್ರವನ್ನು ಮುಂದಿಟ್ಟುಕೊಂಡು ಜನರಿಗೆ ಉಚಿತ ಘೋಷಣೆಗಳ ಆಮಿಷಗಳನ್ನೊಡ್ಡಿ 2024 ರ ಚುನಾವಣೆಗೆ ಹೊರಟಿತ್ತು. 1947 ರಿಂದ 1991 ರ ನಡುವೆ ದೇಶದಲ್ಲಿ ಲೈಸನ್ಸ್ ರಾಜ್ ಜಾರಿಯಲ್ಲಿತ್ತು, ಒಂದು ಸಣ್ಣ ಕಾರ್ಖಾನೆ ಸ್ಥಾಪಿಸುವುದು ಕಷ್ಟಕರವಾಗಿತ್ತು. ವಿದೇಶಿ ಬಂಡವಾಳ ಭಾರತಕ್ಕೆ ಹರಿದು ಬರಬೇಕಾದರೆ ನೂರಾರು ಷರತ್ತುಗಳಿದ್ದವು, ವಿದೇಶದಲ್ಲಿ ಭಾರತೀಯರು ವಿಧಿವಶರಾದರೆ ಅಲ್ಲಿಂದ ಅವರ ಮೃತದೇಹವನ್ನು ಭಾರತಕ್ಕೆ ತರಲು ವಾರಗಟ್ಟಲೆ ಸಮಯ ಬೇಕಾಗುತ್ತಿತ್ತು. ಭಾರತದ ಅಭಿವೃದ್ಧಿಯ ನೀತಿಯನ್ನು ಪಂಜರದೊಳಗಿನ ಗಿಳಿಯಂತೆ ಕೂಡಿಹಾಕಲಾಗಿತ್ತು. ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿಯವರ ಆಡಳಿತದಲ್ಲಿ ದೂರದೃಷ್ಟಿಯ ಯೋಜನೆಗಳೇ ಕಾಣಲಿಲ್ಲ. ಕೇವಲ ಮತ ಬ್ಯಾಂಕ್ ಓಲೈಕೆಯ ಯೋಜನೆಗಳನ್ನು ಮುನ್ನೆಲೆಗೆ ತಂದು ದೇಶವನ್ನು ಆಳುತ್ತಿದ್ದರು. 1991 ರಲ್ಲಿ ಮನಮೋಹನ್ ಸಿಂಗ್ ವಿತ್ತಸಚಿವರಾಗುವ ಮೊದಲು, ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿದ್ದಾಗ ನೀಡಿದ್ದ ಸಲಹೆಗಳನ್ನು ಇಂದಿರಾ ಗಾಂಧಿ ಪರಿಗಣಿಸಿರಲಿಲ್ಲ. 1986 ರಲ್ಲಿ ಮನ್‌ಮೋಹನ್ ಸಿಂಗ್ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು, ಅವರು ಅಂದು ನೀಡಿದ್ದ ಸಲಹೆಗಳನ್ನು ರಾಜೀವ್ ಗಾಂಧಿ ಸ್ವೀಕರಿಸಿರಲಿಲ್ಲ. ಮನಮೋಹನ್ ಸಿಂಗ್ ವಿಧಿವಶರಾದ ನಂತರ ಅವರ ಬಗ್ಗೆ ಒಳ್ಳೆಯ ಮಾತುಗಳನ್ನಾಡುವ ಕಾಂಗ್ರೆಸ್ ಪಕ್ಷ, ಅವರಿಗೆ ಮಾಡಿದ್ದ ಅವಮಾನದ ದೊಡ್ಡ ಪಟ್ಟಿ ಇದೆ. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಜಾರಿಗೆ ತಂದಿದ್ದ ಸುಗ್ರೀವಾಜ್ಞೆಯನ್ನು ರಾಹುಲ್ ಗಾಂಧಿ ಸಂಸತ್ತಿನಲ್ಲಿ ಹರಿದುಹಾಕುವ ಮೂಲಕ ಅವರಿಗೆ ಅವಮಾನ ಮಾಡಿದ್ದರು.

ನೆಹರು ಕುಟುಂಬ ಸುಮಾರು ನಾಲ್ಕು ದಶಕಗಳ ಕಾಲ ದೇಶದ ಆಡಳಿತ ನಡೆಸಿ, ಭಾರತವನ್ನು 1991 ರಲ್ಲಿ ದಿವಾಳಿ ಹಂತಕ್ಕೆ ಕೊಂಡೊಯ್ದಾಗ ಅವರ ಕುಟುಂಬದ ಹೊರಗಿನವರ ಸಾರಥ್ಯ ಕಾಂಗ್ರೆಸ್ಸಿಗೆ ಬೇಕಿತ್ತು. ಆಗ ಅವರ ಕಣ್ಣಿಗೆ ಬಿದ್ದಿದ್ದು ಪಿ.ವಿ.ನರಸಿಂಹ ರಾವ್, ಅವರನ್ನು ರಾತ್ರೋ ರಾತ್ರಿ ಪ್ರಧಾನಿಯನ್ನಾಗಿಸುವ ನಿರ್ಧಾರಕ್ಕೆ ಕಾಂಗ್ರೆಸ್ ಬಂದಿತ್ತು. ನರಸಿಂಹ ರಾವ್ ಪ್ರಧಾನಿಯಾದಾಗ ಅವರ ಮುಂದೆ ದಿವಾಳಿಯಾಗಿದ್ದ ಭಾರತದ ಆರ್ಥಿಕತೆ ಬಿಟ್ಟು ಬೇರೇನೂ ಕಾಣುತ್ತಿರಲಿಲ್ಲ, ಆಗ ಅವರ ಕಣ್ಣಿಗೆ ಬಿದ್ದದ್ದು ಮನಮೋಹನ್ ಸಿಂಗ್. ತಮ್ಮ ಆಡಳಿತದಲ್ಲಿ ವಿತ್ತಸಚಿವರಾಗಿದ್ದ ಮನಮೋಹನ್ ಸಿಂಗ್ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದು ಪಿ.ವಿ.ನರಸಿಂಹ ರಾವ್. 1991 ರಲ್ಲಿ ಭಾರತದ ಆರ್ಥಿಕ ವ್ಯವಸ್ಥೆ ಯಾವ ಮಟ್ಟಕ್ಕೆ ಹದಗೆಟ್ಟಿತ್ತೆಂದರೆ, ದೇಶದ ವಿದೇಶಿ ವಿನಿಮಯ ಮೀಸಲು ಕೇವಲ ಎರಡು ವಾರಗಳಿಗೆ ಸಾಕಾಗುವಷ್ಟಿತ್ತು. ಪಂಜರದೊಳಗಿನ ಗಿಳಿಯಂತೆ ಭಾರತದ ಆರ್ಥಿಕತೆಯನ್ನು ಒಂದೆಡೆ ಬಂಧಿಸಿ ಹೊರಜಗತ್ತಿನ ಜೊತೆಗೆ ಅನಾಯಾಸವಾಗಿ ವ್ಯಾಪಾರ ವಿನಿಮಯ ಮಾಡುವ ನೀತಿಗಳ ಬಗ್ಗೆ ಚಿಂತಿಸದೇ, ಸುಮಾರು 40 ವರ್ಷಗಳ ಕಾಲ ಕಾಂಗ್ರೆಸ್ ಆಡಳಿತ ನಡೆಸಿತ್ತು. 40 ವರ್ಷಗಳ ಆಡಳಿತಾವಧಿಯಲ್ಲಿ ದೇಶದ ಮೂಲಭೂತ ಸೌಕರ್ಯಗಳ ಬಗ್ಗೆ ಗಮನ ಹರಿಸಿರಲಿಲ್ಲ, ನಗರ ಮತ್ತು ಹಳ್ಳಿಯ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇರಲಿಲ್ಲ. ಒಂದು ವರದಿಯ ಪ್ರಕಾರ 1997 ರ ಹೊತ್ತಿಗೆ ಭಾರತದಲ್ಲಿ ಕೇವಲ 337 ಕಿಲೋಮೀಟರು ಚತುಷ್ಪಥ ಹೆದ್ದಾರಿಗಳಿದ್ದವಂತೆ. 1971 ರಲ್ಲಿ ಚುನಾವಣೆ ಎದುರಿಸಿದ ಇಂದಿರಾ ಗಾಂಧಿ ಗರೀಬಿ ಹಟಾವೋ ಎನ್ನುವ ಮೂಲಕ ಜನರಿಂದ ಮತ ಕೇಳಿದ್ದರು. ಅಂದರೆ ತಮ್ಮ ತಂದೆ ನೆಹರು ಸುಮಾರು 20 ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿದ್ದರೂ, ಬಡತನ ನಿರ್ಮೂಲನೆ ಮಾಡಲು ವಿಫಲರಾಗಿದ್ದರೆಂಬುದನ್ನು ಒಪ್ಪಿಕೊಂಡಂತಾಗಿತ್ತು. ತದನಂತರ ಸರ್ವಾಧಿಕಾರಿ ದೋರಣೆಯಿಂದ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಲಾಗಿತ್ತು, ಜನರ ನೆನಪು ಕ್ಷಣಿಕವೆಂಬಂತೆ ಮತ್ತೊಮ್ಮೆ ಇಂದಿರಾ ಗಾಂಧಿ ಚುನಾಯಿತರಾಗಿ ದೇಶದ ಚುಕ್ಕಾಣಿ ಹಿಡಿದರು. ಮಿತಿಮೀರಿದ ಭ್ರಷ್ಟಾಚಾರ, ಅತಿಯಾದ ಮುಸ್ಲಾಮರ ಓಲೈಕೆ, ಭಾರತದ ಭವಿಷ್ಯದ ಚಿಂತನೆಯಿಲ್ಲದ ನೀತಿಗಳು, ಬಡವರನ್ನು ಬಡವರನ್ನಾಗಿಸಿ ಆಳುವ ನೀತಿಗಳು, ಅಂತಾರಾಷ್ಟ್ರೀಯ ಮಟ್ಟದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದದ್ದು, ಭಾರತದ ಮೇಲಿನ ರಷ್ಯಾ ಅಮೆರಿಕ ನಡುವಣ ಶೀತಲ ಸಮರದ ಪರಿಣಾಮವನ್ನು ಎದುರಿಸುವಲ್ಲಿ ವಿಫಲರಾದದ್ದು, ಜಾಗತಿಕ ಮಟ್ಟದಲ್ಲಿ ಭಾರತ ವ್ಯವಹರಿಸಲು ಇದ್ದಂತಹ ನಿರ್ಬಂಧಗಳು, ಮತಗಳಿಕೆಯನ್ನೇ ಗುರಿಯನ್ನಾಗಿಸಿ ಘೋಷಿಸಿದ್ದ ಯೋಜನೆಗಳು, ಹಲವು ತಪ್ಪುಗಳ ಪರಿಣಾಮ ಭಾರತದ ಆರ್ಥಿಕತೆಯನ್ನು 1991ರ ಹೊತ್ತಿಗೆ ಹದಗೆಡಿಸಿತ್ತು.

ಬಂಡವಾಳಶಾಹಿವಾದವಿಲ್ಲದೆ ಸಮಾಜವಾದವಿಲ್ಲವೆಂಬ ಸತ್ಯವನ್ನು ಅರಿಯಬೇಕು. ವೆನೆಜುಲಾ ದೇಶ ಜಗತ್ತಿನಲ್ಲಿ ಅತೀ ಹೆಚ್ಚು ಕಚ್ಚಾ ತೈಲ ನಿಕ್ಷೇಪ ಹೊಂದಿದ್ದ ಶ್ರೀಮಂತ ರಾಷ್ಟ್ರ. ತೈಲ ಮಾರಾಟದಿಂದ ಬರುತ್ತಿದ್ದಂತಹ ಹಣವನ್ನು ತನ್ನ ಪ್ರಜೆಗಳಿಗೆ ಬೇಕಾ ಬಿಟ್ಟಿ ಹಂಚಿ ಉಚಿತ ಘೋಷಣೆಗಳನ್ನು ಅನುಷ್ಠಾನ ಮಾಡಿ, ಕೊನೆಗೆ ದಿವಾಳಿ ಆಗಿದೆ. ಒಂದು ಕೆಜಿ ತರಕಾರಿ ತರಲು ಒಂದು ಮೂಟೆ ಹಣವನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಬೇಕಾದಂತಹ ಪರಿಸ್ಥಿತಿ ಅಲ್ಲಿನ ಜನರಿಗೆ ಎದುರಾಗಿತ್ತು. ಕೆಲಸವಿಲ್ಲದೆ ರಸ್ತೆಗಳಲ್ಲಿ ಭಿಕ್ಷೆ ಬೇಡುವವರ ಸಂಖ್ಯೆ ಹೆಚ್ಚಾಗಿದೆ. ದರೋಡೆ, ಕಳ್ಳತನ ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಆಫ್ರಿಕಾದ ಜಿಂಬಾಬ್ವೆಯಲ್ಲಿ ಹಣದುಬ್ಬರ ದರ ಶೇ. 1,00,000ರಷ್ಟು ದಾಟಿತ್ತು, ಇಂದಿಗೂ ಆ ದೇಶ ಚೇತರಿಸಿಕೊಳ್ಳಲಾಗಲಿಲ್ಲ. ಯೂರೋಪಿನ ಗ್ರೀಸ್ ದೇಶ ಹಲವು ಉಚಿತ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರ ಪರಿಣಾಮ ಎರಡು ಬಾರಿ ದಿವಾಳಿಯಾಗಿತ್ತು. 35 ವರ್ಷದ ಯುವಕರು ಕೆಲಸಕ್ಕೆ ಹೋಗದೆ, ಸರಕಾರ ನೀಡುವ ಪಿಂಚಣಿಯನ್ನು ನಂಬಿಕೊಂಡು ಮನೆಯಲ್ಲಿ ಕುಳಿತಿದ್ದರು. ಐರೋಪ್ಯ ಒಕ್ಕೂಟದ ಇತರ ದೇಶಗಳು ಗ್ರೀಸ್ ದೇಶಕ್ಕೆ ಸಹಾಯ ಮಾಡಿದ್ದರ ಸಲುವಾಗಿ ಬಚಾವಾಗಿತ್ತು. ಇತ್ತೀಚಿನ ಶ್ರೀಲಂಕಾ ದೇಶದ ಪರಿಸ್ಥಿತಿ ಕಣ್ಣಮುಂದಿದೆ, ಜನರಿಗೆ ಒಂದು ಲೀಟರ್ ಪೆಟ್ರೋಲ್ ಸಿಗುತ್ತಿರಲಿಲ್ಲ, ಶತ್ರು ದೇಶ ಪಾಕಿಸ್ತಾನದಲ್ಲಿ ಒಂದು ಕೆ.ಜಿ.ಅಕ್ಕಿ 160 ರುಪಾಯಿಗೆ ತಲುಪಿದೆ.

1985 – 1990 ರ ಪಂಚವಾರ್ಷಿಕ ಯೋಜನೆಯ ಬಗ್ಗೆ ಚರ್ಚೆ ನಡೆಯುತ್ತಿದ್ದಂತಹ ಸಂದರ್ಭದಲ್ಲಿ ರಾಜೀವ್ ಗಾಂಧಿ ಪ್ರಧಾನಮಂತ್ರಿಯಾಗಿದ್ದರು ಮತ್ತು ಮನಮೋಹನ್ ಸಿಂಗ್ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು. ರಾಜೀವ್ ಗಾಂಧಿ ಯೋಜನಾ ಆಯೋಗದ ಸಭೆಯಲ್ಲಿ ಕೇವಲ ನಗರ ಪ್ರದೇಶಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾತ್ರ ಚರ್ಚಿಸುತ್ತಿದ್ದರು. ಸಭೆ ಮುಗಿದ ನಂತರ ಮನಮೋಹನ್ ಸಿಂಗ್ ಪ್ರಧಾನಿಗಳಿಗೆ ಭಾರತದ ಹಳ್ಳಿ ಪ್ರದೇಶಗಳನ್ನೂ ಸೇರಿಸಿಕೊಂಡು, ಎಲ್ಲ ಪ್ರದೇಶಗಳಿಗೂ ಸೀಮಿತವಾದ ಯೋಜನೆಗಳನ್ನು ರೂಪಿಸುವ ಅಗತ್ಯತೆ ಇದೆ ಯೆಂಬುದನ್ನು ಮನವರಿಕೆ ಮಾಡಿಕೊಟ್ಟರು. ಆದರೆ ಮುಂದೆ ನಡೆದ ಎರಡನೇ ಸಭೆಯಲ್ಲಿ ರಾಜೀವ್ ಗಾಂಧಿ ಅವರು ಸಿಂಗ್ ಮಾತನ್ನು ಕೇಳಲಿಲ್ಲ, ಬದಲಿಗೆ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದರು. ನಂತರ ಪತ್ರಕರ್ತರ ಬಳಿ ಮಾತನಾಡುವಾಗ ರಾಜೀವ್ ಗಾಂಧಿಯವರು ಯೋಜನಾ ಆಯೋಗದ ಇಡೀ ತಂಡವನ್ನೇ ಬಂಚ್ ಆಫ್ ಜೋಕರ್ಸ್ ಎಂದು ಕರೆದಿದ್ದರು. ಮನಮೋಹನ್ ಸಿಂಗ್ ಅವರಿಗೆ ತಮ್ಮ ವೃತ್ತಿ ಜೀವನದಲ್ಲಿ ಆದಂತಹ ದೊಡ್ಡ ಅವಮಾನ ಇದಾಗಿತ್ತು, ತಮಗೆ ಅವಮಾನವಾದರೂ ಅದೇ ಕುಟುಂಬದ ಜೊತೆ ತಮ್ಮ ರಾಜಕೀಯ ಪಯಣವನ್ನು ಮುಂದುವರೆಸಿದ್ದರು. ಇಂದಿರಾ ಗಾಂಧಿಯವರ ಆಡಳಿತದಲ್ಲಿ ಮನಮೋಹನ್ ಸಿಂಗ್ ಅನೇಕ ಹುದ್ದೆಗಳನ್ನು ಅಲಂಕರಿಸಿದ್ದರು, ಇಂದಿರಾ ಗಾಂಧಿಯವರಿಗೆ ತಮ್ಮ ಮಾತಿಗೆ 'ಹೂಂ' ಎನ್ನುವವರು ಮಾತ್ರ ಇಷ್ಟವಾಗುತ್ತಿದ್ದರು. ತಮ್ಮ ಸುತ್ತಮುತ್ತಲೂ ಹೊಗಳು ಭಟರನ್ನೇ ನೇಮಿಸಿಕೊಂಡಿದ್ದ ಇಂದಿರಾಗಾಂಧಿಯವರಿಗೆ ಮೂರನೆಯವರು ನೀಡುತ್ತಿದ್ದ ಸಲಹೆಗಳು ಇಷ್ಟವಾಗುತ್ತಿರಲಿಲ್ಲ. ಅಧಿಕಾರದ ಹಪಹಪಿತನದಿಂದ ಸರ್ವಾಧಿಕಾರಿಯಾಗಿ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಾಗ, ಅವರ ಮನಸ್ಥಿತಿಯ ಅನಾವರಣವಾಗಿತ್ತು. 1984 ರಲ್ಲಿ ಪಂಜಾಬಿನಲ್ಲಿ ನಡೆದಿದ್ದ ಸಿಖ್ಖರ ಮಾರಣಹೋಮದಲ್ಲಿ, ಸಿಖ್ಖರು ಕಾಂಗ್ರೆಸ್ಸಿನ ವಿರುದ್ಧ ಆಕ್ರೋಶಗೊಂಡಿದ್ದರು. ಅವರ ಆಕ್ರೋಶವನ್ನು ತಣಿಸಲು ಮನಮೋಹನ್ ಸಿಂಗ್ ಅವರನ್ನು ಕಾಂಗ್ರೆಸ್ ದೇಶದ ಪ್ರಧಾನಮಂತ್ರಿಯನ್ನಾಗಿ ಮಾಡಿತ್ತು.

1991 ರಲ್ಲಿ ಉಂಟಾದಂತಹ ಆರ್ಥಿಕ ಕ್ರಾಂತಿಯ ಬಗ್ಗೆ ಮಾತ್ರ ಕಾಂಗ್ರೆಸ್ ತನ್ನ ಬೆನ್ನು ತಟ್ಟಿಕೊಳ್ಳುತ್ತದೆ, ಆದರೆ 1947 ರಿಂದ 1991 ರ ವರೆಗಿನ ನಾಲ್ಕು ದಶಕಗಳ ಕಾಲ ನೆಹರು ಕುಟುಂಬ ಭಾರತವನ್ನು ದಿವಾಳಿ ಮಾಡಿದ ಇತಿಹಾಸವನ್ನು ಮುಚ್ಚಿಡುತ್ತದೆ. ಮನಮೋಹನ್ ಸಿಂಗ್ ಅವರ ಸಲಹೆಗಳನ್ನು ನೆಹರು ಕುಟುಂಬಸ್ಥರು ಕೇಳಿರಲಿಲ್ಲ, ಪಿ.ವಿ. ನರಸಿಂಹರಾವ್ ಪ್ರಧಾನಿಯಾದ ಬಳಿಕ ಮಾತ್ರ ಅವರ ಸಲಹೆಗಳನ್ನು ಕಾರ್ಯಗತಗೊಳಿಸಲಾಗಿತ್ತು. ತಮ್ಮ ಆಡಳಿತಾವಧಿಯಲ್ಲಿ ಸತತವಾಗಿ ಮನಮೋಹನ್ ಸಿಂಗ್ ಅವರಿಗೆ ಅವಮಾನ ಮಾಡಿದ ಕಾಂಗ್ರೆಸ್, ಅವರ ಹೆಸರನ್ನು ತನ್ನ ಕುಟುಂಬ ಮಾಡಿದ ತಪ್ಪನ್ನು ಮರೆಮಾಚಲು ಬಳಸಿಕೊಂಡಿದೆ. 2004 ರಿಂದ 2014 ರ ನಡುವಿನ ಆಡಳಿತದಲ್ಲಿ ಹೆಸರಿಗೆ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದರು, ಆದರೆ ಸೋನಿಯಾ ಗಾಂಧಿಯವರ ಕೈಯಲ್ಲಿ ಸಂಪೂರ್ಣ ಆಡಳಿತವಿತ್ತು. ಆರ್ಥಿಕ ಉದಾರೀಕರಣದ ನೀತಿಗಳನ್ನು 1991 ರ ಮೊದಲೇ, ನೆಹರು ಕುಟುಂಬದವರು ಜಾರಿಗೆ ತಂದಿದ್ದರೆ, 19911 ರಲ್ಲಿ ಭಾರತ ದಿವಾಳಿಯಾಗುತ್ತಿರಲಿಲ್ಲ. ಸಮಾಜವಾದದ ಹೆಸರಿನಲ್ಲಿ ಸಾವಿರಾರು ಕೋಟಿ ಆಸ್ತಿಯ ಒಡೆಯರಾದರೇ ಹೊರತು, ಬಡತನ ನಿರ್ಮೂಲನೆ ಮಾಡಲಿಲ್ಲ.1991 ರ ಆರ್ಥಿಕ ಉದಾರೀಕರಣದ ನೀತಿಯ ಚರ್ಚೆಯ ಜೊತೆಗೆ, ಭಾರತ ದಿವಾಳಿಯಾಡಲು ಕಾರಣವಾದ ದೂರದೃಷ್ಟಿಯ ಆಡಳಿತದ ಕೊರತೆಯ ಚರ್ಚೆ ಕೂಡ ಆಗಬೇಕಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಂಗಿ ಬಿಚ್ಚುವ ಪದ್ಧತಿ ನಿಲ್ಲಿಸಿ

ದೇವಾಲಯ ಪ್ರವೇಶಿಸುವ ಮುನ್ನ ಗಂಡಸರು ತಮ್ಮ ಮೇಲಂಗಿಯನ್ನು ತೆಗೆದು ದೇವರ ದರ್ಶನ ಮಾಡುವುದು ವಾಡಿಕೆ. ಇದನ್ನು ಪಾಲಿಸುವಂತೆ ಒತ್ತಡ ಹೇರಲು ಆಡಳಿತ ಮಂಡಳಿಯ ಸಿಬ್ಬಂದಿಯನ್ನೂ ಸಹ ನೇಮಕ ಮಾಡಿರುತ್ತಾರೆ ಹಾಗೂ ಧ್ವನಿವರ್ಧಕದಲ್ಲೂ ಕೂಡಾ ಆಗಾಗ್ಗೆ ಘೋಷಣೆ ಮಾಡುತ್ತಿರುತ್ತಾರೆ.

ಪುರುಷ ಭಕ್ತರು ತಮ್ಮ ಮೇಲಂಗಿಯನ್ನು ತೆಗೆಯಬೇಕು ಎಂಬ ನಿಯಮವನ್ನು ಕೈಬಿಡಲು ಕೇರಳದ ಆಡಳಿತ ಮಂಡಳಿಯೊಂದು ಯೋಜನೆ ರೂಪಿಸಿದೆ ಎಂಬ ವಿಚಾರವನ್ನು ಕೇರಳದ ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ರವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಸಮಾಜ ಸುಧಾರಕ ಶ್ರೀನಾರಾಯಣ ಗುರುಗಳು ಸ್ಥಾಪಿಸಿರುವ ಶಿವಗಿರಿ ಮಠದ ಸ್ವಾಮಿ ಸಚ್ಚಿದಾನಂದ ರವರು ಈ ಅನಿಷ್ಟ ಪದ್ಧತಿಯನ್ನು ಕೈಬಿಡುವಂತೆ ಬೆಂಬಲಿಸಿರುವುದು ಈ ಸಾಮಾಜಿಕ ಪಿಡುಗನ್ನು ವಿರೋಧಿಸುತ್ತಿರುವ ಬೆಂಬಲಿಗರಿಗೆ ಆನೆ ಬಲ ಬಂದಂತಾಗಿದೆ.

ದೇವಾಲಯಗಳಲ್ಲಿ ಮೇಲಂಗಿಯನ್ನು ಕಳಚುವ ಪದ್ಧತಿಯು ಒಂದು ಸಾಮಾಜಿಕ ಪಿಡುಗಾಗಿದ್ದು, ಕೃಶಕಾಯ ಶರೀರ ಹೊಂದಿದವರು, ಚರ್ಮದ ಕಾಯಿಲೆಯಿಂದ ಬಳಲುತ್ತಿರುವವರು, ವಿಶೇಷವಾಗಿ ಯುವಕರಿಗೆ ಸರದಿ ಸಾಲಿನಲ್ಲಿ ನಿಂತಿರುವ ಅನ್ಯ ಮಹಿಳೆಯರ ಮುಂದೆ ಬಟ್ಟೆಗಳನ್ನು ಬಿಚ್ಚುವುದು ಮಾನಸಿಕ ಯಾತನೆಯಾಗಿ ಪರಿಣಮಿಸುತ್ತಿದೆ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಎಲ್ಲ ಜಾತಿಗೂ ಸ್ವಾಮೀಜಿಗಳಿದ್ದು ಈ ಪಿಡುಗನ್ನು ಕೊನೆಗಾಣಿಸಲು ಮನಸ್ಸು ಮಾಡಬೇಕಿದೆ. ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮುಜರಾಯಿ ಸಚಿವರು ಸಹ ಕೇರಳದ ಮುಖ್ಯ ಮಂತ್ರಿಗಳ ದಿಟ್ಟ ನಡೆಯನ್ನು ಅನುಸರಿಸುವ ಮೂಲಕ ಇತರೆ ರಾಜ್ಯಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕಾಗಿದೆ.

-ಟಿ. ಉಮಾ ಶಂಕರ್ ಲಕ್ಷ್ಮೀಪುರ ಬೆಂಗಳೂರು

ನೆನಪಿಗೊಂದು ವಾಸನೆ

ಶ್ರೀಶಿರ್ ಹೆಗಡೆಯವರ ನೆನಪುಗಳ ವಾಸನೆ, ವಾಸನೆಗಳ ನೆನಪು ಎರಡೂ ಮಧುರ ಲೇಖನ ಓದಿದೊಡನೆ ನಾನು ನನ್ನ ಬಾಲ್ಯದ ದಿನಗಳ ನೆನಪುಗಳಿಗೆ ಮನಸ್ಸು ಓಡಿಹೋಯ್ತು. ನಾವು ಮಲಗುವಾಗಲೆಲ್ಲ ನಮ್ಮ ಹಾಸಿಗೆಯಲ್ಲಿ ಮಲಗುತ್ತಿದ್ದ ಮೇಕೆಮರಿಗಳ ಮೈ ವಾಸನೆ, ಎದ್ದಾಗ ಅವುಗಳ ಹಿಕ್ಕೆ ವಾಸನೆ, ಮೇಕೆ ಮರಿಗಳ ಉಚ್ಚೆ ವಾಸನೆ, ಎಮ್ಮೆಯ ಸಗಣಿಯ ವಾಸನೆ, ಅಮ್ಮನ ಕೈಯಾರೆ ಮಾಡುವ ರವೆ ಉಂಡಿ ವಾಸನೆ, ಹಾಸ್ಟೆಲ್ ಟ್ರಂಕುಗಳಲ್ಲಿ ಅಮ್ಮ ಮಾಡಿದ ಚುರುಮುರಿ ಚೂಡಾ, ಉಂಡಿ, ಹಾಗೂ ಸಾಬೂನಿನ ಸಮ್ಮಿಶ್ರ ವಾಸನೆ, ಹೊಸ ಲೇಖಕ ನೋಟ್ ಬುಕ್ ಕೊಂಡಾಗ ಅದರೊಳಗಿನ ವಿಚಿತ್ರ ವಾಸನೆ. ಇಷ್ಟೇ ಅಲ್ಲ ವ್ಯಕ್ತಿಗೂ ವಾಸನೆಗೂ ಸಂಬಂಧವಿದೆಯೆನಿಸುವಷ್ಟು ಮಟ್ಟಿಗೆ ಒಬ್ಬೊಬ್ಬ ಸ್ನೇಹಿತನಿಗೂ ಒಂದೊಂದು ವಿಭಿನ್ನ ವಾಸನೆ. ಅವರು ಬಂದರೆ ಸಾಕು ಅವರ ಬಟ್ಟೆಯದ್ದೋ ಅವರ ಮೈವಾಸನೆಯೋ ಒಟ್ಟಿನಲ್ಲಿ ಅವರು ಬರುವಿಕೆಯನ್ನು ವಾಸನೆಯಿಂದಲೇ ಕಂಡು ಹಿಡಿಯುತ್ತಿದ್ದೆವು. ಶಾಲೆಯ ವಾಸನೆ, ಹಾಸ್ಟೆಲ್ ವಾಸನೆ, ಆಟವಾಡುವ ಮೈದಾನದ ವಾಸನೆ ಒಂದೇ ಎರಡೇ ನಮ್ಮ ಪ್ರತಿ ನೆನಪಿಗೂ ಒಂದೊಂದು ವಾಸನೆಯುಂಟು. ದುಡಿದು ಬಂದ ಅಪ್ಪನ ವಾಸನೆ, ಅಮಾವಾಸ್ಯೆ ಹುಣ್ಣಿಮೆಗೆ ನಮ್ಮ ಮನೆಯ ವಾಸನೆ, ಊರ ವಾಸನೆ ನಿಜಕ್ಕೂ ಸಹಸ್ರ ನೆನಪುಗಳನ್ನು ಹೊತ್ತು ತರುತ್ತವೆ. ಮೊದ ಮೊದಲ ಭೇಟಿಯ ಹುಡುಗಿಯ ಮುಡಿಗೇರಿದ ಮಲ್ಲಿಗೆಯ ಘಮಿಸುವ ವಾಸನೆ ಮರೆಯಲಾದೀತೆ. ನಿಮ್ಮ ಲೇಖನದಿಂದ ಅದೆಷ್ಟೋ ಬದುಕಿನ ನೆನಪಿನ ವಾಸನೆಗಳು ನನ್ನನ್ನು ಕಾಡಿದವು.

-ರಾಜು ಹಗ್ಗದ ಇಣಚಗಲ್

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಾರತ ಕಮ್ಯುನಿಸ್ಟ್ ರಾಷ್ಟ್ರವಾಗುವುದನ್ನು ತಪ್ಪಿಸಿದ್ದ ಅಂಬೇಡ್ಕರರು

ಅಭಿಮತ

ಡಾ. ಸುಧಾಕರ ಹೊಸಳ್ಳಿ
vveditoped@gmail.com

ಸಂವಿಧಾನ ಜಾರಿಗೆ ಬಂದು ಇದೇ ಜನವರಿ 26ಕ್ಕೆ 75 ವರ್ಷಗಳು ತುಂಬುತ್ತವೆ. ಇಂತಹ ವಿಶಿಷ್ಟ ಸಂದರ್ಭದಲ್ಲಿ ಸಂವಿಧಾನದ ಆದರ್ಶಗಳು, ದಕ್ಷತೆ, ಶ್ರೇಷ್ಠತೆ ಕುರಿತು ಅವಲೋಕನ ಮಾಡುವುದು, ಆ ಮುಖಾಂತರ ಸಂವಿಧಾನದ ಮೂಲಬೇರುಗಳನ್ನು ಮತ್ತಷ್ಟು ಗಟ್ಟಿ ಮಾಡುವ ಹೊಣೆಗಾರಿಕೆ ಪ್ರಜ್ಞಾವಂತ ಭಾರತೀಯರ ಮೇಲೆ ಇದೆ. ಭಾರತವನ್ನು 75 ವರ್ಷಗಳ ಹಿಂದೆ ಪರಂಪರೆ ಸಂಸ್ಕೃತಿ ನಡವಳಿಕೆ ಐತಿಹಾಸಿಕ ದಾಖಲಾತಿಗಳು ಇವುಗಳ ಮುಖಾಂತರ ಗುರುತಿಸಲಾಗುತ್ತಿತ್ತು, ಸ್ಮರಿಸಲಾಗುತ್ತಿತ್ತು, ಮುಂದುವರಿಸಿಕೊಂಡು ಹೋಗಲಾಗುತ್ತಿತ್ತು. ಆದರೆ 75 ವರ್ಷಗಳ ಹಿಂದೆ ಭಾರತವನ್ನು ಶಾಸನಾತ್ಮಕ ಭಾರತವಾಗಿ ರೂಪಿಸುವ ಕಾರ್ಯ ಸಂವಿಧಾನ ರಚನೆಯ ಜೊತೆಯಲ್ಲಿ ಪ್ರಾರಂಭವಾಗಿತ್ತು.

ಈ ಪವಿತ್ರ ನೆಲಕ್ಕೊಂದು ಸಂವಿಧಾನ ರಚನೆ ಮಾಡುವ, ನಿಯಮಗಳ ಗುಚ್ಛವನ್ನು ಜೋಡಿಸಿಕೊಳ್ಳುವ ಕಾರ್ಯ ಸಾಗಿತ್ತು. ಇಂತಹ ಮಹತ್ಕಾರ್ಯದಲ್ಲಿ ಪಾಲ್ಗೊಂಡಿದ್ದ ಕೆಲವು ಸದಸ್ಯರಿಗೆ ಭಾರತವನ್ನು ಅದರ ಸಂಸ್ಕೃತಿ ಮತ್ತು ಪರಂಪರೆಯ ದೃಷ್ಟಿಕೋನದಲ್ಲೇ ಶಾಸನದ ಅಡಿಯಲ್ಲಿ ತರಬೇಕು, ಸಂವಿಧಾನದ ಒಳಗೆ ಇರುವ ಎಲ್ಲ ನಿಯಮಗಳು ಭಾರತದ ಐತಿಹಾಸಿಕ ಆದರ್ಶಗಳನ್ನು ಆಧಾರವಾಗಿಟ್ಟುಕೊಳ್ಳಬೇಕು ಎನ್ನುವ ಹೆಬ್ಬಯಕೆ ಇತ್ತು. ಕೆ ವಿ ಕಾಮತ್, ಶ್ಯಾಮ್ ಪ್ರಸಾದ್ ಮುಖರ್ಜಿ, ಗೋವಿಂದಾಸ್, ಘನಶಾಮಗುಪ್ತ, ಕಲ್ಲೂರು ಸುಬ್ಬರಾವ್, ರಾಮ್ ಸಹಾಯ್ ಹೀಗೆ ಪಟ್ಟಿ ಸಾಗುತ್ತದೆ. ಇಂತಹ ಸದುದ್ದೇಶಕ್ಕಾಗಿ ಸದನದಲ್ಲಿ ಪ್ರತಿ ವಿಷಯ ವಿಭಾಗ ಚರ್ಚೆಯಲ್ಲಿಯೂ ಯಾವುದೇ ನಿಯಮಗಳಿರಲಿ ಅವು ಭಾರತದ ಆದರ್ಶಗಳನ್ನೇ ಆಧಾರವಾಗಿಟ್ಟುಕೊಳ್ಳಬೇಕೆಂಬ ಆಗ್ರಹವನ್ನು, ಆಧಾರವನ್ನು ನೀಡುತ್ತಾ ಬಂದಿದ್ದರು.

ವೇದ, ಪುರಾಣ, ರಾಮಾಯಣ, ಮಹಾಭಾರತ ಸಂಹಿತೆಗಳ ಉದಾಹರಣೆಗಳನ್ನು ಸದನದ ಮುಂದೆ ಹಾಜರುಪಡಿಸುತ್ತಿದ್ದರು. ಉಳಿದಂತೆ ಮುಸ್ಲಿಂ ಲೀಗ್ ಹಾಗೂ ಕಾಂಗ್ರೆಸ್‌ನ ಅನೇಕ ಸದಸ್ಯರು ಭಾರತ ದಾಸ್ಯವನ್ನು ಮುಂದುವರಿಸುವ, ಬ್ರಿಟಿಷರ ನಿಯಮಗಳಿಗೆ ಜೋತು ಬೀಳುವ, ಭಾರತದ ಪರಂಪರೆಯನ್ನು ನಿರ್ಲಕ್ಷಿಸುವ, ಮರೆಮಾಚುವ ಕಾರ್ಯದಲ್ಲಿ ತೊಡಗಿದ್ದನ್ನು ಸಂವಿಧಾನ ರಚನಾ ಸಭೆಯ ಚರ್ಚೆಗಳು ಅಂಕಿ ಸಂಖ್ಯೆಗಳ ಮೂಲಕ ದೃಢಪಡಿಸುತ್ತವೆ. ಸಂವಿಧಾನದ ಒಳಗೆ ದಾಸ್ಯದ ನಿಯಮಗಳು ಎರವಲು ಆಗದಂತೆ, ಭಾರತದ ಪರಂಪರೆ ಸಂಸ್ಕೃತಿ ಕಣ್ಮರೆಯಾಗದಂತೆ ತಡೆಗೋಡೆಯಾಗಿ ನಿಂತದ್ದು ಶ್ರೇಷ್ಠ ರಾಷ್ಟ್ರೀಯವಾದಿ ಬಾಬಾ ಸಾಹೇಬ್ ಅಂಬೇಡ್ಕರ್. ಅವರು ಸದಸ್ಯರ ಪ್ರಶ್ನೆಗೆ ಉತ್ತರಿಸುತ್ತಾ ಈ ಸಂವಿಧಾನ ರಚನಾ ಸಭೆಯು ತನ್ನ ಕಾರ್ಯ ಆರಂಭ ಮಾಡುವ ಮೊದಲೇ ಬ್ರಿಟಿಷ್ ಸಂಸತ್ತು ನಿರ್ದೇಶಿಸುವ ಎಲ್ಲ ನಿರ್ದೇಶನಗಳನ್ನು ತಿರಸ್ಕರಿಸಿಯಾಗಿದೆ, ಬ್ರಿಟನ್ ನಿರ್ದೇಶನಗಳು ಈ ಸಂವಿಧಾನದ ಭಾಗವಾಗುವುದನ್ನು ನನ್ನನ್ನು ಸೇರಿದಂತೆ ಇಲ್ಲಿರುವ ಯಾವ ಸದಸ್ಯರು ಒಪ್ಪುವುದಿಲ್ಲ ಮತ್ತು ಅವಕಾಶವನ್ನು ಕೊಡುವುದಿಲ್ಲ ಎಂದು ಗುಡುಗಿದ್ದರು.

ಇಂತಹ ಗಟ್ಟಿ ಧ್ವನಿಯ ನಡುವೆಯೂ ಭಾರತವನ್ನು ಶಾಸನಾತ್ಮಕವಾಗಿ ಕಮ್ಯುನಿಸ್ಟ್ ನೆಲೆಗಟ್ಟಿನಲ್ಲಿ ಪ್ರತಿಷ್ಠಾಪಿಸಲು ಕೆಲವರು ಉತ್ಸುಕರಾಗಿದ್ದರು. ಇಂಥದ್ದೊಂದು ಪ್ರಯತ್ನ ನಡೆದಿತ್ತು ಎನ್ನುವುದೇ ಸಂವಿಧಾನ ರಚನಾ ಸಭೆಗೆ ಅಂಟಿದ ಕಳಂಕವೂ ಹೌದು. ಅಂದು 1949 ಸೆಪ್ಟೆಂಬರ್ 18ನೇ ತಾರೀಕು ಮೂಲ ಕಾಂಗ್ರೆಸ್ ಸದಸ್ಯರಾಗಿದ್ದ, ತದನಂತರ ಮುಸ್ಲಿಂ ಲೀಗ್ ಸೇರ್ಪಡೆಯಾಗಿದ್ದ ಅಶ್ರತ್ ಮೊಹಾನಿ ಮಂಡಿಸಿದ ತಿದ್ದುಪಡಿ ಒಟ್ಟು ಭಾರತವನ್ನೇ ಚಕಿತಗೊಳಿಸುವಂಥದ್ದು. ಮಾನ್ಯ ಅಧ್ಯಕ್ಷರೇ, ಭಾರತದ ಸಂವಿಧಾನ ಚೌಕಟ್ಟನ್ನು ನಿರ್ಧಾರ ಮಾಡಿದ ಧ್ಯೇಯಗಳ ನಿರ್ಣಯವನ್ನು 1946ರಲ್ಲಿ ಮಂಡಿಸಿದ ನೆಹರುರವರು ಭಾರತವನ್ನು ಸರ್ವ ಸ್ವತಂತ್ರ, ಸಾರ್ವಭೌಮ ಗಣತಂತ್ರ, ಎಂದು ಘೋಷಿಸುವ ನಿರ್ಧಾರ ಮಾಡಿದ್ದರು. ಸಂವಿಧಾನದ ರಚನೆಯ ಉದ್ದಕ್ಕೂ ನೆಹರುರವರು ಈ ವಿಷಯವನ್ನು ಅನೇಕ ಬಾರಿ ಮಂಡಿಸಿದ್ದರು. ಆದರೆ ಡಾ. ಅಂಬೇಡ್ಕರ್ ಇದನ್ನು ಸುಳ್ಳು ಮಾಡಿದ್ದಾರೆ. ಗಣತಂತ್ರ ಅಥವಾ ಗಣರಾಜ್ಯ ಮಾದರಿಯನ್ನು ತೆಗೆದುಹಾಕಿದ್ದಾರೆ. ಇದನ್ನು ಮರು ಸೇರ್ಪಡೆ ಮಾಡಬೇಕು ಎಂದು ತಿದ್ದುಪಡಿ ಮಂಡಿಸಿದಾಗ ಶಾಸನಾತ್ಮಕ ಭಾರತವನ್ನು ಕಮ್ಯುನಿಸಂ ಚೌಕಟ್ಟಿನ ಒಳಗೆ ಎಳೆದು ತರುವ ವಾಸನೆ ಸೂಸಿತ್ತು.

ಮಾತು ಮುಂದುವರಿಸಿದ್ದ ಮೊಹಾನಿ, ಅಂಬೇಡ್ಕರ್ ಫೆಡರೇಶನನ್ನು-ಯೂನಿಯನ್ ಆಗಿ ಬದಲಿಸಿದ್ದು ಏಕೆ? ಭಾರತವು ರಾಜ್ಯಗಳ ಒಕ್ಕೂಟ ಮಾತ್ರ ಎಂದು ಯಾತಕ್ಕಾಗಿ ಸೀಮಿತ ಮಾಡಿದ್ದಾರೆ? ಭಾರತವು ಗಣತಂತ್ರದ ಒಕ್ಕೂಟ ಏಕಾಗಬಾರದು? ಭಾರತವನ್ನು ಯೂನಿಯನ್ ಆಫ್ ರಿಪಬ್ಲಿಕ್ ಆಫ್ ಇಂಡಿಯಾ ಅಥವಾ ಯೂನಿಯನ್ ಆಫ್ ಸೋಷಿಯಲಿಸ್ಟ್ ರಿಪಬ್ಲಿಕ್ ಇಂಡಿಯಾ ಎಂದು ಬದಲಿಸಬೇಕು ಎಂಬ ತಿದ್ದುಪಡಿ ಮಂಡಿಸುವ ಹಕ್ಕು ನನಗಿದೆ ಎಂಬಂತೆ ಅಂಬೇಡ್ಕರ್ ಎದುರಿಗೆ ನಿಂತು ಆಗ್ರಹಿಸಿದ್ದರು ಮತ್ತು ತಿದ್ದುಪಡಿಯನ್ನು ಮಂಡಿಸಿದರು. ನನ್ನ ಈ ವಾದವನ್ನು ನಾನು ಪ್ರಸ್ತಾವನೆಯಲ್ಲಿಯೇ ತರಲು ಉದ್ದೇಶಿಸಿದ್ದೆ, ಆದರೆ ಅಂಬೇಡ್ಕರ್ ನನಗನಿಸುವಂತೆ ಅವಕಾಶವನ್ನು ನಿರಾಕರಿಸುವ ಉದ್ದೇಶ ಅವರಿಗಿತ್ತು. ಅದಕ್ಕಾಗಿಯೇ ಅವರು ಪ್ರಸ್ತಾವನೆಯನ್ನು ಕುರಿತ ಚರ್ಚೆಯ ನಡೆಯುತ್ತಿದ್ದ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದರು ಹಾಗೂ ಇದು ಇತ್ಯರ್ಥವಾದ ವಿಷಯ ಮೊದಲಿನ ತೀರ್ಮಾನಕ್ಕೆ ವಿರುದ್ಧವಾಗಿ ಪ್ರಸ್ತಾವನೆಯನ್ನು ಮತ್ತೆ ರಚಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಕೆಲವರಿಗೆ ರಿಪಬ್ಲಿಕ್ ಶಬ್ದವು ನಿಷಿದ್ಧವಾಗಿದೆ. ಇದನ್ನು ಬಳಸುವ ಧೈರ್ಯ ಇಲ್ಲದಿದ್ದರೆ ನನ್ನ ಬಳಿ ಇದಕ್ಕೆ ಬದಲಿ ಸೂಚನೆ ಇದೆ. ಕನಿಷ್ಠ ಪಕ್ಷ ಭಾರತದ ಸಾರ್ವಭೌಮ ರಾಜ್ಯಗಳು ಎಂದು ಕರೆಯಬಹುದು ಎಂದು ಅಂಬೇಡ್ಕರರ ಮೇಲೆ ಘನವಾದ ಆರೋಪ ಹಾಗೂ ಒತ್ತಡವನ್ನು ಹೇರಿದ್ದರು ಎಂಬುದು ಸಂವಿಧಾನ ರಚನಾ ಸಭೆಯ ಸಂದರ್ಭದಲ್ಲಿ ಪರಮ ಶ್ರೇಷ್ಠ ರಾಷ್ಟ್ರ ಪ್ರೇಮಿಯೊಬ್ಬರಿಗೆ ಅದೆಂಥ ಅಡೆತಡೆಗಳು ಒದಗಿ ಬಂದಿದ್ದವು ಮತ್ತು ಒದಗಿಸಿ ನಿಲ್ಲಿಸಿದ್ದರು ಎನ್ನುವ ಚಿತ್ರಣವನ್ನು ಕಟ್ಟಿಕೊಡುತ್ತದೆ.

ಈಗಾಗಲೇ ಬೇರೆ ಬೇರೆ ಕಾರಣಕ್ಕೆ ಹಂಚಿ ಹೋಗಿದ್ದ ಭಾರತವನ್ನು ಬಲಿಷ್ಠ ಕೇಂದ್ರ ಸರಕಾರದ ಪ್ರತಿಪಾದನೆಯೊಂದಿಗೆ, ಐಕ್ಯ ಭಾರತವನ್ನಾಗಿ ಮಾಡಲು ಪಣ ತೊಟ್ಟಿದ್ದ ಸಂವಿಧಾನ ಶಿಲ್ಪಿಗೆ ವಿಘಟಿತ ಭಾರತದ ಕಲ್ಪನೆಯನ್ನು ಎದುರಾಗಿ ನಿಲ್ಲಿಸಿದ್ದರು ಎಂಬುದು ಜೀರ್ಣಿಸಿಕೊಳ್ಳಲಾಗದ ಐತಿಹಾಸಿಕ ದಾಖಲಾತಿ. ಅಂದು ಚರ್ಚೆ ಮುಂದುವರಿಸಿದ್ದ ಮೊಹಾನಿ ಅಂಬೇಡ್ಕರರ ಉದ್ದೇಶದಂತೆ ಭಾರತವು ರಾಜ್ಯಗಳ ಒಕ್ಕೂಟವಾದರೂ, ಇಲ್ಲಿ ರಾಜ್ಯಗಳಿಗೆ ಸಂಪೂರ್ಣ ಸ್ವಾಯತ್ತತೆಯನ್ನು ನೀಡಬೇಕು, ಇದು ಬ್ರಿಟಿಷರು ಈ ಹಿಂದೆ ಮಾಡಿದ್ದ ಏಕಾತ್ಮಕ ನಿಯಮವನ್ನು ಅನುಸರಿಸಬಾರದು ಪ್ರತಿ ಪ್ರಾಂತ್ಯಕ್ಕೂ ತನ್ನದೇ ಆದ ನೀತಿ ನಿರ್ಧಾರಗಳನ್ನು ಮಾಡಿಕೊಳ್ಳುವ ಹಕ್ಕುಗಳನ್ನು ನೀಡಬೇಕು ಎಂದು ಆಗ್ರಹಿಸುವ ಮೂಲಕ, ಮತ್ತೊಮ್ಮೆ ಭಾರತ ಕಾನೂನಿನ ಮುಖಾಂತರವೇ ಛಿದ್ರವಾಗಬೇಕು ಎಂಬ ಹುನ್ನಾರವನ್ನು ಸೃಷ್ಟಿಸಿದ್ದರು. ರಾಜ್ಯಗಳಿಗೆ ಸಂಪೂರ್ಣ ಸ್ವಾಯತ್ತತೆ ಕೊಡುವುದು ಎಂದರೆ ಐಕ್ಯ ಭಾರತವನ್ನು ಒಡೆಯುವುದೇ ಎಂದು ಅರ್ಥ.

ಇಂತದೇ ದುರುದ್ದೇಶದಿಂದ ಸಂವಿಧಾನದ ಒಳಗೆ 370ನೇ ವಿಧಿಯನ್ನು ಅಂಬೇಡ್ಕರ್‌ರ ಅತೀವ ವಿರೋಧದ ನಡುವೆಯೂ ತೂರಿಸಿ 70 ವರ್ಷಗಳ ಕಾಲ ಭಾರತ ಸಂವಿಧಾನವು ಅಸಮಾನತೆಯಿಂದ ಬಾಧಿಸಿದ್ದನ್ನು ಕಾಣಬಹುದು. ಅದೆಷ್ಟು ರಭಸದಲ್ಲಿ ಮೊಹಾನಿ ಅಂಬೇಡ್ಕರರ ಮೇಲೆ ಎರಗಿದ್ದರು ಎಂದರೆ, ಡಾ. ಅಂಬೇಡ್ಕರ್ ಅವರು ಕೆಲವು ರಹಸ್ಯ ಕಾರಣಗಳಿಂದ ಈಗ ನಮ್ಮ ಮುಂದೆ ಹೊಸ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ, ಇಲ್ಲಿ ನಾವು ಚುನಾಯಿತ ಗೌರ್ನರ್‌ರನ್ನು ಹೊಂದಿರುವುದಿಲ್ಲ, ಆದರೆ ಗೌರ್ನರ್‌ಗಳು ರಾಷ್ಟ್ರಪತಿಗಳಿಂದ ನಾಮಕರಣಗೊಳ್ಳುತ್ತಾರೆ ಮತ್ತು ರಾಷ್ಟ್ರಪತಿಗಳಿಂದ ನಾಮಕರಣಗೊಂಡಿದ್ದರೂ ಸಹ, ತುರ್ತು ಸಂದರ್ಭಗಳಲ್ಲಿ ರಾಷ್ಟ್ರಪತಿಗಳು ಅವರ ಮೇಲೆ ನಂಬಿಕೆ ಇಡುವುದಿಲ್ಲ ಮತ್ತು ಈ ತುರ್ತು ಪರಿಸ್ಥಿತಿ ಕೇಂದ್ರ ಅಥವಾ ರಾಷ್ಟ್ರಪತಿಗಳಿಂದ ನಿರ್ಧರಿಸಲ್ಪಡಬೇಕು ಎಂದಿದ್ದಾರೆ. ಇದು ಏನನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದರೆ, ಅಂಬೇಡ್ಕರ್ ತಮ್ಮ ಎಲ್ಲ ಪ್ರಮಾಣ ಮತ್ತು ನಿರ್ಧಾರಗಳಿಂದ ಹಿಂದೆ ಸರಿಯಬಯಸಿದ್ದಾರೆ. ಈಗ ಹೊಸದನ್ನು ಮಾಡುತ್ತಾರೆ ಮತ್ತು ಸಂವಿಧಾನದ ಮೂಲ ಸ್ವಭಾವವನ್ನೇ ಬದಲಿಸಿ ಬಿಡುತ್ತಾರೆ.

ಸಾಂಪ್ರದಾಯಿಕವಾಗಿ ನಮ್ಮ ಯೋಜನೆ ಏನಿತ್ತೆಂದರೆ ಭಾರತವು ಫೆಡರಲ್ ರಿಪಬ್ಲಿಕ್ ಗಣತಂತ್ರಗಳ ಒಕ್ಕೂಟವಾಗಬೇಕು ಎಂದು. ಅಂಬೇಡ್ಕರ್ ಒಕ್ಕೂಟ ಮಾದರಿಯನ್ನು ಬಯಸುತ್ತಾರೆ, ಎಲ್ಲ ವಿಭಾಗಗಳನ್ನು, ಎಲ್ಲ ಪ್ರಾಂತ್ಯಗಳನ್ನು ಮತ್ತು ರಾಜ್ಯಗಳ ಗುಂಪುಗಳನ್ನು, ಎಲ್ಲ ವಿಷಯವನ್ನು ಕೇಂದ್ರದ ಹಿಡಿತದಲ್ಲಿ ತರಲು ಬಯಸುತ್ತಾರೆ. ಮುಂದುವರೆದು, ಭಾರತವನ್ನು ಒಂದು ರೀತಿಯಲ್ಲಿ ಒಕ್ಕೂಟ ಸರಕಾರ ಮತ್ತು ಕೇವಲ ಒಕ್ಕೂಟ ಸರಕಾರವಲ್ಲ ಅದೊಂದು ರೀತಿಯ ಒಕ್ಕೂಟ ಸಾಮ್ರಾಜ್ಯವನ್ನಾಗಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂಬ ನೋವನ್ನು ತೋಡಿಕೊಂಡಿದ್ದರು. ಇವರು ಕೇವಲ ಮುಖವಾಣಿ, ಇವರ ಬೆನ್ನಿಗೆ ಇಂಥದ್ದೇ ಮನಸ್ಥಿತಿಯ ಹಲವರು ನಿಂತಿದ್ದರು ಎಂಬುದು ವಾಸ್ತವ. ಭಾರತವನ್ನು ನಿಯಮಗಳ ಅಡಿಯಲ್ಲೇ ಒಡೆಯುವ ಸಂಚು ಎಷ್ಟು ಗಟ್ಟಿಯಾಗಿತ್ತು ಎಂದರೆ, ಇದೇ ಮೊಹಾನಿ ಅಂಬೇಡ್ಕರ್ ಇಡೀ ಭಾರತವನ್ನು ಒಂದಾಗಿ ನೋಡಲು ಬಯಸುತ್ತಿದ್ದಾರೆ ಮತ್ತು ಅವರು ಸ್ಥಾಪಿಸಲು ಹೊರಟಿರುವುದು ಕೇವಲ ಸಾಮ್ರಾಜ್ಯ ಅಥವಾ ಅದೇ ರೀತಿಯ ಇನ್ನೊಂದನ್ನಲ್ಲ, ಬದಲಿಗೆ ಅವರು ಒಂದು ರೀತಿಯಲ್ಲಿ ಭಾರತೀಯ ಚಕ್ರಾಧಿಪತ್ಯವನ್ನು ಸ್ಥಾಪಿಸಲು ಬಯಸುತ್ತಾರೆ.

ಇಂತದ್ದೊಂದು ಆರೋಪ, ಆಗ್ರಹ, ಒತ್ತಡ ಭಾರತವನ್ನು ಒಂದಾಗಿಸಬಾರದೆಂಬ ಹೋರಾಟದ ಯೋಜನೆಯನ್ನು ಸಾದೃಶಪಡಿಸುತ್ತದೆ. ಅಂದರೆ ರಷ್ಯಾ ಮಾದರಿಯ ಕಮ್ಯುನಿಸ್ಟ್ ಚಿಂತನೆಯನ್ನು ಭಾರತ ಶಾಸನಾತ್ಮಕವಾಗಿ ಹೊಂದಬೇಕೆಂಬ ಹುನ್ನಾರ ಅವರ ಹೆಬ್ಬಯಕೆಯೇ ಆಗಿತ್ತು. ಅದೇ ಕಾರಣಕ್ಕಾಗಿ ವಿಪರೀತವಾದ ಸಮಾಜವಾದವನ್ನು ಸಂವಿಧಾನದ ಭಾಗ ಮಾಡಬೇಕೆಂದು ಮೊಹಾನಿಯೂ ಸೇರಿದಂತೆ ನಜೀರುದ್ದೀನ್ ಅಹಮದ್, ಇಮಾಮ್ ಹುಸೇನ್, ಟಿ ಟಿ ಕೃಷ್ಣಮಚಾರಿ ಮುಂತಾದವರು ಪ್ರಯತ್ನಿಸಿದ್ದು ಉಂಟು. ಆದರೆ 15 ನವಂಬರ್ 1948ರಲ್ಲಿ ಕೆ ಟಿ ಷಾ ಮಂಡಿಸಿದ್ದ ಜಾತ್ಯಾತೀತತೆ ಮತ್ತು ಸಮಾಜವಾದವನ್ನು ಸಂವಿಧಾನದ ಭಾಗ ಮಾಡಬೇಕೆಂಬ ತಿದ್ದುಪಡಿ ತಿರಸ್ಕರಿಸುತ್ತ ಅಂಬೇಡ್ಕರರು ಈ ನೆಲ ಮೂಲ ಸಂಸ್ಕೃತಿಗೆ ವಿರುದ್ಧವಾದ, ಪಾಶ್ಚಾತ್ಯ ಕಲ್ಪನೆಯನ್ನು, ಜಾತ್ಯಾತೀತ ಚಿಂತನೆಯನ್ನು ಸಂವಿಧಾನದ ಒಳಗೆ ಬಿಡಲು ನಾನು ಒಪ್ಪುವುದೇ ಇಲ್ಲ ಹಾಗೂ ಈಗಾಗಲೇ ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಸ್ಥಾಪಿತವಾಗಿರುವ ಸಮಾಜವಾದಿ ಚಿಂತನೆಗಳಿಗಿಂತ ವಿಪರೀತವಾದ ಸಮಾಜವಾದದ ಚಿಂತನೆಯನ್ನು ನಾನು ಒಪ್ಪುವುದೂ ಇಲ್ಲ ಎಂದು ಘೋಷಿಸಿಬಿಟ್ಟಿದ್ದರು.

ಅಂದೇ ಮುಂದುವರಿದ ಮಾತಿನಲ್ಲಿ ನೀವಿಂದು ಬಂಡವಾಳಶಾಹಿ ಪದ್ಧತಿಯ ವಿರುದ್ಧ ನಿಲ್ಲಬಹುದು, ಸಮಾಜವಾದವನ್ನು ಬೆಂಬಲಿಸಬಹುದು, ಆದರೆ ಮುಂದೊಂದು ದಿನ ಭವಿಷ್ಯ ಭಾರತದ ಜನ ಸಮಾಜವಾದವು ಮೀರಿ ನಿಲ್ಲಬೇಕು ಎಂದು ಯೋಚಿಸಿದಾಗ ಅವರನ್ನು ಸಮಾಜವಾದಿ ಚಿಂತನೆಗೆ ನಿಯಮಗಳ ಅಡಿಯಲ್ಲಿ ಕಟ್ಟಿ ಹಾಕುವುದು ಅಪರಾಧ ಎಂದು ಹೇಳಿದ್ದರು. ಇಂತಹ ಘಟನೆಗಳನ್ನು, ದಾಖಲಾತಿಗಳನ್ನು ಪರಾಮರ್ಶಿಸಿದಾಗ ಒಂದು ವೇಳೆ ಅಂಬೇಡ್ಕರರಂತ ರಾಷ್ಟ್ರ ಪ್ರೇಮಿ ಕರಡು ರಚನಾ ಸಮಿತಿಯ ಅಧ್ಯಕ್ಷರಾಗದೆ ಇದ್ದಿದ್ದರೆ, ಅವರು ಕಟಿಬದ್ಧತೆಯನ್ನು ತೋರದೆ ಇದ್ದಿದ್ದರೆ, ನೆಹರು ಮತ್ತು ಮುಸ್ಲಿಂ ಲೀಗ್ ನ ಆಶಯದಂತೆ ಭಾರತ ಕಮ್ಯುನಿಸ್ಟ್ ರಾಷ್ಟ್ರವಾಗುವ ಅಪಾಯವಿತ್ತು ಎಂಬುದನ್ನು ಸಂವಿಧಾನ ರಚನಾ ಸಭೆಯ ಚರ್ಚೆಯ ದಾಖಲಾತಿಗಳು ಬೋಧಿಸುತ್ತಿವೆ. ತನ್ನ ನೆಲ ಮೂಲವನ್ನು ಮರೆಯದಂತೆ, ಪರಂಪರೆಯನ್ನು ಬಿಡದಂತೆ, ಆದರ್ಶಗಳನ್ನು ತ್ಯಜಿಸಿದಂತೆ, ಸಂಸ್ಕೃತಿಯನ್ನು ದೂರೀಕರಿಸದಂತೆ ಸಂವಿಧಾನ ಸಭೆಯಲ್ಲಿ ಕಾವಲು ಕಾದ ಅಂಬೇಡ್ಕರರಿಗೆ 75 ವರ್ಷಗಳ ಈ ಸುಸಂದರ್ಭದಲ್ಲಿ ರಾಷ್ಟ್ರ ಪ್ರೇಮಿಗಳೆಲ್ಲರೂ ಭಾರತ ಭಾರತವಾಗಿಯೇ ಉಳಿದಿದ್ದಕ್ಕೆ, ಅದು ತನ್ನ ಮೂಲವನ್ನು ಉಳಿಸಿಕೊಂಡದ್ದಕ್ಕೆ ಪ್ರಣಾಮ ಗಳನ್ನು ಸಲ್ಲಿಸಬೇಕು.

ಭಾರತದ ಯುವಕರು ರಾಷ್ಟ್ರದ ಬಗ್ಗೆ ಅಂಬೇಡ್ಕರರಂತ ಪ್ರೇಮ, ಆದರಗಳನ್ನು ಮೈಗೂಡಿಸಿಕೊಳ್ಳಬೇಕು ಎಂಬುದನ್ನು ಸಂವಿಧಾನ ರಚನಾ ಸಭೆಯ ನಡೆವಳಿಕೆಗಳು ತೋರಿಸಿಕೊಟ್ಟಿವೆ.

(**ಆಧಾರ: ಸಂವಿಧಾನ ರಚನಾ ಸಭೆಯ ಚರ್ಚೆಗಳು ಸೆಪ್ಟೆಂಬರ್** 18.1949 **ಪುಟ ಸಂಖ್ಯೆ** 251, 252, 253, 268 **ಸಂಪುಟ** 9)

ಭಟ್ಟರ್ ಸ್ಕಾಚ್

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಕರ್ನಾಟಕದಲ್ಲಿ ಸ್ತ್ರೀ ಶಕ್ತಿ ಹೆಚ್ಚಾಯಿತೋ ಇಲ್ಲ ಕಡಿಮೆ ಆಯಿತೋ?
– **ಅದನ್ನು ಪರೀಕ್ಷಿಸದೇ ಹೇಳಬಾರದು!**

- **ಸಂದೇಶ ಹೆಗಡೆ, ಶಿರಸಿ**
ಭಟ್ರೇ, ಹವ್ಯಕರ ಜನಸಂಖ್ಯೆ ಹೆಚ್ಚಳಕ್ಕೆ ನಾಗೇಶ ಹೆಗಡೆಯವರು ಕೊಂಕು ತೆಗೆದಿದ್ದಾರಲ್ಲ?
– **ಕೈಲಾಗದವರ ಪ್ರಲಾಪ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಈ ಸರಕಾರದ ಮರ್ಯಾದೆ ಕಾಪಾಡುವವರು ಯಾರು?
– **ಬಿಕ್ಕಟ್ಟಿನ ಸಂದರ್ಭದಲ್ಲಿ ಕುಡುಕರು ಕೈಬಿಡೊಲ್ಲ ಅನ್ನೋದು ಮತ್ತೊಮ್ಮೆ ಸಾಬೀತಾಯ್ತು!**

- **ಉಳ್ಳಾಲ ಗೋಪಿ, ಬೆಂಗಳೂರು**
ಭಟ್ರೇ, ಸಂಸದ ತೇಜಸ್ವಿ ಸೂರ್ಯ ಕೈಹಿಡಿಯುವಾಕೆ ಉತ್ತಮ ಸಂಗೀತಗಾರ್ತಿಯಂತೆ?
– **ರಾಮನವಮಿ ಸಂಗೀತಗೋಷ್ಠಿಗೆ ಹೊಸ ಅತಿಥಿ !**

- **ರಮ್ಯಾ, (ಇಮೇಲ್ ಮೂಲಕ)**
ಭಟ್ರೇ, 'ಲೇ' ಅಂತ ಕರೆಯುವ ಗಂಡನನ್ನು ಏನಂತ ಕರೆಯಬೇಕು?
– 'ಲೋ'!

- **ಸುಮಂಗಲ ಬಾದರಕೋಡಿ, ಬೆಳಗಾವಿ**
ಭಟ್ರೇ. ಮದುವೆಯಾದ ನಂತರ ಗಂಡಸರು ಬದಲಾಗ್ತಾರಂತೆ?
– **ಚುನಾವಣೆ ನಂತರ ಆರಿಸಿ ಬಂದವರು ಬದಲಾಗುವುದಿಲ್ಲವೇ?!**

- **ಕೆ.ಎಸ್.ರವಿ, ಮಂಡ್ಯ**
ಭಟ್ರೇ, ತಮ್ಮೆಡೆಗೆ ಗಮನ ಸೆಳೆಯಬೇಕು ಅಂದ್ರೆ, ಕೋತಿಚೇಷ್ಟೆ ಮಾಡಬೇಕಾ?
– **ಅದನ್ನೇ ರೀಲ್ಸ್ ಮಾಡಿದರೆ ಇನ್ನೂ ಹೆಚ್ಚು ಪರಿಣಾಮಕಾರಿ!**

- **ಎಂ.ಎಂ.ರವಿತೇಜ, ಕತ್ತರಿಗುಪ್ಪೆ**
ಭಟ್ರೇ, ಹವ್ಯಕ ಸ್ವಾಮೀಜಿಗಳಿಗೆ ತಮ್ಮ ಶಿಷ್ಯರ ಮೇಲೆ ಭರವಸೆ ಇದೆಯಾ?
– **ಅವರು ಕೊಟ್ಟ ಕರೆಗೆ ಶಿಷ್ಯರು ಹೇಗೆ ಸ್ಪಂದಿಸುತ್ತಾರೆ ನೋಡೋಣ?!**

- **ನ.ಪವಿತ್ರಾ, ಅರಸೀಕೆರೆ**
ಭಟ್ರೇ, ನಿಮಗೆ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳಿದ್ದಾರಲ್ಲ?
– **ಗಣತಿ ಮಾಡಿ ಖಾತ್ರಿಪಡಿಸಿಕೊಳ್ಳಿ ಎಂದು ಹೇಳದಿದ್ದರೆ ಸಾಕು!**

- **ನವೀನ ಹೆಬ್ರಿ, ಬ್ರಹ್ಮಾವರ**
ಭಟ್ರೇ, ಬ್ರಹ್ಮಾಂಡ ಗುರೂಜಿಯವರನ್ನು ನೋಡಬೇಕು ಅಂತ ಅನಿಸುತ್ತಿದೆಯಲ್ಲ?
– **ಹೂಂ.. ಬೆಳಗ್ಗೆ ಅವರನ್ನು ನೋಡಿದರೆ ಇಡೀ ದಿನ ಬೇರೆ ಯಾವ ಕೆಟ್ಟದ್ದನ್ನೂ ನೋಡಬೇಕಿಲ್ಲ!**

ನಿಧಾನವೇ ಆಯುರ್ವೇದದ ವಿಧಾನ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಆಯುರ್ವೇದವು ನಮ್ಮ ಭಾರತ ಭೂಮಿಯ ವಿಶಿಷ್ಟವಾದ ವಿಜ್ಞಾನವೆಂದು ನಾವು ಎದೆ ಉಬ್ಬಿಸಿಕೊಳ್ಳುವುದಕ್ಕಿಂತ ಅದರ ಬಗ್ಗೆ ಮೂಗು ಮುರಿಯುವುದೇ ಜಾಸ್ತಿ. ಇವತ್ತಿಗೂ ಆಯುರ್ವೇದದ ಬಗ್ಗೆ ಜನರಲ್ಲಿ ಹಲವಾರು ತಪ್ಪು ಕಲ್ಪನೆಗಳಿವೆ. ಉದಾಹರಣೆಗೆ: ಆಯುರ್ವೇದ ಅಪ್ಡೇಟ್ ಆಗಿಲ್ಲ, ಆಯುರ್ವೇದ ವೈದ್ಯರಿಗೆ ವೈರಸ್ ಬ್ಯಾಕ್ಟೀರಿಯಾದ ಕಾಯಿಲೆಗಳನ್ನು ಗುಣಪಡಿಸುವುದಕ್ಕೆ ಬರುವುದಿಲ್ಲ. ಆಯುರ್ವೇದ ಔಷಧಿ ತೆಗೋಬೇಕಾದ್ರೆ ಮಾಂಸವನ್ನು ಬಿಡಬೇಕು. ಉಷ್ಣ ಮತ್ತು ಶೀತಗಳಿಂದ ಆಗುವ ಕಾಯಿಲೆಗಳಿಗೆ ಮಾತ್ರ ಆಯುರ್ವೇದದ ಚಿಕಿತ್ಸೆ ಲಭ್ಯ. ಆಯುರ್ವೇದ ಅಂದರೆ ಬರೀ ಬಾಡಿ ಮಸಾಜ್. ಆಯುರ್ವೇದ ಔಷಧಿಗಳು ಕಹಿ. ಆಯುರ್ವೇದ ತುಂಬಾ ಹೀಟ್ ಮಾಡುತ್ತೆ. ಆಯುರ್ವೇದ ಔಷಧಿಗಳಲ್ಲಿ ಲೆಡ್- ಮರ್ಕ್ಯುರಿ ಇರೋದ್ರಿಂದ ಅದು ವಿಷ. ಆಯುರ್ವೇದ ಅಂದ್ರೆ ಮನೆ ಮದ್ದು. ಆಯುರ್ವೇದ ಚಿಕಿತ್ಸೆ ಅಂದರೆ ಅಜ್ಜಿ ಹೇಳುವ ಅಡುಗೆ ಮನೆಯ ಚಿಕಿತ್ಸೆಗಳು. ಆಯುರ್ವೇದ ಔಷಧಿ ತೆಗೆದುಕೊಂಡರೆ ಗ್ಯಾರಂಟಿ ಗಂಡು ಮಗು ಆಗುತ್ತೆ. ಆಯುರ್ವೇದ ವೈದ್ಯರು ಅಂದ್ರೆ ಅಳಲೇಕಾಯಿ ಪಂಡಿತರು. ವಾತ-ಪಿತ್ತ-ಕಫ ಬರಿ ಇಮ್ಯಾಜಿನೇಷನ್ ಅಷ್ಟೇ... ಇತ್ಯಾದಿ ಇತ್ಯಾದಿ ...

ಇವಿಷ್ಟು ಕಲ್ಪನೆಗಳು ಅಥವಾ ಅಭಿಪ್ರಾಯಗಳು ಒಂದು ಕಡೆಯಾದರೆ ಮತ್ತೊಂದು ಕಡೆ ಇರುವ ಬಹಳ ಮುಖ್ಯವಾದ ಅಭಿಪ್ರಾಯವೆಂದರೆ ಆಯುರ್ವೇದ ಔಷಧಿಗಳು ಮತ್ತು ಚಿಕಿತ್ಸೆಗಳು ಬಹಳ ನಿಧಾನ. ಮೊನ್ನೆ ಯಾವುದೋ ಒಂದು ಮಗುವಿಗೆ ರಾತ್ರೋರಾತ್ರಿ ತೀವ್ರವಾದ ಜ್ವರ ಪ್ರಾರಂಭವಾಯಿತು. ಮಗುವಿನ ತಾಯಿ ಆಯುರ್ವೇದ ಚಿಕಿತ್ಸಾಲಯಕ್ಕೆ ಮಗುವನ್ನು ಕರೆದುಕೊಂಡು ಹೊರಟಿದ್ದೇನೆ ಎಂದು ಹೇಳಿದ್ದೆ ತಡ, ಪಕ್ಕದ ಮನೆಯವರು ತಕ್ಷಣ ಮಧ್ಯೆ ಬಾಯಿ ಹಾಕಿ 'ಅಯ್ಯೋ ಆಯುರ್ವೇದಾನಾ? ಅದು ಏನಿದ್ದರೂ ಸೊಂಟ ನೋವು / ಗಂಟು ನೋವಿಗೆ ಸರಿ. ಇದಕ್ಕೆಲ್ಲ ಅಲ್ಲಮ್ಮಾ!' ಎಂದರು. ಆ ಮಗುವಿನ ಚಿಕ್ಕಪ್ಪನೂ ಸಹ 'ಅಯ್ಯೋ, ಇಂತಹ ಸಂದರ್ಭದಲ್ಲಿ ಯಾಕೆ ಪ್ರಯೋಗ ಮಾಡ್ತೀಯಾ? ಹಾಸ್ಪಿಟಲ್‌ಗೆ ಹೋಗೋಣ' ಅಂತ ಹೇಳಿದ್ರು ಮಗುವಿನ ಚಿಕ್ಕಮ್ಮನಂತೂ, 'ನೋಡಮ್ಮ, ಇದು ತಕ್ಷಣ ಚಿಕಿತ್ಸೆ ಕೊಡಿಸುವ ಸಂದರ್ಭ. ಆಯುರ್ವೇದ ತುಂಬಾ ನಿಧಾನ, ಆಮೇಲೆ ಪ್ರಾಣಕ್ಕೆ ಏನಾದರೂ ಅಪಾಯವಾದರೆ ನೀನೇ ಹೊಣೆ' ಎಂದು ಹೆದರಿಸಿಯೇ ಬಿಟ್ಟರು. ಹಾಗಾಗಿ ಆ ಮಗುವಿನ ತಾಯಿ ದೂರವಾಣಿಯಲ್ಲಿಯೇ ಮಗುವಿನ ಜ್ವರದ ತಾಪವನ್ನು ಇಳಿಸುವ ಕೆಲವು ಪರಿಹಾರಗಳನ್ನು ಕೇಳಿಕೊಂಡರು. ಅದನ್ನು ಪಾಲಿಸಿದ ಮೇಲೆ ಮಗುವಿನ ಜ್ವರವು ವೇಗವಾಗಿ ಇಳಿದಿದ್ದನ್ನು ಕಂಡು ಎಲ್ಲರೂ ಹುಬ್ಬೇರಿಸಿದರು- ಆಯುರ್ವೇದದಲ್ಲಿ ಇಷ್ಟೊಂದು ಬೇಗ ಗುಣವಾಗುತ್ತಾ ಎಂದು. ಆಗ ಯಾರೋ ಹಿಂದೆ ಹೇಳಿದ್ದು ನೆನಪಾಯಿತು. ಆಯುರ್ವೇದ ಚಿಕಿತ್ಸೆ ತುಂಬಾ ನಿಧಾನವಾಗಿ ಕೆಲಸ ಮಾಡುತ್ತಲ್ವಾ ಡಾಕ್ಟ್ರೇ. ಎಂದು ಹೇಳಿದರು. ಆದರೆ, ಅವರು ತಂದಿದ್ದ ದಪ್ಪನೆಯ ಮೆಡಿಕಲ್ ಫೈಲ್ ಅನ್ನು ನೋಡುತ್ತಾ ಎನಿಸಿದ್ದು ಆಯುರ್ವೇದಕ್ಕೆ ಬರುವವರು ತುಂಬಾ ನಿಧಾನವೇ ಹೊರತು ಆಯುರ್ವೇದವಲ್ಲ ಎಂದು. ಬೇರೆ ಎಲ್ಲ ವೈದ್ಯಕೀಯ ಪದ್ಧತಿಗಳನ್ನು ಪ್ರಯೋಗ ಮಾಡಿ, ಬೇರೆ ಬೇರೆ ಕಡೆ ಸುತ್ತಾಡಿ, ಎಲ್ಲ ರೀತಿಯ ಚಿಕಿತ್ಸೆಗಳನ್ನು ತೆಗೆದುಕೊಂಡು, ಸಿಗುವ ಎಲ್ಲ ಮಾತ್ರೆಗಳನ್ನು ನುಂಗಿ, ಪ್ರಾರಂಭಿಕ ಕಾಯಿಲೆಯು ಯಾವ ಯಾವ ಸ್ವರೂಪವನ್ನೋ ಪಡೆದುಕೊಂಡು ತೊಂದರೆ ಕಡಿಮೆಯಾಗದೆ ಇದ್ದಾಗ ನೆನಪಾಗುವುದು ಆಯುರ್ವೇದ! ಆದರೆ, ಎಲ್ಲರೂ ಹೇಳುವುದು ಮಾತ್ರ ಆಯುರ್ವೇದ ನಿಧಾನವೆಂದು. ಯಾವುದೇ ರೋಗವನ್ನು ಮೊಳಕೆಯಲ್ಲೇ ಸಂಪೂರ್ಣವಾಗಿ ಗುಣಪಡಿಸುವುದು ಬಹಳ ಸುಲಭ ಮತ್ತು ಶೀಘ್ರ! ಆದರೆ ಅದೇ ವ್ಯಾಧಿಯು ಹೆಮ್ಮರವಾದಾಗ ಅದನ್ನು ಮತ್ತೆ ಬುಡ ಸಮೇತ ಕಿತ್ತೊಗೆಯಲು ಸಾಕಷ್ಟು ಸಮಯವೇ ಬೇಕು. ಆದರೆ ಆಯುರ್ವೇದ ನಿಜವಾಗಿಯೂ ನಿಧಾನವೇ ಎಂದು ನೋಡೋಣ.

ಸ್ನೇಹಿತರೇ, ರೋಗಿಗಳು ಮತ್ತು ಅವರ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಪ್ರಯತ್ನಿಸುತ್ತಿರುವ ಪ್ರತಿಯೊಂದು ವೈದ್ಯಕೀಯ ವ್ಯವಸ್ಥೆಗೂ ಆಯುರ್ವೇದವು ಅತ್ಯಂತ ಸುಂದರವಾದ ಮಾರ್ಗಸೂಚಿಯನ್ನು ನೀಡುತ್ತದೆ. ಅದು ಹೇಳುತ್ತದೆ, ಚಿಕಿತ್ಸೆಯು (ಔಷಧಿಗಳ ರೂಪದಲ್ಲಿರಬಹುದು, ಶಸ್ತ್ರಚಿಕಿತ್ಸೆ, ಶಮನ ಚಿಕಿತ್ಸೆಗಳು, ಆಹಾರಕ್ರಮ, ಸಮಾಲೋಚನೆ ಇತ್ಯಾದಿ) ಒಂದು ರೋಗವನ್ನು ಗುಣಪಡಿಸುವಾಗ ಇನ್ನೊಂದು ರೋಗವನ್ನು ಪ್ರಚೋದಿಸಿದರೆ ಅದು ಸರಿಯಾದ ಚಿಕಿತ್ಸೆಯಲ್ಲ; ಬದಲಿಗೆ, ಸರಿಯಾದ ಚಿಕಿತ್ಸೆ ಅಥವಾ 'ಶುದ್ಧ ಚಿಕಿತ್ಸಾ' ಎಂದರೆ, ಒಂದು ರೋಗವನ್ನು ಶಮನ ಮಾಡುವಾಗ ಮತ್ತೊಂದು ಕಾಯಿಲೆಯನ್ನು ಪ್ರಚೋದಿಸದೆ ಸಾಮ್ಯತೆಯನ್ನು ನೀಡುವಂತಹದ್ದು. ಇದು ಪ್ರತಿ ಚಿಕಿತ್ಸೆಯ ಗುರಿಯಾಗಿರಬೇಕು. ಅಂತೆಯೇ, ತಪ್ಪು ಚಿಕಿತ್ಸೆಯ ಪರಿಣಾಮದಿಂದ ಉದ್ಭವಿಸುವ ರೋಗವನ್ನು ಗುಣಪಡಿಸಲು ಕಷ್ಟಸಾಧ್ಯ! ಇದು ಎಲ್ಲ ವೈದ್ಯರಿಗೂ ಆಯುರ್ವೇದ ನೀಡುವ ಗಂಭೀರ ಸೂಚನೆ!

ಈ ತತ್ವಶಾಸ್ತ್ರವು ಚಿಕಿತ್ಸಾಲಯದಲ್ಲಿ ಕಂಡ ಕೆಲವು ಉದಾಹರಣೆಗಳನ್ನು ನೆನಪಿಸುತ್ತದೆ:

ರೋಗಿ 1 – ನೆಗಡಿ ಪ್ರಾರಂಭವಾಗುತ್ತದೆ – ಔಷಧಿಯ ಕೋರ್ಸ್ ಶುರು – ಶೀತವು ಜ್ವರವಾಗಿ ಬೆಳೆಯುತ್ತದೆ – ಅದಕ್ಕೆ ಮತ್ತೊಂದು 'ಫಾಸ್ಟ್ ಮೆಡಿಸಿನ್' ಸೇವಿಸಿದಾಗ – ಜ್ವರವು ಒಣ ಕೆಮ್ಮಾಗಿ ಬದಲಾಗುತ್ತದೆ, ಅದು ವಾರಗಟ್ಟಲೆ ಇರುತ್ತದೆ, ಜೊತೆಗೆ ಸಾಕಷ್ಟು ದೌರ್ಬಲ್ಯವೂ ಸೇರಿಕೊಳ್ಳುತ್ತದೆ. ಯಾವ ಔಷಧಕ್ಕೂ ಬಗ್ಗದಿದ್ದಾಗ ಅವಳು ಆಯುರ್ವೇದ ವೈದ್ಯರನ್ನು ಸಂಪರ್ಕಿಸುತ್ತಾಳೆ.

ರೋಗಿ 2 – ಉಸಿರಾಟದ ತೊಂದರೆ / ಶ್ವಾಸದ ಸಮಸ್ಯೆ – ಔಷಧಿಗಳ ದೀರ್ಘ ಕೋರ್ಸ್ ಅನ್ನು ನೀಡಲಾಯಿತು – ಸ್ವಲ್ಪ ಸಮಯದ ನಂತರ ಶ್ವಾಸ ಕಡಿಮೆಯಾಯಿತಾದರೂ, ದಿನ ಕಳೆದಂತೆ ಚರ್ಮದ ತೊಂದರೆ ಪ್ರಾರಂಭವಾಗಿ ಅದು ಎಕ್ಜೀಮಾ ಕಡೆ ತಿರುಗಿತು ಆಗ ಸಹಾಯಕ್ಕಾಗಿ ಆಯುರ್ವೇದ ಚಿಕಿತ್ಸೆಯನ್ನು ಪಡೆಯಲು ನಿರ್ಧರಿಸಿ ಕ್ಲಿನಿಕ್ ಗೆ ಬಂದರು.

ರೋಗಿ 3 – ಕೆಟ್ಟ ಜೀರ್ಣಕ್ರಿಯೆ ಮತ್ತು ಹೊಟ್ಟೆ ನೋವು ಸಮಸ್ಯೆ ಜಾಸ್ತಿ ಆಯಿತು – 'ವೇಗದ ಪರಿಹಾರ' ಬೇಕೆಂದು – ನೋವು ನಿವಾರಕ ಮಾತ್ರೆಗಳನ್ನು ತೆಗೆದುಕೊಂಡರು – ನಂತರ ವಿಪರೀತ ಮುಟ್ಟಿನ ನೋವು ಪ್ರಾರಂಭವಾಯಿತು – ಮತ್ತೆ ತ್ವರಿತ ಪರಿಹಾರವನ್ನು ತೆಗೆದುಕೊಂಡರು (ಪೇನ್ ಕಿಲರ್) – ಸ್ವಲ್ಪ ಸಮಯದ ನಂತರ ಅಸಹನೀಯ ತಲೆನೋವು ಕಾಣಿಸಿಕೊಂಡಿತು – ನೋವಿನ ಗುಳಿಗೆ ಅವಳ ನೋವನ್ನು 'ವೇಗವಾಗಿ' ಕೊಂದಿತು- ಆದರೆ ದಿನ ಕಳೆದಂತೆ ಸ್ತನಗಳಲ್ಲಿ ತೀವ್ರವಾದ ನೋವು ಕಾಣಿಸಿಕೊಂಡಿತು! ಸುಮಾರು ಒಂದು ವರ್ಷಗಳ ಕಾಲ ನಡೆದ ತನ್ನ ನೋವಿನ ಕಥೆಯನ್ನು ಕೊನೆಗೊಳಿಸಲು ಆಯುರ್ವೇದಕ್ಕೆ ಬಂದರು!

ಮೇಲಿನ ಎಲ್ಲ ಪ್ರಕರಣಗಳಲ್ಲಿ ನಾನು ಕಂಡ ಸಾಮಾನ್ಯ ವಿಷಯವೆಂದರೆ ಕಾಯಿಲೆ ಬಂದಾಗ Quick Relief ಬಯಸುವುದು ಮತ್ತು ಆಯುರ್ವೇದವನ್ನು 'ನಿಧಾನ' ಎಂದು ಭಾವಿಸಲು ಆಯುರ್ವೇದ ಚಿಕಿತ್ಸೆಗೆ ಬರದಿರುವುದು.

ವೇಗವಾಗಿ ಶಮನ ಪಡೆಯಲು ಸೇವಿಸಿದ ಗುಳಿಗೆಗಳಿಂದ ನಿಜವಾಗಿ ಆಗಿದ್ದಾದರೂ ಏನು? ಹೌದು! ಆ ಗುಳಿಗೆಗಳಿಂದ ಆರಂಭಿಕ ಸಮಸ್ಯೆಯ ತೀವ್ರತೆಯು ತಕ್ಷಣವೇ ಕಡಿಮೆ ಆದರೂ ಸಹ ಅದು ಬೇರೆ ಬೇರೆ ಕಾಯಿಲೆಗಳ ಸ್ವರೂಪ ಪಡೆದು ಅವುಗಳಿಂದ ನರಳುವ ಅವಧಿಯನ್ನೇನು ಕಡಿಮೆ ಮಾಡಲಿಲ್ಲ. ಹಾಗಾದರೆ ಸ್ನೇಹಿತರೆ ನೀವೇ ಯೋಚನೆ ಮಾಡಿ: ನೀವು ಸೇವಿಸುವ, ಬಹಳ ಪ್ರಿಯವಾದ 'ಫಾಸ್ಟ್ ಮೆಡಿಸಿನ್' ನಿಜವಾಗಿಯೂ ಸಹಾಯ ಮಾಡುತ್ತಿದೆಯೇ? ಬನ್ನಿ ಈ 'ವೇಗ' ಮತ್ತು 'ನಿಧಾನ' ಚಿಕಿತ್ಸೆಗಳ ಬಗ್ಗೆ ಸ್ವಲ್ಪ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡೋಣ!

ಬೇರೆ ಯಾವುದೋ ವೇಗವಾಗಿ ಕೆಲಸ ಮಾಡುವ ವಸ್ತುವನ್ನು ಆಧಾರವಾಗಿ ಇಟ್ಟುಕೊಂಡಾಗ ಮಾತ್ರ ಮತ್ತೊಂದು ವಸ್ತುವನ್ನು ನಿಧಾನ ಎಂದು ಪರಿಗಣಿಸಲು ಸಾಧ್ಯ. ಇದೇ ತತ್ವವನ್ನು ನಾವು ವೈದ್ಯಕೀಯ ಪದ್ಧತಿಗಳಿಗೂ ಅನ್ವಯಿಸುವುದಾದರೆ ಆಯುರ್ವೇದವನ್ನು 'ನಿಧಾನ' ಎಂದು ಕರೆಯುವಂತೆ ಮಾಡುವ ಆ 'ಫಾಸ್ಟ್ ವರ್ಕಿಂಗ್' ಔಷಧಿಗಳ ಸಮಾಚಾರವೇನು?ಆ 'ಫಾಸ್ಟ್ ಮೆಡಿಸಿನ್' ವಾಸ್ತವವಾಗಿ ಏನು ಮಾಡುತ್ತದೆ? Immediate Pain Relief ಎಂದು ಬೇರೆ ಬೇರೆ ರಿಸರ್ಚ್‌ಗಳು ಮತ್ತು ಆಡ್ ಗಳು ಸಾರುವಂತೆ, ಪೇನ್ ಕಿಲರ್ಗಳಿಗೆ ನಿಜವಾಗಿಯೂ ಸಮಸ್ಯೆಯ ಆಳಕ್ಕೆ ಹೋಗಲು ಸಮಯವೇ ಇಲ್ಲ. ಏಕೆಂದರೆ ಇದು ನಿಮಿಷಗಳಲ್ಲಿ ನಿಮಗೆ ಫಲಿತಾಂಶಗಳನ್ನು ನೀಡಬೇಕಾಗುತ್ತದೆ! ಆದ್ದರಿಂದ ಅದು ಮತ್ತೊಂದು ಸುಲಭ ದಾರಿಯನ್ನು ಹುಡುಕಿಕೊಳ್ಳುತ್ತದೆ . ಅದೇನಪ್ಪ ಅಂದರೆ , ರೋಗಲಕ್ಷಣಗಳಿಂದ ನಿಮ್ಮ ಅರಿವಿನ ಸಂಪರ್ಕವನ್ನು ಕಡಿತಗೊಳಿಸುವುದು! ಯಾವ ನರಗಳು ನೋವನ್ನು ನಿಮ್ಮ ಗಮನಕ್ಕೆ ತರುತ್ತದೆಯೋ ಆ ನರಗಳನ್ನು block ಮಾಡುವುದು. ಈ ಕ್ರಿಯೆಯು ಎಷ್ಟು ಗಾಢವಾಗಿ ನಡೆಯುತ್ತದೆ ಎಂದರೆ ರೋಗಲಕ್ಷಣಗಳು ಮತ್ತು ಮೂಲ ಸಮಸ್ಯೆಯು ದೇಹದಲ್ಲಿ ಗಟ್ಟಿಯಾಗಿ ನೆಲೆಯೂರಿದ್ದರೂ ಸಹ ನೀವು ಮಾತ್ರ ಅವುಗಳನ್ನು ಅನುಭವಿಸುವುದೇ ಇಲ್ಲ. ಸ್ನೇಹಿತರೇ , ನೋವಿನ ಗುಳಿಗೆಗಳಿಗೆ ಇದಿಷ್ಟೇ ಕೆಲಸವೇ ಹೊರತು , ನೀವು ರೋಗದಿಂದ ಚೇತರಿಸಿಕೊಳ್ಳಲು ಅದು ಯಾವ ರೀತಿಯೂ ಸಹಾಯ ಮಾಡುತ್ತಿಲ್ಲ . ಇದು ಸ್ಪಷ್ಟವಾಗಿ ಸಮಸ್ಯೆಯ ಸ್ವರೂಪವನ್ನು ಮಾತ್ರ ಬದಲಾಯಿಸುತ್ತಿದೆಯೇ ಹೊರತು ನಿಮ್ಮನ್ನು 'ಗುಣಪಡಿಸುತ್ತಿಲ್ಲ' !

ಇನ್ನು, ನಿಧಾನ ಎಂದು ಕರೆಯಲ್ಪಡುವ ಆಯುರ್ವೇದ ಔಷಧವು ಏನು ಮಾಡುತ್ತದೆ ಎಂದು ನೋಡೋಣ. ಮೊದಲನೆಯದಾಗಿ, ಅದು ನಿಮ್ಮ ಸಮಸ್ಯೆಯ ಮೂಲಕ್ಕೆ ಹೋಗಲು ಸ್ವಲ್ಪ ಸಮಯವನ್ನು ತೆಗೆದುಕೊಳ್ಳುತ್ತದೆ. ಆದರೆ ನೆನಪಿಡಿ, Diagnosis ಸರಿಯಾಗಿ ಚಿಕಿತ್ಸೆ ಪ್ರಾರಂಭವಾದಾಗ ಇದು ಕ್ಷಣಾರ್ಧದಲ್ಲಿಯೂ ಸಂಭವಿಸಬಹುದು. ಎಷ್ಟೋ ರೋಗಿಗಳಲ್ಲಿ ಕೆಲವೇ ಗಂಟೆಗಳೊಳಗೆ ಜ್ವರದ ತಾಪವನ್ನು ಇಳಿಸಿದ್ದುಂಟು, ಸುಟ್ಟ ಗಾಯಗಳ ವೇದನೆಯನ್ನು ಶಮನ ಮಾಡಿದ್ದುಂಟು, ತೀವ್ರವಾದ ನೋವನ್ನು ಕಡಿಮೆಮಾಡಿದ್ದುಂಟು.

ನಂತರ, ಆ ನಿಧಾನ ಔಷಧವು ದೇಹದಲ್ಲಿನ ಬೇರೇ ಬೇರೇ ರೀತಿಯ ಅಸಮತೋಲನವನ್ನು ಸಮತೋಲನಗೊಳಿಸಲು ಪ್ರಯತ್ನಿಸುತ್ತದೆ. ಜೊತೆಗೆ, ಅಸಮತೋಲನಕ್ಕೆ ಕಾರಣವಾದ ಪರಿಸರವನ್ನು ಸರಿದೂಗಿಸುತ್ತದೆ. ವ್ಯಾಧಿ ಉತ್ಪತ್ತಿಯ ಕಾರಣವನ್ನು ನಿವಾರಿಸುವ ಮೂಲಕ ಅಥವಾ ಅದನ್ನು ದೇಹದಿಂದ ಹೊರಹಾಕುವ ಮೂಲಕ ದೋಷಗಳ ಸಾಮ್ಯತೆಯನ್ನು ಸಾಧಿಸುವುದರ ಜೊತೆಗೆ ಧಾತುಗಳನ್ನು ಬಲಗೊಳಿಸಿ ಸ್ವಾಸ್ಥ್ಯವನ್ನು ಸ್ಥಾಪಿಸುತ್ತದೆ. ಈ ಎಲ್ಲ ಪ್ರಕ್ರಿಯೆಗಳಿಂದ ನೀವು ಗುಣಮುಖರಾಗುತ್ತೀರಿ, ಮತ್ತೆ ಆರೋಗ್ಯವನ್ನು ಅನುಭವಿಸುತ್ತೀರಿ! ನಿಜವಾದ ಅರ್ಥದಲ್ಲಿ ಗುಣಮುಖರಾಗುವುದೆಂದರೆ ರೋಗೋಪಶಮನವಾಗಿ, ಆ ಪ್ರಕ್ರಿಯೆಯಲ್ಲಿ ಬೇರೇ ಯಾವ ಕಾಯಿಲೆಯೂ ಉತ್ಪತ್ತಿಯಾಗದೆ, ಶರೀರ-ಇಂದ್ರಿಯ-ಮನಗಳಲ್ಲಿ ಲವಲವಿಕೆಯ ಅನುಭವವಾಗುವುದು. ಆದರೆ ಆಯುರ್ವೇದದ ಚಿಕಿತ್ಸೆಯ ಪ್ರಯತ್ನ ಇಲ್ಲಿಗೇ ನಿಲ್ಲುವುದಿಲ್ಲ. ಆಯುರ್ವೇದ ವೈದ್ಯರು ನಿಮ್ಮ ಆಹಾರ – ವಿಹಾರ – ವಿಚಾರಗಳ ಬಗ್ಗೆ ತಿಳಿದುಕೊಂಡು, ನಿಮ್ಮ ಯಾವ ತಪ್ಪು ಕ್ರಮದಿಂದ ನಿಮಗೆ ಕಾಯಿಲೆ ಬಂತೆಂದು ನಿಮಗೆ ತಿಳಿಸುತ್ತಾರೆ. ಉದಾಹರಣೆಗೆ- ಅಲರ್ಜಿಯ ಸಮಸ್ಯೆಯಿಂದ ಹಲವಾರು ವರ್ಷಗಳಿಂದ ವ್ಯಕ್ತಿಯೊಬ್ಬರು ನರಳುತ್ತಿದ್ದರು. ಎಷ್ಟು ಉಪಚಾರ ಮಾಡಿಕೊಂಡರೂ ಸಮಾಧಾನ ಸಿಗಲಿಲ್ಲ. ನಂತರ ಬೇರೆ ದಾರಿ ತೋಚದೆ ಆಯುರ್ವೇದ ವೈದ್ಯರ ಬಳಿ ಹೋದಾಗ, ವೈದ್ಯರು ಅವರನ್ನು ದೀರ್ಘವಾಗಿ ವಿಚಾರಿಸಿದಾಗ ಸಮಸ್ಯೆಯ ಕಾರಣ ತಿಳಿಯಿತು. ವೈದ್ಯರು ಆ ರೋಗಿಯ ನೀರು ಸೇವನಾ ಕ್ರಮವನ್ನು ತಿದ್ದುಪಡಿಸಿದಾಗ ಸಮಸ್ಯೆ ಬೇಗ ಪರಿಹಾರವಾಗಿದ್ದಲ್ಲದೇ ಆ ಜ್ಞಾನವು ಅವರಿಗೆ ಮತ್ತೆ ಆ ರೋಗವು ಮರುಕಳಿಸದ ಹಾಗೆ ಕಾಪಾಡಿತು. ಹೀಗೆ ಮಾಡಿದಾಗ ಮಾತ್ರ ಚಿಕಿತ್ಸೆ ಸಾರ್ಥಕ ಮತ್ತು ಸಂಪೂರ್ಣ! ಇದು ನಿಜವಾದ ಅರ್ಥದಲ್ಲಿ ಚಿಕಿತ್ಸೆಯಾಗಿದೆ. ಆದರೆ, ಫಾಸ್ಟ್ ಮೆಡಿಸಿನ್ ಕೇವಲ ರೋಗಲಕ್ಷಣಗಳನ್ನು ಮುಚ್ಚಿಡುವ ಬ್ಯಾಂಡ್ ಏಡ್ ಆಗಿದೆ ಅಷ್ಟೇ! ಗುಳಿಗೆ ನುಂಗಿದ 5 ನಿಮಿಷದಲ್ಲಿ ಸಿಗುವ ಸಮಾಧಾನ ಕ್ಷಣಿಕ ಮತ್ತು ಎಂದಿಗೂ ಅಪೂರ್ಣ! ಹಾಗಾಗಿ ಈ ಎರಡೂ ಪದ್ಧತಿಗಳನ್ನು ಒಂದೇ ತಕ್ಕಡಿಯಲ್ಲಿ ಹಾಕಿ ತೂಗಿ ಒಂದು slowಮತ್ತೊಂದು fastಎಂದು ಹೇಳುವುದಕ್ಕೆ ಯಾವ ಅರ್ಥವೂ ಇಲ್ಲ!

ಸ್ನೇಹಿತರೆ, ಆಯುರ್ವೇದ ನಿಧಾನವಲ್ಲ; ಅದು ತೆಗೆದುಕೊಳ್ಳುವ ಸಮಯವು ನಿಮಗೆ ಚಿಕಿತ್ಸೆ ನೀಡಲು, ನಿಮ್ಮನ್ನು ಗುಣಪಡಿಸಲು ಮತ್ತು ನಿಮ್ಮನ್ನು ಪುನಃ ಸ್ವಸ್ಥರನ್ನಾಗಿಸಲು ಅಗತ್ಯವಿರುವ ನಿಜವಾದ ಸಮಯ! ಹಾಗಾಗಿ ನೀವು ಆರಿಸಿಕೊಳ್ಳಿ – ನೀವು ಅನಾರೋಗ್ಯವನ್ನು ಗುಣಪಡಿಸಿಕೊಳ್ಳಲು ಬಯಸುತ್ತೀರಾ ಅಥವಾ ಅದನ್ನು ಕೇವಲ ಬಚ್ಚಿಡಲು ಬಯಸುವಿರಾ? 10 ವರ್ಷಗಳಿಂದ ಇರುವ ಕಾಯಿಲೆಯನ್ನು 10 ನಿಮಿಷದಲ್ಲಿ ಸರಿ ಮಾಡುವುದು ಸರಿಯೇ ಎಂದು ನೀವೇ ಯೋಚಿಸಿ!

ಪ್ರಸ್ತುತ

ಡಾ. ಪ್ರಶಾಂತ್ ಎ. ಎಸ್

ತುಳು ಚಿತ್ರರಂಗಕ್ಕೆ ಬೇಕು ಹೊಸ ಪ್ರಯೋಗ!

ತುಳು ಚಿತ್ರರಂಗ ಅನೇಕ ವರ್ಷಗಳಿಂದ ಹಾಸ್ಯದ ಜಾಡಿಗೆ ಬಿದ್ದು ಅದರಿಂದ ಹೊರಬರಲಾಗದ ಮಟ್ಟಿಗೆ ಹಾಸ್ಯಕ್ಕೆ ಜೋತು ಬಿದ್ದಿದೆ. ತುಳುವರು ಹಾಸ್ಯಕ್ಕೆ ನೀಡಿರುವ ಮಹತ್ವವೋ ಅಥವಾ ಚಿತ್ರರಂಗವೇ ಪ್ರೇಕ್ಷಕರಲ್ಲಿ ಈ ಅಭಿರುಚಿಯನ್ನು ಬೆಳೆಸಿತೊ ಅನ್ನುವುದು ಒಂದು ದ್ವಂದ್ವ. ನನ್ನ ಅಧ್ಯಯನದ ಪ್ರಕಾರ ಈ ಹಾಸ್ಯ ತುಳುವರ ಬದುಕನ್ನು ಹೆಚ್ಚು ಪ್ರಭಾವಿಸಿದ್ದು ತುಳುರಂಗಭೂಮಿ. ತುಳು ಚಿತ್ರರಂಗದಲ್ಲೂ ಹಾಸ್ಯವೇ ಪ್ರಧಾನವಾಗಿರಲು ಇದೂ ಒಂದು ಪ್ರಮುಖ ಕಾರಣ. ತುಳು ಚಿತ್ರರಂಗ ಹಾಸ್ಯವನ್ನೇ ನೆಚ್ಚಿಕೊಳ್ಳಲು ಮತ್ತೊಂದು ಪ್ರಮುಖ ಕಾರಣ ಗಂಭೀರ ಸಿನಿಮಾಗಳಿಗೆ ತುಳುವರು ತೋರಿದ ನಿರ್ಲಕ್ಷ್ಯ.

ಸಿನಿಮಾ ಅಥವಾ ಚಲನಚಿತ್ರ ಕೇವಲ ಮನರಂಜನಾ ಮಾಧ್ಯಮವಲ್ಲ. ಅದು ನಮ್ಮ ಬದುಕು ಮತ್ತು ಸಂಸ್ಕೃತಿಯ ಪ್ರತಿಬಿಂಬ. ಸಿನಿಮಾ ಪ್ರೇಕ್ಷಕರನ್ನು ಮನರಂಜಿಸುವುದರ ಜೊತೆಗೆ ಜಾಗೃತಿಯನ್ನು ಮೂಡಿಸುತ್ತದೆ. ಒಂದು ಕಾಲಘಟ್ಟದ ಬದುಕು ಮತ್ತು ಸಂಸ್ಕೃತಿಯನ್ನು ದಾಖಲೀಕರಣ ಮಾಡುತ್ತದೆ. ಅನೇಕ ಸಂದರ್ಭದಲ್ಲಿ ಕೇವಲ ಹಾಸ್ಯದ ಹೊನಲಿನಲ್ಲಿ ಸಿನಿಮಾದ ನಿಜವಾದ ಉದ್ದೇಶ ತುಳು ಚಿತ್ರರಂಗದಲ್ಲಿ ಕೊಚ್ಚಿ ಹೋಗಿರುವುದಂತೂ ಸತ್ಯ. ಇತ್ತೀಚಿನ ವರ್ಷಗಳಲ್ಲಿ ತುಳು ಭಾಷೆಯಲ್ಲಿ ನಿರ್ಮಾಣಗೊಂಡ ಚಿತ್ರಗಳಲ್ಲಿ ಉತ್ತಮ ಪ್ರಯತ್ನ ದಸ್ಕತ್. ತುಳು ಚಿತ್ರ ನಿರ್ಮಾಪಕ, ನಿರ್ದೇಶಕ ಮತ್ತು ಕಥೆಗಾರರು ಈ ಸಿನಿಮಾವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಹಾಗಾದರೆ ಈ ಹಿಂದೆ ತುಳುನಾಡಿನಲ್ಲಿ ಗಂಭೀರ ಸಿನಿಮಾಗಳು ನಿರ್ಮಾಣಗೊಂಡಿಲ್ಲವೇ? ತುಳುನಾಡಿನ ಸಂಸ್ಕೃತಿ ಮತ್ತು ಜನಜೀವನದ ಬಗೆಗಿನ ಗಂಭೀರ ಸಿನಿಮಾಗಳು ನಿರ್ಮಾಣಗೊಂಡು ಬಿಡುಗಡೆಯಾಗಿದೆ. ಆದರೆ ಅದನ್ನು ನೋಡಿದ ಪ್ರೇಕ್ಷಕರೆಷ್ಟು ಎಂದು ಅಧ್ಯಯನ ಮಾಡಿದರೆ ಅದು ಶೇ.10ನ್ನು ಮೀರುವುದಿಲ್ಲ. ಕಲಾತ್ಮಕ ಸಿನಿಮಾ ಎಂಬ ಹಣೆ ಪಟ್ಟಿಯನ್ನು ಕಟ್ಟಿಕೊಂಡಿರುವ ಸಿನಿಮಾಗಳ ಶೀರ್ಷಿಕೆಯೂ ಹೆಚ್ಚಿನ ಯುವಕ ಯುವತಿಯರಿಗೆ ಗೊತ್ತಿಲ್ಲ. ಅದು ಕೇವಲ ಪ್ರಶಸ್ತಿ ಮತ್ತು ಹೆಸರಿಗಷ್ಟೇ ಸೀಮಿತವಾಗಿದೆ. ಶಾಲಾ ಕಾಲೇಜುಗಳಲ್ಲಿ ಪ್ರದರ್ಶನ ಮಾಡಿದ ಉದಾಹರಣೆಗಳೂ ಬೆರಳೆಣಿಕೆಯಷ್ಟು ಮಾತ್ರ. ಈ ಎಲ್ಲ ವಿಚಾರಗಳನ್ನು ಗಮನಿಸಿದಾಗ 'ದಸ್ಕತ್' ಗಟ್ಟಿ ಕಥೆಯನ್ನು ಹೊಂದಿರುವ ಉತ್ತಮ ಮನರಂಜನಾತ್ಮಕ ಸಿನಿಮಾ. ಯಾವುದೇ ಸಿನಿಮಾದ ಯಶಸ್ಸು ಇರುವುದು ಉತ್ತಮ ಕಥೆ ಮತ್ತು ನಿರ್ದೇಶನದ ಮೇಲೆ ಈ ಎರಡರಲ್ಲೂ ದಸ್ಕತ್ ಗೆದ್ದಿದೆ. ಚೊಚ್ಚಲ ನಿರ್ದೇಶನವಾದರೂ ನಿರ್ದೇಶಕನ ಪ್ರಯತ್ನ ಫಲಕೊಟ್ಟಿದೆ. ಪ್ರೇಕ್ಷಕರನ್ನು ಮಾತನಾಡಿಸಿದಾಗ ಅನೇಕ ಹೊಸ ವಿಚಾರಗಳು ತಿಳಿಯುತ್ತದೆ. ಸುಮಾರು 20, 25 ವರ್ಷಗಳ ನಂತರ ಥೀಯೆಟರ್‌ಗೆ ಬಂದವರೂ ಇದ್ದಾರೆ. ಈಗಾಗಲೇ 800ಕ್ಕೂ ಅಧಿಕ ಶೋಗಳು ಆಗಿದೆ. ಅಂದರೆ ಹೆಚ್ಚು ಹಾಸ್ಯ ಮತ್ತು ಸ್ಟಾರ್ ಕಲಾವಿದರು ಇದ್ದರೆ ಮಾತ್ರ ತುಳು ಸಿನಿಮಾ ಗೆಲ್ಲುವುದು ಎಂಬ ಈ ಹಿಂದಿನ ಮಾತುಗಳನ್ನು ಈ ಸಿನಿಮಾ ಅಲ್ಲಗಳೆದಿದೆ. ಮುಖ್ಯಭೂಮಿಕೆ ಯಲ್ಲಿರುವ ಕಲಾವಿದರು ಹೊಸಬರು. ತಂತ್ರಜ್ಞರೂ ಹೊಸಬರೇ ಆಗಿದ್ದಾರೆ. ಇಲ್ಲಿ ಗೆದ್ದಿರುವುದು ಪ್ರತಿಭೆ ಮತ್ತು ಪರಿಶ್ರಮ.

ಅದೇನೆ ಇರಲಿ ಹೊಸ ಯುವಕರು ಮಾಡಿದ ಈ ಪ್ರಯತ್ನ ತುಳು ಚಿತ್ರ ಪ್ರೇಮಿಗಳಲ್ಲಿ ಹೊಸ ರೀತಿಯ ಸಿನಿಮಾಗಳ ಅಪೇಕ್ಷೆಯನ್ನು ಹುಟ್ಟು ಹಾಕಿದೆ. ಅನೇಕ ಸಂದರ್ಭದಲ್ಲಿ ಕೆಲವೊಂದು ಸಿನಿಮಾಗಳು ಆ ಚಿತ್ರರಂಗ ಮುಖ ಮಾಡಬೇಕಾದ ಹೊಸ ದಿಕ್ಕಿನ ದಾರಿಯ ಮುಂಚೂಣಿಯಲ್ಲಿ ನಿಂತು ಮೊದಲ ಹೆಜ್ಜೆಯನ್ನಿಡುತ್ತವೆ. ಆ ಹೆಜ್ಜೆಯನ್ನು ಭಿದಸ್ಕತ್‌ಭಿ ಸಿನಿಮಾ ಇಟ್ಟಿದೆ. ಪ್ರೇಕ್ಷಕರು ಮೆಚ್ಚಿಕೊಂಡಿದ್ದಾರೆ. ತುಳು ಚಿತ್ರರಂಗದ ಪ್ರಮುಖರ ಮೇಲೆ ಹೊಸ ಜವಾಬ್ದಾರಿಯನ್ನು ಹೊರಿಸಿದೆ. ಹೊಸ ಪ್ರಯತ್ನಗಳಿಗೆ, ಗಟ್ಟಿ ಕಥೆಗಳ ಮೂಲಕ ಕೋಸ್ಟಲ್‌ವುಡ್ಗೆ ಹೊಸ ಆಯಾಮವನ್ನು ನೀಡಬಹುದು ಎನ್ನುವ ಸ್ಪಷ್ಟ ಸಂದೇಶವನ್ನು ಈ ಚಿತ್ರ ರವಾನಿಸಿದೆ. ಚಲನಚಿತ್ರಗಳು ಜನಸಮುದಾಯದಲ್ಲಿ ಉಂಟು ಮಾಡುವ ಪರಿಣಾಮಗಳು ಬೇರೆಲ್ಲ ಮಾಧ್ಯಮಗಳಿಂದ ಹೆಚ್ಚು. ತುಳುನಾಡಿನಲ್ಲಿ ಅನೇಕ ರೀತಿಯ ಸಂಘರ್ಷಗಳಿವೆ ಅಧಿಕಾರಿಗಳು ಬಡವರನ್ನು ಲಂಚದ ಮೂಲಕ ಶೋಷಣೆ ಮಾಡುತ್ತಿರುವುದು. ಅರಣ್ಯವಾಸಿಗಳ ಬದುಕು ಮತ್ತು ಸಂಘರ್ಷ. ಔದ್ಯೋಗಿಕ ವಲಸೆ ಮತ್ತು ಅನಾಥ ಪ್ರಜ್ಞೆ ಎಷ್ಟೊಂದು ವಸ್ತುಗಳು ಕಣ್ಣಮುಂದೆ ಹರಡಿಕೊಂಡಿದೆ. ಆದರೆ ತುಳು ಚಿತ್ರರಂಗ ಇದನ್ನು ಇನ್ನೂ ಗಂಭೀರವಾಗಿ ತೆಗೆದುಕೊಂಡಿಲ್ಲ. ಕೇವಲ ಹಾಸ್ಯ ಪ್ರಧಾನ ಚಿತ್ರಗಳೇ ಒಂದು ಚಿತ್ರರಂಗವನ್ನು ಅನೇಕ ವರ್ಷಗಳ ಕಾಲ ಬಾಳಿಸಲಾರದು. ಹೊಸ ಪ್ರಯತ್ನಗಳು ನಿರಂತರವಾಗಿ ನಡಿಯಬೇಕು.

(ಲೇಖಕರು: ಪ್ರಾಧ್ಯಾಪಕ)

ಡಿಂಕ್ ಮನೋಭಾವ ಮತ್ತು ಕುಸಿಯುತ್ತಿರುವ ಹವ್ಯಕ ಜನಸಂಖ್ಯೆ

ಅಭಿಪ್ರಾಯ
ನಾರಾಯಣ ಯಾಜಿ
vveditoped@gmail.com

ಮೊನ್ನೆ ಮೊನ್ನೆಯಷ್ಟೇ ಮುಗಿದ ವಿಶ್ವ ಹವ್ಯಕ ಸಮ್ಮೇಳನದಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ರಾಘವೇಶ್ವರ ಭಾರತಿ ಸ್ವಾಮಿಗಳು ಮತ್ತು ಸ್ವರ್ಣವಲ್ಲಿ ಶ್ರೀಗಳು ಆಡಿದ ಮಾತುಗಳು ಒಮ್ಮಿಂದೊಮ್ಮೆಲೆ ಭುಗಿಲೆದ್ದು ಬಿಟ್ಟಿತು. ಇಬ್ಬರೂ ಸ್ವಾಮಿಗಳು ಆಡಿದ ಮಾತುಗಳಲ್ಲಿ ಮುಖ್ಯವಾಗಿರುವುದು ರಾಘವೇಶ್ವರ ಭಾರತಿ ಸ್ವಾಮಿಗಳು, ಹವ್ಯಕರು ಕನಿಷ್ಟ ಮೂರು ಮಕ್ಕಳನ್ನಾದರೂ ಹೆರಬೇಕು ಮತ್ತು ಹವ್ಯಕರಲ್ಲಿ ಡಿಂಕ್ (Double Income no Kids) ಎನ್ನುವುದು ಬರಕೂಡದು ಮತ್ತು ಸ್ವರ್ಣವಲ್ಲಿ ಶ್ರೀಗಳಾಡಿದ ಪ್ರಾಪ್ತವಯಸ್ಸಿಗೆ ಬಂದ ತಕ್ಷಣ ಮದುವೆಯಾಗಿ ಎನ್ನುವ ಮಾತುಗಳು ಇಂದು ವಿವಾದಕ್ಕೆ ಕಾರಣವಾಗಿವೆ. ಇಬ್ಬರೂ ಶ್ರೀಗಳು ಮಕ್ಕಳ ಭಾರವನ್ನು ಮಠ ಹೊರುತ್ತದೆ ಎಂದಿರುವುದೂ ಸಹ ಅನೇಕರಿಗೆ ಕಣ್ಣು ಕಿಸಿರಿಗೆ ಕಾರಣವಾಯಿತು. ಎರಡೂ ಶ್ರೀಗಳು ಇವ್ಯಾವದೂ ಮಾತುಗಳನ್ನು ತಾವುಗಳು ಬಾಯಿತಪ್ಪಿಯಾಡಿದ್ದಲ್ಲ. ತಾವು ಹೀಗೆ ಮಾತನಾಡಿದರೆ ಅದು ವಿವಾದಕ್ಕೆ ಕಾರಣವಾಗುತ್ತದೆ, ಆದರೂ ಸಮಾಜದ ಉಳಿವಿಗಾಗಿ ಈ ಸಂದೇಶವನ್ನು ಕೊಡುತ್ತೇನೆ ಎಂದು ಸ್ಪಷ್ಟವಾಗಿ ಹೇಳಿಯೂ ಇದ್ದರು. ಅವರ ಮಾತುಗಳನ್ನು ಅನುಮೋದಿಸುವಂತೆ ಸಚಿವರಾದ ದಿನೇಶ ಗುಂಡೂರಾವ್ ಸಹ ಎರಡನೆಯ ದಿನ ಮಾತನ್ನಾಡುತ್ತಾ ಫಲವಂತಿಕೆಯ ಇಳಿಕೆಯ ಪ್ರಮಾಣ ಉತ್ತರ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಕಡಿಮೆಯಾಗುತ್ತಿದೆ ಎನ್ನುವ ಕಳವಳವನ್ನು ವ್ಯಕ್ತಪಡಿಸಿದರು. ಅಲ್ಲಿ ಬಂದ ಯಾವ ರಾಜಕಾರಣಿಗಳಿಗೂ ಇಲ್ಲದ ಚಿಂತೆ ಸಾಮಾಜಿಕ ಜಾಲತಾಣದಲ್ಲಿ ಇದ್ದಕ್ಕಿದ್ದಂತೆ ಹಾಗಡ, ಹೀಗಡ ಎನ್ನುತ್ತಾ ಪಸರಿಸತೊಡಗಿತು.

ಮುಖ್ಯವಾಗಿ ಈ Fertility rateಎನ್ನುವುದು ಕೇವಲ ಹವ್ಯಕರನ್ನು ಮಾತ್ರ ಕಾಡುವ ಪ್ರಶ್ನೆಯಲ್ಲ. ಇಂದು ಜಾಗತಿಕವಾಗಿ ಜನಸಂಖ್ಯೆ ಕೆಲವು ಕಡೆ ಹೆಚ್ಚಾದರೆ ಇನ್ನು ಕೆಲವು ಕಡೆ ತೀವ್ರವಾಗಿ ಇಳಿಯತೊಡಗಿದೆ. ಇತ್ತೀಚೆಗೆ Institute for Security and Development Policy (ISDP)ಎನ್ನುವ ಸಂಸ್ಥೆ 2050ರ ವೇಳೆಗೆ ಜಪಾನ ದೇಶದ ಜನಸಂಖ್ಯೆ ಈಗಿನ 122 ಮಿಲಿಯನ್ನಿನಿಂದ 100 ಮಿಲಿಯನ್ನಿಗೆ ಮತ್ತು ದಕ್ಷಿಣ ಕೋರಿಯಾದ ಜನಸಂಖ್ಯೆ ಈಗಿನ 51.6 ಮಿ. ನಿಂದ 40 ಮಿಲಿಯನ್ನಿಗೆ ಇಳಿಯಬಹುದೆಂದು ಎಚ್ಚರಿಸಿದೆ. ಯುರೋಪ್, ರಷ್ಯಾ ಮೊದಲಾದ ದೇಶಗಳಾನ್ನು ಕಾಡುವ ಸಮಸ್ಯೆ ಇದೇ ಆಗಿದೆ. ತಳಿಶಾಸ್ತ್ರಜ್ಞರು ಇನ್ನು ಕೆಲವು ವರ್ಷಗಳಲ್ಲಿ ದಕ್ಷಿಣ ಕೋರಿಯಾ ಈ ಪ್ರಪಂಚದಿಂದಲೇ ಅಳಿಸಿಹೋಗಬಹುದು ಎಂದು ಕಳವಳ ವ್ಯಕ್ತಪಡಿಸಿದ್ದಾರೆ. 1962 ರಲ್ಲಿ ಜಾಗತಿಕವಾಗಿ ಜನಸಂಖ್ಯಾ ವೃದ್ಧಿಯ ಪ್ರಮಾಣ ಶೇ.5.38 ಇದ್ದರೆ 2021 ಈ ಪ್ರಮಾಣ ಶೇ.2.3 ಕ್ಕೆ ಇಳಿದಿದೆ. ಒಂದು ಕಾಲಕ್ಕೆ ಜನಸಂಖ್ಯಾ ಸ್ಫೋಟ ಎನ್ನುವುದು ಮಾತು ಸಾಮಾನ್ಯವಾಗಿತ್ತು. ಜಾಗತಿಕವಾಗಿ ಒಟ್ಟೂ ಜನಸಂಖ್ಯೆ ಕಳೇದೆರಡು ವರ್ಷಗಳಿಂದ 800 ಕೋಟಿಯ ಆಸುಪಾಸಿನಲ್ಲಿಯೇ ಇದ್ದು ಇನ್ನು ಐವತ್ತು ವರ್ಷಗಳಲ್ಲಿ ಇಳಿಮುಖವಾಗಬಹುದೆನ್ನುವ ಆತಂಕವೂ ಕಾಡುತ್ತಿದೆ. ವಿಶ್ವಸಂಸ್ಥೆ 2021 ರಲ್ಲಿ ಪ್ರಕಟಿಸಿದ World Population Policies 2021 & policies related to fertilityಯಲ್ಲಿ ಈ ವಿಚಾರವಾಗಿ ಗಂಭೀರವಾಗಿ ಅಲ್ಲದಿದ್ದರೂ ಜಾಗರೂಕವಾಗಿರಲು ಉಪಕ್ರಮಿಸಿದೆ.

ಇಳಿಕೆಗೆ ಕಾರಣಗಳು

ಮನೆ ತುಂಬಾ ಮಕ್ಕಳಿದ್ದ ಕಾಲದ ಸುಖದ ಕುರಿತು ಏನೇ ಬಣ್ಣಿಸಿಕೊಂಡರೂ ನಮ್ಮ ಬಾಲ್ಯದಲ್ಲಿ ಕಂಡ ವಸ್ತುಗಳನ್ನು ಕೊಡಿಸಲು ಸಾಧ್ಯವಾಗದೇ ಜಾತ್ರೆಗಳಲ್ಲಿ ಬೇಕೆಂದು ಹಟಮಾಡಿ ಹೊರಳಾಡುವ ಮಗುವಿಗೆ ಪೆಟ್ಟುಕೊಟ್ಟು ಮನೆಗೆ ತಂದು ಕೂಡಿಹಾಕಿದ ಅಮ್ಮನ ಕಣ್ಣಿನಿಂದ ಹರಿದ ನೀರನ್ನು ಕಂಡ ತಲೆಮಾರಿನವರು ತನ್ನ ಮಗುವಿಗೆ ಈ ತೊಂದರೆ ಬರಬಾರದೆಂದು ಮೊದಲು ಉಪಕ್ರಮಿಸಿದ್ದೇ ಮಿತಕುಟುಂಬದತ್ತ. ಒಂದೇ ಮಗುವಾಗಲಿ, ಕೇಳಿದ್ದನ್ನು ಕೊಡಿಸೋಣ ಎಂದು ಭೋಗದ ಬದುಕಿಗೆ ನಾಂದಿ ಹಾಡಿದ ತಲೆಮಾರನ್ನು 1980ರಿಂದೀಚೆಗೆ ವ್ಯಾಪಕವಾಗಿ ಕಾಣುತ್ತಿದ್ದೇವೆ. ಅಣ್ಣ ತಮ್ಮ ಬಂಧು ಬಳಗ ಎಲ್ಲ ಮರೆಯಾಗಿ ಸ್ವಂತ ಸಹೋದರರನ್ನು ಬಿಟ್ಟು ಉಳಿದವರನ್ನು ಇವರು ನಮ್ಮ ಕಸಿನ್ಸ್ ಎಂದು ಪರಿಚಯಿಸುವ ಮಟ್ಟಕ್ಕೆ ಸಂಬಂಧ ಇಳಿದುಬಿಟ್ಟಿತು. ಸೈಕಲ್ ತುಟ್ಟಿಯಾಗಿ ನಡದೇ ಹೋಗಬೇಕಾಗಿದ್ದ ಕಾಲದಿಂದ ತಲೆಗೊಂದು ಕಾರು, ಬೆಂಗಳೂರಿನಲ್ಲಿ ಒಂದು ಸೂರು



ಸಿಕ್ಕಾಗ ಪ್ರಪಂಚದಲ್ಲಿ ತಾವು ಸುಖಿಗಳು ಎನ್ನುವ ಭಾವದಲ್ಲಿ ತೇಲಾಡುತ್ತಿದ್ದಾರೆ. ಯಾವ ಎಂಭತ್ತರ ಯುವ ಸಮಾಜ ಮಿತ ಸಂಸಾರಕ್ಕೆ ಮನಸ್ಸು ಮಾಡಿತ್ತೋ ಅವರೆಲ್ಲಿ ಹೆಚ್ಚಿನವರು ಇಂದು ವೃದ್ಧರಾಗಿ ನೋಡಿಕೊಳ್ಳುವವರು ಇಲ್ಲದೇ ಆಶ್ರಮವನ್ನು ಸೇರಿಯೋ ಇಲ್ಲ ಮನೆಯಲ್ಲಿಯೇ ಅಸಹಾಯಕರಾಗಿರುವುದನ್ನು ಗಮನಿಸಬಹುದಾಗಿದೆ. ಅದನ್ನು ಗಮನಿಸುತ್ತಾ ಬೆಳೆದ ಇಪ್ಪತ್ತೊಂದನೆಯ ಶತಮಾನದ ತಲೆಮಾರು ತಮ್ಮ ಅಜ್ಜ ಅಜ್ಜಿಯರಲ್ಲಿ ಸಹಜವಾಗಿ ಇರಬೇಕಾದ ಮೋಹ, ಪ್ರೀತಿಗಳೆಲ್ಲವೂ ಕ್ಷೀಣವಾಗಿದೆ. ಪಾಶ್ವಿಮಾತ್ಯ ಪ್ರಪಂಚದಲ್ಲಿನ ಆಕರ್ಷಣೆ ಮತ್ತು ಕೌಟುಂಬಿಕ ಸಂಬಂಧಗಳ ಶಿಥಿಲತೆಗಳ ಪರಿಣಾಮವನ್ನು ನಾವಿಂದು ಅನುಭವಿಸುತ್ತಿದ್ದೇವೆ. ಈ ವ್ಯಾವಹಾರಿಕ ನಡವಳಿಕೆಯ ಪರಿಣಾಮವೇ ಪೂಜ್ಯ ರಾಘವೇಶ್ವರ ಶ್ರೀಗಳು ಹೇಳಿದ ಡಿಂಕ್ ಎನ್ನುವ ಮನೋವ್ಯಾಧ್ಯದ ಕುರಿತಾಗಿ.

ಡಿಂಕ್ ಎನ್ನುವ ನವತಲೆಮಾರು

Double Income No Kids ಎನ್ನುವುದರ ಸಂಕ್ಷಿಪ್ತ ರೂಪವೇ 'ಡಿಂಕ್'. ಬದುಕು ಕೇವಲ ಸುಖಕ್ಕಾಗಿ, ದುಡಿ, ಮಜಾ ಮಾಡು, ತಿರುಗಾಡು, ಮಕ್ಕಳು ಇದಕ್ಕೆಲ್ಲ ಅಡ್ಡಿಯಾಗಬಹುದಾದ ಕಾರಣ ಜೊತೆಗಿರೋಣ. ಮದುವೆ ಆಗಲೇ ಬೇಕೆಂದೇನೂ ಇಲ್ಲ; ಲಿವ್ ಇನ್ ಸಂಬಂಧವಾದರೆ ಸುಲಭ. ಸಾಮಾಜಿಕವಾಗಿ ಈ ವ್ಯಾಧಿಯನ್ನು ಗಮನಿಸಿಯೇ ಇಂದು ಸಮಾಜ ಶಾಸ್ತ್ರಜ್ಞರು ಕಳವಳವನ್ನು ವ್ಯಕ್ತಪಡಿಸುತ್ತಿದ್ದಾರೆ. ಒಂದೆಡೆ ಜಾಗತಿಕವಾಗಿ ಬದುಕುವ ವಯಸ್ಸು (Life expectency age) 72.6 (ಭಾರತದಲ್ಲಿ ಇದು 70.4) ಇದ್ದರೆ ಮುಂದುವರಿದ ದೇಶಗಳಾದ ಆಸ್ಟ್ರೇಲಿಯಾ, ಸ್ವೀಡನ್‌ಗಳಲ್ಲಿ ಈ ಪ್ರಮಾಣ 80ನ್ನು ದಾಟಿದೆ. ಪರಿಣಾಮವಾಗಿ ಜಗತ್ತು ಇಂದು ವೃದ್ಧಾಶ್ರಮವಾಗುತ್ತಿದೆ. ಸರಕಾರಗಳಿಗೆ ವೃದ್ಧರನ್ನು ನೋಡಿಕೊಳ್ಳುವುದು ಹೊರೆಯಾಗುತ್ತಿದೆ. ಜಾಗತಿಕವಾಗಿ ಭಾರತ ತರುಣರ ದೇಶವಾಗಿ ಸದ್ಯ ಗುರುತಿಸಿಕೊಳ್ಳುತ್ತಿದೆ. ಆದರೆ ಇನ್ನೊಂದು ಹದಿನೈದು ವರ್ಷಕ್ಕೆ ಈ ದೇಶವೂ ಸಹ ವೃದ್ಧರ ಸಾಲಿಗೆ ಸೇರುವುದರಲ್ಲಿ ಸಂಶಯವಿಲ್ಲ.

ಫಲವಂತಿಕೆಯ ದರ ಮತ್ತು ಪರಿಣಾಮಗಳು

ಇರುವ ಜನಸಂಖ್ಯೆಯನ್ನು ಉಳಿಸಿಕೊಳ್ಳಬೇಕಾದರೆ ಪ್ರತೀ ಮಹಿಳೆಯರ ಫಲವಂತಿಕೆಯ ದರ 2.1 ಇರಬೇಕು. ಉತ್ತರ ಭಾರತದಲ್ಲಿ ಈ ಸಂಖ್ಯೆ 2.5 ದಿಂದ ಬಿಹಾರದಲ್ಲಿ 3+ ವರೆಗೂ ಇದ್ದರೆ ದಕ್ಷಿಣ ಭಾರತದಲ್ಲಿ 1.9 ಅದರಲ್ಲಿಯೂ ಕೇರಳದಲ್ಲಿ 1.7 ಕ್ಕೆ ಕುಸಿಯುತ್ತಿದೆ. ಇದರಿಂದಾಗುವ ಸಾಮಾಜಿಕ ಅಸಮತೋಲನತ್ವದ ಕುರಿತು ಈಗಲೇ ಜಾಗ್ರತಿಯನ್ನು ಮೂಡಿಸುವ ಪ್ರಯತ್ನಗಳನ್ನು ತೆಗೆದುಕೊಳ್ಳದಿದ್ದರೆ ಗಂಭೀರ ಸಮಸ್ಯೆಗಳಿಗೆ ಕಾರಣವಾಗಬಹುದು. ಮುಖ್ಯವಾಗಿ ವೃದ್ಧರ ಸಂಖ್ಯೆ ಹೆಚ್ಚಾಗಿ ಆರೋಗ್ಯ ಮತ್ತು ಸಾಮಾಜಿಕ ಸಂರಕ್ಷಣೆ ದೇಶದ ಆರ್ಥಿಕತೆಗೆ ದೊಡ್ಡ ಹೊರೆಯಾಗಬಹುದು. ಅವರನ್ನು ಅವಲಂಬಿಸುವವರು ಇಲ್ಲದಿರುವ ಕಾರಣ ಸರಕಾರಗಳಿಗೆ ಅವರನ್ನು ನೋಡಿಕೊಳ್ಳುವ ಸಮಸ್ಯೆಯನ್ನು ಈಗಾಗಲೇ ಯುರೋಪು, ಇಸ್ರೇಲ್ ಮತ್ತು ಕೆನಡಾಗಳು ಎದುರಿಸುತ್ತಿವೆ. ಪರಿಣಾಮವಾಗಿ ಬೇರೆ ದೇಶದಿಂದ ಕೂಲಿಗಳನ್ನು ಕರೆಸಿಕೊಂಡು ಅದರ ಉಪಪರಿಣಾಮಗಳಾದ ಸಾಮಾಜಿಕ ಸ್ವಾಸ್ಥ್ಯ ಕೆಡುತ್ತಿದೆ. ಕುಶಲ ಕಾರ್ಮಿಕರ ಕೊರತೆಯ ಕಾರಣ ಅಭಿವೃದ್ಧಿಕಾರ್ಯ ಕುಂಠಿತಗೊಂಡಿದೆ. ಕೌಟುಂಬಿಕವಾಗಿ ನೋಡಿಕೊಳ್ಳುವವರು ಇಲ್ಲದೇ ಏಕಾಂಗಿತನ ಬಾಧಿಸುತ್ತಿದೆ. ಒಂದು ಸಮಾಜದ ಅಳಿವು ಎಂದರೆ ಒಂದು ಸಂಸ್ಕೃತಿಯ ಅಳಿವಾಗಿದೆ. ಹೊಟ್ಟೆಗೆ ಆಹಾರವನ್ನು ಬೆಳೆಯುವವರೇ ಇಲ್ಲದ ಕಾರಣ ಆಹಾರೋತ್ಪಾದನೆ ಕುಂಠಿತಗೊಳ್ಳುತ್ತದೆ. ಇನ್ನಷ್ಟು ನಗರೀಕರಣದಿಂದಾಗಿ ನಗರನಿರ್ವಹಣೆ ಸರಕಾರಕ್ಕೆ ದೊಡ್ಡ ತೊಂದರೆಯಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ವೃದ್ಧರ ಸಂಖ್ಯೆಯಿರುವ ದೇಶಗಳು ಇಂದು ರಕ್ಷಣೆಗೆ ಬೇಕಾದ ಸೈನ್ಯಕ್ಕೆ ಯೋಗ್ಯವಾದ ಯುವಕರು ಸಿಗದೇ ಪರಿದಾಡುತ್ತಿವೆ. ಸೈನ್ಯ ಪೋಲಿಸ್ ಮೊದಲಾದವುಗಳಿಗೆ ಜನ ಸಿಗದಿದ್ದರೆ ಸಾಮಾಜಿಕವಾಗಿ ಅಶಾಂತಿ ಹೆಚ್ಚಾಗುತ್ತದೆ.

ಹವ್ಯಕ ಸಮಾಜಕ್ಕೆ ಅನ್ವಯಿಸುವುದಾದರೆ

ಈ ದೇಶದಲ್ಲಿ ಹವ್ಯಕರ ಜನಸಂಖ್ಯೆ ಕೇವಲ ನಾಲ್ಕುವರೆಯ ಲಕ್ಷದ ಆಸುಪಾಸಿನಲ್ಲಿ ಇರಬಹುದೆಂದು ಅಂದಾಜಿಸಲಾಗಿದೆ. ಸಾಮಾಜಿಕವಾಗಿ ಅನೇಕ ಸಮಸ್ಯೆಗಳನ್ನು ಸವಾಲುಗಳನ್ನು ಎದುರಿಸಿ ಬದುಕಿದ ಪುಟ್ಟ ಸಮಾಜ (Microscopic minorities)ಇದು. ಭೂಸುಧಾರಣೆಯ ಕಾನೂನಿಂದಾಗಿ ಜಮೀನನ್ನು ಕಳೆದುಕೊಂಡು ತನ್ನ ಅಸ್ಮಿತೆಗಾಗಿ ವಲಸೆಯನ್ನು ನೆಚ್ಚಿಕೊಂಡವರು ಇವರು. ಅಹಿಚ್ಚತ್ರದಿಂದ ಬಂದ 32 ಕುಟುಂಬ ಮಯೂರವರ್ಮನ ಕಾಲದಿಂದಲೂ ಆಕ್ರಮಣವನ್ನು ಸಹಿಸಿ ಗುಡ್ಡಗಾಡುಗಳಲ್ಲಿ ಕೃಷಿ ಮತ್ತು ಋಷಿಯ ಬದುಕನ್ನು ಸವೆಸಿದವರು. ಯಾರನ್ನೂ ದೂಷಿಸದಯೇ ಬದುಕಿದ ಈ ಸಮಾಜ ಸಮಸ್ಯೆಗಳು ಎದುರಾದಾಗ ಅಲ್ಲಿಂದ ದೂರ ಸರಿದು ಬೇರೆಡೆ ನೆಲೆ ನಿಂತವೇ ಹೊರತೂ ದ್ವೇಷಿಸಲಿಲ್ಲ. ಗಮನಿಸಬೇಕಾದ ವಿಷಯ ಎಂದರೆ ಬ್ರಾಹ್ಮಣ ಎನ್ನುವುದು ಜಾತಿ ಸೂಚಕ; ಹವ್ಯಕ ಎನ್ನುವುದು ಸಂಸ್ಕೃತಿ. ತಾನು ಹವ್ಯಕ ಎಂದು ಕರೆಸಿಕೊಳುತ್ತಾನೆಯೇ ಹೊರತು ಬ್ರಾಹ್ಮಣ ಎನ್ನುವುದಾಗಿ ಅಲ್ಲ ಎನ್ನುವುದಕ್ಕೆ ಆತ ಅನುಸರಿಸುತ್ತಿರುವ ಸರಳ ಬದುಕು, ತನ್ನದೇ ಆದ ಆಹಾರ ವೈವಿಧ್ಯ, ಅತಿಥಿಸತ್ಕಾರ, ಕಲೆ ಮತ್ತು ಸಾಹಿತ್ಯದಲ್ಲಿನ ಅಪಾರ ಒಲವು ಇವುಗಳನ್ನು ಉದಾಹರಿಸಬಹುದಾಗಿದೆ. ಸುಧಾರಣೆಗೆ ಮೊದಲು ಧುಮುಕಿದ ಹವ್ಯಕರಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ವಿಧವಾ ವಿವಾಹವನ್ನು ಮೌನವಾಗಿ ಒಪ್ಪಿಕೊಂಡಿದೆ. ಇಂದು ಅನೇಕ ಬುಡಕಟ್ಟು ಜನಾಂಗಗಳು ತಮ್ಮ ಆಡುಭಾಷೆಯನ್ನು ಬಿಟ್ಟು ಪಠ್ಯ ಕನ್ನಡವನ್ನು ಅಪ್ಪಿಕೊಂಡಿವೆ. ಉತ್ತರಕನ್ನಡದಲ್ಲಿ ಹವ್ಯಕರು ಮತ್ತು ನಾಡವರು ಮನೆಮಾತನ್ನು ಎಲ್ಲಿಹೋದರೂ ಹೆಚ್ಚಾಗಿ ಬಿಡಲಿಲ್ಲ. ಅನೇಕರು ಅಹಿಚ್ಚತ್ರದಿಂದ ಹವ್ಯಕರ ಆಗಮನದ ಕಥೆಯನ್ನು ಕಟ್ಟುಕತೆ ಎನ್ನುತ್ತಾರೆ. ಅದಕ್ಕೆ ಕೊಡುವ ಉದಾಹರಣೆ ಹವ್ಯಕರ ಮಾತಿನಲ್ಲಿ ಉತ್ತರ ಭಾರತದ ಯಾವ ಶಬ್ದವೂ ಇಲ್ಲದಿರುವುದು ಮತ್ತು ಕೇವಲ ಹಳೆಗನ್ನಡವನ್ನು ಆಡುವುದು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಹವ್ಯಕರ ಆಗಮನ ಆಗಿರುವುದು 3ನೆಯ ಶತಮಾನದಲ್ಲಿ. ಆಗ ಉತ್ತರ ಭಾರತದಲ್ಲಿ ಹಿಂದಿ ಇರಲಿಲ್ಲ. ಪಾಣಿನಿಯನ್ನು ಆಧರಿಸಿದ ಸಂಸ್ಕೃತ ರೂಢಿಗೆ ಬಂದಿರುವುದು ನಾಲ್ಕನೆಯ ಶತಮಾನದಲ್ಲಿ. ಪ್ರಾಕೃತ ಆಗ ಹೆಚ್ಚಾಗಿ ರೂಢಿಯಲ್ಲಿತ್ತು. ಇಂದಿಗೆ ಸುಮಾರು ಎರಡುಸಾವಿರ ವರ್ಷಗಳ ಹಿಂದೆ ಬಂದ ಕೇವಲ ಮೂವತ್ತೆರಡು ಕುಟುಂಬಗಳು ಆಗಿನ ಭಾಷೆಗಳನ್ನು ಮಾತಾಡುತ್ತಲೇ ಇರಬೇಕೆನ್ನುವುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ಸರಳಗನ್ನಡದಲ್ಲಿದೆ. ಇಂದು ಉತ್ತರ ಕರ್ನಾಟಕದ ಅಡುಭಾಷೆಗೂ ವಚನಸಾಹಿತ್ಯದ್ದಲ್ಲಿರುವ ಕನ್ನಡವಾಗಲೀ, ನಂತರ ಬಂದ ದಾಸ ಸಾಹಿತ್ಯಭಾಷ್ಯಾಗಲೀ ಇವತ್ತಿನ ಉತ್ತರಕರ್ನಾಟಕದವರು ಆಡುವ ಕನ್ನಡ ಭಾಷೆಗಳಿಗೂ ಬಹಳ ಅಂತರವಿದೆ. ಹಾಗಂತ ವಚನ ಸಾಹಿತ್ಯದ ನೆಲೆ ಉತ್ತರಕರ್ನಾಟಕ ಅಲ್ಲವೆನ್ನಲಾದೀತೇ.

ಶಂಕರಾಚಾರ್ಯರ ಅದ್ವೈತ ಪರಂಪರೆಯನ್ನು ಹವ್ಯಕರು ಸ್ವೀಕರಿಸಿದ ಮೇಲೆ ಮಾರ್ಗದರ್ಶನಕ್ಕಾಗಿ ಆರಾಧಿಸುತ್ತಿರುವುದು ರಾಮಚಂದಾಪುರ, ಸ್ವರ್ಣವಲ್ಲಿ ಮತ್ತು ನೆಲೆಮಾವು ಮಠಗಳನ್ನು. ಶಂಕರಾಚಾರ್ಯರು ಆಮ್ನಾಯ ಪೀಠಗಳನ್ನು ಸ್ಥಾಪಿಸುವಾಗಲೇ ಪೀಠದ ಯತಿಗಳಿಗೆ ಸಮಾಜವನ್ನು ಮುನ್ನಡೆಸುವ ಜವಾಬ್ದಾರಿಯನ್ನು ವಹಿಸಿದ್ದರು. ಏಕೆಂದರೆ ಆ ಕಾಲದಲ್ಲಿ ಸನಾತನ ಧರ್ಮಕ್ಕೆ ರಾಜಾಶ್ರಯ ಇಲ್ಲವಾಗಿತ್ತು. ಅದಕ್ಕೆ ಶಾಂಕರ ಪರಂಪರೆಯ ಗುರುಗಳಿಗೆ ಪರಮಹಂಸ ಪದವಿಯಿದೆ. ಹಾಗಾಗಿ ಇವರು ಆತ್ಮೋನ್ನತಿಗಾಗಿ ಸಂನ್ಯಾಸವನ್ನೂ ಸಮಾಜಕ್ಕೆ ಮಾರ್ಗದರ್ಶನವನ್ನು ನೀಡಲು ಧರ್ಮಸಭೆಯನ್ನೂ ನಡೇಸುತ್ತಾರೆ. ಕಿರೀಟ ಬಿರುದಾವಳಿ ಪಲ್ಲಕ್ಕಿ ಉತ್ಸವ ಎಲ್ಲವೂ ಈ ಮಠಗಳಿದೆ. ಹಾಗಾಗಿ ಈ ಮಠಗಳನ್ನು ರಾಜಪೀಠವೆನ್ನುತ್ತಾರೆ.

ಫಲವಂತಿಕೆ ಕುಸಿದ ದೇಶಗಳಲ್ಲಿ ಸರಕಾರಗಳು ಹೆಚ್ಚು ಹಡೆಯಲು ಸಲಹೆಮಾಡುವಂತೆ ಕುಸಿಯುತ್ತಿರುವ ಹವ್ಯಕ ಸಮಾಜವನ್ನು ಗಮನದಲ್ಲಿರಿಸಿ ಯತಿಗಳು ಸಲಹೆಯನ್ನು ನೀಡಿದ್ದಾರೆ. ಪುರೋಹಿತರು ಆಶೀರ್ವಚನ ಮಾಡುವಾಗ ಬಹುಪುತ್ರಲಾಭಂ ಎನ್ನುವದನ್ನೂ ಆಕ್ಷೇಪಿಸಬಹುದು. ಅನುಸರಿಸಿದ್ದರೆ ಮಠದಿಂದ ಹೊರಹಾಕುತ್ತೇವೆಂದು ಹೇಳಿಲ್ಲ. ಮಕ್ಕಳನ್ನು ಮಠಕ್ಕೆ ನೀಡಿ ಎನ್ನುವುದೂ ಸಹ ಈ ಹಿನ್ನೆಲೆಯಲ್ಲಿ. ಯಾರೂ ಸುಲಭಕ್ಕೆ ಮಕ್ಕಳನ್ನು ಕೊಡುವುದಿಲ್ಲ ಎನ್ನುವ ಅರಿವಿದೆ.

ಹರಿಹಂಚಾಗಿ ಹೋಗಿದ್ದ ಹವ್ಯಕರನ್ನು ಒಂದುಗೂಡಿಸಿ ಜಾಗ್ರತಿಮೂಡಿಸಿರುವ ಸುಮಾರು ಎರಡುಲಕ್ಷಕ್ಕೂ ಮೀರಿ ಸೇರಿದರೂ ಓರ್ವನೇ ಓರ್ವ ಪೋಲಿಸನಿಲ್ಲದೇ ಯಶಸ್ವಿಯಾಗಿ ಮುಗಿಸಿದ ತೃತೀಯ ಹವ್ಯಕ ಸಮ್ಮೇಳನವನ್ನು ಮೆಚ್ಚಿಕೊಳ್ಳಬೇಕಾಗಿದೆ. ಗಿರಿಧರ ಕಜೆ ಮತ್ತು ಸಂಗಡಿಗರ ಶ್ರಮ ಸಾರ್ಥಕವಾಗಿದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 08

ಸಮಾಚಾರ ಸಣ್ಣದಲ್ಲ

ಇ.ಡಿ ವಿರುದ್ಧ ಸುಪ್ರೀಂ ಕೋರ್ಟ್ ಕಿಡಿ

ದೆಹಲಿ: ಕಾಂಗ್ರೆಸ್ ನಾಯಕನೊಬ್ಬನನ್ನು ಮಧ್ಯ ರಾತ್ರಿವರೆಗೆ ಸುಮಾರು 15 ಗಂಟೆಗಳ ಕಾಲ ನಿರಂತರ ವಿಚಾರಣೆ ನಡೆಸಿದ ಜಾರಿ ನಿರ್ದೇಶನಾಲಯದ ದಬ್ಬಾಳಿಕೆ ಮತ್ತು ಅಮಾನವೀಯ ವರ್ತನೆಯ ವಿರುದ್ಧ ಸರ್ವೋಚ್ಚ ನ್ಯಾಯಾಲಯವು ಕಿಡಿಕಾರಿದೆ. ಅದರ ತನಿಖಾ ವಿಧಾನದ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಕಳೆದ ವರ್ಷ ಹರಿಯಾಣದ ಮಾಜಿ ಕಾಂಗ್ರೆಸ್ ಶಾಸಕ ಸುರೇಂದರ್ ಪನ್ವಾರ್ ಅವರನ್ನು ಸುಮಾರು 15 ಗಂಟೆಗಳ ಕಾಲ ವಿಚಾರಣೆ ನಡೆಸಿದ್ದಕ್ಕಾಗಿ ಜಾರಿ ನಿರ್ದೇಶನಾಲಯದ ಅಮಾನವೀಯ ನಡವಳಿಕೆಯನ್ನು ಸುಪ್ರೀಂ ಕೋರ್ಟ್ ಟೀಕಿಸಿದೆ. ಅವರ ಬಂಧನವನ್ನು ಕಾನೂನುಬಾಹಿರ ಎಂದು ಕರೆದ ಹೈಕೋರ್ಟ್ ಆದೇಶವನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ಹೇಳಿಕೆ ನೀಡುವಂತೆ ಇ.ಡಿ ಅಧಿಕಾರಿಗಳು ವ್ಯಕ್ತಿಯೊಬ್ಬರ ಮೇಲೆ ಒತ್ತಡ ವನ್ನು ಹೇರಿದ್ದು ಆಘಾತಕಾರಿಯಾಗಿದೆ ಎಂದು ಹೇಳಿತು.

ಪ್ರಾರ್ಥನೆ ಮುಂದುವರಿಕೆ: ಇಸ್ಕಾನ್ ಸ್ಪಷ್ಟೀಕರಣ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ. ಈ ಬಗ್ಗೆ ಕೋಲ್ಕತಾದ ಇಸ್ಕಾನ್ ಅಸಮಾಧಾನ ವ್ಯಕ್ತಪಡಿಸಿ, ಹಿಂದೂಗಳು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರು ದೌರ್ಜನ್ಯವನ್ನು ಎದುರಿಸುತ್ತಿರುವ ಬಾಂಗ್ಲಾದೇಶದಲ್ಲಿ ಸಹಜ ಸ್ಥಿತಿಗೆ ಮರಳುವವರೆಗೆ ನಾವು ಪ್ರಾರ್ಥನೆ ನಡೆಸುತ್ತೇವೆ ಎಂದು ಶುಕ್ರವಾರ ಹೇಳಿಕೆ ನೀಡಿದೆ. ಕೋಲ್ಕತ್ತಾದ ಇಂಟರ್‌ನ್ಯಾಷನಲ್ ಸೊಸೈಟಿ ಫಾರ್ ಕೃಷ್ಣ ಕಾನ್ಶಿಯಸ್ನೆಸ್ ಬಾಂಗ್ಲಾದೇಶದ ಧಾರ್ಮಿಕ ಅಲ್ಪಸಂಖ್ಯಾತರ ಸುರಕ್ಷತೆ ಮತ್ತು ಭದ್ರತೆಗಾಗಿ ಹಾಗೂ ಜೈಲಿನಲ್ಲಿರುವ ಹಿಂದೂ ಆಧ್ಯಾತ್ಮಿಕ ನಾಯಕ ಚಿನ್ಮಯ್ ಕೃಷ್ಣ ದಾಸ್ ಅವರ ಬಿಡುಗಡೆಗಾಗಿ ಒಂದು ತಿಂಗಳಿನಿಂದ ಆಲ್ಬರ್ಟ್ ರೋಡ್ ಕೇಂದ್ರದಲ್ಲಿ ದೈನಂದಿನ ಪ್ರಾರ್ಥನೆಗಳನ್ನು ನಡೆಸುತ್ತಿದೆ. ಈ ಬಗ್ಗೆ ಮಾತನಾಡಿದ ಕೋಲ್ಕತ್ತಾ ಇಸ್ಕಾನ್ ವಕ್ತಾರ ರಾಧರಾಮ್ ದಾಸ್ 'ಬಾಂಗ್ಲಾದೇಶದ ಸಾಮಾನ್ಯ ಸ್ಥಿತಿಗೆ ಮರಳುವವರೆಗೆ ನಾವು ಅಲ್ಪಸಂಖ್ಯಾತರಿಗಾಗಿ ನಮ್ಮ ದೈನಂದಿನ ಪ್ರಾರ್ಥನೆಯನ್ನು ಮುಂದುವರಿಸುತ್ತೇವೆ' ಎಂದು ಹೇಳಿದ್ದಾರೆ.

ಪಬ್‌ಜಿ ಗೇಮ್: 3 ಬಾಲಕರ ಸಾವು

ಪಾಟ್ನಾ: ಪಬ್‌ಜಿ ಗೇಮ್ ಆಡುತ್ತಲೇ ಯಾವುದರ ಪರಿವೆಯಿಲ್ಲದೆ ಮುಳುಗಿ ಹೋಗಿದ್ದ ಮೂವರು ಬಾಲಕರಿಗೆ ರೈಲು ಡಿಕ್ಕಿ ಹೊಡೆದ ಪರಿಣಾಮ ದಾರುಣವಾಗಿ ಮೃತಪಟ್ಟಿರುವ ಆಘಾತಕಾರಿ ಸುದ್ದಿಯೊಂದು ವರದಿಯಾಗಿದೆ. ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯಲ್ಲಿ ಮೊಬೈಲ್‌ನಲ್ಲಿ ಪಬ್‌ಜಿ ಗೇಮ್ ಆಡುತ್ತಿದ್ದ ಮೂವರು ಹದಿಹರೆಯದ ಬಾಲಕರು ರೈಲಿಗೆ ಸಿಲುಕಿ ನಜ್ಜುಗುಜ್ಜಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮುಫಾಸಿಲ್ ಪೊಲೀಸ್ ಠಾಣೆ ವ್ಯಾಪ್ತಿಯ ನರ್ಕಟಿಯಾಗಂಜ್-ಮುಜಾಫರ್‌ಪುರ್ ರೈಲು ವಿಭಾಗದ ಮಾನ್ಸಾ ಟೋಲಾದ ರಾಯಲ್ ಸ್ಕೂಲ್ ಬಳಿ ಅಪಘಾತ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ. ಮೂವರು ಬಾಲಕರು ಕಿವಿಗೆ ಇಯರ್‌ಫೋನ್‌ಗಳನ್ನು ಧರಿಸಿದ್ದರು ಎನ್ನಲಾಗಿದೆ. ರೈಲು ಸಮೀಪಿಸುತ್ತಿರುವುದನ್ನು ಗಮನಿಸದ ಕಾರಣ ಅಪಘಾತ ಸಂಭವಿಸಿದೆ. ಅಧಿಕಾರಿಗಳು ತನಿಖೆಯನ್ನು ಪ್ರಾರಂಭಿಸಿದ್ದು, ಅಪಘಾತಕ್ಕೆ ಕಾರಣವಾದ ನಿಖರವಾದ ಅಂಶಗಳನ್ನು ಪತ್ತೆ ಹಚ್ಚುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ಶಬರಿಮಲೆ ದೇಗುಲ ಆದಾಯದಲ್ಲಿ ಏರಿಕೆ

ಶಬರಿಮಲೆ: ಕೇರಳದ ಪ್ರಸಿದ್ಧ ಶಬರಿಮಲೆ ದೇವಸ್ಥಾನದ ಆದಾಯದಲ್ಲಿ ಭಾರೀ ಏರಿಕೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 82 ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಬಂದಿದೆ. ಈ ಬಗ್ಗೆ ಶುಕ್ರವಾರ ಮಾಹಿತಿ ನೀಡಿದ ತಿರುವಾಂಕೂರು



ದೇವಸ್ವಂ ಮಂಡಳಿಯ ಅಧ್ಯಕ್ಷ ಪಿ.ಎಸ್. ಪ್ರಶಾಂತ್, ಭಕ್ತರ ಅರ್ಪಣೆಗಳು ಮತ್ತು ದೇವಾಲಯದಲ್ಲಿ ಉತ್ಪಾದಿಸಿದ ವಸ್ತುಗಳಾದ ಅರವಣ ಪಾಯಸ ಹಾಗೂ ಅಪ್ಪಂನ ಮಾರಾಟದಿಂದ ಆದಾಯ ಬರುತ್ತಿದೆ ಎಂದು ಹೇಳಿದರು. 2024- 25ರ ಎರಡು ತಿಂಗಳ ತೀರ್ಥಯಾತ್ರೆಯ ಮೊದಲ ಹಂತವಾದ ನವೆಂಬರ್ 15 ಮತ್ತು ಡಿಸೆಂಬರ್ 26ರ ನಡುವೆ, ದೇವಾಲಯಕ್ಕೆ 297 ಕೋಟಿ ರು. ಆದಾಯ ಬಂದಿದೆ. ಇದು ಕಳೆದ ವರ್ಷದ ಇದೇ ಅವಧಿಯಲ್ಲಿ ಬಂದಿದ್ದ 215 ಕೋಟಿ ರು.ಗಳಿಗಿಂತ ಹೆಚ್ಚಾಗಿದೆ ಎಂದು ಪ್ರಶಾಂತ್ ಹೇಳಿದರು. ಕಳೆದ ವರ್ಷಕ್ಕಿಂತ 22 ಕೋಟಿ ರು. ಹೆಚ್ಚು ದೇವಾಲಯದ ಉತ್ಪನ್ನಗಳು ಮಾರಾಟವಾಗಿವೆ. ಕಳೆದ ವರ್ಷ 2024ರಲ್ಲಿ 41 ದಿನಗಳ ಅವಧಿಯಲ್ಲಿ 28 ಲಕ್ಷ ಯಾತ್ರಾರ್ಥಿಗಳು ದೇವಾಲಯಕ್ಕೆ ಭೇಟಿ ನೀಡಿದ್ದರು. ಆದರೆ ಈ ಬಾರಿ 32 ಲಕ್ಷ ಭಕ್ತರು ಶಬರಿಮಲೆಗೆ ಭೇಟಿ ನೀಡಿದ್ದಾರೆ.

{ ಭಗವಂತ್ ಮಾನ್ } ಪಂಜಾಬ್ ಸಿಎಂ

ರದ್ದುಗೊಳಿಸಿರುವ ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳಲು ಕೇಂದ್ರ ಸರಕಾರವು ಪ್ರಯತ್ನಿಸುತ್ತಿದೆ. ಶಂಭು ಗಡಿಯಲ್ಲಿ ನಡೆಯುತ್ತಿರುವ ಪ್ರತಿಭಟನೆ ಅಥವಾ ಇತರ ರೈತ ಸಂಘದಿಂದ ಬಂದಿರುವ ಬೇಡಿಕೆಗಳೆಲ್ಲಾ ಕೇಂದ್ರಕ್ಕೆ ಸಂಬಂಧಿಸಿವೆ. ಎಲ್ಲಾ ಬೇಡಿಕೆಗಳು ಒಂದೇ ಆಗಿದ್ದರೂ ಕೇಂದ್ರ ಸರಕಾರವು ರೈತರನ್ನು ಮಾತುಕತೆಗೆ ಏಕೆ ಆಹ್ವಾನಿಸುತ್ತಿಲ್ಲ?

ಕೇಜ್ರಿವಾಲ್ ವಿರುದ್ಧ ಪ್ರಧಾನಿ ವಾಗ್ದಾಳಿ | ನಾನೂ ಕೂಡ ಮಹಲ್‌ಗಳನ್ನು ನಿರ್ಮಿಸಬಹುದಿತ್ತು

ನನಗಾಗಿ ಮನೆ ನಿರ್ಮಿಸಿಲ್ಲ: ಮೋದಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಮನಸ್ಸು ಮಾಡಿದ್ದರೆ ನಾನು ಕೂಡಾ ನನಗಾಗಿ ಶೀಶ್ ಮಹಲ್ ಕಟ್ಟಿಸಿಕೊಳ್ಳಬಹುದಿತ್ತು, ನಾನು ನನಗಾಗಿ ಎಂದಿಗೂ ಮನೆಯನ್ನು ನಿರ್ಮಿಸಿಕೊಳ್ಳಲಿಲ್ಲ. ಶ್ರೀಸಾಮಾನ್ಯರಿಗೆ ನಾನು ಮನೆಗಳನ್ನು ನೀಡುವ ಮೂಲಕ 4 ಕೋಟಿ ಜನರ ಕನಸುಗಳನ್ನು ನನಸಾಗಿಸಿದ್ದೇನೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಈ ವರ್ಷ ಫೆಬ್ರವರಿಯಲ್ಲಿ ದೆಹಲಿ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಕಾರಣ, ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಕೇಜ್ರಿವಾಲ್ ವಿರುದ್ಧ ಪ್ರಧಾನಿ ಮೋದಿ ಪರೋಕ್ಷವಾಗಿ ಟೀಕಾ ಪ್ರಹಾರ ನಡೆಸಿದ್ದಾರೆ. ದೆಹಲಿಯ ಅಶೋಕ್ ವಿಹಾರ್‌ನ ರಾಮಲೀಲಾ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಅರವಿಂದ್ ಕೇಜ್ರಿವಾಲ್ ಸಿ.ಎಂ ಆಗಿದ್ದಾಗ ತಮಗಾಗಿ ಐಷಾರಾಮಿ ನಿವಾಸವನ್ನು ನಿರ್ಮಿಸಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

ಕಳೆದ 10 ವರ್ಷಗಳಲ್ಲಿ ಆಮ್ ಆದ್ಮಿ ಪಕ್ಷವು ರಾಷ್ಟ್ರ ರಾಜಧಾನಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ ಎಂದು ಮೋದಿ ಟೀಕಿಸಿದ್ದಾರೆ. ಎಎಪಿ ದೆಹಲಿಗೆ ಆಪತ್ತಾಗಿದೆ, ಕಳ್ಳತನ ಮತ್ತು ದುರಹಂಕಾರವು ದೆಹಲಿಯನ್ನು ಕಳೆದ 10 ವರ್ಷಗಳಿಂದ ದುರಂತದಂತಹ ಪರಿಸ್ಥಿತಿಗೆ ತಳ್ಳಿದೆ. ದೆಹಲಿ ಸರಕಾರವು ದೆಹಲಿಯ ಅಭಿವೃದ್ಧಿಯನ್ನು ನಿಂತಲ್ಲಿಯೇ ನಿಲ್ಲಿಸಿದೆ. ನಾವು ದುರಂತವನ್ನು ಸಹಿಸುವುದಿಲ್ಲ, ಹಾಗಾಗಿ ನಾವು ಈ ಪರಿಸ್ಥಿತಿಯನ್ನು ಬದಲಾಯಿಸುತ್ತೇವೆ ಎಂದು ಪ್ರಧಾನಿ ಹೇಳಿದ್ದಾರೆ.

ಇಂದು ಭಾರತವು ರಾಜಕೀಯ ಮತ್ತು ಆರ್ಥಿಕ ಸ್ಥಿರತೆಯ ಸಂಕೇತವಾಗಿದ್ದು, ಇದು 2025ರಲ್ಲಿ ಇನ್ನಷ್ಟು ಬಲಗೊಳ್ಳಲಿದೆ. ಈ ವರ್ಷ ವಿಶ್ವದಲ್ಲಿ ಭಾರತದ ಸ್ಥಾನವನ್ನು ಬಲಪಡಿಸುವ ವರ್ಷವಾಗಿದ್ದು, ವಿಶ್ವದ ಅತಿದೊಡ್ಡ ಉತ್ಪಾದನಾ ಕೇಂದ್ರಗಳಲ್ಲಿ ನಮ್ಮ ದೇಶವು ಕೂಡಾ ಒಂದಾಗಿದೆ. ನಾನು ದೆಹಲಿಯ ಕೆಲವು ಮಕ್ಕಳನ್ನು ಭೇಟಿಯಾದಾಗ ಅವರ ಕನಸುಗಳು ಸ್ವಾಭಿಮಾನ್ ಅಪಾರ್ಟ್‌ಮೆಂಟ್‌ಗಿಂತ ಎತ್ತರದಲ್ಲಿದೆ ಎಂದು ನಾನು ಗಮನಿಸಿದ್ದೇನೆ ಎಂದೂ ಮೋದಿ ಹೇಳಿದ್ದಾರೆ. ಇಂದಿರಾಗಾಂಧಿ ಅವರ ಸರ್ವಾಧಿಕಾರದ ವಿರುದ್ಧ ದೇಶವು ಹೋರಾಡುತ್ತಿದ್ದಾಗ ಭೂಗತ ಚಳವಳಿಯ ಭಾಗವಾಗಿದ್ದ ನನ್ನಂತಹ ಅನೇಕ ಜನರಿಗೆ ದೆಹಲಿಯ ಅಶೋಕ್ ವಿಹಾರ ನೆಲೆ ನೀಡಿದ ಸ್ಥಳವಾಗಿತ್ತು ಎಂದು ಮೋದಿ ನೆನಪಿಸಿಕೊಂಡರು.

ಶುಕ್ರವಾರ ಅಶೋಕ್ ವಿಹಾರ್‌ನ ಸ್ವಾಭಿಮಾನ್ ಅಪಾರ್ಟ್‌ಮೆಂಟ್‌ನಲ್ಲಿ ಇನ್-ಸಿಟು ಸ್ಲಂ ಪುನರ್ವಸತಿ ಯೋಜನೆಯಡಿ ಜುಗ್ಗಿ ಜೊಪ್ರಿ ಕ್ಲಸ್ಟರ್‌ಗಳ ನಿವಾಸಿಗಳಿಗಾಗಿ ಹೊಸದಾಗಿ ನಿರ್ಮಿಸಲಾದ ಫ್ಲ್ಯಾಟ್‌ಗಳಿಗೆ ಪ್ರಧಾನಿ ಮೋದಿ ಭೇಟಿ ನೀಡಿದರು. ಅಶೋಕ್ ವಿಹಾರ್ ಪ್ರದೇಶದ ಸ್ವಾಭಿಮಾನ್ ಅಪಾರ್ಟ್‌ಮೆಂಟ್‌ನಲ್ಲಿ ಇಡಬ್ಲ್ಯೂಎಸ್ ಫ್ಲಾಟ್‌ಗಳ ಅರ್ಹ ಫಲಾನುಭವಿಗಳಿಗೆ ಮೋದಿ ಕೀಗಳನ್ನು ಹಸ್ತಾಂತರಿಸಿ, ನಂತರ ದೆಹಲಿಯಲ್ಲಿ ಅನೇಕ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಮಾಡಿದರು.

ಮೋದಿ ಸರಕಾರದ ಮನೆ-ಮನೆ ಸಮೀಕ್ಷೆ

ಹೊಸ ವರ್ಷದ ಉಡುಗೊರೆಯಾಗಿ ಮೋದಿ ಸರಕಾರವು ದೇಶದ ಬಡವರಿಗೆ ಇನ್ನೂ ಎರಡು ಕೋಟಿ ಮನೆಗಳನ್ನು ನೀಡಲು ಮನೆ-ಮನೆ ಸಮೀಕ್ಷೆಯನ್ನು ಪ್ರಾರಂಭಿಸಲು ನಿರ್ಧರಿಸಿದೆ. 2024ರಲ್ಲಿ ಬಿಜೆಪಿಯು ಘೋಷಿಸಿದ ಚುನಾವಣಾ ಭರವಸೆಗಳಲ್ಲಿ ಅದು ಕೂಡ ಪ್ರಮುಖವಾಗಿತ್ತು. ಪ್ರಧಾನಮಂತ್ರಿ ಆವಾಸ್ (ನಗರ) ಯೋಜನೆಯಡಿ ಇನ್ನೂ ಒಂದು ಕೋಟಿ ಮನೆಗಳ ಸಮೀಕ್ಷೆ ಈಗಾಗಲೇ ಪ್ರಾರಂಭವಾಗಿದೆ ಎಂದು ಪ್ರಧಾನಮಂತ್ರಿ ಕಾರ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ. 2024ರ ಲೋಕಸಭಾ ಚುನಾವಣೆಯ ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಒಟ್ಟು ಮೂರು ಕೋಟಿ ಮನೆಗಳು, ಅಂದರೆ ದೇಶದ ಗ್ರಾಮೀಣ ಭಾಗದಲ್ಲಿ ಎರಡು ಕೋಟಿ ಮತ್ತು ನಗರ ಕೇಂದ್ರಗಳಲ್ಲಿ ಒಂದು ಕೋಟಿ ಮನೆ ನಿರ್ಮಾಣದ ಭರವಸೆ ನೀಡಿತ್ತು.

ಮೋದಿ ವಿರುದ್ಧ ಕೇಜ್ರಿವಾಲ್ ಆಕ್ರೋಶ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೆಹಲಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ಪ್ರಧಾನಿ ಮೋದಿ ಅವರು ಶುಕ್ರವಾರದ ತಮ್ಮ 43 ನಿಮಿಷಗಳ ಭಾಷಣದಲ್ಲಿ 39 ನಿಮಿಷಗಳ ಕಾಲ ದೆಹಲಿ ಸರ್ಕಾರವನ್ನು ಮತ್ತು ರಾಜಧಾನಿಯ ಜನರನ್ನು ನಿಂದಿಸಿದ್ದಾರೆ ಎಂದು ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಆಕ್ರೋಷ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷದ(ಎಎಪಿ) ಆಡಳಿತದ ಕುರಿತು ಮೋದಿಯವರ ಟೀಕೆಗಳಿಗೆ ಪ್ರತಿಕ್ರಿಯೆಯಾಗಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕೇಜ್ರಿವಾಲ್, ಭಾರತೀಯ ಜನತಾ ಪಕ್ಷವು(ಬಿಜೆಪಿ) ಕೇವಲ ನಿಂದನೀಯ ರಾಜಕೀಯ ಮತ್ತು ವೈಯಕ್ತಿಕ ದಾಳಿಯಲ್ಲಿ ತೊಡಗಿದೆ ಎಂದರು. 'ಕಳೆದ 10 ವರ್ಷಗಳಲ್ಲಿ ನಮ್ಮ ಎಎಪಿ ಸರಕಾರ ಮಾಡಿದ ಕೆಲಸಗಳನ್ನು ಪಟ್ಟಿ ಮಾಡಲು ಎರಡು-ಮೂರು ಗಂಟೆಗಳು ಸಾಕಾಗುವುದಿಲ್ಲ, ಆದರೆ ಪ್ರಧಾನಿಯವರು ತಮ್ಮ ಭಾಷಣದಲ್ಲಿ ಮಾತನಾಡಿದ ಯಾವುದೇ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿಲ್ಲ ಎಂದೂ ಕೇಜ್ರಿವಾಲ್ ಹೇಳಿದರು.

ಪುಷ್ಪ-2 ಪ್ರದರ್ಶನ ವೇಳೆ ಕಾಲ್ತುಳಿತದ ಘಟನೆ

ಅಲ್ಲುಗೆ ಜಾಮೀನು ಮಂಜೂರು

ಹೈದರಾಬಾದ್: ಹೈದರಾಬಾದ್ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಅಲ್ಲು ಅರ್ಜುನ್‌ಗೆ ಕೋರ್ಟ್‌ನಿಂದ ರೆಗ್ಯುಲರ್ ಜಾಮೀನು ಮಂಜೂರಾಗಿದೆ.



ಪುಷ್ಪ-2 ಚಿತ್ರ ಪ್ರದರ್ಶನ ವೇಳೆ ಹೈದರಾಬಾದ್‌ನ ಸಂಧ್ಯಾ ಥಿಯೇಟರ್‌ನಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ ರೇವತಿ ಎಂಬ ಮಹಿಳೆ ಸಾವನ್ನಪ್ಪಿ, ಆಕೆಯ ಮಗ ಗಂಭೀರವಾಗಿ ಗಾಯಗೊಂಡು ಕೋಮಾ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಈ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ನಟ ಅಲ್ಲು ಅರ್ಜುನ್‌ಗೆ ಇದೀಗ ಹೈದರಾಬಾದ್‌ನ ನಾಂಪಲ್ಲಿಯ 2ನೇ ಹೆಚ್ಚುವರಿ ಮೆಟ್ರೊಪಾಲಿಟನ್ ಸೆಷನ್ ನ್ಯಾಯಾಲಯ ರೆಗ್ಯುಲರ್ ಜಾಮೀನು ಮಂಜೂರು ಮಾಡಿದೆ. ವಾದಪ್ರತಿವಾದಗಳನ್ನು ಆಲಿಸಿದ ನ್ಯಾಯಾಧೀಶರು ನಟ ಅಲ್ಲು ಅರ್ಜುನ್‌ಗೆ ಷರತ್ತು ಬದ್ಧ ನಿಯಮಿತ ಜಾಮೀನು ಮಂಜೂರು ಮಾಡಿ ಆದೇಶಿಸಿದ್ದಾರೆ.

ಏನಿದು ಪ್ರಕರಣ?

ಹೈದರಾಬಾದ್‌ನಲ್ಲಿ ಡಿ.4ರಂದು ಪುಷ್ಪ-2 ಪ್ರೀಮಿಯರ್ ಪ್ರದರ್ಶನದ ವೇಳೆ ನಟ ಅಲ್ಲು ಅರ್ಜುನ್ ಮತ್ತು ಅವರ ಕುಟುಂಬ ಸಂಧ್ಯಾ ಥಿಯೇಟರ್‌ಗೆ ಆಗಮಿಸಿತ್ತು. ನಟನನ್ನು ನೋಡಲು ಅಭಿಮಾನಿಗಳು ಕಿಕ್ಕಿರಿದು ತುಂಬಿದ್ದರು. ಆ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 35 ವರ್ಷದ ಮಹಿಳೆ ಮೃತಪಟ್ಟಿದ್ದು, ಆಕೆಯ ಎಂಟು ವರ್ಷದ ಮಗ ಗಾಯಗೊಂಡಿದ್ದ. ಈ ಸಂಬಂಧ ಮೃತ ಮಹಿಳೆಯ ಕುಟುಂಬ ಸದಸ್ಯರು ಡಿ.5ರಂದು ಚಿತ್ರಮಂದಿರದ ಆಡಳಿತ ಮಂಡಳಿ, ಅಲ್ಲು ಅರ್ಜುನ್ ಹಾಗೂ ಅವರ ಭದ್ರತಾ ತಂಡದ ವಿರುದ್ಧ ಚಿಕ್ಕಡಪಲ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣದ ವಿಚಾರಣೆ ವೇಳೆ ಪೊಲೀಸರು ಮೂವರನ್ನು ಬಂಧಿಸಿದ್ದರು. ಅಲ್ಲು ಅರ್ಜುನ್ ಅವರ ನಿರ್ಲಕ್ಷ್ಯದಿಂದ ಈ ಘಟನೆ ಸಂಭವಿಸಿದೆ ಎಂದು ತೆಲಂಗಾಣ ಪೊಲೀಸರು ಆರೋಪಿಸಿದ್ದಾರೆ.

ಕುಂಭ ಮೇಳ: 40 ಕೋಟಿ ಭಕ್ತರ ನಿರೀಕ್ಷೆ

ಲಖನೌ: ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮವಾಗುವ ಕ್ಷೇತ್ರ ಪ್ರಯಾಗ್‌ರಾಜ್ ಮಹಾ ಕುಂಭಮೇಳಕ್ಕೆ ಸಜ್ಜುಗೊಂಡಿದೆ. ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಮಹಾಕುಂಭ ಮೇಳವು ಈ ವರ್ಷ ಜನವರಿ 13ರಂದು ಪ್ರಾರಂಭವಾಗಿ ಫೆಬ್ರವರಿ 26ರಂದು ಪ್ರಯಾಗರಾಜ್‌ನಲ್ಲಿ ಮುಕ್ತಾಯಗೊಳ್ಳಲಿದೆ.ಬಹು ನಿರೀಕ್ಷಿತ ಮಹಾಕುಂಭ ಮೇಳ ಸಮೀಪಿಸುತ್ತಿದ್ದಂತೆ ಪ್ರಯಾಗರಾಜ್‌ನ ಆಧ್ಯಾತ್ಮಿಕ ವ್ಯಕ್ತಿಗಳು ಉತ್ಸುಕರಾಗಿದ್ದಾರೆ. ಈ ಬಾರಿ 40 ಕೋಟಿಗೂ ಹೆಚ್ಚು ಭಕ್ತರು ಆಗಮಿಸುವ ಸಾಧ್ಯತೆಯಿದೆ. ಹಣೆಗೆ ಬೂದಿ ಮತ್ತು ಕುಂಕುಮ ಧರಿಸಿದ ಮಹಾನಿರ್ವಾಣಿ ಅಖಾರದ ಸಾಧು ಸಂತರು ಮಹಾಕುಂಭ ಮೇಳಕ್ಕೆ ಈಗಾಗಲೇ ಆಗಮಿಸಿದ್ದು, ಡಮರು ಬಾರಿಸುತ್ತಾ ಮಹಾದೇವನ ನಾಮವನ್ನು ಜಪಿಸುತ್ತಿದ್ದಾರೆ. ಕೆಲವು ಸಾಧುಗಳು ಕುದುರೆ ಸವಾರಿ ಮಾಡುತ್ತಿರುವುದು ಕಂಡುಬಂದಿದೆ.

ಬಾಂಗ್ಲಾ ಗಾಯಕಿಗೆ ಆಹ್ವಾನ: ಆಕ್ರೋಶ

ಕೋಲ್ಕತಾ: ಈ ತಿಂಗಳು ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತಾದ ಉತ್ತರ ಹೊರವಲಯದಲ್ಲಿರುವ ನ್ಯೂ ಟೌನ್‌ನಲ್ಲಿ ಜ್ಯೋತಿ ಬಸು ಸೆಂಟರ್ ಫಾರ್ ಸೋಶಿಯಲ್ ಸ್ಟಡೀಸ್

ಅಂಡ್ ರಿಸರ್ಚ್ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಾಂಗ್ಲಾದೇಶದ ಜನಪ್ರಿಯ ಗಾಯಕಿಯನ್ನು ಆಹ್ವಾನಿಸಲು ಸಿಪಿಐ(ಎಂ) ನಿರ್ಧರಿಸಿದ್ದು ಈ ಬಗ್ಗೆ ಭಾರೀ ವಿವಾದಗಳು ಹುಟ್ಟಿಕೊಂಡಿವೆ.

ಜನವರಿ 17ರಿಂದ ಜನವರಿ 19ರವರೆಗೆ ಸಿಪಿಐ(ಎಂ)ನ ಪ್ರಮುಖ ಕೇಂದ್ರ ಸಮಿತಿ ಸಭೆಯು ಇಲ್ಲಿನ ನ್ಯೂ ಟೌನ್‌ನಲ್ಲಿ ನಿಗದಿಯಾಗಿದೆ. ಇದರಲ್ಲಿ ಸಿಪಿಐ(ಎಂ)ನ ರಾಷ್ಟ್ರೀಯ ಪೊಲಿಟ್‌ಬ್ಯೂರೋ ಸಂಯೋಜಕ ಪ್ರಕಾಶ್ ಕಾರಟ್ ಭಾಗವಹಿಸಲಿದ್ದಾರೆ. ಆ ಸಂದರ್ಭದಲ್ಲಿ, ಭಾರತೀಯ ಮಾರ್ಕ್ಸ್‌ವಾದಿ ಮತ್ತು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ದಿವಂಗತ ಜ್ಯೋತಿ ಬಸು ಅವರ ಹೆಸರಿನ ಈ ಸಂಸ್ಥೆಯು ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದೆ. ಅಲ್ಲಿ ಪಕ್ಷವು ಜನಪ್ರಿಯ ಬಾಂಗ್ಲಾದೇಶದ ಗಾಯಕಿ ರೆಜ್ವಾನಾ ಚೌಧರಿ ಬನ್ಯಾ ಅವರನ್ನು ಪ್ರದರ್ಶನಕ್ಕೆ ಆಹ್ವಾನಿಸಿದ್ದು, ಈ ಬಗ್ಗೆ ವಿವಾದದ ಕಿಡಿ ಹೊತ್ತಿಕೊಂಡಿದೆ. ಪ್ರತಿಪಕ್ಷಗಳು ಸಿಪಿಐ(ಎಂ) ಮೇಲೆ ಮುಗಿಬಿದ್ದಿವೆ.

ಬಾಂಗ್ಲಾದೇಶದಲ್ಲಿ ಭಾರತ ವಿರೋಧಿ ಘೋಷಣೆಗಳು ನಿರಂತರವಾಗಿ ಕೇಳಿಬರುತ್ತಿರುವ ಸಂದರ್ಭದಲ್ಲಿ, ಆ ದೇಶದ ಕಲಾವಿದರನ್ನು ಆಹ್ವಾನಿಸುವ ನಿರ್ಧಾರವು ಸರಿಯಿಲ್ಲ ಎಂದು ಬಿಜೆಪಿಯ ಮಾಜಿ ರಾಷ್ಟ್ರೀಯ ಉಪಾಧ್ಯಕ್ಷ ಮತ್ತು ಪಕ್ಷದ ಮಾಜಿ ಲೋಕಸಭಾ ಸದಸ್ಯ ದಿಲೀಪ್ ಘೋಷ್ ಸಿಪಿಐ(ಎಂ) ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಭಾರತೀಯ ಕಮ್ಯುನಿಸ್ಟರಿಗೆ ದೇಶದಲ್ಲಿ ಯಾವುದೇ ಸಮರ್ಥ ಕಲಾವಿದರು ಸಿಗಲಿಲ್ಲವೇ ಎಂಬುದು ನನ್ನ ಪ್ರಶ್ನೆ, ಅಂತಹ ನಿರ್ಧಾರದ ಅಗತ್ಯವಿರಲಿಲ್ಲ ಎಂದು ಘೋಷ್ ಹೇಳಿದರು.

ವಂದೇ ಭಾರತ್ ರೈಲು: ಸಚಿವಾಲಯ ಸ್ಪಷ್ಟನೆ

ದೆಹಲಿ: ವಂದೇ ಭಾರತ್ ಸ್ಲೀಪರ್ ರೈಲು ಕಳೆದ ಮೂರು ದಿನಗಳಲ್ಲಿ ನಡೆದ ಪ್ರಯೋಗಗಳಲ್ಲಿ ಗಂಟೆಗೆ 180 ಕಿ.ಮೀ ಗರಿಷ್ಠ ವೇಗವನ್ನು ಸಾಧಿಸಿದೆ ಎಂದು ಕೇಂದ್ರ ಸರಕಾರ ಶುಕ್ರವಾರ ತಿಳಿಸಿದೆ. ವಿಶ್ವದರ್ಜೆಯ ಅದರ ಪ್ರಯಾಣ ದೇಶಾದ್ಯಂತದ ರೈಲು

ಪ್ರಯಾಣಿಕರಿಗೆ ಲಭ್ಯವಾಗುವ ಮೊದಲು ಈ ತಿಂಗಳ ಅಂತ್ಯದವರೆಗೆ ಪ್ರಯೋಗಗಳು ಮುಂದುವರಿಯಲಿವೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಕೋಟಾ ವಿಭಾಗದಲ್ಲಿ ಯಶಸ್ವಿ ಪ್ರಯೋಗದ ವಿಡಿಯೋ ಒಂದನ್ನು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶೇರ್ ಮಾಡಿದ್ದಾರೆ. ವಂದೇ ಭಾರತ್ ಸ್ಲೀಪರ್ ರೈಲಿನ ಒಳಗೆ ಮೊಬೈಲ್ ಪಕ್ಕದಲ್ಲಿ ನೀರಿನಿಂದ ಪೂರ್ಣ ತುಂಬಿದ ಗ್ಲಾಸ್ ಇರಿಸಿರುವುದು ಹಾಗೂ ರೈಲು ಗಂಟೆಗೆ 180 ಕಿ.ಮೀ ಗರಿಷ್ಠ ವೇಗದಲ್ಲಿ ಚಲಿಸುತ್ತಿರುವಾಗಲೂ ಗ್ಲಾಸ್‌ನಲ್ಲಿನ ನೀರು ಸ್ಥಿರವಾಗಿರುವುದು ವಿಡಿಯೋದಲ್ಲಿ ಕಾಣಿಸುತ್ತದೆ. ಜನವರಿ 2 ರಂದು ಮುಕ್ತಾಯಗೊಂಡ 3 ದಿನಗಳ ಯಶಸ್ವಿ ಪ್ರಯೋಗಗಳ ನಂತರ ಸಚಿವರು ಈ ವೀಡಿಯೊ ಶೇರ್ ಮಾಡಿದ್ದಾರೆ. ವಂದೇ ಭಾರತ್ ಸ್ಲೀಪರ್ ರೈಲು ಅದರ ಲೋಡ್ ಸ್ಥಿತಿಯಲ್ಲಿ ಗರಿಷ್ಠ ವೇಗವನ್ನು ಮುಟ್ಟಿದೆ ಎಂದು ಸಚಿವಾಲಯ ಈ ಪೋಸ್ಟ್‌ನಲ್ಲಿ ತಿಳಿಸಿದೆ.

22 ವರ್ಷಗಳಿಂದ ನೈಸ್ ಯೋಜನೆಗಾಗಿ ವಶಪಡಿಸಿದ ಭೂಮಿಗೆ ಸಿಗದ ಪರಿಹಾರ

ಆಸ್ತಿ ಹಕ್ಕು ಸಾಂವಿಧಾನಿಕ: ಸುಪ್ರೀಂ ತೀರ್ಪು

ದೆಹಲಿ: ಆಸ್ತಿಯ ಹಕ್ಕು ಸಾಂವಿಧಾನಿಕ ಹಕ್ಕಾಗಿದ್ದು, ಕಾನೂನಿನ ಪ್ರಕಾರ ಸೂಕ್ತ ಪರಿಹಾರವನ್ನು ನೀಡದೆ ವ್ಯಕ್ತಿಯೊಬ್ಬನ ಆಸ್ತಿಯನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಆಸ್ತಿಯ ಹಕ್ಕು ಒಬ್ಬ ವ್ಯಕ್ತಿಯ ಮಾನವ ಹಕ್ಕಾಗಿದ್ದು, ಸಂವಿಧಾನದ 300-ಎ ಪರಿಚ್ಛೇದದ ಅಡಿಯಲ್ಲಿ ಸಾಂವಿಧಾನಿಕ ಹಕ್ಕು ಕೂಡ ಆಗಿದೆ. ಯಾವುದೇ ವ್ಯಕ್ತಿಗೆ ಸರಿಯಾದ ಪರಿಹಾರ ನೀಡದೆ ಆತನ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠವು ಕರ್ನಾಟಕ ಸರ್ಕಾರದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿತು. ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗಾಗಿ ವಶಪಡಿಸಿಕೊಂಡ ಭೂಮಿಗೆ ಪರಿಹಾರ ನೀಡದೇ ಭೂ ಮಾಲೀಕರಾದ ಬರ್ನಾರ್ಡ್ ಫ್ರಾನ್ಸಿಸ್ ಜೋಸೆಫ್ ವಾಜ್ ಮತ್ತು ಇತರರಿಗೆ ಬರೋಬ್ಬರಿ 22 ವರ್ಷಗಳು ಅಲೆದಾಡುವಂತೆ ಮಾಡಿದ ಅಧಿಕಾರಿಗಳ ನಿರ್ಲಕ್ಷ್ಯತನದ ನ್ಯಾಯಪೀಠ ಕಿಡಿಕಾರಿತು.

ಸಂವಿಧಾನದ 142ನೇ ವಿಧಿಯಲ್ಲಿನ ವಿಶೇಷ ಅಧಿಕಾರ ಬಳಸಿಕೊಂಡ ನ್ಯಾಯಪೀಠವು, 2019ರ ಏಪ್ರಿಲ್ 22ಕ್ಕೆ ಅನ್ವಯವಾಗುವಂತೆ ವಿವಾದಿತ ಭೂಮಿಯ ಮಾರುಕಟ್ಟೆ ಮೌಲ್ಯ ನಿರ್ಧರಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು, ಜತೆಗೆ ಎರಡು ತಿಂಗಳಲ್ಲಿ ಪರಿಹಾರ ಮೊತ್ತವನ್ನು ಪಾವತಿ ಮಾಡುವಂತೆ ವಿಶೇಷ ಭೂ ಸ್ವಾಧೀನ ಅಧಿಕಾರಿಗೆ ಸೂಚಿಸಿತು. 2003ರಿಂದ 2019ರವರೆಗೆ ರಾಜ್ಯ ಸರ್ಕಾರ ಹಾಗೂ ಕೆಐಎಡಿಬಿ ಉದಾಸೀನತೆಯ ಬಗ್ಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿಯಾದ ಬಳಿಕ ಎಚ್ಚೆತ್ತುಕೊಂಡಿದ್ದರಿಂದ ವಿಶೇಷ ಭೂಸ್ವಾಧೀನ ಅಧಿಕಾರಿಗೆ ಮಾರುಕಟ್ಟೆ ಮೌಲ್ಯದ ದಿನಾಂಕವನ್ನು ಬದಲಿಸುವ ಅಧಿಕಾರ ಇಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು. ನ್ಯಾಯಾಲಯವು ಮೇಲ್ಮನವಿಯನ್ನು ಅಂಗೀಕರಿಸಿತು. ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠ 2022ರ ನವೆಂಬರ್ 22ರಂದು ನೀಡಿದ್ದ ತೀರ್ಪನ್ನು ರದ್ದುಗೊಳಿಸಿತು.

ಏನಿದು ಪ್ರಕರಣ?

ಮೇಲ್ಮನವಿದಾರರು 1995ರಿಂದ 1997ರ ಅವಧಿಯಲ್ಲಿ ವಿವಿಧ ನಿವೇಶನಗಳನ್ನು ಖರೀದಿಸಿದ್ದರು. ಈ ನಡುವೆ, ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗಾಗಿ ರಾಜ್ಯ ಸರ್ಕಾರ ಹಾಗೂ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ (ನೈಸ್) ಒಪ್ಪಂದ ಮಾಡಿಕೊಂಡಿದ್ದವು. ಯೋಜನೆಯ ಅನುಷ್ಠಾನಕ್ಕಾಗಿ ನೈಸ್ ಸಂಸ್ಥೆಗೆ 20,193 ಎಕರೆಯನ್ನು ವರ್ಗಾಯಿಸಲು ಒಪ್ಪಿಗೆ ನೀಡಲಾಗಿತ್ತು. ಅಗತ್ಯ ಜಮೀನಿನ ಭೂಸ್ವಾಧೀನಕ್ಕಾಗಿ ನೈಸ್ ಸಂಸ್ಥೆಯು ಕೆಐಎಡಿಬಿಗೆ 1998ರಲ್ಲಿ ಅರ್ಜಿ ಸಲ್ಲಿಸಿತ್ತು. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಕಾಯ್ದೆ 1966ರ ಸೆಕ್ಷನ್ 28ರ ಪ್ರಕಾರ, ಭೂಸ್ವಾಧೀನಕ್ಕಾಗಿ ಕೆಐಎಡಿಬಿಯು 2003ರಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿ, ಭೂಮಾಲೀಕರಿಂದ ಆಕ್ಷೇಪಣೆ ಸ್ವೀಕರಿಸಲಾಗಿತ್ತು. ನಂತರ ಜಾಗಗಳನ್ನು ವಶಪಡಿಸಿ ನೈಸ್ ಸಂಸ್ಥೆಗೆ ವರ್ಗಾವಣೆ ಮಾಡಲಾಗಿತ್ತು. ಆದರೆ ಭೂಮಾಲೀಕರಿಗೆ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಂಡಿರಲಿಲ್ಲ, ಹಾಗಾಗಿ ಭೂಸ್ವಾಧೀನದ ಅಧಿಸೂಚನೆ ರದ್ದುಗೊಳಿಸುವಂತೆ ಭೂಮಾಲೀಕರು ಹೈಕೋರ್ಟ್ ಮೊರೆಹೋಗಿದ್ದರು. ಬಳಿಕ ಭೂಮಾಲೀಕರು ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರ ಮನವಿಯನ್ನು ಪರಿಗಣಿಸುವಂತೆ ಪೀಠವು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆದರೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ, ನಂತರ ಭೂಮಾಲೀಕರು ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡಿದ್ದರು.

ಜಲಸಂಪನ್ಮೂಲ ಸಚಿವ ದೊರೈಮುರುಗನ್‌ಗೆ ಸೇರಿದ ನಾಲ್ಕು ಕಡೆ ದಾಳಿ

ಡಿಎಂಕೆ ಸಚಿವನ ಮನೆ ಮೇಲೆ ಇ.ಡಿ ದಾಳಿ

ವೆಲ್ಲೂರು: ತಮಿಳುನಾಡಿನ ಜಲಸಂಪನ್ಮೂಲ ಸಚಿವ ದುರೈಮುರುಗನ್ ಅವರ ಕಟಪಾಡಿಯ ಗಾಂಧಿನಗರದ ಲ್ಲಿರುವ ಜಲ ಸಂಪನ್ಮೂಲ ಸಚಿವ ದೊರೈಮುರುಗನ್ ಅವರ ನಿವಾಸ ಸೇರಿದಂತೆ ವೆಲ್ಲೂರಿನ ನಾಲ್ಕು ಸ್ಥಳಗಳಲ್ಲಿ ಶುಕ್ರವಾರ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ನಡೆಸಿದೆ.

ದೊರೈಮುರುಗನ್ ಅವರ ಪುತ್ರ ವೆಲ್ಲೂರ್ ಸಂಸದ ಕತಿರ್ ಆನಂದ್ ಅಧ್ಯಕ್ಷತೆಯ ಕಿಂಗ್ಸ್ಟನ್ ಕಾಲೇಜು ಮತ್ತು ಪಲ್ಲಿಕೊಂಡನ್ ಮೂಲದ ಉದ್ಯಮಿ ಪೂಂಚೋಲೈ ಶ್ರೀನಿವಾಸನ್ ಮತ್ತು ಅವರ ಸಂಬಂಧಿಕರಿಗೆ ಸೇರಿದ ಆಸ್ತಿಗಳ ಮೇಲೆ ದಾಳಿ ನಡೆಸಲಾಗಿದೆ.

ಶುಕ್ರವಾರ ಮುಂಜಾನೆ ಆರಂಭವಾದ ದಾಳಿ ತನಿಖೆಯ ಭಾಗವಾಗಿದೆ, ತಪಾಸಣೆ ವೇಳೆ ಸಚಿವ ದೊರೈಮುರುಗನ್ ಮತ್ತು ಸಂಸದ ಕತೀರ್ ಆನಂದ್ ಇಬ್ಬರೂ ವೆಲ್ಲೂರಿನಲ್ಲಿ ಇರಲಿಲ್ಲ ಎಂಬ ಸುದ್ದಿಯೂ ಹರಡಿದೆ.

ದೊರೈಮುರುಗನ್ ಅವರ ನಿಕಟವರ್ತಿ ಪೂಂಚೋಲೈ ಶ್ರೀನಿವಾಸನ್ ಅವರ ನಿವಾಸ ಮತ್ತು ಅವರ ಸಂಬಂಧಿ ಒಡೆತನದ ಸಿಮೆಂಟ್ ಗೋಡೌನ್ ಸೇರಿದಂತೆ ಆರು ಸ್ಥಳಗಳನ್ನು ಗುರಿಯಾಗಿಸಲಾಗಿದೆ. ಒಟ್ಟು 11.51 ಕೋಟಿ ನಗದನ್ನು ವಶಪಡಿಸಿಕೊಳ್ಳಲಾಗಿದ್ದು, ಬಂಡಲ್ ಮತ್ತು ಬಾಕ್ಸ್ ಗಳಲ್ಲಿ ಸಂಗ್ರಹಿಸಲಾಗಿದೆ. ಅಕ್ರಮ ಮರಳು ಕ್ವಾರಿ ಚಟುವಟಿಕೆಗಳ ಬಗ್ಗೆಯೂ ಇ.ಡಿ ತನಿಖೆ ನಡೆಸುತ್ತಿದೆ. ಈಗಾಗಲೇ ವೆಲ್ಲೂರು, ಅರಿಯಲೂರು, ಕರೂರ್, ತಿರುಚ್ಚಿ ಮತ್ತು ತಂಜಾವೂರು ಜಿಲ್ಲೆಗಳ ಐವರು ಜಿಲ್ಲಾಧಿಕಾರಿಗಳು ಅಕ್ರಮ ಮರಳುಗಾರಿಕೆಗೆ ಸಂಬಂಧಿಸಿದಂತೆ ಇ.ಡಿ ಮುಂದೆ ಚೆನ್ನೈನಲ್ಲಿ ವಿಚಾರಣೆಗೆ ಹಾಜರಾಗಿದ್ದಾರೆ.

ಬೈಡನ್ ಕೆಟ್ಟ ಅಧ್ಯಕ್ಷ: ಟ್ರಂಪ್ ಟೀಕೆ

ನ್ಯೂಯಾರ್ಕ್: ಜೋ ಬೈಡನ್ ಅಮೆರಿಕದ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಅಧ್ಯಕ್ಷ ಎಂದು ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಹಾಲಿ ಅಧ್ಯಕ್ಷರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಎಕ್ಸ್‌ನಲ್ಲಿ ಸರಣಿ ಪೋಸ್ಟ್ ಮಾಡಿರುವ ಅವರು, ಅಮೆರಿಕದ ಸ್ಥಿತಿ ಇಂದು ವಿಪತ್ತಿನಲ್ಲಿದೆ ಮತ್ತು ದೇಶವು ವಿಶ್ವದಲ್ಲಿ ನಗೆಪಾಟಲಿಗೀಡಾಗಿದೆ ಎಂದು ವ್ಯಂಗ್ಯವಾಡಿದ್ದಾರೆ. ರಾಷ್ಟ್ರೀಯ ಭದ್ರತೆ, ಸುರಕ್ಷತೆ ಮತ್ತು ನಾಯಕತ್ವದ ಕುಸಿತಕ್ಕೆ ಅಧ್ಯಕ್ಷ ಬೈಡನ್ ಅವರೇ ಕಾರಣ ಎಂದು ಟ್ರಂಪ್ ದೂಷಿಸಿದ್ದಾರೆ. ಅಧ್ಯಕ್ಷ ಬೈಡನ್ ಅವರ ಮುಕ್ತ ಗಡಿ ನೀತಿಯಿಂದ ವಿನಾಶಕಾರಿ ಪರಿಣಾಮ ಎದುರಾಗುತ್ತಿವೆ ಎಂದು ಅಭಿಪ್ರಾಯ ಪಟ್ಟಿರುವ ಟ್ರಂಪ್, ಇದೇ ವಿಷಯವನ್ನು ಕೇಂದ್ರೀಕರಿಸಿ ಬೈಡನ್ ವಿರುದ್ಧ ಟೀಕೆ ಮಾಡಿದ್ದಾರೆ. ಮುಕ್ತ ಗಡಿ ನೀತಿಯಿಂದಾಗಿ ಅಮೆರಿಕದಲ್ಲಿ ಇಸ್ಲಾಮಿಕ್ ಭಯೋತ್ಪಾದನೆ ಮತ್ತು ಹಿಂಸಾತ್ಮಕ ಅಪರಾಧಗಳ ಮಟ್ಟ ಹೆಚ್ಚಾಗುತ್ತಿದೆ ಎಂದು ಎಚ್ಚರಿಸಿದ ಅವರು, ಈ ಹಿಂದೆಂದಿಗಿಂತಲೂ ಈಗ ದೇಶ ಕೆಟ್ಟ ಸಮಯವನ್ನು ದಾಟುತ್ತಿದೆ ಎಂದು ಹೇಳಿದರು.

ದುಷ್ಕರ್ಮಿಗಳ ಗುಂಪು ನಮ್ಮ ದೇಶಕ್ಕೆ ಏನು ಮಾಡಿದೆಯೋ ಅದನ್ನು ಬೇಗ ಮರೆಯಲಾಗುವುದಿಲ್ಲ ಎಂದು ಅವರು ಹೇಳಿದರು. ನ್ಯಾಯಾಂಗ ಇಲಾಖೆ (ಡಿಒಜೆ), ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ಮತ್ತು ಡೆಮಾಕ್ರಟಿಕ್ ಸರ್ಕಾರಿ ಅಧಿಕಾರಿಗಳು ಸೇರಿದಂತೆ ವಿವಿಧ ಯು.ಎಸ್ ಸಂಸ್ಥೆಗಳು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾಗಿವೆ ಎಂದು ಟ್ರಂಪ್ ಆರೋಪಿಸಿದರು.

ಮನಮೋಹನ್ ಸ್ಮಾರಕ: 2 ಸ್ಥಳ ಆಯ್ಕೆ

ದೆಹಲಿ: ಮಾಜಿ ಪ್ರಧಾನಿ ದಿವಂಗತ ಮನಮೋಹನ್ ಸಿಂಗ್ ಅವರ ಸ್ಮಾರಕ ನಿರ್ಮಾಣಕ್ಕೆ ಭೂಮಿ ಮಂಜೂರು ಮಾಡಲು ಕೇಂದ್ರವು ಔಪಚಾರಿಕವಾಗಿ ಪ್ರಕ್ರಿಯೆ ಆರಂಭಿಸಿದೆ. ಗುರುವಾರ



ನಡೆದ ಉನ್ನತ ಮಟ್ಟದ ಸಭೆಯ ನಂತರ, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ರಾಷ್ಟ್ರೀಯ ಸ್ಮೃತಿ ಸ್ಥಳದ ಕ್ಯಾಂಪಸ್‌ನಲ್ಲಿ ಎರಡು ಸ್ಥಳಗಳನ್ನು ಗುರುತಿಸಿದೆ.

ರಾಷ್ಟ್ರೀಯ ಸ್ಮೃತಿ ಸ್ಥಳವು ಯಮುನಾ ನದಿ ದಂಡೆಯ ಉದ್ದಕ್ಕೂ ಇರುವ ಪ್ರದೇಶವಾಗಿದ್ದು, ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನಮಂತ್ರಿಗಳ ಅಂತಿಮ ವಿಧಿಗಳು ಮತ್ತು ಸ್ಮಾರಕಗಳ ನಿರ್ಮಾಣಕ್ಕಾಗಿ ಮೀಸಲಿಡಲಾಗಿದೆ.

ಸಿಂಗ್ ಅವರ ಸ್ಮಾರಕ ನಿರ್ಮಾಣ ಮಾಡಬಹುದಾದಂತ ಸಂಭಾವ್ಯ ಸ್ಥಳಗಳ ಪಟ್ಟಿಯನ್ನು ಗುರುವಾರ ಸಚಿವಾಲಯವು ಅವರ ಕುಟುಂಬಕ್ಕೆ ಹಸ್ತಾಂತರಿಸಿದ್ದು, ಕುಟುಂಬವು ಆಯ್ಕೆ ಮಾಡುವ ಸ್ಥಳದಲ್ಲಿ ಸ್ಮಾರಕ ನಿರ್ಮಾಣಕ್ಕೆ ಯೋಜಿಸಲಾಗಿದೆ. ಕುಟುಂಬದಿಂದ ಅಂತಿಮ ದೃಢೀಕರಣವನ್ನು ಪಡೆದ ನಂತರ, ಸ್ಮಾರಕದ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುವ ಟ್ರಸ್ಟ್‌ಗೆ ಭೂಮಿಯನ್ನು ಹಂಚಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟ್ರಕ್-ಟೆಂಪೊ ಡಿಕ್ಕಿ: ಮಗು ಸೇರಿ 5 ಸಾವು

ಜೈಪುರ: ರಾಜಸ್ಥಾನದ ಉದಯಪುರದಲ್ಲಿ ಶುಕ್ರವಾರ ಟ್ರಕ್‌ವೊಂದು ಟೆಂಪೊಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ನಾಲ್ವರು ಮಹಿಳೆಯರು ಮತ್ತು ಮಗು ಸೇರಿದಂತೆ ಐವರು ಸಾವಿಗೀಡಾಗಿದ್ದಾರೆ ಮತ್ತು ಎಂಟು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗೋಗುಂಡಾ -ಪಿಂಡ್ವಾರಾ ಬಳಿಯ ರಾಷ್ಟ್ರೀಯ ಹೆದ್ದಾರಿ 27ರಲ್ಲಿ ಅಪಘಾತ ಸಂಭವಿಸಿದೆ. ಟೆಂಪೋ ಸಲೇರಿಯಾ ಗ್ರಾಮ ದಿಂದ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೆದ್ದಾರಿ ಪ್ರವೇಶಿಸಿದಾಗ ಟ್ರಕ್ ಡಿಕ್ಕಿ ಹೊಡೆದಿದೆ. ಅಪಘಾತದ ನಂತರ ಟ್ರಕ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಉದಯಪುರ ಪೊಲೀಸ್ ವರಿಷ್ಠಾಧಿಕಾರಿ ಯೋಗೇಶ್ ಗೋಯಲ್ ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಇಳಿಜಾರಿನಲ್ಲಿ ಟ್ರಕ್ ಚಾಲಕನ ನಿಯಂತ್ರಣ ಕಳೆದುಕೊಂಡು ಟೆಂಪೋಗೆ ಡಿಕ್ಕಿ ಹೊಡೆದಿದೆ. ಟೆಂಪೋದಲ್ಲಿ 13 ಮಂದಿ ಪ್ರಯಾಣಿಕರಿದ್ದು, ಅದರಲ್ಲಿದ್ದ ನಾಲ್ವರು ಮಹಿಳೆಯರಾದ ಪುಷ್ಪಾ ಗರಸಿಯಾ (40), ಮಂಜುಬಾಯಿ ಗರಸಿಯಾ (25), ಕಸ್ತುಬಾಯಿ ಗರಸಿಯಾ (45) ಮತ್ತು ಮಮತಾ ಗರಸಿಯಾ (22) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಮತಾ ಅವರ ಮಗ ತುಮಾರಾಮ್ (2) ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಗಾಯಗೊಂಡ ಎಂಟು ಜನರನ್ನು ಉದಯಪುರಕ್ಕೆ ಸ್ಥಳಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇಶದಲ್ಲೀಗ ಬಡತನ ಕನಿಷ್ಠ ಮಟ್ಟಕ್ಕೆ ಇಳಿಕೆ

ದೆಹಲಿ: ದೇಶದಲ್ಲಿ ಕಡು ಬಡತನ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಂಶೋಧನಾ ಅಧ್ಯಯನದ ಪ್ರಕಾರ 2024ರಲ್ಲಿ ದೇಶದಲ್ಲಿ ಬಡತನದ ಪ್ರಮಾಣ ಶೇ. 5



ಕ್ಕಿಂತ ಕಡಿಮೆಯಾಗಿದೆ. ದೇಶದಲ್ಲಿ ಕಡು ಬಡತನ ಪ್ರಮಾಣ ಕನಿಷ್ಠ ಮಟ್ಟಕ್ಕೆ ಇಳಿದಿರುವುದಾಗಿ ಅಧ್ಯಯನದಲ್ಲಿ ಹೇಳಲಾಗಿದೆ. ಭಾರತದಲ್ಲಿ ಕಡು ಬಡತನ ಅತ್ಯಂಕ ಕನಿಷ್ಠ ಮಟ್ಟದ ಲ್ಲಿರುವುದರೊಂದಿಗೆ ಬಡತನ ಪ್ರಮಾಣ ಈಗ ಶೇ. 4ರಿಂದ ಶೇ. 4.5ರಷ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಬಡತನದ ಪ್ರಮಾಣದಲ್ಲಿ ಗಮನಾರ್ಹ ಸುಧಾರಣೆ ಆಗಿದೆ ಎಂದು ಸರ್ಕಾರದ ಬಳಕೆ ವೆಚ್ಚ ಸಮೀಕ್ಷೆ ಯಿಂದ ಪಡೆದ ಮಾಹಿತಿಯನ್ನಾಧರಿಸಿದ ಅಧ್ಯಯನ ಹೇಳಿದೆ. ಸಮೀಕ್ಷೆಯ ಪ್ರಕಾರ, 2024ರ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಬಡತನ ಶೇ. 4.86 ಎಂದು ಅಂದಾಜಿಸಲಾಗಿದೆ. 2023ರ ಆರ್ಥಿಕ ವರ್ಷದಲ್ಲಿ ಶೇ. 7. 2ರಷ್ಟು ಕಡಿಮೆಯಾಗಿದೆ. ಆರ್ಥಿಕ ವರ್ಷ 2012ರಲ್ಲಿ ಶೇ. 25.7ರಷ್ಟಿತ್ತು. ಅದೇ ರೀತಿ ಗ್ರಾಮೀಣ ಪ್ರದೇಶದಲ್ಲಿನ ಬಡತನ ಪ್ರಮಾಣ 2024ರ ಆರ್ಥಿಕ ವರ್ಷದಲ್ಲಿ ಶೇ. 4.09 ರಷ್ಟು ಕಡಿಮೆಯಾಗಿದೆ. ಇದು 2023ರ ಆರ್ಥಿಕ ವರ್ಷದಲ್ಲಿ ಶೇ. 4.6 ಮತ್ತು 2012ರ ಆರ್ಥಿಕ ವರ್ಷದಲ್ಲಿ ಶೇ. 13. 7ರಷ್ಟಿತ್ತು.

ಶಾಸಕ ಸೇರಿದಂತೆ ಹತ್ತು ಮಂದಿಗೆ ಶಿಕ್ಷೆ

ಕಾಸರಗೋಡು: ಕೇರಳದ ಕಾಸರಗೋಡು ಜಿಲ್ಲೆಯ ಪೆರಿಯಾ ಬಳಿ 5 ವರ್ಷಗಳ ಹಿಂದೆ ನಡೆದ ಇಬ್ಬರು ಯುವ ಕಾಂಗ್ರೆಸ್ ಕಾರ್ಯಕರ್ತರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಪಿಐ(ಎಂ)ನ 10 ಮಂದಿಗೆ ಜೀವಾವಧಿ ಮತ್ತು ಮಾಜಿ ಎಂಎಲ್ಎ ಒಬ್ಬನಿಗೆ 5 ವರ್ಷ ಜೈಲು ಶಿಕ್ಷೆ ವಿಧಿಸಿ ಸಿಬಿಐ ನ್ಯಾಯಾಲಯ ಆದೇಶ ನೀಡಿದೆ. ಯುವ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಪೆರಿಯ ಕಲ್ಯೋಟ್ ನಿವಾಸಿಗಳಾದ ಕೃಪೇಶ್ (19) ಮತ್ತು ಶರತ್ ಲಾಲ್(21) ಕೊಲೆ ಪ್ರಕರಣದ 10 ಮಂದಿ ಆರೋಪಿಗಳಿಗೆ ಅವಳಿ ಜೀವಾವಧಿ ಸಜೆ ಹಾಗೂ ಉದುಮ ಮಾಜಿ ಶಾಸಕ ಸಹಿತ ನಾಲ್ವರಿಗೆ ತಲಾ ಐದು ವರ್ಷ ಶಿಕ್ಷೆ ವಿಧಿಸಿ ಎರ್ನಾಕುಲಂ ಸಿಬಿಐ ನ್ಯಾಯಾಲಯ ಶುಕ್ರವಾರ ತೀರ್ಪು ನೀಡಿದೆ. ಶಿಕ್ಷೆಗೊಳಗಾದವರಲ್ಲಿ ಮಾಜಿ ಶಾಸಕ ಮತ್ತು ಸಿಪಿಐ(ಎಂ) ಜಿಲ್ಲಾ ನಾಯಕ ಕೆ.ವಿ.ಕುಂಞಿರಾಮನ್, ಕಾಞಂಗಾಡ್ ಬ್ಲಾಗಾಡ್ಕ್ ಪಂಚಾಯತ್ ಅಧ್ಯಕ್ಷ ಕೆ.ಮಣಿಕಂಠನ್, ಪೆರಿಯಾದ ಸಿಪಿಐಎಂನ ಮಾಜಿ ಸ್ಥಳೀಯ ಸಮಿತಿ ಸದಸ್ಯ ಎ. ಪೀತಾಂಬರನ್, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ರಾಘವನ್ ಸೇರಿದ್ದಾರೆ. ಸಿಪಿಐ(ಎಂ) ಮತ್ತು ಕಾಂಗ್ರೆಸ್ ನಡುವಿನ ರಾಜಕೀಯ ಪ್ರೇರಿತ ದಾಳಿ ಮತ್ತು ಪ್ರತಿದಾಳಿಗಳ ಸಂದರ್ಭದಲ್ಲಿ ಕೊಲೆ ನಡೆದಿದ್ದವು. ಪ್ರಕರಣಕ್ಕೆ ಸಂಬಂಧಿಸಿದಂತೆ ಆರಂಭದಲ್ಲಿ ಕ್ರೈಂ ಬ್ರಾಂಚ್ ತನಿಖೆ ನಡೆಸಿತ್ತು. ಆದರೆ ಮೃತರ ಕುಟುಂಬಸ್ಥರು ಹೈಕೋರ್ಟ್ ಮೊರೆ ಹೋದ ನಂತರ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಲಾಯಿತು.

ಸಮಾಚಾರ ಸಣ್ಣದಲ್ಲ

ಬಜೆಟ್: ಸಲಹೆಗೆ ಆಹ್ವಾನ

ಬೆಂಗಳೂರು: ಬಿಬಿಎಂಪಿಯ 2025-26ನೇ ಸಾಲಿನ ಆಯವ್ಯಯಕ್ಕೆ ಸಾರ್ವಜನಿಕರಿಂದ ಸಲಹೆ, ಸೂಚನೆಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ಡಾ. ಕೆ. ಹರೀಶ್ ಕುಮಾರ್ ತಿಳಿಸಿದರು. ಪಾಲಿಕೆಯು 2025-26ನೇ ಸಾಲಿನ ಕರಡು ಬಜೆಟ್ ತಯಾರಿಕೆಯ ಸಿದ್ಧತೆಯು ಪ್ರಗತಿಯಲ್ಲಿದ್ದು,

ಸಲಹೆಗಳನ್ನು ನೀಡಲು ನಾಗರಿಕರಿಗೆ 10 ಫೆ.2025ರವರಗೆ ಅವಕಾಶ ನೀಡಲಾಗಿದ್ದು, ಎಲ್ಲಾ ನಾಗರಿಕರು,. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಸಂಘಸಂಸ್ಥೆಗಳು ತಮ್ಮ ಸಲಹೆ ಸೂಚನೆಗಳ್ನನು ಪಾಲಿಕೆಗೆ ಸಲ್ಲಿಸಲು ಅನುಕೂಲವಾಗುವಂತೆ ಪಾಲಿಕೆ ಮುಖ್ಯ ದ್ವಾರದ ಬಳಿ ಸಲಹಾ ಪೆಟ್ಟಿಗೆ ಇರಿಸಿದ್ದು, ಈ ಮೂಲಕ ಸಲಹೆಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದರು. 2025-26ನೇ ಸಾಲಿನ ಕರಡು ಆಯವ್ಯಯಕ್ಕಾಗಿ ನಗರದ ಎಲ್ಲಾ ನಾಗರಿಕರು, ಸಂಘ-ಸಂಸ್ಥೆಗಳು ತಮ್ಮ ಅತ್ಯಮೂಲ್ಯವಾದ ಸಲಹೆ/ಸೂಚನೆಗಳನ್ನು ಇ-ಮೇಲ್ ಆದ bbmpbudgetgmail.com ಮೂಲಕವೂ ಸಲ್ಲಿಸಬಹುದಾಗಿದ್ದು, ಫೆ.10ರ ಒಳಗಾಗಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಗಾಜಾ ಮೇಲೆ ದಾಳಿ: 30 ಮಂದಿ ಸಾವು

ದೇರ್ ಅಲ್ ಬಲಾಹ್ (ಗಾಜಾ ಪಟ್ಟಿ): ಇಸ್ರೇಲ್ ಪಡೆಗಳು ಅಹೋರಾತ್ರಿ ನಡೆಸಿದ ವೈಮಾನಿಕ ದಾಳಿಯಲ್ಲಿ ಮಕ್ಕಳು ಸೇರಿದಂತೆ ಕನಿಷ್ಠ 30 ಮಂದಿ ಸಾವಿಗೀಡಾಗಿದ್ದಾರೆ ಎಂದು ಅಲ್ ಅಕ್ಸಾ ಹುತಾತ್ಮರ ಆಸ್ಪತ್ರೆ ಸಿಬ್ಬಂದಿ ತಿಳಿಸಿದ್ದಾರೆ. ನುಸ್ಸೈರತ್, ಝುವಾದಿಯಾ, ಮಘಾಝಿ ಹಾಗೂ ದೇರ್ ಅಲ್ ಬಲಾಹ್ ಸೇರಿ ಕೇಂದ್ರ ಗಾಜಾದ ಹಲವು ಪ್ರದೇಶಗಳಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಡಜನ್‌ಗೂ ಅಧಿಕ ಮಕ್ಕಳು ಹಾಗೂ ಮಹಿಳೆಯರು ಸೇರಿ 30ಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ ಎಂದು ಆಸ್ಪತ್ರೆ ಸಿಬ್ಬಂದಿ ಹೇಳಿದ್ದಾರೆ. ಈ ದಾಳಿಯ ಬಗ್ಗೆ ಇಸ್ರೇಲ್ ಸೇನೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆದರೆ ದಾಳಿ ಮಾಡಲು ಯೋಜನೆ ರೂಪಿಸುತ್ತಿದ್ದ ಹಮಾಸ್ ಕೇಂದ್ರಗಳು, ಕಮಾಂಡ್ ಹಾಗೂ ಕಂಟ್ರೋಲ್ ಸೆಂಟರ್‌ಗಳ ಮೇಲೆ ದಾಳಿ ಮಾಡಲಾಗಿದೆ ಎಂದು ಇಸ್ರೇಲ್ ಹೇಳಿದೆ. ನಾಗರಿಕರ ಮೇಲಾಗುವ ಹಾನಿ ತಡೆಯಲು ಈ ದಾಳಿ ಮಾಡಿದ್ದೇವೆ ಎಂದು ಇಸ್ರೇಲ್ ಹೇಳಿದೆ.

ಮಣಿಪುರ: ಎಸ್‌ಪಿ ಕಚೇರಿ ಮೇಲೆ ದಾಳಿ

ಇಂಫಾಲ್: ಮಣಿಪುರದ ಕಾಂಗ್ಪೋಕ್ಪಿ ಜಿಲ್ಲೆಯ ಎಸ್ಪಿ ಕಚೇರಿಯ ಮೇಲೆ ಶುಕ್ರವಾರ ಗುಂಪೊಂದು ದಾಳಿ ನಡೆಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇಂಫಾಲ್ ಪೂರ್ವ ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ಸೈಬೋಲ್ ಗ್ರಾಮದಲ್ಲಿ ನಿಯೋಜಿಸಿರುವ ಭದ್ರತಾ ಪಡೆಗಳನ್ನು ವಾಪಸ್ ಕರೆಸುವಲ್ಲಿ ಎಸ್ಪಿ ವಿಫಲರಾಗಿದ್ದಾರೆ ಎಂದು ಆರೋಪಿಸಿ ಈ ದಾಳಿ ನಡೆದಿದೆ. ದಾಳಿಯಲ್ಲಿ ಹಲವರು ಗಾಯಗೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಭದ್ರತಾ ಪಡೆಗಳು ಡಿಸೆಂಬರ್ 31ರಂದು ಸೈಬೋಲ್ ಗ್ರಾಮದಲ್ಲಿ ಮಹಿಳೆಯರ ಮೇಲೆ ಲಾಠಿ ಚಾರ್ಜ್ ಮಾಡಿದ ಘಟನೆಯನ್ನು ಖಂಡಿಸಿ ಕುಕಿ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿವೆ.

ಡಿಜಿಟಲ್ ವೇದಿಕೆಗಳು ಪ್ರಗತಿಗೆ ಅವಶ್ಯಕ

ಬೆಂಗಳೂರು: ಫಸ್ಟ್ ಸರ್ಕಲ್ (ಎಫ್‌ಸಿ) ಉದ್ಯಮಿ ಒಕ್ಕಲಿಗ ಕಾರ್ಯಕ್ರಮದ ಮೂರನೇ ಆವೃತ್ತಿಯನ್ನು ನಗರದ ಅರಮನೆ ಮೈದಾನದಲ್ಲಿರುವ ಗಾಯಂತ್ರಿ ಗ್ರ್ಯಾಂಡ್ ಮತ್ತು ಗಾಯತ್ರಿ ವೃಕ್ಷ ವೇದಿಕೆಯಲ್ಲಿ ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ನಿರ್ಮಲಾನಂದನಾಥ ಮಹಾ ಸ್ವಾಮಿಗಳ ದಿವ್ಯ ಸಾನಿಧ್ಯ ವಹಿಸಿದ್ದರು. ಒಕ್ಕಲಿಗ ಸಮುದಾಯದೊಳಗೆ ಉದ್ಯಮಶೀಲತೆಯನ್ನು ಬೆಳೆಸುವ ಗುರಿಯನ್ನು ಹೊಂದಿರುವ ಈ ಕಾರ್ಯಕ್ರಮವು ಚಿಂತನ-ಪ್ರಚೋದಕ ಚರ್ಚೆಗಳಿಗೆ ಸಾಕ್ಷಿಯಾಯಿತು ಮತ್ತು ಸಮುದಾಯದ ಬೆಳವಣಿಗೆಯ ದೃಷ್ಟಿಕೋನ ವನ್ನು ಒಳಗೊಂಡಿತ್ತು. ಕಾರ್ಯಕ್ರಮದಲ್ಲಿ ಮಾತನಾ ಡಿದ ಅವರು, ನಮ್ಮ ಸೃಜನಾತ್ಮಕ ಆಲೋಚನೆಗಳು ಇಂದು ಇಡೀ ಜಗತ್ತನ್ನೇ ಆಳುತ್ತಿವೆ, ಆದರೆ ಅಂದು ಕೊಂಡದ್ದನ್ನು ಕಾರ್ಯಗತಗೊಳಿಸದಿದ್ದಲ್ಲಿ ಅವುಗಳಿಗೆ ಯಾವುದೇ ಮೌಲ್ಯವಿರುವುದಿಲ್ಲ. ಫಸ್ಟ್ ಸರ್ಕಲ್ ಕೇವಲ ಮೂರು ವರ್ಷಗಳಲ್ಲಿ ಗಮನಾರ್ಹವಾಗಿ ಬೆಳೆದ ಒಂದು ಸೃಜನಶೀಲ ಉಪಕ್ರಮವಾಗಿದೆ. ಕೃತಕ ಬುದ್ಧಿಮತ್ತೆ ಬಳಕೆಯ ಈ ಯುಗದಲ್ಲಿ ನಾವು ನವ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವ ಅಗತ್ಯತೆ ಹೆಚ್ಚಿದೆ ಎಂದರು. ಶಾಸಕ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಅವರು ಮಾತನಾಡಿ, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನಲ್ಲಿ, ನಾವು ಸಂಪ್ರದಾಯಗಳೊಂದಿಗೆ ನಾವೀನ್ಯತೆಯನ್ನು ಕೂಡ ಸಮತೋಲನದಲ್ಲಿಟ್ಟುಕೊಳ್ಳಬೇಕು. ಡಿಜಿಟಲ್ ವೇದಿಕೆಗಳು ಮತ್ತು ವೈಜ್ಞಾನಿಕ ಪ್ರಗತಿಗಳು ನಮ್ಮ ಬೆಳವಣಿಗೆಗೆ ಅವಶ್ಯಕವಾಗಿದೆ ಎಂದು ಹೇಳಿದರು.

{ ನರೇಂದ್ರ ಮೋದಿ } ಪ್ರಧಾನಿ

ಒಂದೆಡೆ ಎಲ್ಲವನ್ನೂ ಉತ್ತಮಗೊಳಿಸಲು ಕೇಂದ್ರ ತನ್ನೆಲ್ಲ ಪ್ರಯತ್ನ ಮಾಡುತ್ತಿದೆ. ಮತ್ತೊಂದೆಡೆ ಕೇಂದ್ರಾಡಳಿತ ಪ್ರದೇಶವು, ಲಜ್ಜೆಗೆಟ್ಟು ಸುಳ್ಳುಗಳನ್ನು ಹರಡುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಎಎಪಿ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಶಾಲಾ ಶಿಕ್ಷಣ, ಮಾಲಿನ್ಯ ಹಾಗೂ ಮದ್ಯ ಮಾರಾಟ ಕುರಿತು ಸಾಕಷ್ಟು ಅವ್ಯವಹಾರ ನಡೆಸಿದೆ.

ಪ್ರಯಾಣಿಕರು, ನಿರ್ವಾಹಕರ ಅನುಕೂಲಕ್ಕೆ ಸರಕಾರದ ಕ್ರಮ

ಮಹಿಳೆಯರ ಕೈಗೆ ಶೀಘ್ರವೇ ಬರಲಿದೆ ಶಕ್ತಿ ಸ್ಮಾರ್ಟ್‌ಕಾರ್ಡ್

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಶಕ್ತಿ ಯೋಜನೆಯ ಫಲಾನುಭವಿಗಳಿಗೆ ಶೀಘ್ರದಲ್ಲೇ ಸ್ಮಾರ್ಟ್ ಕಾರ್ಡ್ ವಿತರಿಸಲಿದ್ದು, ಈ ಮೂಲಕ ಪ್ರಯಾಣಿಕರು, ನಿರ್ವಾಹಕರಿಗೆ ಮತ್ತಷ್ಟು ಅನುಕೂಲ ಮಾಡಿಕೊಡಲು ಸರಕಾರ ಮುಂದಾಗಿದೆ.

ಶಕ್ತಿ ಯೋಜನೆಗೆ ರಾಜ್ಯದ ಮಹಿಳೆಯರು ತಮ್ಮ ಸ್ಥಳೀಯ ವಿಳಾಸದ ಗುರುತಿನ ಚೀಟಿಯನ್ನು ನಿರ್ವಾಹಕರಿಗೆ ತೋರಿಸುವ ಅಗತ್ಯವಿದ್ದು, ಪರಿಶೀಲಿಸಿದ ಬಳಿಕ ಶೂನ್ಯ ಟಿಕೆಟ್ ಪಡೆಯಬಹುದಾಗಿತ್ತು. ಇದರಿಂದಾಗಿ ಮಹಿಳೆಯರು ಹಾಗೂ ನಿರ್ವಾಹಕರ ನಡುವೆ ಹಲವು ಬಾರಿ ಘರ್ಷಣೆಗಳುಂಟಾಗುತ್ತಿದ್ದವು. ಅಲ್ಲದೇ ಪರಿಶೀಲನೆಗೆ ಸಾಕಷ್ಟು ಸಮಯ ಬೇಕಾಗುತ್ತಿದೆ. ಜತೆಗೆ ಅನ್ಯ ರಾಜ್ಯದ ಮಹಿಳೆಯರೂ ಉಚಿತ ಯೋಜನೆ ಪಡೆಯಲು ಪ್ರಯತ್ನ ನಡೆಸಿದ ಘಟನೆಗಳು ಕಂಡುಬಂದಿದ್ದವು. ಈ ಹಿನ್ನೆಲೆ ಸ್ಮಾರ್ಟ್ ಕಾರ್ಡ್

ವಿತರಿಸಲು ಸರಕಾರ ಮುಂದಾಗಿದೆ.

ಪೀಕ್ ಅವರ್‌ನಲ್ಲಿ ಟಿಕೆಟ್ ವಿತರಣೆ ಕಷ್ಟ: ಇದರ ಜತೆಗೆ ಬಸ್ ಮುಂದಿನ ಹಂತಕ್ಕೆ ಪ್ರವೇಶಿಸುವ ಮೊದಲು ಕಂಡಕ್ಟರ್‌ಗಳು ಎಲ್ಲ ಪ್ರಯಾಣಿಕರಿಗೆ ಟಿಕೆಟ್ ನೀಡಬೇಕಾಗಿದ್ದು, ಪೀಕ್ ಅವರ್‌ಗಳಲ್ಲಿ ದಾಖಲೆ ಪರಿಶೀಲಿಸಿ ಟಿಕೆಟ್ ನೀಡುವುದು ನಿರ್ವಾಹಕರಿಗೆ ಕಷ್ಟವಾಗುತ್ತಿದೆ. ಪರಿಶೀಲನೆಗಾಗಿಯೇ ವಾಹನಗಳನ್ನು ಕೆಲವು ನಿಮಿಷಗಳ ಕಾಲ ನಿಲ್ಲಿಸುವ ಅನಿವಾರ್ಯತೆ ಎದುರಾಗುತ್ತಿದೆ. ಸ್ಮಾರ್ಟ್ ಕಾರ್ಡ್ ವಿತರಿಸಿದರೆ ಇದು ನಿರ್ವಾಹಕರ ಕೆಲಸವನ್ನು ಸುಲಭವಾಗಿಸುತ್ತದೆ. ಅಲ್ಲದೆ, ಒಟ್ಟು ಫಲಾನುಭವಿಗಳ ಬಗ್ಗೆ ಸ್ಪಷ್ಟ ಚಿತ್ರಣ ಕೂಡ ಸಿಗಲಿದೆ ಎಂದು ಮೂಲಗಳು ತಿಳಿಸಿವೆ.

ಪ್ರಯಾಣಿಕರ ಸಂಖ್ಯೆ ಏರಿಕೆ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ಶಕ್ತಿ ಯೋಜನೆಗೆ ಮಹಿಳೆಯರಿಂದ ಅಗಾಧ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಯೋಜನೆಯೊಂದಿಗೆ ಮಹಿಳಾ ಸವಾರರಷ್ಟೇ ಅಲ್ಲ, ಎಲ್ಲಾ ನಾಲ್ಕು ಬಸ್ ನಿಗಮಗಳಲ್ಲಿ ಕೆಎಸ್‌ಆರ್‌ಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ, ಬಿಎಂಟಿಸಿಗಳಲ್ಲಿಯೂ ಪ್ರಯಾಣಿಕರ ಸಂಖ್ಯೆ ಏರಿಕೆಯಾಗಿದೆ. ಪ್ರಸ್ತುತ ನಿರ್ವಾಹಕರು ಶೂನ್ಯ ಟಿಕೆಟ್ ನೀಡುವ ಮೊದಲು ಮಹಿಳೆಯರು ಗುರುತಿನಚೀಟಿ ತೋರಿಸುವುದು ಕಡ್ಡಾಯ ಮಾಡಲಾಗಿದೆ. ಸ್ಮಾರ್ಟ್ ಕಾರ್ಡ್ ವಿತರಿಸಿದರೆ, ಗುರುತಿನ ಚೀಟಿಗಳ ಪರಿಶೀಲಿಸುವ ಅಗತ್ಯವಿರುವುದಿಲ್ಲ. ಸರಕಾರವು ಶೀಘ್ರವೇ ಕಾರ್ಡ್‌ಗಳನ್ನು ವಿತರಿಸಲಿದೆ ಎಂದು ತಿಳಿಸಿದರು.

ಭಾರತ ತಂಡಕ್ಕೆ ಮರಳುವ ಮಹತ್ವದ ಸಂದೇಶ
ವಿಜಯ್ ಹಜಾರೆ ಟ್ರೋಫಿಯಲ್ಲಿ 3ನೇ ಶತಕ

ನಾಯರ್ ನೂತನ ದಾಖಲೆ

ದೆಹಲಿ: ಭಾರತ ಕ್ರಿಕೆಟ್ ತಂಡಕ್ಕೆ ಕಮ್ ಬ್ಯಾಕ್ ಮಾಡುವ ಹುಮ್ಮಸ್ಸಿನಲ್ಲಿರುವ ಕ್ರಿಕೆಟಿಗ ಕರುಣ್ ನಾಯರ್ ವಿಶ್ವ ದಾಖಲೆ ಮೂಲಕ ಟೀಂ ಇಂಡಿಯಾ ಆಯ್ಕೆ ಸಮಿತಿಗೆ ಮಹತ್ವದ ಸಂದೇಶ ರವಾನಿಸಿದ್ದಾರೆ. ಈ ಹಿಂದೆ ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಬಲ್ ಶತಕ ಬಾರಿಸಿ ಸದ್ದು ಮಾಡಿದ್ದ ಕರುಣ್ ನಾಯರ್ ಈಗ ಮತ್ತೆ ಭಾರೀ ಸುದ್ದಿಯಲ್ಲಿದ್ದು, ವಿಜಯ್ ಹಜಾರೆ ಟ್ರೋಫಿ ಸರಣಿಯಲ್ಲಿ ಸತತ 3ನೇ ಶತಕ ಸಿಡಿಸುವ ಮೂಲಕ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ನೂತನ ವಿಶ್ವದಾಖಲೆ ನಿರ್ಮಿಸಿದ್ದಾರೆ.

ಶುಕ್ರವಾರ ನಡೆದ ವಿಜಯ್ ಹಜಾರೆ ಟ್ರೋಫಿ ಡಿ-ಗುಂಪಿನ ಪಂದ್ಯದಲ್ಲಿ ಉತ್ತರ ಪ್ರದೇಶದ ವಿರುದ್ಧ ಕರುಣ್ ನಾಯರ್ ಭರ್ಜರಿ ಶತಕ ಸಿಡಿಸಿದ್ದಾರೆ. ವಿದರ್ಭ ಜಯದಲ್ಲಿ ಮಹತ್ತರ ಪಾತ್ರ ವಹಿಸಿದ ನಾಯಕ ಕರುಣ್ ನಾಯರ್, ಕೇವಲ 101 ಎಸೆತಗಳಲ್ಲಿ 11 ಬೌಂಡರಿ, 2 ಸಿಕ್ಸರ್ ಸಹಿತ 112 ರನ್ ಸಿಡಿಸಿದರು.

ಕರುಣ್ ನಾಯರ್ ವಿಶ್ವದಾಖಲೆ: ಈ ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿದ ಕರುಣ್ ನಾಯರ್ ವಿಶ್ವ ದಾಖಲೆಯೊಂದನ್ನು ನಿರ್ಮಿಸಿದ್ದಾರೆ. ಈ ಹಿಂದೆ ಇದೇ ಸರಣಿಯಲ್ಲಿ

ಕರುಣ್ ನಾಯರ್ ಮೊದಲ ಪಂದ್ಯದಲ್ಲಿ ಜಮ್ಮು ವಿರುದ್ಧ ಅಜೇಯ 112, ಛತ್ತೀಸ್‌ಗಢ ವಿರುದ್ಧ ಅಜೇಯ 44, ಚಂಡೀಗಢ್ ವಿರುದ್ಧ ಅಜೇಯ 163, ತಮಿಳುನಾಡು ವಿರುದ್ಧ ಅಜೇಯ 111 ರನ್ ಸಿಡಿಸಿದ್ದರು.

ಇದೀಗ ಉತ್ತರ ಪ್ರದೇಶ ವಿರುದ್ಧವೂ ಶತಕ ಸಿಡಿಸುವ ಮೂಲಕ ವಿಜಯ್ ಹಜಾರೆ ಟ್ರೋಫಿಯಲ್ಲಿ ಹ್ಯಾಟ್ರಿಕ್ ಶತಕ ಸಿಡಿಸಿದ ಆಟಗಾರ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. ಅಂತೆಯೇ ನಾಯರ್ ಶುಕ್ರವಾರ ಯುಪಿ ವಿರುದ್ಧ ನಾಯರ್ 70 ರನ್ ಬಾರಿಸುತ್ತಿದ್ದಂತೆ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಔಟ್ ಆಗದೆ 500ಕ್ಕೂ ಹೆಚ್ಚು ರನ್ ಬಾರಿಸಿದ ಬ್ಯಾಟರ್ ಎನಿಸಿಕೊಂಡರು.

ಅಸಾಧಾರಣ ಶೈಕ್ಷಣಿಕ ಸಾಧನೆಗಾಗಿ ಪದಕಗಳ ಪ್ರದಾನ

ರಾಮಯ್ಯ ವಿವಿ ಘಟಿಕೋತ್ಸವ

ಬೆಂಗಳೂರು: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ 9ನೇ ವಾರ್ಷಿಕ ಘಟಿಕೋತ್ಸವದಲ್ಲಿ 32 ಪಿಎಚ್‌ಡಿ ಸೇರಿದಂತೆ 1,910 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

670 ಸ್ನಾತಕೋತ್ತರ ಪದವೀಧರರು ಮತ್ತು 1,208 ಪದವಿ ಪೂರ್ವ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳನ್ನು ಉನ್ನತ ಶ್ರೇಣಿಯಲ್ಲಿ ಪೂರ್ಣಗೊಳಿಸಿದ್ದಾರೆ. ಅವರ ಅಸಾಧಾರಣ ಶೈಕ್ಷಣಿಕ ಸಾಧನೆಗಳಿಗಾಗಿ, 102 ವಿದ್ಯಾರ್ಥಿಗಳಿಗೆ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ಯುಜಿಸಿ ಆಯೋಗದ ಅಧ್ಯಕ್ಷ ಪ್ರೊ.ಮಾಮಿ ದಾಳ ಜಗದೇಶ್ ಕುಮಾರ್ ಅವರು ಪದವೀಧರರಿಗೆ ಪದವಿ ಪ್ರದಾನ ಮಾಡಿದರು. ಘಟಿಕೋತ್ಸವವು ಶೈಕ್ಷಣಿಕ ಸಾಧನೆಯ ಕಾರ್ಯಕ್ರಮವಾಗಿದ್ದು, ಎಂಜಿನಿಯರಿಂಗ್, ಮ್ಯಾನೇಜ್ಮೆಂಟ್, ಕಾನೂನು, ಸಮಾಜ ವಿಜ್ಞಾನ, ವೈದ್ಯಕೀಯ ವಿಜ್ಞಾನ, ಅನ್ವಯಿಕ ವಿಜ್ಞಾನ ಮತ್ತು ಆರೋಗ್ಯ ವಿಜ್ಞಾನ ಸೇರಿದಂತೆ ವಿವಿಧ ವಿಭಾಗಗಳ ಪದವೀಧರರು ಪದವಿ ಮುಡಿಗೇರಿಸಿಕೊಂಡರು.

ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ 9ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಅಧ್ಯಕ್ಷ (ಯುಜಿಸಿ) ಮಾಮಿದಾಳ ಜಗದೇಶ್ ಕುಮಾರ್, : ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ ಅಧ್ಯಕ್ಷ ಎಂ.ಆರ್. ಜಯರಾಮ್ ಮತ್ತಿತರಿದ್ದರು.

ವರ್ತಮಾನದಲ್ಲಿ ಬದುಕಲು ಶ್ರಮಿಸಿ: ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಅಧ್ಯಕ್ಷ (ಯುಜಿಸಿ) ಮಾಮಿದಾಳ ಜಗದೇಶ್ ಕುಮಾರ್ ಮಾತನಾಡಿ, ವಿಶ್ವವಿದ್ಯಾಲಯದ 9 ನೇ ಘಟಿಕೋತ್ಸವದಲ್ಲಿ ಪದವಿ ಮತ್ತು ಪ್ರಶಸ್ತಿಗಳನ್ನು ಪಡೆದವರಿಗೆಲ್ಲ ಅಭಿನಂದನೆಗಳು. ವಿದ್ಯಾರ್ಥಿಗಳು ಭವಿಷ್ಯಕ್ಕಾಗಿ ವಿಭಿನ್ನ ಯೋಜನೆಗಳನ್ನು ಹೊಂದಿರಬಹುದು, ಆದರೆ ಭವಿಷ್ಯಕ್ಕಾಗಿ ನಾವು ಹಲವು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ನಾವೆಲ್ಲರೂ ಬಯಸುವ ಭವಿಷ್ಯವನ್ನು ಸುಸ್ಥಿರ, ಆರೋಗ್ಯಕರ, ಸುರಕ್ಷಿತ ಮತ್ತು ಶಾಂತಿಯುತವಾಗಿ ನಾವು ಹೇಗೆ ನಿರ್ಮಿಸಬಹುದು ಎಂಬುದು ಆಲೋಚನೆ ಮಾಡಬೇಕಿದೆ ಎಂದರು. ಭವಿಷ್ಯದ ಬಗ್ಗೆ ಹೆಚ್ಚು ಚಿಂತಿಸದೆ ವರ್ತಮಾನದಲ್ಲಿ ಬದುಕಲು ಸದಾ ಶ್ರಮಿಸಬೇಕು. ದೈಹಿಕ ಮತ್ತು ಮಾನಸಿಕ ಯೋಗಕ್ಷೇಮದತ್ತ ಗಮನ ಹರಿಸಬೇಕು. ವಿದ್ಯಾರ್ಥಿಗಳು ತಮ್ಮ ಜೀವನದುದ್ದಕ್ಕೂ ಕುತೂಹಲವನ್ನು ಉಳಿಸಿಕೊಂಡು ಜೀವನ ಪರ್ಯಂತ ಕಲಿಯುವವರಾಗಿರಬೇಕು ಎಂದು ಜಗದೇಶ್ ಕುಮಾರ್ ಸಲಹೆ ನೀಡಿದರು.

ಮೋದಿ ಭೇಟಿಯಾದ ಕೊನೆರು ಹಂಪಿ ಕುಟುಂಬ

ದೆಹಲಿ: ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿ ನಡೆದಿದ್ದ ವಿಶ್ವ ರ್‍ಯಾಪಿಡ್ ಚೆಸ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ಭಾರತದ ಗ್ರ್ಯಾಂಡ್ ಮಾಸ್ಟರ್ ಕೊನೆರು ಹಂಪಿ ಶುಕ್ರವಾರ ಕುಟುಂಬ ಸಮೇತರಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದಾರೆ. ಭೇಟಿಯ ಫೋಟೊಗಳನ್ನು ಮೋದಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

'ಕೊನೆರು ಹಂಪಿ ಮತ್ತು ಅವರ ಕುಟುಂಬದವರನ್ನು ಭೇಟಿಯಾಗಿರುವುದು ಸಂತಸ ತಂದಿದೆ. ಅವರು ಕ್ರೀಡಾ ಐಕಾನ್ ಮತ್ತು ಮಹತ್ವಾಕಾಂಕ್ಷಿ ಆಟಗಾರರಿಗೆ ಸ್ಫೂರ್ತಿಯಾಗಿದ್ದಾರೆ. ಅವರ ತೀಕ್ಷ್ಣವಾದ ಬುದ್ಧಿಶಕ್ತಿ ಮತ್ತು ಅಚಲವಾದ ನಿರ್ಣಯವು ಸ್ಪಷ್ಟವಾಗಿ ಗೋಚರಿಸುತ್ತದೆ. ಭಾರತಕ್ಕೆ ಅವರು ಅಪಾರವಾದ ಹೆಮ್ಮೆ ತಂದಿದ್ದಾರೆ, ಮಾತ್ರವಲ್ಲದೆ ಶ್ರೇಷ್ಠತೆ ಏನೆಂಬುದನ್ನು ತೋರಿಸಿಕೊಟ್ಟಿದ್ದಾರೆ' ಎಂದು ಮೋದಿ ಎಕ್ಸ್‌ನಲ್ಲಿ ಬರೆದಿದ್ದಾರೆ.

ಕುಟುಂಬದೊಂದಿಗೆ ಮೋದಿ ಭೇಟಿಯ ಬಗ್ಗೆ

ಕೊನೆರು ಹಂಪಿ ಕೂಡ ಎಕ್ಸ್‌ನಲ್ಲಿ ಬರೆದುಕೊಂಡು, 'ನಮ್ಮ ಗೌರವಾನ್ವಿತ ಪ್ರಧಾನಮಂತ್ರಿ ಅವರನ್ನು ಭೇಟಿಯಾದದ್ದು ನಿಜಕ್ಕೂ ನಂಬಲಾಗದ ಮತ್ತು ಗೌರವ ಸಂಗತಿ. ಇದು ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಸಿಗುವ ಸುಯೋಗವಾಗಿದೆ. ಸ್ಫೂರ್ತಿ ಮತ್ತು ಪ್ರೋತ್ಸಾಹದಿಂದ ತುಂಬಿದ ಅನುಭವವು ನಿಜವಾಗಿಯೂ ಮರೆಯಲಾಗದು. ಧನ್ಯವಾದಗಳು ಸರ್, ಈ ಗಮನಾರ್ಹ ಕ್ಷಣಕ್ಕಾಗಿ' ಎಂದಿದ್ದಾರೆ.

ಕಳೆದ ವಾರ ನಡೆದಿದ್ದ ವಿಶ್ವ ರ್‍ಯಾಪಿಡ್ ಚೆಸ್ ಪಂದ್ಯಾವಳಿಯ ಫೈನಲ್‌ನಲ್ಲಿ ಆಂಧ್ರ ಪ್ರದೇಶದ, 37 ವರ್ಷದ ಕೊನೆರು ಹಂಪಿ ಇಂಡೋನೇಷ್ಯಾದ ಇರೆನ್ ಸಿಕಂದರ್ ವಿರುದ್ಧ ಗೆದ್ದು ಇತಿಹಾಸ ನಿರ್ಮಿಸಿದ್ದರು. ಇದು ಅವರು ಈ ಕೂಟದಲ್ಲಿ ಗೆದ್ದ 2ನೇ ಪ್ರಶಸ್ತಿಯಾಗಿದ್ದು, ಅದಕ್ಕೂ ಮುನ್ನ ಅವರು 2019ರಲ್ಲಿ ಚಾಂಪಿಯನ್ ಆಗಿದ್ದರು.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಪತ್ನಿಗೆ ನೀಡಿದ್ದ ಉಡುಗೊರೆ | ಪರಿಸರಸ್ನೇಹಿ ಎಂಬ ವೈಶಿಷ್ಟ್ಯತೆ

ಬೈಡನ್ ಪತ್ನಿಗೆ ಮೋದಿಯಿಂದ ವಜ್ರ ಗಿಫ್ಟ್

ವಾಷಿಂಗ್ಟನ್: ಅಮೆರಿಕದ ನಿರ್ಗಮಿತ ಅಧ್ಯಕ್ಷ ಜೋ ಬೈಡನ್ ಹಾಗೂ ಅವರ ಕುಟುಂಬವು ವಿವಿಧ ದೇಶಗಳ ನಾಯಕರಿಂದ ಬೆಲೆ ಬಾಳುವ ಸಾವಿರಾರು ಡಾಲರ್ ಮೌಲ್ಯದ ಉಡುಗೊರೆಗಳನ್ನು ಸ್ವೀಕರಿಸಿದ್ದು, ಆ ಪೈಕಿ ಭಾರತದ ಪ್ರಧಾನಿ ನರೇಂದ್ರ ಮೋದಿ ನೀಡಿದ ಉಡುಗೊರೆ ಅತ್ಯಂತ ದುಬಾರಿಯಾಗಿದ್ದು ಎನ್ನಲಾಗಿದೆ.

ಮೋದಿ 2023ರಲ್ಲಿ ಅಮೆರಿಕ ಪ್ರವಾಸದಲ್ಲಿದ್ದಾಗ ಅಲ್ಲಿನ ಪ್ರಥಮ ಮಹಿಳೆ ಅಧ್ಯಕ್ಷ ಜೋ ಬೈಡೆನ್‌ರವರ ಪತ್ನಿ ಜಿಲ್ ಬೈಡೆನ್‌ರಿಗೆ ದುಬಾರಿ ಉಡುಗೊರೆಯನ್ನು ನೀಡಿದ್ದರು. ಅದರಲ್ಲಿ 17.15 ಲಕ್ಷ ರೂ. ಮೌಲ್ಯದ 7.5-ಕ್ಯಾರೆಟ್ ವಜ್ರ ಇತ್ತು. ಅದು ಪ್ರಯೋಗಾಲಯದಲ್ಲಿ ತಯಾರಿಸಿದ ಹಸಿರು ವಜ್ರವಾಗಿದ್ದು, ಸೌರ ಮತ್ತು ಪವನಶಕ್ತಿ ಯಂತಹ ಸುಸ್ಥಿರ ಸಂಪನ್ಮೂಲಗಳನ್ನು ಬಳಸಿ ಕೊಂಡು ರಚಿಸಲಾಗಿದೆ, ಆ ವಜ್ರದ ಮತ್ತೊಂದು ವಿಶೇಷತೆ ಏನೆಂದರೆ ಅದು ಪರಿಸರಸ್ನೇಹಿಯಾಗಿದೆ.

ಈ ವಜ್ರವನ್ನು ಕಾರ್-ಎ-ಕಲಮ್ದಾನಿ ಎಂದು ಕರೆಯಲ್ಪಡುವ ಪೆಟ್ಟಿಗೆಯಲ್ಲಿ ಇರಿಸಲಾಗಿದ್ದು, ಆ ಪೆಟ್ಟಿಗೆಯು ಕಾಶ್ಮೀರದ ಸುಂದರ ಕರಕುಶಲತೆ ಯನ್ನು ಒಳಗೊಂಡಿದೆ.

ಜೋ ಬೈಡನ್‌ರಿಗೆ ಕೂಡ ಮೋದಿ ವಿಶೇಷವಾದ ಉಡುಗೊರೆಯನ್ನು ನೀಡಿದ್ದರು. ಸುಂದರವಾದ ಕರಕುಶಲತೆಯನ್ನು ಒಳಗೊಂಡಿರುವ ಶ್ರೀಗಂಧದ ಪೆಟ್ಟಿಗೆಯನ್ನು ನೀಡಿದ್ದರು. ಇದನ್ನು ಜೈಪುರದ ಕುಶಲಕರ್ಮಿ ಒಬ್ಬರು ತಯಾರಿಸಿದ್ದರು. ಪೆಟ್ಟಿಗೆಯ ತಯಾರಿಕೆಯಲ್ಲಿ ಬಳಸುವ ಶ್ರೀಗಂಧ ವನ್ನು ಮೈಸೂರಿನಿಂದ ಪೂರೈಸಲಾಗಿತ್ತು.

ಮೋದಿ ಮಾತ್ರವಲ್ಲದೆ, ದಕ್ಷಿಣ ಕೊರಿಯಾದ ಅಧ್ಯಕ್ಷ ಸುಕ್ ಯೋಲ್ ಯೂನ್ 6 ರು. ಲಕ್ಷ ಬೆಲೆಬಾಳುವ ಫೋಟೋ ಆಲ್ಬಮ್ ನೀಡಿದ್ದರು.

ಗೋ.ಪುರದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಮೈದಾನ

ಗೋರಖಪುರ: ಉತ್ತರ ಪ್ರದೇಶ ಸರಕಾರವು ಗೋರಖಪುರದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸಲಿದೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಶುಕ್ರವಾರ ಹೇಳಿದ್ದಾರೆ. ಇಲ್ಲಿನ ಭಾತಿ ವಿಹಾರ್ ಕಾಲೊನಿಯಲ್ಲಿ ಗೋರಖ್ಪುರದ ಮೊದಲ ಮಿನಿ ಕ್ರೀಡಾ ಸಂಕೀರ್ಣದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಉತ್ತರ ಪ್ರದೇಶ ಸರಕಾರವು ಕ್ರೀಡೆಯನ್ನು ಉತ್ತೇಜಿಸಲು ಮತ್ತು ರಾಜ್ಯದೊಳಗಿನ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಬದ್ಧವಾಗಿದೆ ಎಂದು ಹೇಳಿದರು. ಪ್ರತಿ ಗ್ರಾಮಗಳಲ್ಲಿ ಕ್ರೀಡಾ ಮೈದಾನಗಳನ್ನು ನಿರ್ಮಿಸಲಾಗುತ್ತಿದ್ದು, ಬ್ಲಾಕ್ ಮಟ್ಟದಲ್ಲಿ ಮಿನಿ ಕ್ರೀಡಾಂಗಣ ಹಾಗೂ ಜಿಲ್ಲಾ ಮಟ್ಟದಲ್ಲಿ ಪೂರ್ಣ ಪ್ರಮಾಣದ ಕ್ರೀಡಾಂಗಣ ನಿರ್ಮಾಣಕ್ಕೆ ಅನುದಾನ ಹಾಗೂ ಭೂಮಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಟ್ಟಡಕ್ಕೆ ಲಘು ವಿಮಾನ ಡಿಕ್ಕಿ: ಇಬ್ಬರ ಸಾವು

ಕ್ಯಾಲಿಫೋರ್ನಿಯಾ: ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿನ ವಾಣಿಜ್ಯ ಕಟ್ಟಡವೊಂದಕ್ಕೆ ಲಘು ವಿಮಾನ ಡಿಕ್ಕಿಯಾಗಿದೆ. ದುರಂತದಲ್ಲಿ ಇಬ್ಬರು ಮೃತಪಟ್ಟು, 18 ಮಂದಿ ಗಾಯಗೊಂಡಿದ್ದಾರೆ. ಲಾಸ್ ಏಂಜಲೀಸ್‌ನಿಂದ ಆಗ್ನೇಯಕ್ಕೆ ಸುಮಾರು 40 ಕಿ.ಮೀ ದೂರದಲ್ಲಿರುವ ಫುಲ್ಲರ್ಟನ್ ಮುನಿಸಿಪಲ್ ವಿಮಾನ ನಿಲ್ದಾಣದ ಸಮೀಪ ಗುರುವಾರ ಮಧ್ಯಾಹ್ನ 2ರ ಸುಮಾರಿಗೆ ವಿಮಾನವು ಕಟ್ಟಡಕ್ಕೆ ಡಿಕ್ಕಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೀಠೋಪಕರಣ ತಯಾರಿಕಾ ಕಂಪನಿಯ ಕಟ್ಟಡಕ್ಕೆ ಭಾರಿ ಹಾನಿಯಾಗಿದೆ. ಕಟ್ಟಡದಲ್ಲಿದ್ದ ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಹತ್ತು ಮಂದಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಎಂಟು ಮಂದಿಗೆ ಸ್ಥಳದಲ್ಲೇ ಚಿಕಿತ್ಸೆ ನೀಡಲಾಗಿದೆ ಎಂದು ಫುಲ್ಲರ್ಟನ್ ಪೊಲೀಸ್ ಇಲಾಖೆ ಮೂಲಗಳು ಮಾಹಿತಿ ನೀಡಿವೆ.

ವಿಮಾನದಲ್ಲಿ ಎಷ್ಟು ಮಂದಿ ಇದ್ದರು, ಮೃತಪಟ್ಟಿರುವವರು ವಿಮಾನದಲ್ಲಿದ್ದವರೇ ಅಥವಾ ಘಟನಾ ಸ್ಥಳದಲ್ಲಿ ಇದ್ದವರೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಅಪಘಾತಕ್ಕೀಡಾದ ವಿಮಾನ 'ವ್ಯಾನ್ಸ್ ಆರ್‌ವಿ-10' ಎಂದು ತಿಳಿಸಿರುವ ಫೆಡರಲ್ ವಿಮಾನಯಾನ ಅಧಿಕಾರಿಗಳು, ಘಟನೆ ಕುರಿತು ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯೊಂದಿಗೆ ತನಿಖೆ ನಡೆಸುವುದಾಗಿ ಹೇಳಿದೆ. ಕಳೆದವಾರವಷ್ಟೇ, ದಕ್ಷಿಣ ಕೊರಿಯಾದ ಮುವಾನ್ ಅಂತಾರಾಷ್ಟ್ರೀಯ ವಿಮಾನದಲ್ಲಿ ಭಾರಿ ದುರಂತ ಸಂಭವಿಸಿತ್ತು. ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಿಂದ ಬಂದಿದ್ದ ವಿಮಾನ, ಲ್ಯಾಂಡಿಂಗ್ ವೇಳೆ ರನ್ವೇನಿಂದ ಜಾರಿ ಕಾಂಕ್ರಿಟ್ ಗೋಡೆಗೆ ಡಿಕ್ಕಿಯಾಗಿತ್ತು. ವಿಮಾನದಲ್ಲಿದ್ದ 181 ಮಂದಿಯ ಪೈಕಿ, 179 ಜನರು ಮೃತಪಟ್ಟಿದ್ದರು.

ಲಡಾಖ್‌ನಲ್ಲಿ ಎರಡು ಕೌಂಟಿಗಳನ್ನು ನಿರ್ಮಿಸಿಕೊಂಡಿರುವ ಚೀನಾ | ನಡೆ ಖಂಡಿಸಿದ ಭಾರತ, ರಾಜತಾಂತ್ರಿಕ ಪ್ರತಿಭಟನೆ

ಕಾಲು ಕೆದರಿ ಮತ್ತೊಮ್ಮೆ ಚೀನಾ ತಂಟೆ

ದೆಹಲಿ: ಕೇಂದ್ರಾಡಳಿತ ಪ್ರದೇಶ ಲಡಾಖ್ ವ್ಯಾಪ್ತಿಯ ಪ್ರದೇಶಗಳನ್ನು ಒಳಗೊಂಡಿರುವ ಎರಡು ಹೊಸ ಕೌಂಟಿಗಳನ್ನು ಚೀನಾ ರಚಿಸಿದೆ. ಚೀನಾದ ಈ ನಡೆಯನ್ನು ತೀವ್ರವಾಗಿ ಖಂಡಿಸಿರುವ ಭಾರತ, ತೀವ್ರ ಪ್ರತಿಭಟನೆ ದಾಖಲಿಸಿದ್ದಾಗಿ ಶುಕ್ರವಾರ ಹೇಳಿದೆ.

ತನ್ನ ಭೂಪ್ರದೇಶ ಕುರಿತು ಭಾರತ ಹೊಂದಿರುವ ಸಾರ್ವಭೌಮತೆ ಹಾಗೂ ನಿಲುವಿನ ಮೇಲೆ, ಹೊಸ ಕೌಂಟಿಗಳನ್ನು ಸೃಷ್ಟಿಸಿರುವ ಚೀನಾದ ನಡೆಯಿಂದ ಯಾವುದೇ ಪರಿಣಾಮ ಉಂಟಾಗದು. ಅಲ್ಲದೇ, ಇಂತಹ ನಡೆಯು, ಈ ಪ್ರದೇಶವನ್ನು ಅಕ್ರಮವಾಗಿ ಹಾಗೂ ಬಲವಂತದಿಂದ ಆಕ್ರಮಿಸಿಕೊಳ್ಳಲು ಚೀನಾಕ್ಕೆ ಯಾವುದೇ ಅಧಿಕಾರ ನೀಡುವುದಿಲ್ಲ ಎಂದು ಭಾರತ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

ಹೋಟನ್ ಪ್ರಾಂತ್ಯವು ಚೀನಾದ ವಾಯವ್ಯ ಭಾಗದಲ್ಲಿರುವ ಜಿನ್ಜಿಯಾಂಗ್ ಪ್ರದೇಶದಲ್ಲಿದೆ. ಹೊಸದಾಗಿ ರಚಿಸಲಾಗಿರುವ ಕೌಂಟಿಗಳು ಹೋಟನ್ ಪ್ರಾಂತ್ಯದಲ್ಲಿವೆ ಎಂದು ಚೀನಾ ಹೇಳಿಕೊಂಡಿದೆ. ನಮ್ಮ ಭೂಭಾಗವನ್ನು ಆಕ್ರಮಿಸಿಕೊಳ್ಳುವ ಚೀನಾದ ಕಾನೂನುಬಾಹಿರ

ಕ್ರಮವನ್ನು ಭಾರತ ಎಂದಿಗೂ ಒಪ್ಪಿಕೊಂಡಿಲ್ಲ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ ಜೈಸ್ವಾಲ್ ಹೇಳಿದ್ದಾರೆ.

ಚೀನಾದ ಹೋಟನ್ ಪ್ರಾಂತ್ಯದಲ್ಲಿ ಎರಡು ಹೊಸ ಕೌಂಟಿಗಳನ್ನು ಸ್ಥಾಪನೆ ಮಾಡಿರುವುದಕ್ಕೆ ಸಂಬಂಧಿಸಿದ ಪ್ರಕಟಣೆಯನ್ನು ನಾವು ನೋಡಿದ್ದೇವೆ. ಕೇಂದ್ರಾಡಳಿತ ಪ್ರದೇಶ ಲಡಾಖ್‌ನ ಕೆಲ ಪ್ರದೇಶಗಳನ್ನು ಚೀನಾ ತನ್ನ ಹೊಸ ಕೌಂಟಿಗಳ ವ್ಯಾಪ್ತಿಗೆ ಸೇರಿಸಿದೆ ಎಂದು ಹೇಳಿದ್ದಾರೆ.

ಪೂರ್ವ ಲಡಾಖ್ ಗಡಿಯಲ್ಲಿ ನಾಲ್ಕೂವರೆ ವರ್ಷಗಳಿಂದ ನಿರ್ಮಾಣವಾಗಿದ್ದ ಸಂಘರ್ಷಮಯ ಸ್ಥಿತಿ ತಿಳಿಗೊಳಿಸುವ ಸಂಬಂಧ ಎರಡೂ ದೇಶಗಳ ನಡುವೆ ಹಲವು ಸುತ್ತಿನ ಮಾತುಕತೆಗಳು ನಡೆದಿದ್ದವು. ಉಭಯ ದೇಶಗಳ ನಡುವೆ ವಿಶ್ವಾಸ ವೃದ್ಧಿಗಾಗಿ, ಗಡಿ ಸ್ಥಳಗಳಲ್ಲಿ ನಿಯೋಜನೆಗೊಂಡಿದ್ದ ಯೋಧರನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆ ಕೂಡ ಪೂರ್ಣ ಗೊಂಡಿದೆ. ಆದರೆ, ಚೀನಾ ಈ ಹೊಸ ಕ್ಯಾತೆ ತೆಗೆದಿದೆ.

ಅಣೆಕಟ್ಟು: ಹಿತಾಸಕ್ತಿ ರಕ್ಷಿಸಲು ಕ್ರಮ

ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ಟಿಬೆಟ್‌ನಲ್ಲಿ ಚೀನಾ ಬೃಹತ್ ಅಣೆಕಟ್ಟು ನಿರ್ಮಿಸಲು ಸಿದ್ಧತೆ ನಡೆಸಿರುವುದರತ್ತ ನಿಗಾವಹಿಸಲಾಗಿದೆ. ಭಾರತದ ಹಿತಾಸಕ್ತಿ ರಕ್ಷಿಸಲು ಅಗತ್ಯ ಕ್ರಮವಹಿಸಲಾಗುವುದು ಎಂದು ಕೇಂದ್ರ ಸರಕಾರ ಪ್ರತಿಕ್ರಿಯಿಸಿದೆ. ಉದ್ದೇಶಿತ ಅಣೆಕಟ್ಟು ನಿರ್ಮಾಣ ಕುರಿತಂತೆ ಸರಕಾರ ಇದೇ ಮೊದಲ ಬಾರಿ ಪ್ರತಿಕ್ರಿಯಿಸಿದೆ. ಕೆಳಹಂತದ ನದಿಪಾತ್ರದ ಪ್ರದೇಶಗಳ ಹಿತ ರಕ್ಷಿಸಲೂ ಚೀನಾ ಆದ್ಯತೆ ನೀಡಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು. ಅಣೆಕಟ್ಟು ನಿರ್ಮಾಣ ಮಾಡುವುದರಿಂದ ಭಾರತದಲ್ಲಿ ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ಪ್ರದೇಶದಲ್ಲಿ ಪರಿಸರ ಅಸಮತೋಲನ ಉಂಟಾಗಬಹುದು ಎಂಬ ಆತಂಕವಿದೆ. ಬ್ರಹ್ಮಪುತ್ರ ನದಿಯು ಈ ಎರಡೂ ರಾಜ್ಯಗಳನ್ನು ಹಾದುಹೋಗಿದೆ. ಕೆಳಹಂತದಲ್ಲಿರುವ ನದಿಪಾತ್ರದ ರಾಜ್ಯಗಳು ನದಿ ನೀರಿನ ಮೇಲಿನ ಹಕ್ಕು ಪ್ರತಿಪಾದಿಸಿವೆ. ತಜ್ಞರ ಹಂತದಲ್ಲಿ ಹಾಗೂ ರಾಜತಾಂತ್ರಿಕ ಮಾರ್ಗದಲ್ಲಿ ಈಗಾಗಲೇ ಈ ಆತಂಕವನ್ನು ಚೀನಾ ಸರಕಾರಕ್ಕೆ ಮನವರಿಕೆ ಮಾಡಲಾಗಿದೆ ಎಂದು ತಿಳಿಸಿದರು. ಅಣೆಕಟ್ಟು ನಿರ್ಮಾಣ ಕುರಿತ ಇತ್ತೀಚಿನ ವರದಿಗಳ ಹಿನ್ನೆಲೆಯಲ್ಲಿ ನದಿಯ ಕೆಳಹಂತದ ರಾಷ್ಟ್ರಗಳ ಜೊತೆಗೆ ಚರ್ಚಿಸಬೇಕು ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂಬ ಆಗ್ರಹವನ್ನು ಪುನರುಚ್ಚರಿಸಲಾಗಿದೆ ಎಂದು ತಿಳಿಸಿದರು.

ಕಾಫಿ ಬೋರ್ಡ್ ಆಫ್ ಇಂಡಿಯಾದ ಕಾರ್ಯದರ್ಶಿ ಡಾ.ಕೆ.ಜಿ.ಜಗದೀಶ ಮಾಹಿತಿ

ಭಾರತದ ಕಾಫಿ ಪ್ರಮಾಣೀಕರಣಕ್ಕೆ ಮಾನದಂಡ ರೂಪಿಸಲು ಸಿದ್ಧತೆ

ಬೆಂಗಳೂರು: ದೇಶದ ವಿಶಿಷ್ಟ ಕಾಫಿ ತಳಿಗಳನ್ನು ಗುರುತಿಸಲು ಹಾಗೂ ತನ್ನದೇ ಕಾಫಿ ಪ್ರಮಾಣೀಕರಿಸಲು ಭಾರತವು ಪ್ರಕ್ರಿಯೆ ಮತ್ತು ಮಾನದಂಡವನ್ನು ರೂಪಿಸಲು ಮುಂದಾಗಿದೆ.

ಈ ಮಾನದಂಡಗಳು ಕಾಫಿಯನ್ನು ಹೇಗೆ ಬೆಳೆಸಲಾಗುತ್ತದೆ, ಹೇಗೆ ಕೊಯ್ಲು ಮಾಡಲಾಗುತ್ತದೆ ಎಂಬುದರಿಂದ ಸಂಸ್ಕರಿಸುವ ವಿಧಾನ ಮತ್ತು ಪ್ಯಾಕಿಂಗ್ ಹೇಗೆ ಮಾಡಲಾಗುತ್ತದೆ ಎಂಬುದನ್ನು ಹೊಂದಿರಲಿದ್ದು, ರುಚಿ ಮತ್ತು ಪರಿಮಳವನ್ನು ಪರಿಶೀಲನೆ ಮಾಡಲಾಗುತ್ತದೆ. ಈ ಮೂಲಕ ಬೆಳೆದ ಉತ್ಪನ್ನ, ಸಂಸ್ಕರಣೆ ಮತ್ತು ಉತ್ತಮ ಗುಣಮಟ್ಟ ಮತ್ತು ಮಾರಾಟದಲ್ಲಿ ಸ್ಥಿರತೆ ಖಾತ್ರಿಗೆ ನಿಯಮಗಳನ್ನು ರೂಪಿಸಲು ಮುಂದಾಗಿದೆ.

ಪ್ರಮಾಣೀಕರಣದ ಹೆಚ್ಚಿನ ವೆಚ್ಚಗಳಿಗೆ ಪ್ರತಿಕ್ರಿಯೆಯಾಗಿ ಮಂಡಳಿಯು ಈ ಯೋಜನೆಗಳನ್ನು ಪರಿಚಯಿಸಿದ್ದು, ಈ ಮಾನದಂಡಗಳು ಕಾಫಿ ಬೆಳೆಗಾರರು ಗುಣಮಟ್ಟ, ಪರಿಸರ ಮತ್ತು ಸಾಮಾಜಿಕ ಪದ್ಧತಿಗಳ ಮೇಲೆ ಗಮನ ಹರಿಸುವ ಮಾರ್ಗಸೂಚಿಗಳನ್ನು ಅನುಸರಿಸಿದ್ದಾರೆಯೇ ಎಂಬುದರ ಪರಿಶೀಲನೆಯನ್ನು ಪ್ರಮಾಣೀಕರಣ ಪ್ರಕ್ರಿಯೆ ಒಳಗೊಂಡಿರುತ್ತದೆ. ಇಲ್ಲಿಯವರೆಗೆ ಭಾರತೀಯ ಬೆಳೆಗಾರರು ಅಂತಾರಾಷ್ಟ್ರೀಯ ಮಾನದಂಡಗಳಿಗೆ ಬದ್ಧರಾಗಿದ್ದರು. ಇದು ಭಾರತದ ಪರಿಸ್ಥಿತಿಗೆ ಹೊಂದಾಣಿಕೆಯಾಗುವುದಿಲ್ಲ.

ಈ ಯೋಜನೆಗಳು ಅನೇಕ ಬೆಳೆಗಾರರು ತಮ್ಮ ಕಾಫಿಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಲು ಅಡ್ಡಿಯಾಗಿದೆ. ಅಂತಾರಾಷ್ಟ್ರೀಯ ಪ್ರಮಾಣೀಕರಣಕ್ಕಾಗಿ ಲಕ್ಷಗಟ್ಟಲೆ ರು. ವೆಚ್ಚ ಮಾಡಬೇಕಾದ ಕಾರಣದಿಂದ ಸುಮಾರು ಶೇ.85 ರಷ್ಟು ಭಾರತೀಯ ಕಾಫಿ ಪ್ರಮಾಣೀಕರಿಸದೆ ಉಳಿದಿದೆ, ಪ್ರಮಾಣೀಕರಣವು ಈಗ ಉಚಿತವಾಗಿರುವುದರಿಂದ ಹೊಸ ಭಾರತೀಯ ಮಾನದಂಡಗಳು ಸ್ವಾಗತಾರ್ಹ ಪರಿಹಾರವಾಗಿ ಬರಲಿದ್ದು, ಇದು ಬೆಳೆಗಾರರಿಗೆ ಮಹತ್ವದ ಅವಕಾಶವನ್ನು ನೀಡುತ್ತದೆ.

ಕಾಫಿ ಬೋರ್ಡ್ ಆಫ್ ಇಂಡಿಯಾದ ಕಾರ್ಯದರ್ಶಿ ಮತ್ತು ಸಿಇಒ ಡಾ.ಕೆ.ಜಿ.ಜಗದೀಶ ಮಾಹಿತಿ ನೀಡಿ, ಈ ಯೋಜನೆಯು ಮೊದಲ ಹಂತದಲ್ಲಿದ್ದು,ಭಾರತೀಯ ಕಾಫಿಯನ್ನು ತನ್ನದೆ ವಿಶಿಷ್ಟ ಗುರುತನ್ನು ಹೊಂದಿರುವ ಉತ್ಪನ್ನವಾಗಿಸಲು ಸಹಾಯಕವಾಗಲಿದೆ ಎಂದು ತಿಳಿಸಿದರು.

ದಕ್ಷಿಣ ಕೋರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ ವಿಚಾರಣೆ
ವಾರಂಟ್ ನಿರಾಕರಣೆ, ವಿಚಾರಣೆಯೇ ಇಲ್ಲದೇ ವಾಪಾಸಾದ ಅಧಿಕಾರಿಗಳು

ಆರು ತಾಸು ಕಾದರೂ ವಿಚಾರಿಸಲಾಗಲಿಲ್ಲ!

ಸೋಲ್: ವಾಗ್ದಂಡನೆಗೆ ಗುರಿಯಾಗಿರುವ ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರನ್ನು ವಿಚಾರಣೆಗಾಗಿ ವಶಕ್ಕೆ ಪಡೆಯುವ ತನಿಖಾಧಿಕಾರಿಗಳ ಯತ್ನ ಶುಕ್ರವಾರ ಸುಮಾರು ಆರು ತಾಸು ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು.

ಅಂತಿಮವಾಗಿ ಯೋಲ್ ಅವರು ವಾರಂಟ್ ನಿರಾಕರಿಸಿದ್ದು, ಅಧಿಕಾರಿಗಳು ವಿಚಾರಣೆ ನಡೆಸದೇ ಅಧಿಕೃತ ನಿವಾಸದಿಂದ ನಿರ್ಗಮಿಸಿದರು. ಒಂದೇ ತಿಂಗಳಲ್ಲಿ ಇಬ್ಬರು ಮುಖಂಡರು ವಾಗ್ದಂಡನೆಗೆ ಗುರಿಯಾಗಿದ್ದು, ಈ ಘಟನೆಗಳು ದೇಶದಲ್ಲಿ ರಾಜಕೀಯ ಬಿಕ್ಕಟ್ಟಿಗೆ ಕಾರಣವಾಗಿವೆ.

ಅಧ್ಯಕ್ಷರ ವಿಚಾರಣೆ ಕುರಿತು ಹೇಳಿಕೆ ನೀಡಿರುವ ಭ್ರಷ್ಟಾಚಾರ ತನಿಖಾ ಸಂಸ್ಥೆಯು, ಅಧ್ಯಕ್ಷರ ಸುರಕ್ಷತೆಯ ನೆಪವೊಡ್ಡಿದ ಅವರ ಭದ್ರತಾ ಸೇವೆಯ ಸಿಬ್ಬಂದಿ ತನಿಖಾಧಿಕಾರಿಗಳು ಯೂನ್ ಅವರ ನಿವಾಸ ಪ್ರವೇಶಿಸದಂತೆ

ಗಂಟೆಗಟ್ಟಲೆ ತಡೆದರು ಎಂದು ಪ್ರತಿಕ್ರಿಯಿಸಿದೆ.

ತನಿಖಾಧಿಕಾರಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದರು. ತನಿಖೆ ಕುರಿತಂತೆ ಅಧ್ಯಕ್ಷರ ಭದ್ರತಾ ಪಡೆಯೊಂದಿಗೆ ಹಲವು ಭಾರಿ ವಾಗ್ವಾದ ನಡೆಸಬೇಕಾಯಿತು. ದೇಶದ ಕಾನೂನು ಪ್ರಕ್ರಿಯೆಗೂ ಸಹಕರಿಸದ ಅವರ ವರ್ತನೆಗೆ ವಿಷಾದವಿದೆ ಎಂದೂ ಪ್ರತಿಕ್ರಿಯಿಸಿದೆ.

ತೀವ್ರ ಚಳಿಯ ವಾತಾವರಣದಲ್ಲೂ ಅಧ್ಯಕ್ಷರ ನಿವಾಸದ ಹೊರಗೆ, ಯೋಲ್ ಅವರ ಬೆಂಬಲಿಗರು ದೊಡ್ಡ ಸಂಖ್ಯೆಯಲ್ಲಿ ಸುದೀರ್ಘ ಕಾಲ ಗುಂಪುಗೂಡಿದ್ದರು. ದಕ್ಷಿಣ ಕೊರಿಯಾ, ಅಮೆರಿಕದ ಧ್ವಜಹಿಡಿದಿದ್ದ ಬೆಂಬಲಿಗರು ಅಧ್ಯಕ್ಷರ ರಕ್ಷಣೆಗೆ ಆಗ್ರಹಿಸುವ ಘೋಷಣೆಗಳನ್ನು ಕೂಗಿದರು. ಅಧ್ಯಕ್ಷರ ಭದ್ರತಾ ಸೇವೆಯ ಮುಖ್ಯಸ್ಥರು ಮತ್ತು ಉಪ ಮುಖ್ಯಸ್ಥರನ್ನೂ ತನಿಖೆಗೆ ಒಳಪಡಿಸಲು ಈಗ ಸಂಸ್ಥೆ ನಿರ್ಧರಿಸಿದೆ. ಅಧಿಕೃತ ಕರ್ತವ್ಯಕ್ಕೆ ಅಡ್ಡಿಪಡಿಸಿದ ಕಾರಣಕ್ಕೆ ಸಮನ್ಸ್ ಜಾರಿ ಮಾಡಿದ್ದು, ಶನಿವಾರ ವಿಚಾರಣೆಗೆ ಬರಲು ಇಬ್ಬರಿಗೆ ಸೂಚಿಸಲಾಗಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

ಹಾರು ಹಕ್ಕಿಯೇ ಹಾರು!

ಬಾಲದಂಡೆ ಹಕ್ಕಿ (ಪ್ಯಾರಡೈಸ್ ಫ್ಲೈ ಕ್ಯಾಚರ್)
ಜನವರಿ 5 ರಾಷ್ಟ್ರೀಯ ಪಕ್ಷಿಗಳ ದಿನ

• ಮಲ್ಲಪ್ಪ. ಸಿ. ಖೊದ್ನಾಪೂರ

ಹಕ್ಕಿಯು ಹಾಡುತ್ತದೆ, ಅದೇ ರೀತಿ ಹಾರುತ್ತದೆ! ಹಕ್ಕಿಯು ನೆಮ್ಮದಿಯಿಂದ ಹಾರುತ್ತಾ, ಚಿಲಿಪಿಲಿ ಹಾಡುತ್ತಾ ತನ್ನ ಬದುಕನ್ನು ಕಟ್ಟಿಕೊಳ್ಳಲು ಮನುಷ್ಯನ ಸಹಾಯ ಬೇಕೇಬೇಕು. ಆದ್ದರಿಂದ, ಜನವರಿ 5 ನ್ನು ರಾಷ್ಟ್ರೀಯ ಪಕ್ಷಿಗಳ ದಿನವನ್ನಾಗಿ ಆಚರಿಸಲಾಗುತ್ತಿದೆ.

ಪರಿಸರವಾದಿ ಜಾನ್ ಪಾಲ್‌ರವರ ಪ್ರಕಾರ, 'ಪರಿಸರವೆಂಬುದು ಯಾರೊಬ್ಬರ ಸ್ವತ್ತಲ್ಲ. ಆದರೆ ಪರಿಸರ ಸಂರಕ್ಷಣೆಯು ಈ ಭೂಮಿಯ ಜೀವಿಸುವ ಪ್ರತಿ ಮನುಷ್ಯನ ಆದ್ಯ ಕರ್ತವ್ಯವಾಗಿದೆ' ಎಂದು ಹೇಳಿದ್ದಾರೆ. ಆದ್ದರಿಂದ ಈ ನೆಲ, ಜಲ, ಗಾಳಿ, ಬೆಳಕು, ಪರಿಸರ ಮತ್ತು ಸೂರ್ಯ-ಚಂದ್ರ, ಮತ್ತು ಪ್ರಕೃತಿಯ ಸೌಂಧರ್ಯವನ್ನು ಆಸ್ವಾದಿಸಿದ ನಾವುಗಳು ನಮಗೆ ಬದುಕಲು ಆಶ್ರಯ ನೀಡಿದ ಪರಿಸರ ಸಂರಕ್ಷಣೆಗಾಗಿ ನಾವೆಲ್ಲರೂ ಕೈಜೋಡಿಸಬೇಕಾಗಿದೆ.

ಆಗೊಂದು ಕಾಲವಿತ್ತು; ಜನರಿಗೆ ಬೆಳಗು ಮುಂಜಾನೆ ಆಗಿದ್ದು ಅರಿವಿಗೆ ಬರುವುದು ಅ ಗುಬ್ಬಚ್ಚಿಗಳ ಚಿವ್ ಚಿವ್ ಮತ್ತು ಚಿಲಿಪಿಲಿ ಕಲರವದಿಂದಲೇ. ಸರಿ ಸುಮಾರು 20 ವರ್ಷಗಳ ಹಿಂದೆ ಗುಬ್ಬಚ್ಚಿಗಳು ಕಾಣಸಿಗುತ್ತಿದ್ದವು ಮತ್ತು ಅವುಗಳ ಕಲರವ ಮತ್ತು ನಿನಾದದ ಅನುಭವ ಆಗುತ್ತಿತ್ತು. ಆದರೆ ಮನುಷ್ಯನ ಸ್ವಾರ್ಥ ಮತ್ತು ವಿವೇಚನಾ ರಹಿತ ಜೀವನಕ್ರಮದಿಂದಾಗಿ, ವಿದ್ಯುನ್ಮಾನ ಆಧಾರಿತ ವಸ್ತುಗಳ ಅತಿಯಾದ ಬಳಕೆ, ಮೊಬೈಲ್, ತರಂಗಗಳ ದುಷ್ಪರಿಣಾಮದಿಂದಾಗಿ ನಮ್ಮ ಸುತ್ತಲಿರುವ ಪಕ್ಷಿ ಸಂಕುಲಗಳೇ ಸಂತತಿಯು ಕಣ್ಮರೆಯಾಗುತ್ತಿವೆ.

ಇತ್ತೀಚೆಗೆ ಹೆಚ್ಚಾಗುತ್ತಿರುವ ನಗರೀಕರಣ, ಮಿತಿಮೀರಿ ಬೆಳೆಯುತ್ತಿರುವ ಆಧುನಿಕ ವಿಜ್ಞಾನ-ತಂತ್ರಜ್ಞಾನ, ಅದರಲ್ಲೂ ವಿಶೇಷವಾಗಿ ಮೊಬೈಲ್ (ಚರವಾಣಿ), ಅವುಗಳ ಜಾಲ ವಿಸ್ತರಣೆಯ ಧ್ವನಿ ತರಂಗಳನ್ನು ಕೇಂದ್ರಿಕರಿಸುವ ಮೊಬೈಲ್ ಟಾವರ್, ಗ್ರಹಿಸುವ ಸಂಪರ್ಕ ವಾಹಕಗಳು, ಟ್ರಾನ್ಸ್ ಫಾರ್ಮರ್‌ಗಳ ಕಾರಣದಿಂದಾಗಿ ಈ ಪಕ್ಷಿ ಸಂಕಲಕ್ಕೆ ಮಾರಕವಾಗುತ್ತಿವೆ.

ಅಳಿವಿನಂಚಿನಲ್ಲಿರುವ ಪಕ್ಷಿಗಳನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಪ್ರತಿವರ್ಷ ಜನವರಿ 5 ರಂದು ರಾಷ್ಟ್ರೀಯ ಪಕ್ಷಿ ದಿನವನ್ನು ಆಚರಿಸಲಾಗುತ್ತಿದೆ. ಸಾರ್ವಜನಿಕರು ತಮ್ಮ ಮನೆಯ ಸುತ್ತಮುತ್ತನಲ್ಲಿ ಬೇಸಿಗೆಯ ಧಗೆಯಿಂದ ನೀರಿಗೆ ಹಾತೊರೆಯುವ ಪಕ್ಷಿಗಳಿಗಾಗಿ ನೀರು, ಆಹಾರ ನೀಡುವ ಮೂಲಕ ಅವುಗಳ ರಕ್ಷಣೆ ಮಾಡಬೇಕು. ಜೀವ ಸಂಕುಲದ ರಕ್ಷಣೆಯ ಜೊತೆಗೆ ಜೀವ ವೈವಿಧ್ಯತೆಯನ್ನು ಕಾಪಾಡಿಕೊಳ್ಳುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ. ಪಕ್ಷಿಗಳು ಸ್ವಚ್ಛಂದವಾಗಿ ಇರಲು ಅರಣ್ಯ ಇಲಾಖೆ, ಪ್ರಕೃತಿ-ಪಕ್ಷಿ ಪ್ರೇಮಿಗಳು ಹಾಗೂ ಸಾರ್ವಜನಿಕರು ಜೀವ ವೈವಿಧ್ಯ, ವನ ನಿರ್ಮಾಣ, ಅರಣ್ಯೀಕರಣ, ಗಿಡ-ಮರಗಳನ್ನು ಬೆಳೆಸುವುದು ಮತ್ತು ಆ ಪಕ್ಷಿಗಳು ಗೂಡು ಕಟ್ಟಲು ಸುರಕ್ಷಿತ ಸ್ಥಳವನ್ನು ನಿರ್ಮಿಸಬೇಕು ಎಂಬ ಮಹೋನ್ನತವಾದ ಉದೇಶದಿಂದ ಈ ರಾಷ್ಟ್ರೀಯ ದಿನವನ್ನು ಆಚರಿಸಲಾಗುತ್ತಿದೆ.

ಅತಿ ಸುಂದರ ಪಕ್ಷಿ

ನಮ್ಮ ದೇಶದ ಅತಿ ಸುಂದರ ಪಕ್ಷಿ ಯಾವುದು ಎಂಬ ಪ್ರಶ್ನೆಗೆ ಹಲವು ಉತ್ತರಗಳು ಬರಬಹುದು. ಅವುಗಳಲ್ಲಿ ಎದ್ದು ಕಾಣುವ ಹೆಸರು ಪ್ಯಾರಡೈಸ್ ಫ್ಲೈ ಕ್ಯಾಚರ್. ಕನ್ನಡದಲ್ಲಿ ಇದನ್ನು ಬಾಲದಂಡೆ ಹಕ್ಕಿ ಎನ್ನುವರು. ತನ್ನ ಉದ್ದನೆಯ ಬಾಲವನ್ನು ಬಳುಕಿಸುತ್ತಾ, ಮರದಿಂದ ಮರಕ್ಕೆ ಹಾರುವ ಈ ಹಕ್ಕಿಯು, ಕಾಡಿನ ಕಿಬ್ಬದಿಯಲ್ಲಿ ಕಾಣ ಸಿಕ್ಕಿದರೆ, ವನದಲ್ಲೊಂದು ಕವನವನ್ನೇ ನೋಡಿದ ಅನುಭವವಾದೀತು! ನಮ್ಮ ರಾಜ್ಯದ ಹಲವು ಪ್ರದೇಶಗಳಲ್ಲಿ ಕಾಣಸಿಗುವ ಈ ಪಕ್ಷಿಯು ನಮ್ಮ ದೇಶದ ಅತಿ ಸುಂದರ ಹಕ್ಕಿಗಳಲ್ಲಿ ಒಂದು.

ಘೋಷವಾಕ್ಯ

ಪಕ್ಷಿಗಳು ಸ್ವತಂತ್ರ್ಯ, ಮುಕ್ತ ಮತ್ತು ಸ್ವಚ್ಛಂದವಾಗಿ ಹಾರಾಡಬೇಕು ಮತ್ತು ದೈವದತ್ತವಾಗ ನಮಗೆ ಪರಿಸರ ನೀಡುವ ಎಲ್ಲ ಜೀವ-ವೈವಿಧ್ಯತೆಯ ಸಂರಕ್ಷಿಸಬೇಕೆನ್ನುವುದೇ 2024ರ ಘೋಷವಾಕ್ಯವಾಗಿತ್ತು. ನೈಸರ್ಗಿಕ ಆವಾಸಸ್ಥಾನಗಳಲ್ಲಿ ಪಕ್ಷಿಗಳ ಸೌಂದರ್ಯವನ್ನು ಉತ್ತೇಜಿಸವತ್ತ ಗಮನಹರಿಸಬೇಕು, ಪಕ್ಷಿ ಪ್ರಭೇದಗಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಜನರಲ್ಲಿ ಶಿಕ್ಷಣ ನೀಡುವುದು ಮತ್ತು ಪಕ್ಷಿ ಸಂಕುಲಗಳ ಅಳಿವನ್ನು ತಡೆಗಟ್ಟುವುದು - ಇವೇ 2025 ನೇಯ ವರ್ಷದ ಪ್ರಮುಖ ಧ್ಯೇಯೋದ್ದೇಶವಾಗಿದೆ.

ಈ ದಿನದ ಆಚರಣೆಯ ಮುಖೇನ ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಈ ಅಳಿವಿನ ಅಂಚಿನಲ್ಲಿರುವ ರೈತ ಮತ್ತು ಜನಸ್ನೇಹಿಯಾಗಿರುವ ಪಕ್ಷಿಗಳ ಕುರಿತು ಸಂರಕ್ಷಣೆಯ ಅರಿವು ಮೂಡಿಸಿ, ಪಕ್ಷಿಧಾಮಗಳನ್ನು ನಿರ್ಮಿಸುತ್ತ, ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛಂದವನ್ನಾಗಿಸಿಕೊಳ್ಳಬೇಕೆನ್ನುವ ಮನೋಭಾವನೆಯನ್ನು ಬೆಳೆಸುವ ಕಾರ್ಯ ನಡೆಯಬೇಕಾಗಿದೆ. ಇದು ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವಾಗಬಾರದು. ನಮ್ಮ ಸುತ್ತಲಿನ ಪರಿಸರದಲ್ಲಿ ಹಕ್ಕಿಗಳು ನೆಮ್ಮದಿಯಿಂದ ಬದುಕುವ ಸನ್ನಿವೇಶವನ್ನು ಕಲ್ಪಿಸಬೇಕು. ಹುಲ್ಲುಗಾವಲನು ಸಂರಕ್ಷಿಸುವುದು, ಮರಗಳನ್ನು ರಕ್ಷಿಸುವುದು, ಕಾಡನ್ನು ಉಳಿಸುವುದು, ಸಮುದ್ರ ಕಿನಾರೆಯನ್ನು ಆರೋಗ್ಯಕರವಾಗಿಡುವುದು - ಇವೇ ಮೊದಲಾದ ಜವಾಬ್ದಾರಿಗಳನ್ನು ಮನುಷ್ಯನು ಪಾಲಿಸುವುದರ ಮೂಲಕ, ಹಕ್ಕಿಗಳ ಬದುಕನ್ನು ಹಸನುಗೊಳಿಸಬಹುದು.

ಚಿತ್ತ ವಿಹಾರ

ಎಲ್ಲರನ್ನೂ ಆದರಿಸೋಣ

ನಮ್ಮ ಬದುಕಿನ ಹಾದಿಯಲ್ಲಿ ಬಯಕೆಗಳು ಸದಾ ನಮ್ಮನ್ನು ಸಂಗಡಿಸಿಕೊಂಡಿರುತ್ತವೆ. ಬಯಕೆಗಳು ಬೆಟ್ಟದಷ್ಟು. ಅವುಗಳಲ್ಲಿ ಅತ್ಯಂತ ಗಾಢವಾದದ್ದು ಮತ್ತು ಆಳವಾಗಿರುವುದು ಎಂದರೆ ಇತರರು ನಮ್ಮನ್ನು ಆದರಿಸಬೇಕು ಮತ್ತು ಗೌರವಿಸಬೇಕು ಎನ್ನುವುದು. ನಾವು ಒಂದಷ್ಟು ಅಧಿಕಾರ, ಅಂತಸ್ತು, ಸಾಮಾಜಿಕ ಸ್ಥಿತಿಗಳಲ್ಲಿ ಎತ್ತರದಲ್ಲಿದ್ದಾಗ ಇಂತಹ ಬಯಕೆ ನಮ್ಮನ್ನು ತೀರ ಕಾಡತೊಡಗುತ್ತವೆ. ನಮ್ಮಂತೆಯೇ ಇತರರೂ ಕೂಡ ಇಂಥದ್ದೇ ಭಾವನೆಗಳನ್ನು ಹೊಂದಿರುತ್ತಾರೆ ಎಂಬುದನ್ನು ಅರಿಯದೇ ಅವರನ್ನು ತೀರ ಅನಾದರ ಭಾವದಿಂದ ಕಾಣುತ್ತೇವೆ. ಸಾಮಾನ್ಯರನ್ನೂ ಆದರದಿಂದ ಕಾಣುವುದನ್ನು ಕೂಡ ನಮ್ಮ ವ್ಯಕ್ತಿತ್ವದ ಭಾಗವನ್ನಾಗಿಸಿಕೊಳ್ಳಬೇಕು ಎಂಬುದು ಗಮನೀಯವಾಗಿದೆ. ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಒಮ್ಮೆ ಭಾಷಣ ಮಾಡುತ್ತಿದ್ದರು. ಅವರ ಭಾಷಣ ಕೇಳಲು ಸಾವಿರಾರು ಜನ ಸೇರಿದ್ದರು. ಅಬ್ರಾಹಂ ಲಿಂಕನ್ ಅವರ ಹಳ್ಳಿಯ ರೈತನೊಬ್ಬ ಕೂಡ ಅವರಲ್ಲಿ ಒಬ್ಬನಾಗಿದ್ದ. ಅವರ ಅದ್ಭುತ ಭಾಷಣ ಎಲ್ಲರನ್ನು ಮಂತ್ರಮುಗ್ಧವಾಗಿಸಿತ್ತು. ಅಲ್ಲಿದ್ದ ಗಣ್ಯರೆಲ್ಲರೂ ಅವರನ್ನು ಕುಳಿತ ಸ್ಥಳದಿಂದಲೇ ಅಭಿನಂದಿಸಿದರು. ಆದರೆ ಅವರ ಭಾಷಣದಿಂದ ತೀರ ಪ್ರಭಾವಿತನಾದ ಅವರ ಹಳ್ಳಿಯ ರೈತ ಭಾಷಣ ಮುಗಿದ ತಕ್ಷಣಕ್ಕೆ ವೇದಿಕೆಯ ಮೇಲೆ ಧಾವಿಸಿ ಬಂದ. ಅಬ್ರಾಹಂ ಲಿಂಕನ್ ಅವರ ಹೆಗಲ ಮೇಲೆ ಕೈ ಹಾಕಿ ಅತ್ಯಂತ ಆತ್ಮೀಯತೆಯಿಂದ 'ಏನಪ್ಪಾ ಅಬ್ರಾಹಂ ನೀನು ತುಂಬ ಚೆನ್ನಾಗಿ ಭಾಷಣ ಮಾಡಿದೆ. ನಮ್ಮೂರಿನ ಹುಡುಗ ನೀನು. ನೀನು ತುಂಬ ದೊಡ್ಡ ವ್ಯಕ್ತಿಯಾಗಿದ್ದೀಯಾ. ನನಗೆ ತುಂಬ ಸಂತೋಷವೆನಿಸುತ್ತಿದೆ' ಎಂದು ಮತ್ತೆ ಅವರನ್ನು ಅಪ್ಪಿಕೊಂಡು ಸಂತಸ ಪಟ್ಟ. ಅಲ್ಲಿ ನೆರೆದಿದ್ದ ಜನರಿಗೆಲ್ಲ ಕ್ಷಣ ಕಾಲ ಅಚ್ಚರಿಯೆನಿಸಿತು. ಹಳ್ಳಿಯ ರೈತನ ವರ್ತನೆ ಉದ್ಧಟತನದಂತೆ ತೋರಿತು.

ಆದರೆ ಲಿಂಕನ್ ಮಾತ್ರ ಅವನನ್ನು ಅಷ್ಟೇ ಗೌರವ ಪ್ರೀತಿಯಿಂದ 'ಹೇಗಿದ್ದೀರಿ ನೀವು. ಅಷ್ಟು ದೂರದಿಂದ ನೀವು ಆಗಮಿಸಿದ್ದು ನನಗೆ ಸಂತೋಷವನ್ನು ತಂದಿತು. ಊರಿನಲ್ಲಿ ಹೇಗಿದ್ದಾರೆ ಎಲ್ಲರೂ' ಎಂದು ಕೇಳಿದರು. ಅವನನ್ನು ಅಲ್ಲಿದ್ದ ಗಣ್ಯರಿಗೆ ಅಭಿಮಾನದಿಂದ ಪರಿಚಯಿಸಿದರು. ಅಬ್ರಾಹಂ ಅವರ ಇಂತಹ ಸೌಜನ್ಯದ ನಡೆಯಿಂದ ರೈತ ತುಂಬ ಸಂತೋಷಗೊಂಡಿದ್ದ. ಅಲ್ಲಿನ ಗಣ್ಯರೂ ಕೂಡ ಅಬ್ರಾಹಂ ಅವರ ಔದಾರ್ಯತೆಯನ್ನು ಹಾಡಿ ಹೊಗಳಿದರು. ನಾವು ಅದೆಷ್ಟೇ ಎತ್ತರದಲ್ಲಿದ್ದರೂ ಇತರ ಭಾವನೆಗಳನ್ನು ಅವರ ಅಂತರಾಳಕ್ಕಿಳಿದು ನೋಡುವ ಪ್ರಯತ್ನ ಮಾಡಬೇಕು. ಅವರ ದೃಷ್ಟಿಕೋನದಿಂದ ಪ್ರಪಂಚವನ್ನು ಅರಿಯುವ ಪ್ರಯತ್ನ ಮಾಡಬೇಕು. ಮತ್ತೊಬ್ಬರ ಮಾತುಗಳನ್ನು ಸಂಯಮದಿಂದ ಕೇಳುವ, ಅವರ ಭಾವನೆಗಳನ್ನು ಆದರಿಸುವ ಪ್ರಾಮಾಣಿಕ ಭಾವ ನಮ್ಮದಾಗಬೇಕು. ಇದು ಇತರರಿಗೆ ಅಪಾರ ಆನಂದವನ್ನು ತಂದು ಕೊಡುವುದು ಮಾತ್ರವಲ್ಲದೇ ಅವರನ್ನು ನಾವು ಇಷ್ಟ ಪಡುತ್ತೇವೆ ಎಂಬ ಸಂದೇಶವನ್ನು ರವಾನಿಸುತ್ತದೆ. ನಮ್ಮ ಘನತೆಯನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ. ಎಲ್ಲರೊಂದಿಗೆ ಗಾಢವಾದ ಸಂಬಂಧವನ್ನು ಬೆಳೆಸುತ್ತದೆ.

• ಮಹಾದೇವ ಬಸರಕೋಡ

ಸೋತಾಗ ಬೇಸರ ಬೇಡ!

ಹೊಸ ವರ್ಷಕ್ಕೆ ಹೆಚ್ಚಿನವರು ವರ್ತನೆಗಳ ಪರಿವರ್ತನೆಗಾಗಿ ಸಂಕಲ್ಪ ಮಾಡುತ್ತೇವೆಯೇ ವಿನಃ ವರ್ತನೆಯಲ್ಲಿ ಮಾತ್ರ ಪರಿವರ್ತನೆಯಾಗದೆ ಹಳೆಯದನ್ನೇ ಹೆಗಲ ಮೇಲೆ ಹೊತ್ತುಕೊಂಡು ಸಾಗುತ್ತೇವೆ. ಹೊಸತು ಬೇಕಾದರೆ ಮೊದಲು ಹಳೆಯದನ್ನು ಬಿಡಬೇಕು. ಎರಡು ವಸ್ತುಗಳು ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಇರಲು ಸಾಧ್ಯವಿಲ್ಲವಾದ್ದರಿಂದ ಹೊಸತನ್ನು ಬರಮಾಡಿಕೊಂಡರೆ ಹಳತು ತಾನೇ ತಾನಾಗಿ ಬಿಟ್ಟುಹೋಗುತ್ತದೆ. ಕಳೆದು ಹೋದದ್ದು ಕಳೆದುಹೋಗಿದೆ. ಅದನ್ನು ಬದಲಾಯಿಸಲು ಸಾಧ್ಯವೇ ಇಲ್ಲ. ಯಾವುದನ್ನು ಬದಲಾಯಿಸಲು ಸಾಧ್ಯವಿಲ್ಲವೋ ಅದರ ಬಗ್ಗೆ ಯೋಚಿಸಿ, ಆಲೋಚಿಸಿ ಮತ್ತು ಚಿಂತಿಸಿ ಏನು ಪ್ರಯೋಜನ? ಅದರಿಂದ ಕೇವಲ ಮಾನಸಿಕ ಕ್ಷೋಭೆಯುಂಟಾಗುತ್ತದೆ ವಿನಃ ಯಾವ ಪ್ರಯೋಜನವೂ ಇರುವುದಿಲ್ಲ. ಚುನಾವಣೆಯಲ್ಲಿ ಸೋತ ಅಭ್ಯರ್ಥಿಯ ಅಭಿಮಾನಿಗಳು ತುಂಬಾ ದುಃಖಿತರಾಗಿ ಅವರ ಮನೆಗೆ ಬಂದು ಗೋಳಾಡುತ್ತ ಕಣ್ಣೀರಿಡುತ್ತಾರೆ. ಆದರೆ ಸೋತ ಅಭ್ಯರ್ಥಿ ಮಾತ್ರ ತುಂಬಾ ಆನಂದದಿಂದ ಮನೆಯವರೊಂದಿಗೆ ಕಾಲಕಳೆಯುತ್ತಿದ್ದರು. ಇದನ್ನು ಗಮನಿಸಿದ ಅಭಿಮಾನಿಗಳು 'ನಿಮಗೆ ಸೋಲಾಯಿತಲ್ಲ ಎಂದು ನಾವು ತುಂಬಾ ದುಃಖಿತರಾಗಿದ್ದರೆ, ನೀವು ಮಾತ್ರ ಏನು ನಡೆದೆ ಇಲ್ಲವಲ್ಲ ಎಂಬಂತೆ ತುಂಬಾ ಸಂತೊಷದಲ್ಲಿರುವಿರಲ್ಲ' ಎಂದು ಕೇಳಿದಾಗ ಸೋತ ಅಭ್ಯರ್ಥಿಯು 'ನಾನು ನಿಮ್ಮ ಜೊತೆಯಲ್ಲಿ ಅಳುತ್ತ ಕುಳಿತರೆ ಗೆಲ್ಲಲು ಸಾಧ್ಯವೇ? ಹಾಗಿದ್ದರೇ ಹೇಳಿ ನಾನು ನಿಮ್ಮೊಂದಿಗೆ ಅಳುತ್ತೇನೆ' ಎಂದಾಗ ಎಲ್ಲರಿಗೂ ಸತ್ಯದ ಅರಿವಾಗುತ್ತದೆ. ಜೀವನದಲ್ಲಿ ಸೋಲು ಗೆಲುವುಗಳನ್ನು, ಜಯ ಅಪಜಯಗಳನ್ನು, ಸುಖ ದುಃಖಗಳನ್ನು ಸಮನಾಗಿ ಸ್ವೀಕರಿಸುವ ಮನೋಭಾವ ನಮ್ಮದಾಗಬೇಕು. ಸೋತಾಗ ಕುಗ್ಗದೆ ಗೆದ್ದಾಗ ಹಿಗ್ಗದೆ ಸಮಚಿತ್ತದಿಂದ ಬದುಕಿನಲ್ಲಿ ಹೊಸ ಚೈತನ್ಯವನ್ನು ತಂದುಕೊಳ್ಳಬೇಕು, ಉತ್ಸಾಹದಿಂದ ಸಕ್ರಿಯವಾಗಿರಬೇಕು. ಯತ್ ಭಾವ್ ತತ್ ಭವತಿ ಎಂಬಂತೆ ನಮ್ಮ ಭಾವನೆಗಳು ಹೇಗಿರುತ್ತವೇಯೋ, ಹಾಗೇಯೇ ನಮಗೆ ಭಾಗ್ಯ ಲಭಿಸುತ್ತದೆ. ನಾವು ಏನನ್ನು ಪಡೆದುಕೊಳ್ಳುತ್ತೇವೆ ಅದನ್ನೇ ನೀಡಬಹುದು ಮತ್ತು ನಾವು ಏನನ್ನು ನೀಡುತ್ತೇವೆ ಅದನ್ನೇ ಪಡೆದುಕೊಳ್ಳಲು ಸಾಧ್ಯ. ಹಾಗಾಗಿ ನಾವು ಮೊದಲು ಹೊಸ ನೀರು ಬಂದಾಗ ಹಳೆ ನೀರು ಹೋದಂತೆ, ಹಣ್ಣೆಲೆಗಳೆಲ್ಲ ಉದುರಿದಾಗ ಚಿಗುರೆಲೆಗಳು ನಳನಳಿಸುವಂತೆ, ಹೊಸ ವರ್ಷ ಬಂದೊಡನೆಯೇ ಗೋಡೆಗೆ ಹಾಕಿದ ಕ್ಯಾಲೆಂಡರ್ ಬದಲಾದಂತೆ, ನಮ್ಮಲ್ಲಿ ಹೊಸತನವನ್ನು ತುಂಬಿಕೊಂಡು ಅದನ್ನು ಎಲ್ಲರಲ್ಲೂ ಹಂಚಿದರೆ ಆ ಹೊಸತನವನ್ನೇ ಮತ್ತೆ ನಾವು ಪಡೆಯಬಹುದು. ಹೊಸತನದ ವಿನಿಮಯದಿಂದ ಹೊಸತನವೇ ಹರಡುತ್ತದೆ, ವಿನಃ ಹಳೆಯ ಕಹಿ ನೆನೆಪುಗಳಿಗೆ ಅವಕಾಶವಿರುವುದಿಲ್ಲವಲ್ಲವೇ?

• ರವಿ ಕಂಗಳ, ಕೊಂಕಣಕೊಪ್ಪ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಹೊಸ ವರ್ಷ! ಹಾಗೆಂದರೇನು?

• ಬೇಲೂರು ರಾಮಮೂರ್ತಿ

ನಮ್ಮ ಬದುಕಿನಲ್ಲಿ ಹೊಸತನವನ್ನು ರೂಢಿಸಿಕೊಂಡು, ಸಾಧ್ಯವಾದರೆ ಇನ್ನೊಬ್ಬರಿಗೆ ಸ್ವಲ್ಪ ಸಹಾಯ ಮಾಡಲು, ಒಂದು ನಿರ್ದಿಷ್ಟ ದಿನವೇ ಏಕೆ ಬೇಕು? ಪ್ರತಿ ದಿನವೂ ಹೊಸತೇ! ಅಲ್ಲವೆ!

ಮೊನ್ನೆ ತಾನೇ ಇಡೀ ಪ್ರಪಂಚ ಹೊಸ ವರ್ಷವನ್ನು ಆಚರಿಸಿಕೊಂಡಿದೆ. ಜನರೆಲ್ಲಾ ಕುಣಿದು ಕುಪ್ಪಳಿಸಿದ್ದಾರೆ. ಸುಮ್ಮನೇ ಊರೊಳಗೆ ಒಂದು ಸುತ್ತು ಹೋಗಿ ಬನ್ನಿ. ಡಿಸೆಂಬರ್ 31ರಂದು ಇಲ್ಲದ್ದು ಜನವರಿ 1ಕ್ಕೆ ಹೊಸದು ಯಾವುದು ಬಂದಿದೆ ಅಂತ ನೋಡಿದರೆ ಯಾವುದೂ ಇಲ್ಲ. ಡಿಸೆಂಬರ್ 31ಕ್ಕೆ ಇದ್ದಂಥ ವಾತಾವರಣವೇ ಜನವರಿ 1ಕ್ಕೂ ಇದೆ. ದಾಖಲೆಯಲ್ಲಿ ನಾವು ಬರೆಯುವಾಗ 2024 ಎನ್ನುವುದರ ಬದಲು 2025 ಎಂದು ಬರೆಯುತ್ತೇವೆ.

ಆದರೆ ಅದರಿಂದ ನಾವು ಸಮಾಜದಲ್ಲಿ ಹೊಸದನ್ನು ಕಾಣಲು ಸಾಧ್ಯವಿಲ್ಲ. ಅಂದ ಮೇಲೆ ಹೊಸದು ಯಾವುದು. ಕೇವಲ ನಮ್ಮ ಭಾವನೆಯೇ?ಐ ಹಳೆಯದನ್ನು ಕಳಿಸಿ ಹೊಸದನ್ನು ಸ್ವೀಕರಿಸುವುದು ಎಂದರೇನು. ಈ ಪ್ರಪಂಚ ಯಾವತ್ತೂ ಯಾರಿಗೂ ಹೊಸದರಂತೆ ಕಂಡಿಲ್ಲ. ಈ ಪ್ರಪಂಚಕ್ಕೆ ಎಷ್ಟು ಸಾವಿರ ವರ್ಷಗಳ ಇತಿಹಾಸವಿದೆಯೋ ಅದು ಅಷ್ಟೇ ಹಳೆಯದು. ಹಳೆ ಗಾಳಿ ದೂರ ಹೋಗಿ ಹೊಸ ಗಾಳಿ ಬೀಸಿರಬಹುದು, ಹಳೆಯ ನೀರು ಕೊಚ್ಚಿಕೊಂಡು ಹೋಗಿ ಹೊಸ ನೀರು ಬಂದಿರಬಹುದು. ಆದರೆ ಅವುಗಳನ್ನು ಗುರುತಿಸುವುದು ಹೇಗೆ. ಹೊಸದು ಎನ್ನುವುದು ಕೇವಲ ನಮ್ಮ ಮನಸಿನಲ್ಲಿ ಇದೆಯೇ ಹೊರತು ಹೊರಗೆ ಎಲ್ಲೂ ಇಲ್ಲ. ನಾವು ಹೊಸ ಬಟ್ಟೆ ಹೊಲಿಸಿಕೊಂಡೆವು ಎಂದು ಸಂತೋಷಪಡುತ್ತೇವೆ. ಆದರೆ ಆ ಬಟ್ಟೆಯನ್ನು ಕಾರ್ಖಾನೆಯಲ್ಲಿ ನೇಯ್ದು ಎಷ್ಟು ಸಮಯವಾಗಿರುತ್ತೋ, ಅದನ್ನು ಯಾರ್‍ಯಾರು ಮುಟ್ಟಿರುತ್ತಾರೋ, ಇನ್ನು ಆ ಬಟ್ಟೆ ಅಂಗಡಿಯಲ್ಲಿ ಎಷ್ಟು ಸಮಯ ಕೊಳೆತಿರುತ್ತೋ. ಆದರೆ ಆ ಬಟ್ಟೆ ನಮ್ಮ ಕೈಗೆ ಯಾವಾಗ ಬಂತೋ ಆಗ ಅದು ಹೊಸದು ಎನಿಸಿಕೊಳ್ಳುತ್ತದೆ. ಈ ಪ್ರಪಂಚವೇ ಹಳೆಯದು ಹೊಸದರ ಸಂಗಮ. ಇದನ್ನೇ ಕವಿ ಗುಂಡಪ್ಪನವರು ಹೊಸಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಎಂದಿದ್ದು.

ನಿಜವಾಗಿ ಹೊಸ ವರ್ಷವನ್ನು ಸ್ವೀಕರಿಸುವ ಪರಿ ಎಂದರೆ ನಮ್ಮಲ್ಲಿರುವ ಎಲ್ಲ ಹಳೆಯ ಭಾವನೆಗಳನ್ನು ಕಳಚಿ ದೂರ ಬಿಸಾಕಿ ಹೊಸದನ್ನು ರೂಪಿಸಿಕೊಳ್ಳುವುದು. ಅಂದರೆ ನಮ್ಮಲ್ಲಿರುವ ನಕಾರಾತ್ಮಕ ಭಾವನೆಗಳಿಗೆ ಬೈ ಬೈ ಹೇಳುವುದು. ನಾವು ಕೆಲವು ದಿನಗಳ ಹಿಂದೆ ಬಹಳ ಕೋಪಿಷ್ಟನಾಗಿದ್ದು, ಇತರರಿಗೆ ನೋವು ಕೊಡುವಂಥವರಾಗಿದ್ದು, ತನ್ನ ಸುಖವೇ ಪರಮಸುಖ ಎಂದು ಬಗೆದು ಎಲ್ಲರನ್ನೂ ಹೀಯಾಳಿಸುತ್ತಿದ್ದರೆ, ಅಂಥಾ ಎಲ್ಲಾ ಭಾವನೆಗಳನ್ನು ದೂರ ಬಿಸಾಕಿ ಸದ್ಭಾವನೆಗಳನ್ನು ಬೆಳೆಸಿಕೊಂಡರೆ ನಮ್ಮಲ್ಲೇ ಹೊಸದು ಉತ್ಪತ್ತಿಯಾದ ಹಾಗೆ. ನಿಜವಾಗಿ ಹೊಸ ವರ್ಷ ನಮ್ಮಲ್ಲಿ ಇಂಥಾ ಭಾವನೆಗಳನ್ನು ಹುಟ್ಟುಹಾಕಬೇಕು. ಹಿಂದಿನ ವರ್ಷಗಳಲ್ಲಿ ನಾನು ಹೀಗಿದ್ದೆ ಇನ್ನು ಮುಂದಿನ ವರ್ಷಗಳಲ್ಲಿ ಸಮಾಜವೇ ನನ್ನನ್ನು ಗುರುತಿಸುವಂತೆ ಬದಲಾಗುತ್ತೇನೆ ಎನ್ನುವ ಹೊಸ ಭಾವನೆ ತಂದುಕೊಂಡರೆ ಅದು ಹೊಸ ವರ್ಷವನ್ನು ನಿಜವಾಗಿ ಸ್ವೀಕರಿಸಿದಂತಾಗುತ್ತದೆ. ಹಾಗೆ ನೋಡಿದರೆ ಮನುಷ್ಯ ನಕಾರಾತ್ಮಕತೆಯಿಂದ ಸಕಾರಾತ್ಮಕತೆಗೆ ಬದಲಾಗುವುದಕ್ಕೆ ಹೊಸ ವರ್ಷವನ್ನೇ ಕಾಯಬೇಕಿಲ್ಲ. ಒಂದು ಮರವನ್ನು ನೋಡಿದರೆ ಅದರಲ್ಲಿರುವ ಹಳೆಯ ಎಲೆಗಳು ಕಳಚಿ ಬಿದ್ದು ಹೊಸ ಚಿಗುರು ಮೂಡುತ್ತಿರುವಾಗ ಆ ಮರವನ್ನು ನೋಡಲು ಬಲು ಅಂದ. ಮನುಷ್ಯನೂ ಹಾಗೆಯೇ ಇರಬೇಕು. ಅವನಲ್ಲಿರುವ ಕಲ್ಮಷಗಳನ್ನೆಲ್ಲಾ ಹೊರದೂಕಿ ಹೊಸ ಹೊಸ ಭಾವನೆಗಳನ್ನು ಬೆಳೆಸಿಕೊಂಡರೆ ಅಂತಹ ಮನುಷ್ಯನನ್ನು ನೊಡುವುದೂ ಒಂದು ಅಂದವೇ.

ಒಬ್ಬರು ಜಿಪುಣರು ಕಾಶಿಗೆ ಹೋಗಿದ್ದರಂತೆ. ಕಾಶಿಗೆ ಹೋದರೆ ಅವರಿಗೆ ಬಲು ಇಷ್ಟವಾದ ಏನನ್ನಾದರೂ ಬಿಟ್ಟು ಬರಬೇಕಲ್ವಾ. ಆದರೆ ಆ ಜಿಪುಣರಿಗೆ ಏನು ಬಿಟ್ಟು ಬರುವುದೂ ಇಷ್ಟವಿರಲಿಲ್ಲ. ಕಡೆಗೆ ಅವರೊಂದು ತೀರ್ಮಾನಕ್ಕೆ ಬಂದರು. ಅವರಿಗೆ ತುಂಬಾ ಸಿಟ್ಟು ಬರುತ್ತಿತ್ತು. ನನ್ನ ಸಿಟ್ಟನ್ನು ಇಲ್ಲಿಯೇ ಬಿಟ್ಟು ಹೋಗುತ್ತೇನೆ ಎಂದುಕೊಂಡರು. ಅದರಿಂದ ಏನೂ ನಷ್ಟವಿಲ್ಲವಲ್ಲ, ಸರಿ ಅವರು ಕಾಶಿಯಿಂದ ಹಿಂದಿರುಗಿದ ಮೇಲೆ ಕೆಲವರು ಕಾಶಿಗೆ ಹೋಗಿದ್ದರಲ್ಲ ಏನು ಬಿಟ್ಟು ಬಂದಿರಿ ಅಂತ ಕೇಳಿದರು. ಸಿಟ್ಟು ಬಿಟ್ಟು ಬಂದೆ ಅಂದರು. ಕೇಳಿದವರಿಗೆ ಅರ್ಥವಾಗಲಿಲ್ಲ. ಆದರೆ ದಿನಕ್ಕೆ ಹತ್ತು ಹತ್ತು ಜನ ಅದೇ ಪ್ರಶ್ನೆಯನ್ನು ಕೇಳಲಾರಂಭಿಸಿದಾಗ ಒಂದು ದಿನ ಅವರಿಗೆ ಸಿಟ್ಟು ತಡೆಯಲಾರದೇ ಎಷ್ಟು ಸಾರಿ ಹೇಳಬೇಕ್ರಿ ಸಿಟ್ಟು ಬಿಟ್ಟು ಬಂದೆ ಅಂತ. ನಿಮಗೇನು ಕಿವುಡೇ ಅಂತ ಸಿಟ್ಟಿನಿಂದ ರೇಗಿದರು. ಅಲ್ಲಿಗೆ ಅವರು ಕಾಶಿಯಲ್ಲಿ ಸಿಟ್ಟು ಬಿಟ್ಟು ಬಂದಿಲ್ಲ ಅಂದ ಹಾಗಾಯಿತು. ನಾವೂ ಹಾಗೆಯೇ ನಮ್ಮಲ್ಲಿರುವ ನಕಾರಾತ್ಮಕ ಚಿಂತನೆಗಳನ್ನು ಬಿಟ್ಟು ಹೊಸ ಸಾಮಾಜಿಕ ಕಳಕಳಿ ಇರುವಂಥ ಚಿಂತನೆಗಳನ್ನು ಅಳವಡಿಸಿಕೊಳ್ಳದೇ ಹೋದರೆ ಎಷ್ಟು ಹೊಸ ವರ್ಷಗಳನ್ನು ಬರಮಾಡಿಕೊಂಡರೂ, ಸಂಭ್ರಮಿಸಿದರೂ ಅದು ವ್ಯರ್ಥವೇ. ನಿಜವಾದ ಹೊಸ ವರ್ಷ ಆಚರಿಸುವುದು ಹೇಗೆಂದರೆ ನಮ್ಮಲ್ಲಿಯೇ ಹೊಸತನವನ್ನು ಮೂಡಿಸಿಕೊಂಡು. ಅದು ಹೊಸ ವರ್ಷವಾಗಬೇಕಿಲ್ಲ, ಒಂದೊಂದು ದಿನವೂ ಹೊಸದೇ! ನೆನ್ನೆ ಕಂಡ ನನ್ನನ್ನು ಇಂದು ಕಾಣದೇ, ಇಂದು ಕಂಡದ್ದನ್ನು ನಾಳೇ ಕಾಣದೇ ಉಂಟಾದ ಬದಲಾವಣೆಗೆ ಸಮಾಜ ಸಕಾರಾತ್ಮಕವಾಗಿ ಸ್ಪಂದಿಸಿದರೆ ನಿಜವಾಗಿ ಹೊಸದು ಬಂದಂತೆಯೇ. ಹೀಗಾಗಿ ನಾವು ನಮ್ಮ ಬದುಕಿನಲ್ಲಿ, ನಡವಳಿಕೆಯಲ್ಲಿ, ಸಮಾಜವನ್ನು ನೊಡುವ ದೃಷ್ಟಿಯಲ್ಲಿ, ಇತರರ ನೋವಿಗೆ ಸ್ಪಂದಿಸುವ ವಿಷಯದಲ್ಲಿ ಹೊಸದನ್ನು ರೂಢಿಸಿಕೊಂಡಾಗ ನಮ್ಮ ಮುಖದಲ್ಲಿ ಕಾಣುವ ಪ್ರೀತಿಯ ಛಾಯೆಯನ್ನು ಜನ ಗುರುತಿಸಿ ನೋಡು ಅವನು ಬಹಳ ಬದಲಾಗಿದ್ದಾನೆ ಎಂದಾಗ ನಮ್ಮಲ್ಲಿ ಹೊಸತನ ಬಂದಿದೆ ಎಂದರ್ಥ.

ಪುನರಾವರ್ತನೆಯು ಪರಿಣತಿಗೆ ಕೀಲಿಕೈ



ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಕರ್ಣ ಮತ್ತು ಅರ್ಜುನ ಕುಂತಿಯ ಮಕ್ಕಳೇ ಆದರೂ ಪರಸ್ಪರ ವಿರುದ್ಧ ಪಕ್ಷಗಳಲ್ಲಿದ್ದು ಹೊಡೆದಾಡಿದರು. ಕರ್ಣನಿಗೆ ಇರುವ ಶಾಪದಿಂದಾಗಿ ಅವನಿಗೆ ತನ್ನ ಯುದ್ಧದ ಜ್ಞಾನ ಹಾಗೂ ಅನುಭವ ಅರ್ಜುನನೊಡನೆಯ ಅವನ ಯುದ್ಧಕಾಲದಲ್ಲಿ ಅವನನ್ನು ಪಾರು ಮಾಡಲಿಲ್ಲ. ಯುದ್ಧದಲ್ಲಿ ಸೋತು ಮರಣ ಹೊಂದಿದ.

ನಾವು ಕೂಡ ಕರ್ಣನಂತಿರುವುದರಿಂದ ಈ ಪರಿಸ್ಥಿತಿಯು ನಮಗೆಲ್ಲರಿಗೂ ಅನ್ವಯಿಸುತ್ತದೆ. ನಮ್ಮ ಜೀವನದಲ್ಲಿ ನಾವು ಬಹಳಷ್ಟನ್ನು ಕಲಿಯುತ್ತೇವೆ. ಜ್ಞಾನ ಹಾಗೂ ಅನುಭವವನ್ನು ಪಡೆಯುತ್ತೇವೆ. ಆದರೆ ಮಹತ್ವದ ಪ್ರಸಂಗಗಳಲ್ಲಿ ನಮ್ಮ ಜಾಗೃತಿಯ ಬದಲಾಗಿ ನಮ್ಮ ಹುಟ್ಟು ಗುಣದಂತೆ ವಿಚಾರ ಮಾಡುತ್ತೇವೆ ಹಾಗೂ ಕಾರ್ಯ ಮಾಡುತ್ತೇವೆ. ಯಾಕೆಂದರೆ ನಮ್ಮ ಜಾಗೃತಿಯು ನಿಗದಿತ ಮಟ್ಟಕ್ಕಿಂತ ಕೆಳಗಿರುತ್ತದೆ. ಕೃಷ್ಣನಿಗೆ ಇದು ಚೆನ್ನಾಗಿ ತಿಳಿದಿದೆ. ಆದ್ದರಿಂದ ವಾಸ್ತವತೆ ಮತ್ತು ಸತ್ಯವನ್ನು ವಿವಿಧ ದೃಷ್ಟಿಕೋನಗಳಿಂದ ಗೀತೆಯಲ್ಲಿ ಪುನಃ ಪುನಃ ವಿವರಿಸುತ್ತಾನೆ. ಇದರಿಂದಾಗಿ ನಮ್ಮ ಜಾಗೃತಿಯು ಇನ್ನೂ ಆಳಕ್ಕಿಳಿಯುತ್ತದೆ ಮತ್ತು ನಿಗದಿತ ಮಟ್ಟವನ್ನು ದಾಟುತ್ತದೆ -ದಿಗಂತ.

ಒಂದು ನದಿಯ ಎರಡು ದಡಗಳಂತೆ ನಮಗೆ ಅಂತರಾತ್ಮ ಮತ್ತು ಬಾಹ್ಯ ಆತ್ಮ ಎಂಬುದು ಇವೆ ಎಂದು ಗೀತೆ ಒತ್ತಿ ಹೇಳುತ್ತದೆ. ಸಾಮಾನ್ಯವಾಗಿ ನಾವು ಬಾಹ್ಯ ಆತ್ಮದೊಡನೆ ಗುರುತಿಸಿಕೊಳ್ಳುತ್ತೇವೆ. ಇದು ಭೌತಿಕ ದೇಹ. ನಮ್ಮ ಭಾವನೆಗಳು ವಿಚಾರಗಳು ಮತ್ತು ನಮ್ಮ ಸುತ್ತಲಿನ ಜಗತ್ತು ಇವುಗಳನ್ನು ಒಳಗೊಂಡಿರುತ್ತದೆ. ಸತ್ಯವನ್ನು ಅರಿತು ಸರ್ವ ವ್ಯಾಪಿಯಾಗಿರುವ, ಶಾಶ್ವತವಾಗಿರುವ ಹಾಗೂ ಬದಲಾಗದ ನಮ್ಮ ಅಂತರಾತ್ಮನೊಂದಿಗೆ ನಮ್ಮನ್ನು ನಾವು ಗುರುತಿಸಿಕೊಳ್ಳಬೇಕೆಂಬುದು ಕೃಷ್ಣನ ಉಪದೇಶ. ಅಂತರಾತ್ಮವನ್ನು (ಮತ್ತೊಂದು ದಡ) ತಲುಪಿದ ನಂತರ ಇರುವುದು ಒಂದೇ ದಡ, ಮತ್ತೊಂದು ದಡ ಹಗ್ಗ -ಹಾವಿನ ಉದಾಹರಣೆಯಲ್ಲಿಯ ಜಾರಿಕೊಳ್ಳುವ ಹಾವಿನಂತೆ ಇದೆ ಎಂದು ಜ್ಞಾನಿಗಳು ಹೇಳುತ್ತಾರೆ.

ಜಾಗೃತಿಯ ಉಪಕರಣಗಳು ಈ ರೀತಿ ಇವೆ - ಪರಿವರ್ತನೆಗೊಳ್ಳುವ ದ್ವಂದ್ವಗಳು (ದ್ವಂದ್ವಾತೀತ) ಪರಿವರ್ತನೆ ಗೊಳ್ಳುವ ಗುಣಗಳು (ಗುಣಾತೀತ) ಸಮತ್ವ, ಸಾಕ್ಷಿ, ಕರ್ತೃ, ಕರ್ಮ ಮತ್ತು ಕರ್ಮಫಲದಿಂದ ಮುಕ್ತನಾಗಿರುವುದು.

ಸಾವಿರಾರು ಪುಸ್ತಕಗಳನ್ನು ಓದುವುದಕ್ಕಿಂತ, ಗೀತೆಯನ್ನು (ವಿಶೇಷವಾಗಿ ಎರಡನೇ ಅಧ್ಯಾಯವನ್ನು) ಹಲವು ಬಾರಿ ಓದುವುದು ಒಳಿತು. ಯಾಕೆಂದರೆ ಪ್ರತಿ ಬಾರಿ ಓದಿದಾಗಲೂ ಅದು ನಮಗೆ ಹೆಚ್ಚಿನ ಮಾಧುರ್ಯವನ್ನು, ತಿಳುವಳಿಕೆಯನ್ನು ನೀಡುತ್ತದೆ. ಇದರಿಂದ ನಮ್ಮ ಆತ್ಮದ ಬಗ್ಗೆ ನಮ್ಮ ಜಾಗೃತಿ ಶಿಸ್ತುಬದ್ಧವಾಗಿ ಇನ್ನೂ ಆಳಕ್ಕಿಳಿದು ಆನಂದ ಹೊರಹೊಮ್ಮುತ್ತದೆ.

ಬಹುಭಾಷಾ ಕೋವಿದ

• ರವೀಂದ್ರ ಸಿಂಗ್ ಕೋಲಾರ

ಕೋಲಾರದಲ್ಲಿ ವಾಸಿಸುತ್ತಿರುವ ನಿವೃತ್ತ ಶಿಕ್ಷಕರಾದ ಎಸ್.ಕೆ.ಕಲಾಂ ಅವರು, ತನ್ನ ಭಾಷಾ ಪಾಂಡಿತ್ಯದಿಂದ ಐದು ಬಾರಿ 'ಇಂದಿರಾಗಾಂಧಿ ರಾಜಭಾಷಾ ಪ್ರಶಸ್ತಿ'ಯನ್ನು ರಾಷ್ಟಪತಿಗಳಿಂದ ಸ್ವೀಕರಿಸಿದ್ದಾರೆ. ಕನ್ನಡ ಎಂದರೆ ಇವರಿಗೆ ಅಪಾರ ಪ್ರೀತಿ; ಇವರು ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಜನಿಸಿದರು. ಇದೀಗ ಅವರಿಗೆ 72 ವರ್ಷ. ತಿರುಪತಿಯಲ್ಲಿ ಎಂ.ಎ. ಪದವಿ ಮುಗಿಸಿ ಕರ್ನಾಟಕದಲ್ಲಿ ಬಂದು ನೆಲೆಸಿದರು. ಕೋಲಾರದಲ್ಲಿರುವ ಚಿನ್ನದ ಗಣಿ ಕಂಪೆನಿ ಭಾರತ್ ಗೋಲ್ಡ್ ಮೈನ್ಸ್ ಇಲ್ಲಿ ಉಪ ವ್ಯವಸ್ಥಾಪಕರಾಗಿ ವೃತ್ತಿಯನ್ನು ಆರಂಭಿಸಿ 21 ವರ್ಷ ಸೇವೆ ಸಲ್ಲಿಸಿದರು. ಅವರು ಮಾಡಿದ ಸಾಧನೆಗೆ ಸಿಕ್ಕ ಪ್ರಶಸ್ತಿಯೇ ಇಂದಿರಾಗಾಂಧಿ ರಾಜಭಾಷ ಪ್ರಶಸ್ತಿ!

ಚಿನ್ನದ ಗಣಿ ಮುಚ್ಚಲ್ಪಟ್ಟಾಗ ಅವರು ಕೆಜಿಎಫ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಕೈಗೊಂಡಾಗ 2003ರಲ್ಲಿ ಕೋಲಾರದ ಆದರ್ಶ ಕಾಲೇಜು ಅವರನ್ನು ಕೈಬೀಸಿ ಕರೆಯಿತು. ಅವರ ಶೈಕ್ಷಣಿಕ ಸೇವೆ ಗುರುತಿಸಿದ ಬೆಂಗಳೂರು ವಿಶ್ವವಿದ್ಯಾಲಯ ಕಲಾಂರನ್ನು ಅಕಾಡೆಮಿಕ್ ಕೌನ್ಸಿಲ್ ಸದಸ್ಯರನ್ನಾಗಿ ನೇಮಕ ಮಾಡಿತು. ಅವರು ತಮ್ಮ ಶೈಕ್ಷಣಿಕ ಸೇವಾ ಅವಧಿಯಲ್ಲಿ ಅನೇಕ ಸೇವಾ ಶಿಬಿರಗಳನ್ನು, ಸಾಮಾಜಿಕ ಚಟುವಟಿಕೆಗಳನ್ನು ನಡೆಸಿ ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸಗಳನ್ನು ನೀಡುತ್ತಿದ್ದರು. ಪರಿಸರ ಕಾಳಜಿ ಹೊಂದಿರುವ ಕಲಾಂ ಅವರು ಸ್ವಚ್ಛತಾ ಕಾರ್ಯಕ್ರಮಗಳಿಗೆ ಉತ್ತೇಜಿಸಿ ಸ್ವಯಂ ಪಾಲ್ಗೊಳ್ಳುತ್ತಿದ್ದರು. ವಿದ್ಯಾರ್ಥಿ ಜೀವನದಿಂದಲೂ ನ್ಯಾಯಕ್ಕಾಗಿ ಹೋರಾಟಗಳಲ್ಲಿ ಭಾಗವಹಿಸಿ ಬಂದಿರುವವರಾಗಿದ್ದಾರೆ. ಯಾವುದೇ ಧರ್ಮಕ್ಕೆ ಮೀಸಲಾಗದೇ ಸೇವೆ, ಮಾನವೀಯತೆಗಳಿಗೆ ಒತ್ತು ನೀಡುತ್ತಾ ಬಂದಿರುವ ಕಲಾಂ ದೇವಾಲಯಗಳಿಗೆ ಚರ್ಚು, ಮಸೀದಿ ಗಳಿಗೆ ಮತೀಯ ಬೇಧ ಬಿಟ್ಟು ಸಂದರ್ಶಿಸುತ್ತಾರೆ. ಗಾಂಧೀಜಿಯವರ ತತ್ವಗಳನ್ನು ಪಾಲಿಸುತ್ತಾ ಬಂದಿರುವ ಇವರು ದೇಶಪ್ರೇಮಕ್ಕೆ ಸದಾ ಮಿಡಿಯುವವರಾಗಿದ್ದಾರೆ. ಅಲ್ಲದೆ ವಿದ್ಯಾರ್ಥಿಗಳಲ್ಲೂ ರಾಷ್ಟ್ರಭಕ್ತಿ ಮೂಡಿಸುವಂಥ ಭಾಷಣಗಳನ್ನು ನೀಡಿ ಅವರನ್ನು ಉತ್ತಮ ಪ್ರಜೆಗಳಾಗಿ ತಯಾರುಮಾಡಿದ್ದಾರೆ. ಮಕ್ಕಳನ್ನು ಕಂಡರೆ ಅಪಾರ ಪ್ರೀತಿ ತೋರುವ ಎ.ಪಿ.ಜೆ.ಅಬ್ದುಲ್ ಕಲಾಂರಂತೆ ಇವರೂ ಮಕ್ಕಳೊಂದಿಗೆ ತಮ್ಮ ವಯಸ್ಸು ಮರೆತು ಬೆರೆತುಹೋಗುತ್ತಾರೆ.

ನೆಹರೂ ಅವರೊಂದಿಗೆ

ಇವರು ಓದುತ್ತಿದ್ದ ಶಾಲೆಗೆ ಅಂದಿನ ಪ್ರಾಧಾನಿಯಾಗಿದ್ದ ಜವಾಹರ್ ಲಾಲ್ ನೆಹರು ಅಗಮಿಸಿ ಎಸ್.ಕೆ.ಕಲಾಂ ಅವರಿಗೆ ಒಂದು ರೂಪಾಯಿ ಮುಖಬೆಲೆಯ ಹೊಸ ನೋಟನ್ನು ಉಡುಗೊರೆಯಾಗಿ ಕೊಟ್ಟಿರುವುದನ್ನು ಕಲಾಂ ಅವರು ಖುಷಿಯಿಂದ ನೆನೆಯುತ್ತಾರೆ. ಸಮಾನತೆ-ಸಹಬಾಳ್ವೆಯ ಮೌಲ್ಯಗಳನ್ನು ಜೀವನದಲ್ಲಿ ಉತ್ತೇಜಿಸುವ ವಿಷಯಗಳನ್ನೊಳಗೊಂಡ ಅನೇಕ ಲೇಖನಗಳನ್ನು ಬರೆದಿರುವ ಕಲಾಂ 'ಆದರ್ಶ ಚೈತ್ರ' ಎಂಬ ಕನ್ನಡ ಮಾಸ ಪತ್ರಿಕೆಯ ಹೊಣೆಯನ್ನು ಹೊತ್ತಿದ್ದರು. ತೆಲುಗು, ತಮಿಳು, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದ ಕಲಾಂ ಕರ್ನಾಟಕಕ್ಕೆ ಬಂದ ಮೇಲೆ ಕನ್ನಡವನ್ನು ಮಾತೃ ಭಾಷೆಯಷ್ಟೇ ಪ್ರೀತಿಯಿಂದ ಓದು ಬರಹ ಕಲಿತು, ಗಂಟೆಗಟ್ಟಲೇ ಕನ್ನಡದಲ್ಲಿ ಮಾತನಾಡುವುದನ್ನು ಕಲಿತರು. ಭಾಷೆ, ಧರ್ಮ ಎಂದು ಅಶಾಂತಿ ಸೃಷ್ಟಿಯಾಗುತ್ತಿರುವ ಈ ಕಾಲದಲ್ಲಿ ದೇಶ ಪ್ರೇಮ ಮೆರೆದು, ಕರ್ತವ್ಯ ಕರ್ಮಕ್ಕೆ ಒತ್ತು ನೀಡಿ, ಭಾರತೀಯ ಎಲ್ಲ ಭಾಷೆಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ಪ್ರೀತಿಸುವ ಎಸ್.ಕೆ.ಕಲಾಂ, ಕನ್ನಡ ಭಾಷೆಯನ್ನು ಅನ್ನದ ಭಾಷೆ ಎಂಬ ಪೂಜ್ಯ ಭಾವನೆಯನ್ನಿಟ್ಟು ಬದುಕುತ್ತಿದ್ದಾರೆ.

ವಿಶ್ವವಾಣಿ
04.01.2025 ಶನಿವಾರ
vishwavani.news

ದಿನ ದರ್ಶಿಕೆ

ಪುಷ್ಯ ಮಾಸ, ಶುಕ್ಲ ಪಕ್ಷ, ಪಂಚಮಿ ತಿಥಿ, ಶತಭಿಷ ನಕ್ಷತ್ರ, ಸಿದ್ಧಿ ಯೋಗ, ಬಾವ ಕರಣ, ಕುಂಭ ಲಗ್ನ, ಧನು ರಾಶಿ, ಶಿಶಿರ ಋತು, ಉತ್ತರಾಯಣ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಹೆಪ್ಪುಗಟ್ಟಿದ ಆಲೂಗಡ್ಡೆಯನ್ನು ತುರಿ ಮಾಡಿ ಮತ್ತು ಅದನ್ನು ನಿಮ್ಮ ಕಣ್ಣುರೆಪ್ಪೆಗಳ ಮೇಲೆ ಹರಡಿ. ಹಾಗೆಯೇ 15 ರಿಂದ 20 ನಿಮಿಷಗಳ ಕಾಲ ಹಾಸಿಗೆ ಅಥವಾ ಮಂಚದ ಮೇಲೆ ಮಲಗಿಕೊಳ್ಳಿ. ಹೀಗೆ ಮಾಡುವುದರಿಂದ ನಿಮ್ಮ ಕಣ್ಣಿನ ಆಯಾಸ ಮತ್ತು ತಲೆನೋವಿನಲ್ಲಿ ಗಮನಾರ್ಹವಾದ ಇಳಿಕೆಯನ್ನು ನೀವು ಗಮನಿಸಬಹುದು.

ಸೌಂದರ್ಯ ಸೂತ್ರ

ದಾಳಿಂಬೆ, ಸ್ಟ್ರಾಬೆರಿ, ಕ್ಯಾನ್‌ಬೆರಿ, ರಸ್ಬೆರಿ, ಸೇಬು ಹಣ್ಣುಗಳಲ್ಲಿ ವಿಟಮಿನ್ ಸಿ ಮತ್ತು ಆ್ಯಂಟಿ ಆಕ್ಸಿಡೆಂಟ್‌ಗಳು ಸಮೃದ್ಧವಾಗಿವೆ. ಪ್ರತಿ ದಿನ ಅವುಗಳನ್ನು ತಿನ್ನುವುದರಿಂದ ಚರ್ಮಕ್ಕೆ ನೈಸರ್ಗಿಕ ಹೊಳಪು ಹೆಚ್ಚುವುದಲ್ಲದೇ, ದೇಹದ ತೂಕ ಸಹ ನಿಯಂತ್ರಣದಲ್ಲಿಡುತ್ತದೆ. ಹಾಗಾಗಿ ತೂಕ ನಿಯಂತ್ರಿಸಲು ಪ್ರಯತ್ನಿಸುವವರು ಈ ಹಣ್ಣುಗಳನ್ನು ತಿಂದರೆ ದಪ್ಪವಾಗುತ್ತೀರಿ ಎಂದು ಚಿಂತಿಸುವ ಅಗತ್ಯವಿಲ್ಲ.

ದಿನ ಭವಿಷ್ಯ

ಮೇಷ ದಿನಚರಿಯಲ್ಲಿ ಕೆಲವು ಬದಲಾವಣೆ ಮಾಡಿದರೆ ನಿಮ್ಮ ಕಾರ್ಯ ದಕ್ಷತೆ ಹೆಚ್ಚಾಗಬಹುದು. ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕೊಡುಗೆ ನೀಡುತ್ತೀರಿ.

ವೃಷಭ ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿವಾದ ಹೆಚ್ಚಾಗಬಹುದು. ಅದಕ್ಕೆ ಸಂಬಂಧಿಸಿದ ಕೆಲಸವನ್ನು ಮುಂದೂಡುವುದು ಉತ್ತಮ.

ಮಿಥುನ ಹಣಕ್ಕೆ ಸಂಬಂಧಿಸಿದ ಕೆಲಸ ಮಾಡುವಾಗ ಚಿಂತನಶೀಲವಾಗಿ ಕೆಲಸ ಮಾಡಿ. ನಿಮ್ಮ ಕೋಪವನ್ನು ಸಹ ನಿಯಂತ್ರಿಸಿ.

ಕಟಕ ಪ್ರಸ್ತುತ, ಕೆಲಸದ ಸ್ಥಳದಲ್ಲಿ ಚಟುವಟಿಕೆಗಳು ಮೊದಲಿನಂತೆಯೇ ಮುಂದುವರಿಯುತ್ತವೆ. ಕೆಲಸ ಕಾರ್ಯ ಯೋಜಿತ ರೀತಿ ಪೂರ್ಣಗೊಳಿಸಿ.

ಸಿಂಹ ನಿಮ್ಮ ಸ್ವಭಾವದಿಂದಾಗಿ ಜನರು ಸ್ವಾಭಾವಿಕವಾಗಿ ನಿಮ್ಮತ್ತ ಆಕರ್ಷಿತರಾಗುತ್ತಾರೆ. ಇತರರ ಹಸ್ತಕ್ಷೇಪದಿಂದಾಗಿ, ಸ್ವಲ್ಪ ಸಮಯ ವ್ಯರ್ಥವಾಗುತ್ತದೆ.

ಕನ್ಯಾ ಹೊರಾಂಗಣ ಚಟುವಟಿಕೆಗಳನ್ನು ಮುಂದೂಡುವುದು ಉತ್ತಮ. ಯಾವುದೇ ರೀತಿಯ ವ್ಯಾಪಾರ ಚಟುವಟಿಕೆಗಳ ಬಗ್ಗೆ ಚಿಂತಿಸಬೇಕಾಗಿಲ್ಲ.

ತುಲಾ ಧಾರ್ಮಿಕ ಕಾರ್ಯಗಳಿಂದ ಮನಸ್ಸಿಗೆ ನೆಮ್ಮದಿ. ವಿದ್ಯಾರ್ಥಿಗಳು ಅಧ್ಯಯನದ ಬಗ್ಗೆ ಹೆಚ್ಚಿನ ಗಮನ ನೀಡಬೇಕು.

ವೃಶ್ಚಿಕ ಯಾವುದೇ ಪತ್ರ ವ್ಯವಹಾರ ಮಾಡುವಾಗ ಹೆಚ್ಚು ಜಾಗರೂಕರಾಗಿರಿ. ಒಂದು ಸಣ್ಣ ತಪ್ಪು ಸಮಸ್ಯೆ ಉಂಟು ಮಾಡಬಹುದು.

ಧನು ಹಣಕ್ಕೆ ಸಂಬಂಧಿಸಿದಂತೆ ನಿಧಾನಗತಿಯ ಪ್ರಗತಿ. ಪತಿ-ಪತ್ನಿ ನಡುವೆ ಉತ್ತಮ ಬಾಂಧವ್ಯ. ನೆರೆಹೊರೆಯವರೊಂದಿಗಿನ ಸಂಬಂಧದಲ್ಲಿ ಸುಧಾರಣೆ.

ಮಕರ ಆದಾಯದಲ್ಲಿ ಸ್ವಲ್ಪ ಇಳಿಕೆಯಾಗಬಹುದು. ವ್ಯಾಪಾರ ಚಟುವಟಿಕೆಗಳಿಗೆ ಸಂಪೂರ್ಣ ಗಮನ ಕೊಡುವುದು ಬಹಳ ಮುಖ್ಯ.

ಕುಂಭ ಆಸ್ತಿ ಮಾರಾಟ ಮತ್ತು ಖರೀದಿಗೆ ಸಂಬಂಧಿಸಿದ ಯೋಜನೆ. ಮನೆಯಲ್ಲಿ ಹಬ್ಬದ ವಾತಾವರಣ ಇರುತ್ತದೆ.

ಮೀನ ನಿಮ್ಮ ಕಾರ್ಯದಕ್ಷತೆಗೆ ಉದ್ಯೋಗ ಸ್ಥಳದಲ್ಲಿ ಪ್ರಶಂಸೆ. ವ್ಯವಹಾರ ನಿಮಿತ್ತ ಪ್ರಯಾಣದ ಸಾಧ್ಯತೆ. ಹಿರಿಯರ ಆರೋಗ್ಯದ ಬಗ್ಗೆ ಎಚ್ಚರ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ವಿಶ್ವ ಬ್ರೈಲ್ ದಿನ.
- 1948: ಮ್ಯಾನ್ಮಾರ್‌ನಲ್ಲಿ ಸ್ವಾತಂತ್ರ್ಯ ಸಿಕ್ಕಿತು.
- ಇಂದು ಭೂಮಿ ಸೂರ್ಯನಿಗೆ ಅತ್ಯಂತ ಹತ್ತಿರಕ್ಕೆ ಚಲಿಸುವುದು.

ಚಿತ್ರಸ್ಫೂರ್ತಿ

ಹಾಲ್ಗಡಲ ದಾರಿಯಲಿ ಎನ್ನ ನೀ ನೋಡುವಾಗ, ನಿನ್ನ ಹಿಂದೆ ಬರುವ ಆಸೆ ಉಕ್ಕಿತು, ಸಿಗುವೆಯಾ ನೀನು ಕೈಗೆ, ಬರುವೆಯಾ ತೋಳ್ಗೆ! ಚಿತ್ರ: ದಿ ಗಾರ್ಡಿಯನ್

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

‘ಒಂದೊಳ್ಳೆ ಮಾತು’ ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ನಿಜವಾದ ಸಂಗೀತ ಪ್ರೇಮ

ಒಬ್ಬ ರಾಜನಿದ್ದ. ಅವನಿಗೆ ಸಂಗೀತವೆಂದರೆ ಬಹಳ ಪ್ರೀತಿ. ಸಂಗೀತಗಾರರಿಗೆ ಬಹಳವಾಗಿ ಪ್ರೋತ್ಸಾಹಿಸುತ್ತಿದ್ದ. ಸಂಗೀತಗಾರರು ಎಲ್ಲೇ ಇರಲಿ ಅವರನ್ನು ಕರೆಯಿಸಿ ಅವರ ಸಂಗೀತ ಕಛೇರಿಯನ್ನು ಏರ್ಪಡಿಸಿ ಅವರನ್ನು ಸನ್ಮಾನಿಸುತ್ತಿದ್ದ.

ರಾಜ ಸಂಗೀತ ಕಛೇರಿಯನ್ನು ಏರ್ಪಡಿಸಿದಾಗ ಅದನ್ನು ಕೇಳಲು ಅನೇಕ ಜನರು ಬರುತ್ತಿದ್ದರು. ಅವರಲ್ಲಿ ಕೆಲವರು ಸಂಗೀತದಲ್ಲಿ ನಿಜವಾದ ಆಸಕ್ತಿಯುಳ್ಳವರಾಗಿದ್ದರು. ಆದರೆ ಕೆಲವರಿಗೆ ಅದರಲ್ಲಿ ಯಾವ ಆಸಕ್ತಿ ಇಲ್ಲದಿದ್ದರೂ, ತಮಗೂ ಸಂಗೀತ ಚೆನ್ನಾಗಿ ಗೊತ್ತಿದೆ ಎಂದು ನಟಿಸುತ್ತಾ ರಾಜನಿಂದ ಹೊಗಳಿಸಿಕೊಳ್ಳಲು, ಸಂಗೀತ ಕಛೇರಿ ನಡೆಯುವಾಗ ಜೋರಾಗಿ ತಲೆ ಅಲ್ಲಾಡಿಸುತ್ತಾ, ತಪ್ಪು ತಪ್ಪಾಗಿ ತಾಳ ಹಾಕುತ್ತಿದ್ದರು. ಸಿಂಹಾಸನದ ಮೇಲೆ ಕುಳಿತಿರುತ್ತಿದ್ದ ರಾಜ ಇದನ್ನೆಲ್ಲಾ ಗಮನಿಸುತ್ತಿದ್ದ. ಇವರೆಲ್ಲಾ ನಿಜವಾದ ಸಂಗೀತ ಪ್ರೇಮಿಗಳಲ್ಲ ಎಂದು ಅವನಿಗೆ ಅನ್ನಿಸುತ್ತಿತ್ತು. ನಿಜವಾದ ಅಭಿಮಾನಿಗಳು ಯಾರು ಎಂದು ತಿಳಿಯುವುದೇ ರಾಜನಿಗೆ ಕಷ್ಟವಾಗುತ್ತಿತ್ತು. ದಿನದಿಂದ ದಿನಕ್ಕೆ ಸಂಗೀತ ತಮಗೆ ಚೆನ್ನಾಗಿ ಗೊತ್ತು ಎಂದು ನಟಿಸುವವರ ಸಂಖ್ಯೆಯೇ ಜಾಸ್ತಿಯಾಯಿತು.

ರಾಜ ಇದಕ್ಕೆ ಒಂದು ಉಪಾಯ ಹೂಡಿದ. ಸಂಗೀತವನ್ನು ಕೇಳಲು ಬಂದವರ್ಯಾರೂ ತಲೆ ಅಲ್ಲಾಡಿಸಬಾರದು ತಾಳ ಹಾಕಬಾರದು, ಹಾಗೇನಾದರೂ ಮಾಡಿದರೆ, ಅವರು ಕಠಿಣ ಶಿಕ್ಷೆಗೆ ಒಳಗಾಗುತ್ತಾರೆ ಎಂದು ಆಜ್ಞೆ ಮಾಡಿದ.

ಒಂದು ಸಲ ರಾಜ ದೊಡ್ಡ ಸಂಗೀತ ವಿದ್ವಾಂಸರನ್ನು ಕರೆಸಿ ಸಂಗೀತ ಕಛೇರಿ ಏರ್ಪಡಿಸಿದ. ಕಛೇರಿಗೆ ರಾಜನ ಪರಿವಾರದವರು ಮಿತ್ರರು ಇನ್ನೂ ಅನೇಕರು ಉಪಸ್ಥಿತರಿದ್ದರು. ಅವರಲ್ಲಿ ಒಬ್ಬ, ಸಾಮಾನ್ಯ ಪ್ರಜೆಯೂ ಸಂಗೀತ ಕೇಳಲೆಂದು ಬಂದಿದ್ದ. ಅವನು ನಿಜವಾದ ಸಂಗೀತ ಅಭಿಮಾನಿಯಾಗಿದ್ದ. ಸಂಗೀತ ಆರಂಭವಾಯಿತು. ಬಂದಿದ್ದ ಸಂಗೀತ ವಿದ್ವಾಂಸ ಬಹಳ ಅದ್ಭುತವಾಗಿ ಹಾಡುತ್ತಿದ್ದ. ಅವನ ಕಂಠ ಬಹಳ ಸುಶ್ರಾವ್ಯವಾಗಿತ್ತು. ಎಲ್ಲರೂ ರಾಜನ ಆಜ್ಞೆಯಂತೆ ನಿಶಬ್ದದಿಂದ ಕುಳಿತು ಸಂಗೀತವನ್ನು ಕೇಳುತ್ತಿದ್ದರೆ, ಈ ಸಾಮಾನ್ಯ ಮನುಷ್ಯನಿಗೆ ಮಾತ್ರ, ಸಂಗೀತವನ್ನು ಕೇಳಿ ತಲೆದೂಗದೇ ಇರಲಾಗಲಿಲ್ಲ. ತಾಳ ಹಾಕ ತೊಡಗಿದ. ಎಲ್ಲರೂ ಇವನ ಕಡೆ ನೋಡ ತೊಡಗಿದರು. ಆಗ ಈ ಮನುಷ್ಯ ಎಚ್ಚೆತ್ತುಕೊಂಡು, ಎದ್ದು ನಿಂತು, ‘ಪ್ರಭೂ, ನನ್ನನ್ನು ಕ್ಷಮಿಸಿ, ನಾನು ನಿಮ್ಮ ಆಜ್ಞೆಯನ್ನು ಮೀರಿ ವರ್ತಿಸಿದೆ,ನೀವು ನನಗೆ ಕಠಿಣ ಶಿಕ್ಷೆ ಕೊಟ್ಟರೂ ಪರವಾಗಿಲ್ಲ, ಈ ಸಂಗೀತ ವಿದ್ವಾಂಸನ ಅದ್ಭುತ ಗಾಯನಕ್ಕೆ ತಲೆದೂಗದೆ ಇರಲು ತಾಳ ಹಾಕದೇ ಇರಲು ನನ್ನಿಂದ ಸಾಧ್ಯವಾಗುತ್ತಿಲ್ಲ ಇವರ ಸಂಗೀತ ಅಷ್ಟು ಇಂಪಾಗಿದೆ. ಇದರಿಂದ ನನಗೆ ಬಹಳ ಆನಂದವಾಗಿದೆ, ನೀವು ಏನೇ ಶಿಕ್ಷೆ ಕೊಟ್ಟರೂ ಅದನ್ನು ಸ್ವೀಕರಿಸಲು ನಾನು ತಯಾರಿದ್ದೇನೆ’ ಎಂದು ಹೇಳಿದ.

ಈಗ ರಾಜನಿಗೆ ನಿಜವಾಗಿಯೂ ಬಹಳ ಸಂತೋಷವಾಯಿತು. ತಾನು ಹುಡುಕುತ್ತಿದ್ದ ನಿಜವಾದ ಸಂಗೀತಾಭಿಮಾನಿ ಸಿಕ್ಕನಲ್ಲ ಎಂದು ಸಂತೋಷದಿಂದ ಸಿಂಹಾಸನದಿಂದ ಕೆಳಗೆ ಇಳಿದು ಬಂದು ಅವನನ್ನು ತಬ್ಬಿಕೊಂಡನು. ಅವನನ್ನು ತನ್ನ ಆಪ್ತ ಗೆಳೆಯನನ್ನಾಗಿ ಮಾಡಿಕೊಂಡನು.

ರಾಜನನ್ನು ತೃಪ್ತಿಗೊಳಿಸಲು ಅವನ ಮುಂದೆ, ಮಹಾ ಸಂಗೀತ ಪ್ರೇಮಿಗಳಂತೆ ನಟಿಸುತ್ತಿದ್ದವರಿಗೆಲ್ಲ ಅಲ್ಲಿರಲು ನಾಚಿಕೆಯಾಯಿತು. ಅವರೆಲ್ಲ ಅಲ್ಲಿಂದ ಎದ್ದು ಹೊರಟು ಹೋದರು.

ಸಂಗೀತವನ್ನು ಸುಶ್ರಾವ್ಯವಾಗಿ ಹಾಡುವುದರಷ್ಟೇ ಅದನ್ನು ಆಸ್ವಾದಿಸಿ ಕೇಳುವುದು ಕೂಡಾ ಒಂದು ದೊಡ್ಡ ಕಲೆಯೇ. ಅದನ್ನು ಕೇಳಲು ಕೂಡಾ ಆಸಕ್ತಿ ಇರಬೇಕು. ಎಲ್ಲರಲ್ಲೂ ಈ ರೀತಿಯ ಆಸಕ್ತಿ ಇರುವುದಿಲ್ಲ. ಇಂತಹ ಕಲಾಭಿಮಾನಿಗಳಿಂದಲೇ ಕಲಾವಿದರಿಗೆ ಇನ್ನಷ್ಟು ಸ್ಫೂರ್ತಿ ದೊರೆಯುವುದು.

ನಿಮ್ಮ ಊರಿನಲ್ಲಿ ಸಭಾಂಗಣದಲ್ಲಿ ಸಂಗೀತ ಸಂಜೆಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ವರಂತ್ಯದಲ್ಲಿ ನಡೆಯುತ್ತಿರುತ್ತವೆ. ಸಾಧ್ಯವಾದರೆ ಮಕ್ಕಳೊಂದಿಗೆ ಹೋಗಿ ಕಾರ್ಯಕ್ರಮ ನೋಡಿ ಕಲಾವಿದರನ್ನು ಪ್ರೋತ್ಸಾಹಿಸಿ. ವಾರಕ್ಕೊಮ್ಮೆಯಾದರೂ ಮೊಬೈಲ್, ಟಿವಿ ಎಲ್ಲ ಮರೆತು ನಮ್ಮ ಮಕ್ಕಳಿಗೆ ಇಂತಹ ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮಗಳ ರುಚಿ ಇದರಿಂದ ಕಲಾವಿದರಿಗೆ ಪ್ರೋತ್ಸಾಹ ದೊರೆಯುತ್ತದೆ ಜೊತೆಗೆ ನಮ್ಮ ಮಕ್ಕಳಿಗೂ ಕೂಡ ಸಂಗೀತ, ಕಲೆಯ ಬಗ್ಗೆ ಅರಿವು ಮೂಡುತ್ತದೆ. ಬರಿ ವಿದ್ಯೆ ಒಂದೇ ಅಲ್ಲ ಅದರ ಜೊತೆಗೆ ಎಲ್ಲ ರೀತಿಯ ಕಲೆಯ ರುಚಿ ಕೂಡ ನಮ್ಮ ಮಕ್ಕಳಿಗೆ ಇದ್ದಾಗ ಅವರ ಸರ್ವತೋಮುಖ ಬೆಳವಣಿಗೆ ಸಾಧ್ಯ.

ಅಯೋಧ್ಯೆಯ ಬಾಲರಾಮ ಎಲ್ಲರನ್ನೂ ಮಾತನಾಡಿಸುವನೇ?

• ವಾಣಿ ಹುಗ್ಗಿ

ಅಂದು ಪಟ್ಟಾಭಿಷೇಕಕ್ಕೆ ತಯಾರಾಗಿದ್ದ ಅಯೋಧ್ಯೆ ಶೋಕಸಾಗರದಲ್ಲಿ ಮುಳುಗಿತ್ತು. ಮಹಾರಾಜನಾಗಬೇಕಿದ್ದ ಶ್ರೀರಾಮ ನಾರುಮುಡಿಯುಟ್ಟು ವನವಾಸಕ್ಕೆ ಹೊರಟು ನಿಂತ. ಪತ್ನಿ ಸೀತೆ, ತಮ್ಮ ಲಕ್ಷ್ಮಣ ಶ್ರೀರಾಮನನ್ನು ಹಿಂಬಾಲಿಸಿದರು. ರಾಘವನ ಹಿಂದಿರುಗುವಿಕೆಗಾಗಿ ಭರತ ಹದಿನಾಲ್ಕು ವರ್ಷ ಕಾದ. ದಾಶರಥಿ ಅಯೋಧ್ಯೆಗೆ ಮರಳಿದಾಗ ಊರೆಲ್ಲ ತಳಿರು ತೋರಣಗಳಿಂದ ಸಿಂಗರಿಸಿತ್ತು. ಪಟ್ಟಾಭಿಷೇಕದ ಹಬ್ಬಕ್ಕೆ ಸಜ್ಜಾಗಿತ್ತು. ಪ್ರಜೆಗಳೆಲ್ಲರೂ ಸಂಭ್ರಮಿಸಿದರು. ಇತಿಹಾಸ ಮರುಕಳಿಸುತ್ತೆ ಅಂತಾರೆ ಈ ಪ್ರಜಾಪ್ರಭುತ್ವದಲ್ಲೂ ಶ್ರೀರಾಮ ಬಾಲರಾಮನಾಗಿ ಮಂದಿರ ಸೇರಿದ ಘಟನೆಯು ನಡೆಯಿತು. ದಿವ್ಯ ಹೃದಯಗಳು ರಾಮನಾಮದಿಂದ ಸಿಂಗರಿಸಿಕೊಂಡಿದ್ದವು. ಅಖಂಡ ಭಾರತದ ಬೀದಿಯ ಇಕ್ಕೆಲಗಳು, ಮನೆಗಳೂ ತಳಿರು ತೋರಣಗಳಿಂದ ಅಲಂಕರಿಸಿಕೊಂಡು ಸಾಕ್ಷಿಯಾಗಿದ್ದವು. ಇದನ್ನೆಲ್ಲ ನೋಡಲು ಸಿಕ್ಕಿದ್ದು ಅದ್ಭುತ ಮತ್ತು ಅದೃಷ್ಟ. ರಾಜಾರಾಮನ ಪಟ್ಟಾಭಿಷೇಕವನ್ನು ಕಣ್ತುಂಬಿಕೊಳ್ಳಲು ದೇವಾನುದೇವತೆಗಳೆಲ್ಲ ಬಂದಿದ್ದರಂತೆ. ಈಗ ಈಬಾಲರಾಮನ ಪ್ರಾಣಪ್ರತಿಷ್ಠಾಪನೆಯನ್ನು ನೋಡಲು ಯಾವ ರೂಪದಲ್ಲಿ ಬಂದಿದ್ದರೊ? ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ! ಈ ಭರತ ಭೂಮಿ ಸ್ವರ್ಗಕ್ಕೂ ಕಿಚ್ಚು ಹಚ್ಚಿದ್ದೂ ನಿಜ. ದಸರೆಗೆ ಮೈಸೂರು, ದೆಹಲಿ. ಗಣಪತಿಗೆ ಪುಣೆ. ಎಲ್ಲ ಹಬ್ಬಗಳನ್ನು ಎಲ್ಲ ಊರು, ಮನೆಗಳಲ್ಲಿ ಆಚರಿಸುವ ಪದ್ಧತಿ ಇರುವುದಿಲ್ಲ. ಆದ್ರೆ ರಾಮೋತ್ಸವಕ್ಕೆ ಅಖಂಡ ಭಾರತ ಸಜ್ಜಾಗಿತ್ತು.

ಬಾಲರಾಮನ ಪ್ರಾಣಪ್ರತಿಷ್ಠಾಪನೆ ಅಯೋಧ್ಯೆಯ ಭವ್ಯ ಮಂದಿರದಲ್ಲಿ ವಿಧಿವತ್ತಾಗಿ, ವೈಭವೋಪೇತವಾಗಿ ನೆರವೇರಿತು. ಕಟ್ಟುನಿಟ್ಟಿನ ವ್ರತವನ್ನಾಚರಿಸಿದ ನಮ್ಮ ಪ್ರಧಾನಿ ಪೂಜೆಯ ಯಜಮಾನರಾಗಿ ಎಲ್ಲವನ್ನು ಸಾಂಗವಾಗಿ ನೆರವೇರಿಸಿದರು. ಅಲ್ಲಿಗೆ ಹೋಗಲಾಗದವರು ಮನೆಯಲ್ಲೇ ಕುಳಿತು ಟಿವಿಯಲ್ಲಿ ನೇರಪ್ರಸಾರವನ್ನು ವೀಕ್ಷಿಸಿದ್ದರು. ಇದೆಲ್ಲವೂ ಆಗಿ ವರ್ಷವೇ ಸಮೀಪಿಸಿತು.

ಬೆಳಗ್ಗೆ ವಿರಾಜಮಾನನಾದ ಪುಟ್ಟ ರಾಮನದು ಒಂದೇ ರಂಪ, ಎಲ್ಲೆಲ್ಲಿ ಏನೇನಿದೆ ನೋಡಬೇಕು. ಕಚ್ಚೆಪಂಚೆಯುಟ್ಟು, ಕಾಲಿಗೆ ಕಡಗ ತೊಟ್ಟ ಸುಂದರ ಮೂರ್ತಿ ಆಲಯವನ್ನೆಲ್ಲ ಓಡಾಡಿದ್ದೆ ಓಡಾಡಿದ್ದು. ಅವರಮ್ಮ ಕೌಸಲ್ಯ ಈ ಹುಡುಗನ ಹಿಂದೆ ಓಡಿ ಓಡಿ ಸುಸ್ತಾದಳು. ಮುಂಜಾವಿನಿಂದ ನಿಂತು ಪೂಜೆ ಮಾಡಿಸ್ಕೊಂಡಿದಿಯಾ ಈಗ ಆರಾಮಾಗಿ ಮಲ್ಕೊ. ಇನ್ಮೇಲೆ ಇಲ್ಲೇ ಇರ್ತೀವಲ್ವಾ, ನಾಳೆ ಎಲ್ಲ ನೋಡುವಿಯಂತೆ. ಹೀಗೆ ಓಡಾಡಿದ್ರೆ, ಕಾಲು ನೋವು ಬರುತ್ತೆ. ಸುಮ್ನೆ ಮಲ್ಕೊ ಎಂದು ಗದರಿಸಿ, ಕೋಸಲೇಂದ್ರನನ್ನು ಮಲಗಿಸ್ತಾ ಇದ್ದಳು. ಇವನೊಬ್ಬನೇ ಹುಡುಗನೇ? ಲಕ್ಷ್ಮಣ, ಶತ್ರುಘ್ನ ಮತ್ತು ಭರತರದು ಇದೆ ಗೋಳು. ಈ ನಾಲ್ಕು ಪೋರರನ್ನು ಸಂಭಾಳಿಸಿ ಮಲಗಿಸುವಷ್ಟರಲ್ಲಿ ಮೂವರು ತಾಯಂದಿರಿಗೆ



ಸಾಕುಬೇಕಾಯಿತು. ಅಂತೂ ಮಕ್ಕಳು ಮಲಗಿದರು. ಅವರಮ್ಮಂದಿರು ಕಣ್ಣೆವೆ ಮುಚ್ಚಿದರು. ನಿಶ್ಯಬ್ದವಾಗಿ ಎಲ್ಲರೂ ಮಲಗಿದ್ದಾರೆ. ಮತ್ತೆ ಕಾಲ್ಗೆಜ್ಜೆ ಸದ್ದು. ಎದ್ದು ನೋಡಿದರೆ ಲಂಗ ತೊಟ್ಟ ಪುಟ್ಟ ಪೋರಿಯರು ಓಡಾಡ್ತಾ ಇದ್ದಾರೆ. ನೀವ್ಯಾರು? ಎಲ್ಲಿಂದ ಬಂದ್ರಿ? ಈ ಹೊತ್ತಲ್ಲಿ ಇಲ್ಲೇನ ಮಾಡ್ತಾ ಇದಿರಾ? ಎಂದು ಕೇಳಿದಾಗ ನಗುಮೊಗದ ಮುಗ್ಧ ಹುಡುಗಿ ಬಾಯಿಂದ ಮುತ್ತು ಉದುರಿದವೋ ಎಂಬಂತೆ ಕಿಲಕಿಲ ನಕ್ಕು ಹೇಳಿದಳು, ನಾವು ಜನಕಪುರಿಯವರು ನಾನು ಜಾನಕಿ. ನಮ್ಮ ಮಿಥಿಲೆಯಲ್ಲಿ ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು, ಅಯೋಧ್ಯೆಯಲ್ಲಿ ದೊಡ್ಡ ಗುಡಿಯೊಂದನ್ನು ಕಟ್ಟಿದ್ದಾರೆ. ವಾಸ್ತುಶಿಲ್ಪ ಚೆನ್ನಾಗಿದೆಯಂತೆ; ಕೆತ್ತನೆ ಕುಸುರಿಯನ್ನು ನೋಡಿ ಉಡುಗೊರೆ ಕೊಟ್ಟು ಬರೋಣವೆಂದು. ಅದಕ್ಕೆ ನಾವೂ ನಾಕು ಜನ ಅಕ್ಕತಂಗಿಯರು ಸೇರಿ ಬಂದ್ವಿ. ದೇವಸ್ಥಾನ ಚೆನ್ನಾಗಿದೆ, ದೊಡ್ಡದಾಗಿದೆ. ಕಂಬಗಳು ಸಾಕಷ್ಟಿವೆ. ಆಟ ಆಡೋಕೆ ತುಂಬಾ ಅನುಕೂಲವಾಗಿದೆ. ಕಣ್ಣಾಮುಚ್ಚಾಲೆ, ಉಪ್ಪು ಕೊಡು ಆಟ ಆಡ್ತಾ ಸಮಯ ಹೋಗಿದ್ದೆ ಗೊತ್ತಾಗ್ಲಿಲ್ಲ. ಹೀಗೆ ಸಂಭಾಷಣೆ ಸಾಗ್ತಾ ಇತ್ತು. ಇತ್ತ ರಾಮ ಮತ್ತು ತಮ್ಮಂದಿರು ನಿದ್ರಿಸುತ್ತಿದ್ದರು. ಬಾಲರಾಮನಿಗೆ ಚಳಿಯಾಗದಿರಲೆಂದು ಕಂಬಳಿ ಹೊದಿಸುವ ಏರ್ಪಾಡು ಆಗಿದೆ. ಪುಟ್ಟ ಮಕ್ಕಳು ಎಂದಾದರೂ ಮುಸುಕೊದ್ದು ಮಲಗುವ ಪರಿಪಾಠವಿದೆಯೇ? ಕೈಕಾಲು ಆಡಿಸಿ ಹೊದಿಕೆ ಜಾಡಿಸಿ ತಾನೇ ಮಲಗೋದು. ದೇವರಾದರೇನು ಅವನು ಮಗುವೇ! ಗಡಿಯಾರದ ಸದ್ದಾಯಿತು. ಆಮೇಲೆನೆ ತಿಳಿದದ್ದು ಎಲ್ಲವೂ ಕನಸೆಂದು. ನಾನ್ಯಾವಾಗ ಅಯೋಧ್ಯೆಗೆ ಹೋದೆ? ರಾತ್ರಿ ಅದ್ಹೇಗೆ ನನ್ನೊಬ್ಬಳನ್ನೆ ಮಂದಿರದೊಳಗೆ ಬಿಟ್ಟರು? ಎಲ್ಲವನ್ನೂ ಟಿವಿಯಲ್ಲೇ ನೋಡಿದ್ದಲ್ಲವೇ? ಶ್ರೀರಾಮನಾಮದ ಭಾವ ಸುಳಿಗೆ ಸಿಲುಕದವರಿಲ್ಲ. ಮತಾಂಧತೆಯನ್ನು ತಲೆಯಲ್ಲಿ ತುಂಬಿಕೊಳ್ಳುವುದಕ್ಕಿಂತ ಹೃದಯದಲ್ಲಿ ಧರ್ಮ ಪ್ರತಿಷ್ಠಾಪನೆ ಒಳ್ಳೆಯದಲ್ಲವೇ. ಪಟ್ಟಾಭಿರಾಮನ ಆಡಳಿತ ನ್ಯಾಯ,ಧರ್ಮಕ್ಕೆ ಅನ್ವರ್ಥವಲ್ಲವೇ. ಜಯರಾಮನ ಆಶೀರ್ವಾದದಿಂದ ನಮ್ಮ ರಾಷ್ಟ್ರದಲ್ಲಿ ಶಾಂತಿ ಸುಬಿಕ್ಷೆ ನೆಲೆಗೊಳ್ಳಲಿ. ಒಟ್ಟಿನಲ್ಲಿ ಬಾಲರಾಮನ ದರ್ಶನದ ಕನಸು ಬೇಗ ನನಸಾಗಲೆಂದು ಪ್ರಾರ್ಥಿಸುವೆ.

ಪ ದ ಬಂ ಧ



ಎಡದಿಂದ ಬಲಕ್ಕೆ

5. ವಿಳಂಬ, ತಡೆ (4)
6. ಇವನು ಸಂಪ್ರದಾಯವನ್ನು ಪಾಲಿಸುವವನು (4)
7. ಮಿರಮಿರಮಿಂಚುವಕತ್ತಲೆ (3)
9. ರಸಗಳನ್ನು ಆಸ್ವಾದಿಸುವವನು (3)
11. ದುರ್ಲಭವಾದದ್ದು ಅಥವಾ ಅಪರೂಪ (3)
13. ಅಕ್ಕನಗಂಡನಿಂದ ತೊಡಗಿರುವ ಮನ್ಮಥ (3)
14. ಪತ್ರಿಕೆಗಳಲ್ಲಿಪ್ರಕಟವಾಗುವ ಕಾಲಮ್ (3)
15. ತಿರುಗಿಬಂದ ಮೊಸಳೆ (3)
17. ಲಿಖಿತವಾಗಿ ಸಲ್ಲಿಸಿದ ಬೇಡಿಕೆ (3)
19. ಸಮರದಿಂದಓಡಿ ಹೋದವನು (4)
20. ಉರಗವನ್ನುಆಡಿಸುವವನು (4)

ಮೇಲಿಂದ ಕೆಳಕ್ಕೆ

1. ಮತ್ತೊಂದು ಕೈಯೊಂದಿಗೆ ಬಂದಿರುವ ಸೂರ್ಯ (4)
2. ದೇವತೆಗಳ ತಾಯಿ (3)
3. ಸಾವಿಲ್ಲದ್ದು (3)
4. ಮನಸ್ಸಿನಒಳಭಾಗ (4)
8. ಬೇಕಾದಷ್ಟೇ ಮಾತನಾಡುವುದು (5)
10. ಯಾವಾಗಲೂ ಕೋಪದಲ್ಲಿರುವವನು (3)
12. ಬಿಡುವಿನ ದಿನ ಬಂದ ಅಗಸ (3)
14. ಮಂಗಳ ಮಂಗಳನಿಗೆ ಇನ್ನೊಂದು ಹೆಸರು (4)
16. ಮತ್ತೇರಿದ ಆನೆ (4)
17. ಆಶ್ರಯ ನೀಡುವಉಡಿ (3)
18. ವಿನೋದವಾಗಿ ಕಾಲ ಕಳೆಯುತ್ತಾ ತಿರುಗಾಡು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಎರಕ 4. ಕುರವಿ 6. ದನಗಾಹಿ 7. ಕಂಪನ 10. ಗಾಯಕ 12. ಅರಗಿಣಿ 13. ವರನಟ 14. ಗಹನ 16. ಮಂಕರಿ 19. ಅಹರ್ನಿಶಿ 21. ತರುಣಿ

ಮೇಲಿಂದ ಕೆಳಕ್ಕೆ: 1. ಎಕ್ಕಡ 2. ಕದನ 3. ಮೃಗಾಲಯ 5. ವಿಧಾನ 8. ಪವನಜ 9. ಕರಣಿಕ 10. ಗಾಣಿಗ 11. ಕವನ 15. ಹಣಾಹಣಿ 16. ಮಂಡೂಕ 17. ನಿಶಿತ 18. ಭರಣಿ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಮರುಭೂಮಿಯ ಮಳೆ ಕಪ್ಪೆ

ಮಳೆಗೂ ಕಪ್ಪೆಗೂ ಅವಿನಾಭಾವ ಸಂಬಂಧ. ಆದರೆ ದಕ್ಷಿಣ ಆಫ್ರಿಕಾದಲ್ಲಿ ಅತಿ ಕಡಿಮೆ ಮಳೆ ಬೀಳುವ ಮರುಭೂಮಿಯಲ್ಲಿ ಕಪ್ಪೆಗಳು ಕಂಡು ಬರುತ್ತವೆ.

ಇದನ್ನು ಮಳೆ ಕಪ್ಪೆ ಅತವಾ ಕೇಪ್ ಮಳೆ ಕಪ್ಪೆ ಎಂದೂ ಗುರುತಿಸುತ್ತಾರೆ. ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾದ 10 ಕಿ.ಮೀ ಅಗಲವಿರುವ ಸಮುದ್ರ ತೀರ ಮತ್ತು ಮರಳು ದಿಬ್ಬಗಳ ನಡುವಿನ ಮರುಭೂಮಿ ಇದರ ಆವಾಸ ಸ್ಥಾನ. ಸಮುದ್ರದ ಮೇಲಿಂದ ಬೀಸುವ ತೇವ ಮಿಶ್ರಿತ ನೀರು, ಮಂಜಿನ ದಿನಗಳಲ್ಲಿ ಮರಳಿನ ದಿಬ್ಬಗಳಲ್ಲಿ ಸಂಗ್ರಹವಾಗಿ ಹರಿದು ಬರುವ ನೀರು ಪುಟ್ಟ ಕಪ್ಪೆಗೆ ಜೀವಾಳ. ಬಿಸಿಲ ಬೇಗೆಯಿಂದ ತಪ್ಪಿಸಿಕೊಳ್ಳಲು, ಹೆಚ್ಚಿನ ಸಮಯ ಮರಳಿನಡಿಯ ಬಿಲದಲ್ಲಿ ಕಳೆಯುತ್ತದೆ.

ಪುಸ್ತಕ ಲೋಕ

ಗ್ರಸ್ತ

ಗ್ರಸ್ತ ಕಾದಂಬರಿ ಮೂಲಕ ಕರಣಂ ಪವನ್ ಪ್ರಸಾದ್ ಅವರು, ವಿಜ್ಞಾನ ಹಾಗೂ ತತ್ವಜ್ಞಾನ ಎಂಬ ವಿಭಿನ್ನ ವಿಚಾರಗಳನ್ನು,

ಒಂದುಗೂಡಿಸಿ ಅದನ್ನು ವಿಶಿಷ್ಟ ರೀತಿಯಲ್ಲಿ ಓದುಗರಿಗೆ ಉಣಬಡಿಸಿದ್ದಾರೆ. ಶಂಕರಾಚಾರ್ಯರು ಅದ್ವೈತ ಸಿದ್ದಾಂತ, ನಿಕೋಲಾ ಟೆಸ್ಲಾ ಅವರ ನಿಸ್ತಂತು ವಿದ್ಯುತ್ ಎರಡೂ ವೈರುಧ್ಯ ವಿಚಾರದಾರೆಗಳು. ಆದರೆ ಇವುಗಳಲ್ಲಿನ ಸಾಮ್ಯತೆಯನ್ನು ಈ ಕೃತಿಯಲ್ಲಿ ಪ್ರಸ್ತುತಪಡಿಸಲಾಗಿದೆ. ವಿಜ್ಞಾನ, ವೇದಾಂತ, ಸಾಂಸಾರಿಕ ತೊಳಲಾಟ ಇವೆಲ್ಲವುಗಳಿಂದ ಆವರಿಸಲ್ಪಟ್ಟ ವ್ಯಕ್ತಿ, ನಂತರ ಅನಂತವಾದುದಕ್ಕೆ ಒಡ್ಡುಕೊಳ್ಳುವ ಪ್ರಕ್ರಿಯೆಯನ್ನು ಈ ಪುಸ್ತಕ ಪ್ರತಿಮೆಯಾಗಿಸಿದೆ. 143 ಪುಟಗಳ ಕಾದಂಬರಿ, ಒಂದೇ ಸಮನೆ ಓದಿಸಿಕೊಂಡು, ಓದುಗರನ್ನು ಇನ್ನಿಲ್ಲದಂತೆ ಆವರಿಸಿಕೊಳ್ಳುತ್ತದೆ.

ಟ್ವೀಟ್‌ಮೆಂಟ್

ಚೇತನ್ ಸೂರ್ಯ: ಬಾವುಟದಿಂದ ರಕ್ಷಣೆ ಪಡೆಯೋ ರಾಜ್ಯ ಯಾವುದಾದ್ರೂ ಇದ್ರೆ ಅದು ಕರ್ನಾಟಕ ಒಂದೇ. ಪೊಲೀಸ್ ಮಿಲಿಟರಿಗಿಂತ ಹೆಚ್ಚಾಗಿ ಹೈ ಸೆಕ್ಯೂರಿಟಿ ಕೊಡೋಕೆ ತಾಕತ್ತಿರೋದು ಕನ್ನಡ ಬಾವುಟಕ್ಕೆ ಮಾತ್ರ.

ಎಂ. ಪತ್ತಾರ್: ಆದರೂ ಕನ್ನಡಕ್ಕೆ ಕೊಡಬೇಕಾಗಿರೊ ಜಾಗ ಇಂಗ್ಲಿಷ್‌ಗೆ ಕೊಟ್ಟಿದ್ದಾರೆ.

ವ್ಯೋಮದಲ್ಲಿ ಮೀನುಗಳನ್ನು ಬೆಳೆಸಿದ ಚೀನೀ ವಿಜ್ಞಾನಿಗಳ

ತಿಳಿಯೋಣ

• ಎಲ್.ಪಿ.ಕುಲಕರ್ಣಿ

ವಿಶಾಲವಾದ ಬಾಹ್ಯಾಕಾಶದಲ್ಲಿ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ನಿರಂತರವಾಗಿ ನಮ್ಮ ಭೂಮಿಯನ್ನು ಸುತ್ತುಹಾಕುತ್ತಿರುವುದು ನಮಗೆ ಗೊತ್ತೇ ಇದೆ. ಆದರೆ ಈಗಲ್ಲಿ ಗಮನಾರ್ಹ ಬೆಳವಣಿಗೆಯೊಂದು ನಡೆದಿರುವುದು ಕಂಡು ಬಂದಿದೆ. ಅದೇನೆಂದರೆ, ನಾಸಾ ಗಗನಯಾತ್ರಿಗಳು ಬಾಹ್ಯಾಕಾಶದಲ್ಲಿ ಉದ್ಯಾನವನ್ನು ಯಶಸ್ವಿಯಾಗಿ ನಿರ್ಮಿಸಿದ್ದಾರೆ; ಭೂಮಿಯ ಮಿತಿಯನ್ನು ಮೀರಿ ತಾಜಾ ಆಹಾರವನ್ನು ಬೆಳೆಯುವ ಸಾಮರ್ಥ್ಯವನ್ನು ಅಲ್ಲಿ ಪ್ರದರ್ಶಿಸಿದ್ದಾರೆ. ಈ ಅದ್ಭುತ ಪ್ರಯತ್ನವು ವಿಜ್ಞಾನಿಗಳು ಮತ್ತು ಬಾಹ್ಯಾಕಾಶ ಉತ್ಸಾಹಿಗಳ ಗಮನವನ್ನು ಸೆಳೆದಿದೆ. ಇದರ ಜೊತೆಗೆ ವಿಜ್ಞಾನಿಗಳು ಬಾಹ್ಯಾಕಾಶದಲ್ಲಿ ಮೀನುಗಳನ್ನೂ ಸಹ ಬೆಳೆಸಿದ್ದಾರೆ.

2024ರ ನವೆಂಬರ್ 4ರಂದು ಕೊನೆಗೊಂಡ ಶೆಂಝೌ-18 ಮಿಷನ್ ಸಮಯದಲ್ಲಿ ಮುಚ್ಚಿದ ಜಲಚರ ವ್ಯವಸ್ಥೆಯನ್ನು ಕೆಲಸ ಮಾಡುವ ಮೂಲಕ ಚೀನಾದ ವಿಜ್ಞಾನಿಗಳು ಬಾಹ್ಯಾಕಾಶ ಪರಿಸರ ವಿಜ್ಞಾನದಲ್ಲಿ ದೊಡ್ಡ ಪ್ರಗತಿಯನ್ನು ಸಾಧಿಸಿದರು, ಇದು ಬಾಹ್ಯಾಕಾಶ ಪರಿಸರ ಅಧ್ಯಯನಗಳಿಗೆ ಹೊಸ ದಾಖಲೆಯನ್ನು ಸ್ಥಾಪಿಸಿತು.

ಪ್ರಯೋಗದ ಅವಲೋಕನ

ಈ ಮುಚ್ಚಿದ ಪರಿಸರ ವ್ಯವಸ್ಥೆಯು ನಾಲ್ಕು ಜೀಬ್ರಾಫಿಶ್‌ಗಳನ್ನು ಒಳಗೊಂಡಿದ್ದು ಅದು ಬಾಹ್ಯಾಕಾಶದಲ್ಲಿ ತಮ್ಮ ಪೂರ್ಣ ಜೀವನ ಚಕ್ರವನ್ನು ತೋರಿಸಿದ್ದಲ್ಲದೆ; 43 ದಿನಗಳಲ್ಲಿ ಬೆಳೆಯುವುದು, ಅಭಿವೃದ್ಧಿಪಡಿಸುವುದು ಮತ್ತು ಸಂತಾನೋತ್ಪತ್ತಿ ಮಾಡುವುದು ಸೇರಿದಂತೆ, ಜೀಬ್ರಾಫಿಶ್‌ನ ಈ ಪ್ರಯೋಗವನ್ನು ವಿಜ್ಞಾನಿಗಳು ಸಾಧಿಸಿತೋರಿಸಿದ್ದಾರೆ.

- **ಜೀಬ್ರಾಫಿಶ್‌ನ ಪ್ರಾಮುಖ್ಯತೆ:** ಜೀಬ್ರಾಫಿಶ್ ಬಾಹ್ಯಾಕಾಶ ಆಧಾರಿತ ಸಂಶೋಧನೆಗೆ ಸೂಕ್ತವಾಗಿದೆ. ಅವುಗಳ ತ್ವರಿತ ಜೀವನಚಕ್ರವು ಸಮರ್ಥ ಅಧ್ಯಯನಕ್ಕೆ ಅನುವು ಮಾಡಿಕೊಡುತ್ತದೆ. ಮೈಕ್ರೊಗ್ರಾವಿಟಿಯಲ್ಲಿನ ಜೈವಿಕ ಪ್ರಕ್ರಿಯೆಗಳ ಬಗ್ಗೆ ಈ ಮೀನುಗಳು ಪ್ರಮುಖ ಮಾಹಿತಿಯನ್ನು ಒದಗಿಸುತ್ತವೆ. ಬಾಹ್ಯಾಕಾಶದಲ್ಲಿ ಜೀವನವನ್ನು ಅರ್ಥಮಾಡಿಕೊಳ್ಳಲು ಈ ಸಂಶೋಧನೆಯು ನಿರ್ಣಾಯಕವಾಗಿದೆ.
- **ಬಾಹ್ಯಾಕಾಶ ಪರಿಶೋಧನೆಯ ಪರಿಣಾಮಗಳು:** ಈ ಯಶಸ್ವಿ ಪ್ರಯೋಗವು ದೂರಗಾಮಿ ಪರಿಣಾಮಗಳನ್ನು ಇಟ್ಟುಕೊಂಡಿದೆ. ದೀರ್ಘಾವಧಿಯ ಕಾರ್ಯಾಚರಣೆಗಳ ಸಮಯದಲ್ಲಿ ಜೀವನವನ್ನು ಉಳಿಸಿಕೊಳ್ಳುವ ಸಾಮರ್ಥ್ಯವನ್ನು ಇದು ಸೂಚಿಸುತ್ತದೆ. ಭವಿಷ್ಯದ ಬಾಹ್ಯಾಕಾಶ ವಸಾಹತುಗಳಿಗೆ ಸ್ವಾವಲಂಬಿ ಪರಿಸರ ವ್ಯವಸ್ಥೆಗಳನ್ನು ರಚಿಸುವುದು ಅತ್ಯಗತ್ಯ. ಮಂಗಳ ಮತ್ತು ಅದಕ್ಕೂ ಮೀರಿದ ಕಾರ್ಯಾಚರಣೆಗಳಿಗೆ ಈ ಪ್ರಯೋಗ ಸಾಧಕವಾಗಿದೆ.
- **ಬಾಹ್ಯಾಕಾಶ ಜೀವಶಾಸ್ತ್ರದ ಪ್ರಗತಿಗಳು:** ಈ ಸಾಧನೆಯು ಬಾಹ್ಯಾಕಾಶ ಜೀವಶಾಸ್ತ್ರದಲ್ಲಿ ಒಂದು ದೊಡ್ಡ ಹೆಜ್ಜೆಯಾಗಿದೆ ಏಕೆಂದರೆ ಸೂಕ್ಷ್ಮ ಗುರುತ್ವಾಕರ್ಷಣೆಯಲ್ಲಿ ಸ್ಥಿರವಾದ ಜಲವಾಸಿ ಪರಿಸರ ವ್ಯವಸ್ಥೆಯನ್ನು ಇಟ್ಟುಕೊಳ್ಳುವುದು ಹೊಸ ಮತ್ತು ಪ್ರಮುಖ ಆವಿಷ್ಕಾರವಾಗಿದೆ. ಬಾಹ್ಯಾಕಾಶದಲ್ಲಿ ಜೀವಂತ ಜೀವಿಗಳನ್ನು ಅಧ್ಯಯನ ಮಾಡಲು ಈ ಪ್ರಯೋಗವು ಹೊಸ ಮಾರ್ಗಗಳನ್ನು ತೆರೆಯುತ್ತದೆ. ಸಂಶೋಧಕರು ಈ ಸಂಶೋಧನೆಗಳ ಆಧಾರದ ಮೇಲೆ ಜೀವನ ಬೆಂಬಲ ವ್ಯವಸ್ಥೆಗಳಿಗೆ ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸಬಹುದು.
- **ಬಾಹ್ಯಾಕಾಶ ವಿಜ್ಞಾನದಲ್ಲಿ ಚೀನಾದ ಪಾತ್ರ:** ಈ ಪ್ರಯೋಗದ ಯಶಸ್ಸು ಚೀನಾದ ಬಾಹ್ಯಾಕಾಶ ಪ್ರಯೋಗಗಳ ಸಾಮರ್ಥ್ಯವನ್ನು ಗುರುತಿಸುತ್ತದೆ. ಇದು ಬಾಹ್ಯಾಕಾಶ ಪರಿಸರ ಜ್ಞಾನವನ್ನು ಮುಂದುವರೆಸಲು ದೇಶದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಜಾಗತಿಕ ಗಮನವು ದೀರ್ಘಾವಧಿಯ ವಾಸಸ್ಥಾನದ ಕಡೆಗೆ ಬದಲಾಗುತ್ತಿದ್ದಂತೆ, ಚೀನಾ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ರೀತಿಯ ಪ್ರಯೋಗಗಳು ಭವಿಷ್ಯದ ಬಾಹ್ಯಾಕಾಶ ಕೇಂದ್ರಗಳು ಮತ್ತು ಗ್ರಹಗಳ ನೆಲೆಗಳಿಗೆ ಅಗತ್ಯವಾದ ದತ್ತಾಂಶಗಳನ್ನು ಒದಗಿಸುತ್ತವೆ.

ಹೆಚ್ಚಿನ ಅಧ್ಯಯನಗಳು ವಿವಿಧ ಜೀವಿಗಳ ಮೇಲೆ ಬಾಹ್ಯಾಕಾಶದ ಪರಿಣಾಮಗಳನ್ನು ಅನ್ವೇಷಿಸುತ್ತವೆ. ಈ ಸಂಶೋಧನೆಯು ಜೀವನ ಬೆಂಬಲ ವ್ಯವಸ್ಥೆಗಳ ಬಗ್ಗೆ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಬಾಹ್ಯಾಕಾಶದಲ್ಲಿ ಮಾನವ ವಾಸಕ್ಕಾಗಿ ಸುಸ್ಥಿರ ಪರಿಸರ ವ್ಯವಸ್ಥೆಗಳ ವಿನ್ಯಾಸವನ್ನು ಸಹ ಇದು ತಿಳಿಸುತ್ತದೆ.

- **ತಿಳಿಯಬೇಕಾದ ಪ್ರಮುಖ ಸಂಗತಿಗಳು:** ಶೆಂಝೌ-18: ಶೆಂಝೌ-18 ಚೀನಾದ ಸಿಬ್ಬಂದಿಯನ್ನೊಳಗೊಂಡ ಬಾಹ್ಯಾಕಾಶ ಕಾರ್ಯಾಚರಣೆಯಾಗಿದೆ. ಇದು ಬಾಹ್ಯಾಕಾಶ ಪರಿಸರ ವಿಜ್ಞಾನ ಮತ್ತು ಜೀವನ ಬೆಂಬಲ ವ್ಯವಸ್ಥೆಗಳ ಮೇಲೆ ಕೇಂದ್ರೀಕರಿಸುತ್ತದೆ. ಈ ಮಿಷನ್ ಮೈಕ್ರೋಗ್ರಾವಿಟಿಯಲ್ಲಿ ಮುಚ್ಚಿದ ಜಲವಾಸಿ ಪರಿಸರ ವ್ಯವಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸಿತು.
- **ಜೀಬ್ರಾಫಿಶ್:** ಜೀಬ್ರಾಫಿಶ್‌ಗಳು ಕ್ಷಿಪ್ರ ಬೆಳವಣಿಗೆಯೊಂದಿಗೆ ಸಣ್ಣ ಸಿಹಿನೀರಿನ ಮೀನುಗಳಾಗಿವೆ. ಅವು ಮನುಷ್ಯರೊಂದಿಗೆ ಆನುವಂಶಿಕ ಹೋಲಿಕೆಗಳನ್ನು ಹಂಚಿಕೊಳ್ಳುತ್ತವೆ. ಅವುಗಳ ಜೀವನಚಕ್ರವು ಬಾಹ್ಯಾಕಾಶ ಪರಿಸರದಲ್ಲಿ ಜೈವಿಕ ಪ್ರಕ್ರಿಯೆಗಳ ಸಮರ್ಥ ಅಧ್ಯಯನವನ್ನು ಅನುಮತಿಸುತ್ತದೆ.
- **ಸೂಕ್ಷ್ಮ ಗುರುತ್ವಾಕರ್ಷಣೆ:** ಸೂಕ್ಷ್ಮ ಗುರುತ್ವಾಕರ್ಷಣೆಯು ಅತ್ಯಂತ ಕಡಿಮೆ ಗುರುತ್ವಾಕರ್ಷಣೆಯ ಬಲದ ಪರಿಸ್ಥಿತಿಗಳನ್ನು ಸೂಚಿಸುತ್ತದೆ. ಇದು ಜೀವಂತ ಜೀವಿಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆ. ಮೈಕ್ರೋಗ್ರಾವಿಟಿಯನ್ನು ಅಧ್ಯಯನ ಮಾಡುವುದರಿಂದ ಸಂಶೋಧಕರು ದೀರ್ಘ ಕಾರ್ಯಾಚರಣೆಗಳಿಗೆ ಜೀವ ಬೆಂಬಲವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಸಮಾಚಾರ ಸಣ್ಣದಲ್ಲ

ವಿಜೇಂದರ್‌ಗೆ ಪಿತೃ ವಿಯೋಗ



ಚಂಡೀಗಢ: ಒಲಿಂಪಿಕ್ ಪದಕ ವಿಜೇತ ಬಾಕ್ಸರ್ ವಿಜೇಂದರ್ ಸಿಂಗ್ ಅವರ ತಂದೆ ಮಹಿಪಾಲ್ ಸಿಂಗ್ ಗುರುವಾರ ನಿಧನ ಹೊಂದಿರು. ಕಳೆದ ಕೆಲವು ವಾರಗಳಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. 2008ರ ಬೀಜಿಂಗ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದಿದ್ದ ವಿಜೇಂದರ್, ತಂದೆಯ ಅಂತ್ಯಕ್ರಿಯೆಯನ್ನು ಹರಿಯಾಣದ ತನ್ನ ಸ್ಥಳೀಯ ಗ್ರಾಮ ಭಿವಾನಿಯಲ್ಲಿ ನಡೆಸಲಾಗುವುದು ಎಂದು ತನ್ನ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಹರಿಯಾಣ ರೋಡ್‌ವೇಸ್‌ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಮಹಿಪಾಲ್, ಓವರ್ ಟೈಮ್ ಕೆಲಸ ಮಾಡುವ ಮೂಲಕ ವಿಜೇಂದರ್ ಅವರ ಕನಸನ್ನು ನನಸಾಗಿಸಿದ್ದರು. ನಮ್ಮ ತಂದೆ ಮಹಿಪಾಲ್ ಸಿಂಗ್ ಅವರ ನಿಧನವನ್ನು ನಾವು ಬಹಳ ದುಃಖದಿಂದ ಘೋಷಿಸುತ್ತೇವೆ. ಅವರು ಇಂದು ನಮ್ಮನ್ನು ತೊರೆದು ತಮ್ಮ ಸ್ವರ್ಗ ನಿವಾಸಕ್ಕೆ ತೆರಳಿದ್ದಾರೆ, ಎಂದು ವಿಜೇಂದರ್ ಸಿಂಗ್ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಾಕಿದ್ದಾರೆ.

ಸ್ಟಾರ್ ಬ್ಯಾಟರ್ಸ್ ವೈಫಲ್ಯ, 185 ರನ್‌ಗಳಿಗೆ ಭಾರತ ಸರ್ವ ಪತನ, ರೋಹಿತ್ ಇಲ್ಲದ ಪಂದ್ಯದಲ್ಲಿ ಪ್ರಸಿದ್ಧ್ ಕೃಷ್ಣಗೆ ಅವಕಾಶ

ಮತ್ತೆ ಕಳಪೆ ಆಟ: ಮೊದಲ ದಿನವೇ ಆಲೌಟ್

ಸಿಡ್ನಿ: ಆಸ್ಟ್ರೇಲಿಯಾ ವಿರುದ್ಧ ಇಲ್ಲಿ ಶುಕ್ರವಾರ ಆರಂಭಗೊಂಡ 5ನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡ ಕೇವಲ 185 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಮತ್ತೊಮ್ಮೆ ಕಳಪೆ ಆರಂಭ ಕಂಡಿದೆ. ಕಳೆದ ಎಂಟು ಟೆಸ್ಟ್‌ಗಳಲ್ಲಿ ಏಳನೇ ಬಾರಿ ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ಮೊದಲ 80 ಓವರ್ ಪೂರ್ಣಗೊಳ್ಳುವ ಮುನ್ನವೇ ಆಲೌಟ್ ಆಗುವ ಮೂಲಕ ಭಾರತ ಅನಪೇಕ್ಷಿತ ದಾಖಲೆಯೊಂದನ್ನು ತನ್ನ ಹೆಸರಿಗೆ ಸೇರಿಸಿಕೊಂಡಿದೆ

185 ರನ್‌ಗೆ ಆಲೌಟ್ ಆದ ಭಾರತ ಎಸ್‌ಸಿಜಿ ಮೈದಾನದಲ್ಲಿ 2012ರ ಬಳಿಕ ಮೊದಲ ಬಾರಿಗೆ 200 ರನ್‌ಗಿಂತ ಕಡಿಮೆ ಮೊತ್ತ ದಾಖಲಿಸಿತು. ಅಂದು ಭಾರತ ಮೊದಲ ಇನಿಂಗ್ಸ್‌ನಲ್ಲಿ 191 ರನ್‌ಗೆ ಆಲೌಟ್ ಆಗಿತ್ತು. ಎಸ್‌ಸಿಜಿ ಮೈದಾನದಲ್ಲಿ ಮೊದಲ ಇನಿಂಗ್ಸ್‌ನಲ್ಲಿ ಅಲ್ಪ ಮೊತ್ತಕ್ಕೆ ಆಲೌಟ್ ಆದ ಕಳಪೆ ದಾಖಲೆ ಪಾಕಿಸ್ತಾನ ತಂಡದ ಹೆಸರಿನಲ್ಲಿದೆ. 2010 ರಲ್ಲಿ ಪಾಕ್ 127 ರನ್‌ಗೆ ಸರ್ವಪತನ ಕಂಡಿತ್ತು.

ಕಾಯಂ ನಾಯಕ ರೋಹಿತ್ ಶರ್ಮಾ ದೂರವುಳಿದ ಕಾರಣ, ಸ್ಟಾರ್ ಬೌಲರ್ ಜಸ್‌ಪ್ರಿತ್ ಬುಮ್ರಾ ಅವರ ನಾಯಕತ್ವದಲ್ಲಿ ಭಾರತ ಕಣಕ್ಕಿಳಿಯಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತ, ಈ ಪಂದ್ಯದಲ್ಲಿಯೂ ಬ್ಯಾಟಿಂಗ್ ವೈಫಲ್ಯ ಎದುರಿಸಿತು. 20 ರನ್ ಗಳಿಸುವ ಮುನ್ನವೇ ಆರಂಭಿಕರಾದ ಕೆ.ಎಲ್ ರಾಹುಲ್(4) ಮತ್ತು ಯಶಸ್ವಿ ಜೈಸ್ವಾಲ್(10) ರನ್ ಗಳಿಸಿ ಪೆವಿಲಿಯನ್ ಸೇರಿದರು. ಆ ಬಳಿಕ ಬಂದ ಗಿಲ್ 20 ರನ್‌ಗಳಿಗೆ ಆಟ



ಮುಗಿಸಿದರು.

ವಿರಾಟ್ ಕೊಹ್ಲಿ ಒಂದು ಜೀವದಾನ ಪಡೆದರೂ ಇದರ ಲಾಭವೆತ್ತಲು ಸಾಧ್ಯವಾಗಲಿಲ್ಲ. 17 ರನ್ ಗಳಿಸಿ ಈ ಹಿಂದಿನ ಪಂದ್ಯಗಳಲ್ಲಿ ಔಟಾದಂತೆ ವಿಕೆಟ್ ಒಪ್ಪಿಸಿದರು. ಕೊಹ್ಲಿ ಔಟಾಗುತ್ತಿದ್ದಂತೆ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಪತ್ನಿ ಅನುಷ್ಕಾ ಶರ್ಮ ನಿರಾಸೆಯಿಂದ ಸಪ್ಪೆ ಮೋರೆ ಹಾಕಿ ಕುಳಿತ್ತಿದ್ದ ಫೋಟೊಗಳು ಕೂಡ ವೈರಲ್ ಆಗಿವೆ. ಕಳೆದ ಪಂದ್ಯದಲ್ಲಿ ಬೇಜವಾಬ್ದಾರಿ ಬ್ಯಾಟಿಂಗ್ ನಡೆಸಿ ಭಾರೀ ಟೀಕೆಗೆ ಗುರಿಯಾಗಿದ್ದ ರಿಷಭ್ ಪಂತ್ ಈ ಪಂದ್ಯದಲ್ಲಿ 40 ರನ್ ಬಾರಿಸಿದರು. ಇವರದ್ದೇ ತಂಡದ ಪರ ಗರಿಷ್ಠ ಮೊತ್ತ. ಮೆಲ್ಬರ್ನ್ ಶತಕ ವೀರ ನಿತೀಶ್ ರೆಡ್ಡಿ ಈ ಪಂದ್ಯದಲ್ಲಿ ಶೂನ್ಯ ಸಂಕಟಕ್ಕೆ ಸಿಲುಕಿದರು. ಮೊದಲ ಇನಿಂಗ್ಸ್ ಆರಂಭಿಸಿರುವ ಆಸ್ಟ್ರೇಲಿಯಾ ದಿನದಾಟದ ಅಂತ್ಯಕ್ಕೆ ಒಂದು ವಿಕೆಟ್ ನಷ್ಟಕ್ಕೆ 9 ರನ್ ಗಳಿಸಿದೆ. ಆಸೀಸ್ ಪರ ಘಾತಕ ಬೌಲಿಂಗ್ ದಾಳಿ ನಡೆಸಿದ ಸ್ಕಾಟ್ ಬೋಲ್ಯಾಂಡ್ ಕೇವಲ 31 ರನ್‌ಗೆ 4 ವಿಕೆಟ್ ಕಿತ್ತರು. ಉಳಿದಂತೆ ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ 3, ನಾಯಕ ಪ್ಯಾಟ್ ಕಮಿನ್ಸ್ 2 ವಿಕೆಟ್ ಪಡೆದರು.

2023-25ರ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ರೇಸ್‌ನಲ್ಲಿ ಉಳಿಯಬೇಕಿದ್ದರೆ ಭಾರತಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯ. ಹೀಗಾಗಿ ಭಾರತ ದ್ವಿತೀಯ ಇನಿಂಗ್ಸ್‌ನಲ್ಲಿ ನಿರೀಕ್ಷಿತ ಬ್ಯಾಟಿಂಗ್ ನಡೆಸಿ ಪಂದ್ಯವನ್ನು ಗೆಲ್ಲಬೇಕಿದೆ.

ಮತ್ತೆ ಜನಾಂಗೀಯ ನಿಂದನೆ

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಟೆಸ್ಟ್ ಸರಣಿ ವಿವಾದಗಳ ಗೂಡಾಗಿದೆ. ಸಿಡ್ನಿಯಲ್ಲಿ ನಡೆಯುತ್ತಿರುವ ಅಂತಿಮ ಟೆಸ್ಟ್ ಪಂದ್ಯದ ಮೊದಲ ದಿನದಾಟದ ವೇಳೆ ಆಸೀಸ್ ಅಭಿಮಾನಿಗಳು ಭಾರತೀಯ ಕ್ರಿಕೆಟ್ ಅಭಿಮಾನಿಗಳಿಗೆ ಜನಾಂಗೀಯ ನಿಂದನೆ ಮಾಡಿದ್ದಾರೆ. ಈ ಘಟನೆಯು 2020-2021 ರ ಬಾರ್ಡರ್-ಗವಾಸ್ಕರ್ ಟ್ರೋಫಿಯ ಕಹಿ ನೆನಪನ್ನು ಮತ್ತೆ ನೆನಪಿಸಿದೆ. ಪಂದ್ಯ ಆರಂಭಕ್ಕೂ ಮುನ್ನ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಆಸ್ಟ್ರೇಲಿಯಾದ ಅಭಿಮಾನಿಗಳು ತ್ರಿವರ್ಣ ಧ್ವಜ ಹಿಡಿದು ಭಾರತ ತಂಡಕ್ಕೆ ಬೆಂಬಲ ಸೂಚಿಸುತ್ತಿದ್ದ ಭಾರತೀಯರ ಮುಂದೆ ''ನಿಮ್ಮ ವೀಸಾ ಎಲ್ಲಿದೆ? ನಿಮ್ಮ ವೀಸಾ ಎಲ್ಲಿದೆ?'' ಎಂದು ಜೋರಾಗಿ ಚಪ್ಪಾಳೆ ತಟ್ಟ ಚೀರಾಡುವ ಮೂಲಕ ಭಾರತೀಯರನ್ನು ನಿಂದಿಸಿದ್ದಾರೆ. ಈ ವಿಡಿಯೊ ವೈರಲ್ ಆಗಿದ್ದು ಆಸೀಸ್ ಅಭಿಮಾನಿಗಳ ಈ ದುರ್ವರ್ತನೆಗೆ ಭಾರೀ ವಿರೋಧ ವ್ಯಕ್ತವಾಗಿದೆ.

ದಾಖಲೆ ಪ್ರೇಕ್ಷಕರು ಹಾಜರು

ಬಾರ್ಡರ್-ಗವಾಸ್ಕರ್ ಟೆಸ್ಟ್ ಪಂದ್ಯಾವಳಿ ದಾಖಲೆ ಸಂಖ್ಯೆಯ ವೀಕ್ಷಣೆಯಿಂದ ನೂತನ ಎತ್ತರ ತಲುಪಿದೆ. ಭಾರತ ಮತ್ತು ಆಸೀಸ್ ನಡುವಣ ಸಿಡ್ನಿ ಟೆಸ್ಟ್ ಪಂದ್ಯದ ಮೊದಲ ದಿನದಾಟವನ್ನು 47,566 ವೀಕ್ಷಕರು ಸ್ಟೇಡಿಯಂಗೆ ತೆರಳಿ ವೀಕ್ಷಿಸಿದ್ದಾರೆ. ಇದು ಸಿಡ್ನಿ ಟೆಸ್ಟ್ ಇತಿಹಾಸದ ನೂತನ ದಾಖಲೆ. 50 ವರ್ಷಗಳಲ್ಲಿ ಟೆಸ್ಟ್‌ಗಾಗಿ ಸಿಡ್ನಿ ಮೈದಾನದಲ್ಲಿ ಸೇರಿದ ಅತಿ ಹೆಚ್ಚು ಪ್ರೇಕ್ಷಕರು ಸೇರಿದೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ. ಭೋಜನ ವಿರಾಮದ ವೇಳೆ 45,465 ವೀಕ್ಷಕರು ಪಂದ್ಯವನ್ನು ವೀಕ್ಷಿಸಿದ್ದರು. ದಿನದಾಟದ ಅಂತ್ಯದ ವೇಳೆಗೆ ಈ ಹಾಜರಾತಿ 47 ಸಾವಿರ ಗಡಿ ದಾಟಿ ದಾಖಲೆ ನಿರ್ಮಿಸಿತು. 2003/04 ಸರಣಿಯ ವೇಳೆ 44,901 ವೀಕ್ಷಕರು ಸೇರಿದ್ದು ಇದುವರೆಗಿನ ದಾಖಲೆಯಾಗಿತ್ತು. ಇದೀಗ ಪತನಗೊಂಡಿದೆ. ಮೆಲ್ಬೋರ್ನ್‌ನಲ್ಲಿ ನಡೆದಿದ್ದ ನಾಲ್ಕನೇ ಟೆಸ್ಟ್ ಪಂದ್ಯವನ್ನು 5 ದಿನಗಳಲ್ಲಿ ಒಟ್ಟಾರೆ 3,73,691 ಪ್ರೇಕ್ಷಕರು ವೀಕ್ಷಿಸಿದ್ದರು. ಇದು ಕಾಂಗರೂ ನಾಡಿನ 147 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಗರಿಷ್ಠ ಪ್ರೇಕ್ಷಕರು ವೀಕ್ಷಿಸಿದ ಪಂದ್ಯ ಎನಿಸಿತ್ತು.

ಕೆಣಕಿದ್ದಕ್ಕೆ ಶಾಸ್ತಿ ಮಾಡಿದ ಬುಮ್ರಾ

ಐದನೇ ಟೆಸ್ಟ್ ಪಂದ್ಯದಲ್ಲೂ ಭಾರತ ಮತ್ತು ಆಸ್ಟ್ರೇಲಿಯಾ ಆಟಗಾರರ ನಡುವೆ ಮಾತಿನ ಚಕಮಕಿ ನಡೆದಿದೆ. ದಿನದಾಟದ ಕೊನೆಯ ಓವರ್‌ನ ಕೊನೆಯ ಎಸೆತ ಎಸೆಯುವ ವೇಳೆ ಯುವ ಆಟಗಾರ ಸ್ಯಾಮ್ ಕಾನ್‌ಸ್ಟಾಸ್ ವೇಗಿ ಜಸ್‌ಪ್ರಿತ್ ಬುಮ್ರಾ ಅವರನ್ನು ಉದ್ದೇಶಿಸಿ, ''ಏನಾಯ್ತು, ಯಾಕೆ ವಿಕೆಟ್ ಬೀಳ್ತಿಲ್ಲವಾ? ಎಂದು ಕೆಣಕಿದ್ದಾರೆ. ಆಗ 'ಒಂಚೂರು ಕಾದು ನೋಡು' ಎಂದು ತಿರುಗೇಟು ನೀಡಿದ ಬುಮ್ರಾ, ಮರು ಎಸೆತದಲ್ಲೇ ಸ್ಟ್ರೈಕ್‌ನಲ್ಲಿದ್ದ ಉಸ್ಮಾನ್ ಖವಾಜ ಅವರನ್ನು ಔಟ್ ಮಾಡಿ ಸಂಭ್ರಮಾಚರಣೆ ಮಾಡಿದರು. ಈ ವಿಡಿಯೋವೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಕೌಶಿಕ್, ಗೋಪಾಲ್ ದಾಳಿಗೆ ನಲುಗಿದ ಸೌರಾಷ್ಟ್ರ; ರಾಜ್ಯಕ್ಕೆ 60 ರನ್‌ಗಳ ಜಯ

ಜಯದ ಹಳಿಗೆ ಮರಳಿದ ಕರ್ನಾಟಕ

ಅಹಮದಾಬಾದ್: ವಿಜಯ್ ಹಜಾರೆ ಟೂರ್ನಿಯ ಕಳೆದ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಬೃಹತ್ ಮೊತ್ತ ಪೇರಿಸಿಯೂ 3 ವಿಕೆಟ್‌ಗಳಿಂದ ಸೋಲು ಕಂಡಿದ್ದ ಕರ್ನಾಟಕ ತಂಡ ಇದೀಗ ಮತ್ತೆ ಗೆಲುವಿನ ಹಳಿ ಏರಿದೆ. ಶುಕ್ರವಾರ ನಡೆದ ಸೌರಾಷ್ಟ್ರ ಎದುರಿನ ಪಂದ್ಯದಲ್ಲಿ 60 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ರಾಜ್ಯದ ಪರ ಉತ್ಕೃಷ್ಟ ಮಟ್ಟದ ಬೌಲಿಂಗ್ ಪ್ರದರ್ಶನ ತೋರಿದ ವಾಸುಕಿ ಕೌಶಿಕ್ (51 ಕ್ಕೆ 5) ಮತ್ತು ಶ್ರೇಯಸ್ ಗೋಪಾಲ್(63 ಕ್ಕೆ 4) ಗೆಲುವಿನ ಹೀರೋ ಎನಿಸಿಕೊಂಡರು.

ಇಲ್ಲಿನ ಎಡಿಎಸ್‌ಎ ರೈಲ್ವೇ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಸಂಘಟಿತ ಬ್ಯಾಟಿಂಗ್ ನೆರವಿನಿಂದ 7 ವಿಕೆಟ್ ನಷ್ಟಕ್ಕೆ 349 ರನ್ ಬಾರಿಸಿತು. ಬೃಹತ್ ಮೊತ್ತವನ್ನು ಬೆನ್ನಟ್ಟಿದ ಸೌರಾಷ್ಟ್ರ ತಂಡ ಹಾರ್ವಿಕ್ ದೇಸಾಯಿ ಶತಕದ ಹೊರತಾಗಿಯೂ 47.5 ಓವರ್‌ಗಳಲ್ಲಿ 289 ರನ್‌ಗೆ ಆಲೌಟಾಯಿತು.

ಚೇಸಿಂಗ್ ವೇಳೆ ಆರಂಭಿಕ ಆಟಗಾರರಾದ ಹಾರ್ವಿಕ್ ದೇಸಾಯಿ ಮತ್ತು ತರಂಗ್ ಗೊಹೆಲ್ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ಜೋಡಿ

ಮೊದಲ ವಿಕೆಟ್‌ಗೆ ಅರ್ಧಶತಕದ ಜತೆಯಾಟ ನಡೆಸಿತು. ಉತ್ತಮವಾಗಿ ಆಡುತ್ತಿದ್ದ ಈ ಜೋಡಿಯನ್ನು ಕೊನೆಗೂ ವಿ.ಕೌಶಿಕ್ ಬೇರ್ಪಡಿಸಿದರು. 33 ರನ್ ಗಳಿಸಿದ್ದ ವೇಳೆ ತರಂಗ್ ಗೊಹೆಲ್ ವಿಕೆಟ್ ಬೇಟೆಯಾಡಿದರು. ಈ ವಿಕೆಟ್ ಬಿದ್ದರೂ ಆ ಬಳಿಕ ಬಂದ ಬ್ಯಾಟರ್‌ಗಳಾದ ಜೈ ಗೋಹಿಲ್(40) ಮತ್ತು ಅರ್ಪಿತ್ ವಾಸವಾಡ(40) ರನ್ ಬಾರಿಸುವ ಮೂಲಕ ತಂಡಕ್ಕೆ ಹಾನಿಯಾಗದಂತೆ ನೋಡಿಕೊಂಡರು. ಆದರೆ ಉಭಯ ಆಟಗಾರರ ವಿಕೆಟ್ ಪತನಗೊಳ್ಳುತ್ತಿದ್ದಂತೆ ತಂಡ ನಾಟಕೀಯ ಕುಸಿತಕ್ಕೊಳಗಾಯಿತು.

ಹಾರ್ವಿಕ್ ಶತಕ ವ್ಯರ್ಥ: ಉತ್ತಮವಾಗಿ ಆಡುತ್ತಿದ್ದ ಹಾರ್ವಿಕ್ ದೇಸಾಯಿಗೆ ಅರ್ಪಿತ್ ಮತ್ತು ಗೋಹಿಲ್ ವಿಕೆಟ್ ಪತನದ ಬಳಿಕ ಸರಿಯಾದ ಜತೆಯಾಟ ಸಿಗಲಿಲ್ಲ. ಶತಕ ಪೂರ್ತಿಗೊಳಿಸಿದ ಅವರು ಆ ಬಳಿಕ ಬಿರುಸಿನ ಬ್ಯಾಟಿಂಗ್ ನಡೆಸಲು ಮುಂದಾಗಿ ವಿಕೆಟ್ ಕಳೆದುಕೊಂಡರು. 102 ಎಸೆತ ಎದುರಿಸಿದ ಹಾರ್ವಿಕ್ 4 ಸಿಕ್ಸರ್ ಮತ್ತು 10 ಬೌಂಡರಿ ನೆರವಿನಿಂದ 114 ರನ್ ಬಾರಿಸಿದರು. ಪಂದ್ಯ ಸೋತ ಕಾರಣ ಇವರ ಶತಕ ವ್ಯರ್ಥವಾಯಿತು. ಕರ್ನಾಟಕ ಪರ ವಿ. ಕೌಶಿಕ್ 10 ಓವರ್ ಬೌಲಿಂಗ್ ದಾಳಿ ನಡೆಸಿ ಒಂದು ಮೇಡನ್ ಸಹಿತ 51 ರನ್ ವೆಚ್ಚದಲ್ಲಿ 5 ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ್ದ ಕರ್ನಾಟಕ ಪರ ನಾಯಕ ಮಯಾಂಕ್ ಅಗರ್ವಾಲ್(66) ಮತ್ತು ಅನೀಶ್ (93) ಅರ್ಧಶತಕ ಬಾರಿಸಿ ಮಿಂಚಿದರು. ಕೆಲ ಕ್ರಮಾಂಕದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ಅಭಿನವ್ ಮನೋಹರ್ ಅಜೇಯ 44 ರನ್ ಬಾರಿಸಿದರು. ಸ್ಮರಣ್ ರವಿಚಂದ್ರನ್ (40) ರನ್ ಗಳಿಸಿದರು.

ವಿಶ್ವಕಪ್ ಕ್ರೀಡಾಕೂಟಕ್ಕೆ ದೆಹಲಿ ಸಜ್ಜು, ಜನವರಿ 13ರಿಂದ 19ರವರೆಗೆ ದೇಶಿ ಆಟದ ಸಂಭ್ರಮ

ದೆಹಲಿ ಖೋ ಖೋ ವಿಶ್ವಕಪ್‌ಗೆ ಪಾಕ್?

ದೆಹಲಿ: ಜನವರಿ 13 ರಿಂದ 19ರವರೆಗೆ ದೆಹಲಿಯಲ್ಲಿ ನಡೆಯಲಿರುವ ಖೋ ಖೋ ವಿಶ್ವಕಪ್ ಕ್ರೀಡಾಕೂಟದಲ್ಲಿ ಪಾಕಿಸ್ತಾನ ತಂಡ ಭಾಗವಹಿಸುವ ನಿರೀಕ್ಷೆ ಇದೆ.

ಈ ಕ್ರೀಡಾಕೂಟದಲ್ಲಿ ಸುಮಾರು 20 ದೇಶಗಳು ಭಾಗವಹಿಸಲಿವೆ. ಪಾಕಿಸ್ತಾನ ತಂಡವು ಆಗಮಿಸಬಹುದು ಎಂದು ಖೋ ಖೋ ಒಕ್ಕೂಟದ ಅಧ್ಯಕ್ಷ ಸುಧಾಂಶು ಮಿತ್ತಲ್ ತಿಳಿಸಲಿದ್ದಾರೆ.

ಈ ಕ್ರೀಡಾಕೂಟವನ್ನು ಖೋ ಖೋ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಮೊದಲ ಬಾರಿಗೆ ಆಯೋಜಿಸಲಾಗಿದೆ. ಈ ಕ್ರೀಡಾಕೂಟಕ್ಕೆ ಜನವರಿ 8ರಂದು ಭಾರತ ಪುರುಷರು ಮತ್ತು ಮಹಿಳಾ ತಂಡವನ್ನು ಆಯ್ಕೆ ಮಾಡಲಾಗುತ್ತದೆ. ತಂಡದ ಸಂಭಾವ್ಯ ಆಟಗಾರರಲ್ಲಿ ಕರ್ನಾಟಕದ ಆಟಗಾರರೂ ಸೇರಿದ್ದಾರೆ. ಪುರುಷರ ಎರಡು ತಂಡಗಳನ್ನು ಮತ್ತು ಮಹಿಳೆಯರ ಎರಡು ತಂಡಗಳನ್ನು ಆಯ್ಕೆ ಮಾಡಲಿದ್ದು. ತಲಾ ಒಂದು ತಂಡಕ್ಕೆ 15 ಆಟಗಾರರಂತೆ ಒಟ್ಟು 60 ಜನರನ್ನು ಆಯ್ಕೆ ಮಾಡಲಾಗುತ್ತದೆ.

ಈ ಬಗ್ಗೆ ಮಾತನಾಡಿರುವ ಖೋಖೋ ಒಕ್ಕೂಟದ ಅಧ್ಯಕ್ಷ ಸುಧಾಂಶು ಮಿತ್ತಲ್ ವಿಶ್ವಕಪ್‌ನಲ್ಲಿ ಆಡುವ ಪುರುಷ ಹಾಗೂ ಮಹಿಳೆಯರ ಎ ಹಾಗೂ ಬಿ ತಂಡಗಳಿಗೆ ಆಟಗಾರರು ಹಾಗೂ ನಾಯಕರ ಆಯ್ಕೆ ಜ. 8ರಂದು ನಡೆಯಲಿದೆ.

ಆಯ್ಕೆಯಾಗುವ ನಾಲ್ಕು ತಂಡಗಳಿಗೆ ಒಂದು ವಾರದ ಕಠಿಣ ತರಬೇತಿ ಇರಲಿದೆ. ಈ ತಂಡಗಳು ಪರಸ್ಪರ ಆಡಲಿವೆ' ಎಂದಿದ್ದಾರೆ.

ಪಾಕಿಸ್ತಾನ ತಂಡವು ವಿಸಾ ಸಿಗುವ ನಿರೀಕ್ಷೆಯಲ್ಲಿದೆ. ಮೊದಲ ವಿಶ್ವಕಪ್‌ನಲ್ಲಿ ಅವರು ಭಾಗವಹಿಸುತ್ತಾರೆ ಎಂಬ ವಿಶ್ವಾಸವಿದೆ. ಜ. 13ರಂದು ನಡೆಯಲಿರುವ ಮೊದಲ ಪಂದ್ಯದಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಹೀಗಾಗಿ ಒತ್ತಡದಿಂದ ನನ್ನ ಹೃದಯದ ಬಡಿತವೂ ಹೆಚ್ಚಾಗಿದೆ. ಅವಧಿಯೊಳಗೆ ಎಲ್ಲವೂ ಬಗೆಹರಿಯುವ ವಿಶ್ವಾಸವಿದೆ' ಎಂದು ಮಿತ್ತಲ್ ಹೇಳಿದ್ದಾರೆ.

ಈ ಬಾರಿಯ ವಿಶ್ವಕಪ್‌ನಲ್ಲಿ ಅಮೆರಿಕ, ಇಂಗ್ಲೆಂಡ್, ಜರ್ಮನಿ, ಆಸ್ಟ್ರೇಲಿಯಾ ಹಾಗೂ ಬ್ರೆಜಿಲ್ ಸೇರಿ 24 ರಾಷ್ಟ್ರಗಳು ಪಾಲ್ಗೊಳ್ಳುತ್ತಿವೆ. ಜನವರಿ 13ರಿಂದ ಪಂದ್ಯಾವಳಿ ಆರಂಭವಾಗಲಿದ್ದು. ಜನವರಿ 17ರಂದು ಕ್ವಾರ್ಟರ್ ಫೈನಲ್, 18ರಂದು ಸೆಮಿಫೈನಲ್ ಮತ್ತು ಜನವರಿ 19ರಂದು ಫೈನಲ್ ಪಂದ್ಯ ನಡೆಯಲಿದೆ.

ವಿಟಾಕೀಸ್

ಕುಲದಲ್ಲಿ ಕೀಳ್ಯಾವುದೊ ಫಸ್ಟ್ ಲುಕ್ ರಿಲೀಸ್

ಕೆ. ರಾಮ್ ನಾರಾಯಣ್ ನಿರ್ದೇಶನದ, ಯೋಗರಾಜ್ ಭಟ್ ಕಥೆ ಬರೆದಿರುವ ಕುಲದಲ್ಲಿ ಕೀಳ್ಯಾವುದೋ ಚಿತ್ರದ ಫಸ್ಟ್ ಲುಕ್ ರಿಲೀಸ್ ಆಗಿದೆ. ನಟ ಧ್ರುವ ಸರ್ಜಾ ಚಿತ್ರದ ಫಸ್ಟ್ ಲುಕ್ ಅನಾವರಣ ಮಾಡಿ, ಚಿತ್ರತಂಡಕ್ಕೆ ಶುಭ ಕೋರಿದ್ದಾರೆ. ಫಸ್ಟ್ ಲುಕ್ ಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರತ್ತಿದೆ.

ಸಂತೋಷ್ ಕುಮಾರ್ ಮತ್ತು ವಿದ್ಯಾ ನಿರ್ಮಾಣದ ಚಿತ್ರ ಇದಾಗಿದ್ದು, ಮಡೆನೂರು ಮನು ಹಾಗೂ ಮೌನಾ

ಗುಡ್ಡೆಮನೆ ನಾಯಕ, ನಾಯಕಿಯಾಗಿ ನಟಿಸುತ್ತಿದ್ದಾರೆ.

ಆರಂಭದಿಂದಲೂ ಸಾಕಷ್ಟು ನಿರೀಕ್ಷೆ ಹುಟ್ಟುಹಾಕಿರುವ ಈ ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದೆ. ಒಂದು ಹಾಡಿನ ಚಿತ್ರೀಕರಣ ಮಾತ್ರ ಬಾಕಿಯಿದೆ. ಖ್ಯಾತ ಸಂಗೀತ ನಿರ್ದೇಶಕ ಮನೋಮೂರ್ತಿ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ಈ ಚಿತ್ರದ ಆಡಿಯೊ ರೈಟ್ಸ್ ಭಾರಿ ಮೊತ್ತಕ್ಕೆ ಮಾರಾಟವಾಗಿದೆ. ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ , ರಾಮ್ ನಾರಾಯಣ್ ಹಾಡುಗಳನ್ನು ಬರೆದಿದ್ದಾರೆ.

ಪಿನಾಕಧರನಾದ ಗಣಿ

ಕೃಷ್ಣಂ ಪ್ರಣಯ ಸಖಿ ಯಶಸ್ಸಿನ ಖುಷಿಯಲ್ಲಿರುವ ಗಣೇಶ್, ಹೊಸ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಬಹು ನಿರೀಕ್ಷಿತ ಈ ಚಿತ್ರಕ್ಕೆ ಪಿನಾಕ ಎಂದು ಶೀರ್ಷಿಕೆ ಇಡಲಾಗಿದೆ. ಪಿನಾಕ ಎಂದರೆ ತ್ರಿಶೂಲ ಎಂದು ಅರ್ಥ. ಈಗಾಗಲೇ ತೆಲುಗು, ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ನಲವತ್ತಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿರುವ ಟಿ.ಜಿ.ವಿಶ್ವಪ್ರಸಾದ್ ಸಾರಥ್ಯದ ಪೀಪಲ್ ಮೀಡಿಯಾ ಫ್ಯಾಕ್ಟರಿ ಬ್ಯಾನರ್‌ನಲ್ಲಿ ಈ ಚಿತ್ರವೂ ನಿರ್ಮಾಣವಾಗುತ್ತಿದೆ. ನೃತ್ಯ ನಿರ್ದೇಶಕನಾಗಿ ಜನಪ್ರಿಯರಾಗಿರುವ ಬಿ.ಧನಂಜಯ, ಪಿನಾಕ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ.

ಪಿನಾಕದಲ್ಲಿ ಐತಿಹಾಸಿಕ ಕಥೆಯ ಜತೆಗೆ ಬ್ಲಾಕ್ ಮ್ಯಾಜಿಕ್ ಸ್ಟೋರಿಯೂ ಇರುವುದು ಸ್ಪಷ್ಟವಾಗುತ್ತದೆ. ಕ್ಷುದ್ರ ಮತ್ತು ರುದ್ರನಾಗಿ ಹಿಂದೆಂದು ಕಾಣಿಸಿದ ಅವತಾರದಲ್ಲಿ ಗಣೇಶ್ ಮಿಂಚಲಿದ್ದಾರೆ. ಟೈಟಲ್ ಟೀಸರ್‌ನಲ್ಲಿ ಮೈನವಿರೇಳಿಸುವ ದೃಶ್ಯಗಳಿದ್ದು, ಹಿನ್ನೆಲೆ ಸಂಗೀತ

> ನಿರ್ದೇಶಕರು ಕಳೆದ ಒಂದು ವರ್ಷದಿಂದ ಅಡ್ವೆಂಚರ್, ಥ್ರಿಲ್ಲರ್ ಹಾಗೂ ಕೌಟುಂಬಿಕ ಕಥಾಹಂದರ ಹೊಂದಿರುವ ಒಂದೊಳ್ಳೆ ಕಥೆಯನ್ನು ಮಾಡಿದ್ದಾರೆ. ಈಗ ಅದ್ಭುತವಾದ ಟೀಸರ್ ಕೂಡ ಬಿಡುಗಡೆಯಾಗಿದೆ. ನನ್ನನ್ನು ರೊಮ್ಯಾಂಟಿಕ್ ಹೀರೊ ಆಗಿಯೇ ನೋಡಲು ಅಭಿಮಾನಿಗಳು ಬಯಸಿದರು. ಈ ಚಿತ್ರದಿಂದ ನನ್ನ ಹಿಂದಿನ ಜಾನರನ್ನು ಬದಲಿಸಿಕೊಂಡಿದ್ದೇನೆ. ನಾನು ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ.
>
> -ಗಣೇಶ್ ನಟ

> ಇದು ನಮ್ಮ ಪೀಪಲ್ ಮೀಡಿಯಾ ಫ್ಯಾಕ್ಟರಿ ಸಂಸ್ಥೆಯಿಂದ ಮೂಡಿಬರುತ್ತಿರುವ ನವತ್ತೊಂಬತ್ತನೇ ಸಿನಿಮಾ. ಈ ಹಿಂದೆ ಕನ್ನಡದಲ್ಲಿ ಅಧ್ಯಕ್ಷ ಇನ್ ಅಮೇರಿಕಾ ಹಾಗೂ ಆದ್ಯ ಚಿತ್ರಗಳನ್ನು ನಿರ್ಮಾಣ ಮಾಡಿದ್ದೆವು. ಗಣೇಶ್ ಅವರ ಜತೆಗೆ ಸಿನಿಮಾ ಮಾಡುತ್ತಿರುವುದು ಖುಷಿಯಾಗಿದೆ. ಈ ವರ್ಷ ಶ್ರೀಮುರಳಿ, ಶಿವರಾಜ ಕುಮಾರ್, ಧ್ರುವಸರ್ಜಾ ಅವರ ಸಿನಿಮಾಗಳನ್ನು ನಮ್ಮ ಪೀಪಲ್ ಮೀಡಿಯಾ ಫ್ಯಾಕ್ಟರಿ ಮೂಲಕ ನಿರ್ಮಾಣ ಮಾಡುವ ಸಿದ್ದತೆ ನಡೆಯುತ್ತಿದೆ.
>
> -ಟಿ.ಜಿ.ವಿಶ್ವ ನಿರ್ಮಾಪಕ

ಟೀಸರ್‌ಗೆ ಪುಷ್ಠಿ ನೀಡಿದೆ.

ಚಿಕ್ಕವಯಸ್ಸಿನಲ್ಲೇ ಚಿತ್ರರಂಗಕ್ಕೆ ಬಂದ ನಾನು, ಅಸಿಸ್ಟೆಂಟ್ ಡ್ಯಾನ್ಸ್ ಮಾಸ್ಟರ್ ಆಗಿ ಹತ್ತು ಸಾವಿರಕ್ಕೂ ಅಧಿಕ ಹಾಡುಗಳಿಗೆ ನೃತ್ಯ ನಿರ್ದೇಶನ ಮಾಡಿದ್ದೇನೆ. ನಿರ್ದೇಶಕನಾಗಿ ಇದು ಮೊದಲ ಚಿತ್ರ. ಪಿನಾಕ ಪಿರಿಯಾಡಿಕ್ ಡ್ರಾಮಾ ಹಿನ್ನೆಲೆಯಲ್ಲಿ ಮಾಟ ಮಂತ್ರದ ಎಳೆಯ ಮೂಲಕ ಹೊಸ ಥರದ ಕಥೆಯನ್ನು ತೆರೆದಿಡುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ನಿರ್ದೇಶಕ ಬಿ.ಧನಂಜಯ್ ಹೇಳಿದರು. ಪಿನಾಕ ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ನಿರ್ಮಾಣವಾಗಲಿದ್ದು, ಫೆ. ಯಲ್ಲಿ ಚಿತ್ರೀಕರಣ ಆರಂಭವಾಗಲಿದೆ.

ರೆಟ್ರೋ ಸ್ಟೈಲ್‌ನಲ್ಲಿ ವಿಷ್ಣು ಪ್ರಿಯಾ

ನಿರ್ಮಾಪಕ ಕೆ.ಮಂಜುಪುತ್ರ ಶ್ರೇಯಸ್ ಮಂಜು ಪಡ್ಡೆ ಹುಲಿ ಚಿತ್ರದ ಮೂಲಕ ಚಿತ್ರರಂಗಕ್ಕೆ ಪರಿಚಿತರಾದರು. ಈಗ ವಿಷ್ಣುಪ್ರಿಯಾ ಚಿತ್ರದ ಮೂಲಕ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಕೆ.ಮಂಜು ಅವರಿಗೆ ಸಾಹಸಸಿಂಹ ವಿಷ್ಣುವರ್ಧನ್ ಎಂದರೆ ಅಪಾರ ಗೌರವ. ಅದನ್ನು ಅವರು ತಮ್ಮ ಚಿತ್ರಗಳ ಮೂಲಕವೂ ತೋರಿಸಿದ್ದಾರೆ. ಅದರ ಮತ್ತೊಂದು ಭಾಗವಾಗಿ ತಮ್ಮ ಪುತ್ರ ಶ್ರೇಯಸ್‌ನನ್ನು ನಾಯಕನನ್ನಾಗಿಸಿ ವಿಷ್ಣು ಪ್ರಿಯಾ ಎಂಬ ಚಿತ್ರವನ್ನೂ ನಿರ್ಮಿಸಿದ್ದಾರೆ. ಬಹಳ ಹಿಂದೆಯೇ ನಿರ್ಮಾಣವಾಗಿದ್ದ ಈ ಚಿತ್ರ ಈಗ ಬಿಡುಗಡೆಯ ಹಂತಕ್ಕೆ ತಲುಪಿದ್ದು, ಫೆಬ್ರವರಿ 21ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ತೊಂಬತ್ತರ ದಶಕದ ಪ್ರೇಮಕಥೆ ಚಿತ್ರದಲ್ಲಿದ್ದು, ನಿರ್ದೇಶಕ ರವಿ ಶ್ರೀವತ್ಸ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ವಿ.ಕೆ.ಪ್ರಕಾಶ್ ಎಲ್ಲರಿಗೂ ಮೆಚ್ಚುಗೆಯಾಗುವಂತೆ ನಿರ್ದೇಶನ ಮಾಡಿದ್ದಾರೆ. ಕಣ್ಸನ್ನೆ ಚೆಲುವೆ ಪ್ರಿಯಾ ವಾರಿಯರ್ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದು, ಚಂದನವನಕ್ಕೆ ಪಾದಾರ್ಪಣೆ ಮಾಡಿದ್ದಾರೆ. ತೆಲುಗಿನ ಸಂಗೀತ ನಿರ್ದೇಶಕ ಗೋಪಿಸುಂದರ್ ಈ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ. ಫ್ಯಾಮಿಲಿ ವ್ಯಾಲ್ಯೂಸ್‌ಗೆ ಹೆಚ್ಚಿನ ಮಹತ್ವವಿದ್ದು, ಪ್ರೀತಿಗಾಗಿ ಏನು ಬೇಕಾದರೂ ಮಾಡಲು ರೆಡಿಯಾಗುವ ಯುವಕನ ಜೀವನದಲ್ಲಿ ಯಾವೆಲ್ಲಾ ಘಟನೆಗಳು ನಡೆಯುತ್ತವೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ನಾಯಕನ ತಂದೆಯಾಗಿ ಅಚ್ಯುತ್ ಕುಮಾರ್ ಹಾಗೂ ನಾಯಕಿಯ ತಂದೆಯಾಗಿ ಸುಚೇಂದ್ರ ಪ್ರಸಾದ್ ಅಭಿನಯಿಸಿದ್ದಾರೆ. ವಿನೋದ್ ಭಾರತಿ ಛಾಯಾಗ್ರಹಣ, ಸುರೇಶ್ ಅರಸ್ ಸಂಕಲನ ಈ ಚಿತ್ರಕ್ಕಿದೆ.

ಫೆಬ್ರವರಿಯಲ್ಲಿ ಮಾಂಕ್ ದಿ ಯಂಗ್

ಹೊಸಬರೇ ಸೇರಿ ನಿರ್ಮಿಸಿ ನಿರ್ದೇಶಿಸಿರುವ, ವಿಭಿನ್ನ ಕಥಾಹಂದರ ಹೊಂದಿರುವ ಮಾಂಕ್ ದಿ ಯಂಗ್ ತೆರೆಗೆ ಸಿದ್ಧವಾಗಿದ್ದು, ಫೆಬ್ರವರಿಯಲ್ಲಿ ಅದ್ದೂರಿಯಾಗಿ ತೆರೆಗೆ ಬರಲಿದೆ. ಸಂಕ್ರಾಂತಿ ಹಬ್ಬದಂದು ಚಿತ್ರದ ಗ್ಲಿಂಪ್ಸ್, ಹಾಡು ಹಾಗೂ ಟ್ರೇಲರ್ ಬಿಡುಗಡೆಯಾಗಲಿದೆ. ಈ ಚಿತ್ರದ ಆಡಿಯೋ ರೈಟ್ಸ್ ಅನ್ನು ಆನಂದ್ ಆಡಿಯೋ ಸಂಸ್ಥೆ ಪಡೆದುಕೊಂಡಿದೆ.

ಸ್ವಾಮಿನಾಥನ್ ರಾಮಕೃಷ್ಣ ಹಾಗೂ ಸುಪ್ರೀತ್ ಫಾಲ್ಗುಣ ಸಂಗೀತ ನಿರ್ದೇಶನದಲ್ಲಿ ಚಿತ್ರದ ಹಾಡುಗಳು ಮಧುರವಾಗಿ ಮೂಡಿಬಂದಿವೆ. ಈಗಾಗಲೇ ಬಿಡುಗಡೆಯಾಗಿರುವ ಹಾಡು ಹಾಗೂ ಟೀಸರ್ ಮೂಲಕ ಮಾಂಕ್ ದಿ ಯಂಗ್ ಸಿನಿಪ್ರಿಯರ ಮನಗೆದ್ದಿದೆ. ವಿಂಟೇಜ್, ಫ್ಯಾಂಟಸಿ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಮಾಸ್ಚಿತ್ ಸೂರ್ಯ ನಿರ್ದೇಶಿಸಿದ್ದಾರೆ. ಸರೋವರ್ ನಾಯಕನಾಗಿ ನಟಿಸಿದ್ದು, ಸೌಂದರ್ಯಾ ಗೌಡ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ತೆಲುಗು ಹಾಗೂ ತಮಿಳಿನ ಸಿನಿಮಾಗಳ ಮೂಲಕ ಜನಪ್ರಿಯತೆ ಪಡೆದಿರುವ ನಟ ಬಬ್ಲೂ ಪೃಥ್ವಿರಾಜ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಉಷಾ ಭಂಡಾರಿ, ಪ್ರಣಯ ಮೂರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕರ್ನಲ್ ರಾಜೇಂದ್ರನ್, ವಿನಯ್ ಬಾಬು ರೆಡ್ಡಿ ಶೆಟ್ಟಿಹಳ್ಳಿ, ಗೋಪಿಚಂದ್, ಲಾಲ್ ಚಂದ್ ಖತಾರ್ ಮತ್ತು ಸರೋವರ್ ಜಂಟಿಯಾಗಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಕಾರ್ತಿಕ್ ಶರ್ಮ ಛಾಯಾಗ್ರಹಣ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ, ಧನುಷ್ ಬೆದ್ರೆ ಸಂಕಲನ ಹರ್ಷವರ್ಧನ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.